
# ದೈವ ಜಾನಪದ

## ಲೇಖನಗಳ ಸಂಗ್ರಹ




ಸಂಪಾದಕರು

ಪ್ರೊ. ಡಿ. ಲಿಂಗಯ್ಯ ಡಾ. ಚಕ್ಕೆರೆ ಶಿವಶಂಕರ್

ತ್ರೈವಾರ್ಷಿಕ ಜಾನಪದ ಯೋಜನೆ ಪುಸ್ತಕ ಮಾಲೆ - ೬

# ದೈವ ಜಾನಪದ

ದೈವವನ್ನು ಕುರಿತ ಲೇಖನಗಳ ಸಂಕಲನ


ಸಂಪಾದಕರು

ಪ್ರೊ. ಡಿ.ಲಿಂಗಯ್ಯ /ಡಾ. ಚಕ್ಕೆರೆ ಶಿವಶಂಕರ್



ಕರ್ನಾಟಕ ಜಾನಪದ ಪರಿಷತ್ತು

ಜಾನಪದ ಸಿರಿಭುವನ, ನಂ. ೧, ಕರ್ನಾಟಕ ಸರ್ಕಾರ ನೌಕರರ ವಸತಿ
ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ ಬೆಂಗಳೂರು - ೫೬೦ ೦೫೪.

DEVVA JANAPADA - Articles on gosts - by various writers. Edited by Prof. D. LINGAIAH, and Dr. CHAKKERE SHIVASHANKAR. Published by KARNATAKA JANAPADA PARISHATHU, No. 1, Government Employee's Residential Layout, Near M.S. Ramaiah Hospital Gate, New BEL Road, Bengalooru - 560 054. Price : Rs. 100.00 Pages : 136 , 2008.

ಪ್ರಥಮ ಮುದ್ರಣ : ೨೦೦೮
ಪುಟಗಳು : ೧೩೬
ಬೆಲೆ : ರೂ. ೧೦೦. (ಒಂದು ನೂರು ರೂಪಾಯಿ)

ಹಕ್ಕುಗಳು ಆಯಾ ಲೇಖಕರಿಗೆ ಸೇರಿವೆ.

ಗ್ರಂಥ ಪ್ರಕಟಣಾ ಸಲಹಾ ಸಮಿತಿ

| | |
|---|---|
| ನಾಡೋಜ ಡಾ.ಜಿ. ನಾರಾಯಣ | ಅಧ್ಯಕ್ಷರು |
| ಶ್ರೀ ಟಿ. ತಿಮ್ಮೇಗೌಡ | ಸದಸ್ಯರು |
| ಶ್ರೀಮತಿ ಇಂದಿರಾ ಬಾಲಕೃಷ್ಣ | ಸದಸ್ಯರು |
| ಶ್ರೀ ಗೊ.ರು. ಚನ್ನಬಸಪ್ಪ | ಸದಸ್ಯರು |
| ನಾಡೋಜ ಡಾ. ಸಿದ್ಧಲಿಂಗಯ್ಯ | ಸದಸ್ಯರು |
| ಡಾ.ಎಂ.ಎ. ಜಯಚಂದ್ರ | ಸದಸ್ಯರು |
| ಪ್ರೊ. ಡಿ.ಲಿಂಗಯ್ಯ | ಸಂಪಾದಕರು |
| ಡಾ. ಚಕ್ಕೆರೆ ಶಿವಶಂಕರ್ | ಕಾರ್ಯದರ್ಶಿ - ಸಂಚಾಲಕರು |

ಮುದ್ರಕರು :
ಕೃತಿಕಾ ಪ್ರಿಂಟ್ - ಆಡ್
ನಂ. ೫೮, ೧ನೇ ಕ್ರಾಸ್, ವಿನಾಯಕ ನಗರ,
ಆಡುಗೋಡಿ ಪೋಸ್ಟ್, ಬೆಂಗಳೂರು - ೫೬೦ ೦೩೦.
ಫೋನ್ : ೯೮೪೪೧ ೧೪೯೫೮.

# ಅಧ್ಯಕ್ಷರ ಮಾತು

ಭಾರತದ ಎಲ್ಲಾ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲೂ ಸಮೃದ್ಧವಾದ, ವೈವಿಧ್ಯವಾದ ಜಾನಪದವಿದೆ. ಅದು ಗರಿಕೆಯ ಬೇರಿನಂತೆ ಬದುಕಿನ ಎಲ್ಲಾ ಮಜಲುಗಳಿಗೂ ಹರಡಿಕೊಂಡಿದೆ. ಜಾನಪದವಿಲ್ಲದೆ ಜನಜೀವನವಿಲ್ಲ ಎಂಬಂತೆ ಬದುಕಿನ ಅವಿಭಾಜ್ಯ ಅಂಗವಾಗಿದೆ. ಕರ್ನಾಟಕದ ಸಮಗ್ರ ಸಂಸ್ಕೃತಿ ಜಾನಪದ ಆಶಯದಿಂದ ಕೂಡಿದೆ. ಜನಪದ ಸಾಹಿತ್ಯ, ಭಾಷೆ, ಕಲೆ, ವಿಜ್ಞಾನ , ಸಂವಹನ ಮೊದಲಾದವು ಬದುಕಿನ ನೆಲೆಯೊಡನೆ ಮಡುಗಟ್ಟಿ ಅಮೃತಪ್ರಾಯವಾಗಿ ಜೀವನೋತ್ಸಾಹ ತುಂಬುತ್ತಿವೆ. ಇವುಗಳ ಸಂಗ್ರಹ ಸಂಪಾದನೆ ಅಧ್ಯಯನ ಅಧ್ಯಾಪನ ಅನ್ವಯಿಕತೆ ಜಾಗತಿಕ ತುರ್ತಾಗಿದೆ. ಜಾನಪದದ ಅರಿವಿನಿಂದ ಶಿಷ್ಟಪದ ಸಂಪುಷ್ಟವಾಗಿ ಸುಸಂಸ್ಕೃತವಾಗಿ ಬೆಳೆಯುವ ಸಾಧ್ಯತೆಯಿದೆ.

ಜಾನಪದ ರೂವಾರಿ, ಜಾನಪದ ಜಂಗಮ, ನಾಡೋಜ ಎಚ್. ಎಲ್. ನಾಗೇಗೌಡರು ಸಮಗ್ರ ಜಾನಪದದ ಅಭಿವೃದ್ಧಿಗಾಗಿ 'ಕರ್ನಾಟಕ ಜಾನಪದ ಪರಿಷತ್ತು', ಸಂಸ್ಥೆಯನ್ನು ಹುಟ್ಟುಹಾಕಿದರು. ಜಾನಪದದ ಪ್ರತ್ಯಕ್ಷ ದರ್ಶನಕ್ಕೆ 'ಜಾನಪದ ಲೋಕ' ವನ್ನು ಪ್ರಾರಂಭಿಸಿದರು. ಜಾನಪದದ ವೈಜ್ಞಾನಿಕ ಅಧ್ಯಯನಕ್ಕೆ 'ಜಾನಪದ ಸಿರಿಭುವನ' ವನ್ನು ಸ್ಥಾಪಿಸಿದರು. ತಮ್ಮ ಜೀವಿತದ ಬಹುಭಾಗವನ್ನು ಜಾನಪದಕ್ಕೆ ಮೀಸಲಿಟ್ಟು ಕನ್ನಡ ನಾಡಿನಲ್ಲೆಲ್ಲಾ ಸಂಚರಿಸಿ ಅಪಾರವಾದ, ಅಪರೂಪವಾದ, ವೈವಿಧ್ಯಮಯವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು. ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ, ಜಾನಪದ ವಿದ್ವಾಂಸರ ಚಿಂತನಾಭಿವ್ಯಕ್ತಿಗೆ ಅನುವಾಗುವ 'ಜಾನಪದ ಜಗತ್ತು' ಪತ್ರಿಕೆಯನ್ನು ಪ್ರಾರಂಭಿಸಿ, ಯಶಸ್ವಿಯಾಗಿ ನಡೆಸಿದರು.

ಎಚ್.ಎಲ್. ನಾಗೇಗೌಡರ ಜಾನಪದ ಕನಸನ್ನು ನನಸುಮಾಡಲು, ಕರ್ನಾಟಕ ಜಾನಪದ ಪರಿಷತ್ತು ತ್ರೈವಾರ್ಷಿಕ ಜಾನಪದ ಯೋಜನೆಯನ್ನು ಹಮ್ಮಿಕೊಂಡು ಕಾರ್ಯೋನ್ಮುಖವಾಗಿದೆ. ಅದರ ಹಲವು ಬೃಹತ್ ಯೋಜನೆಗಳಲ್ಲಿ ಶ್ರೀ ನಾಗೇಗೌಡರು ಸಂಗ್ರಹಿಸಿದ ಜನಪದ ಸಾಹಿತ್ಯ ಪ್ರಕಟಣೆಯೂ ಒಂದು. ಇದರಲ್ಲಿ ಜಾನಪದ ಜಗತ್ತು ಪತ್ರಿಕೆಯಲ್ಲಿ ಪ್ರಕಟವಾದ ವಿಶೇಷ ಲೇಖನಗಳ ಸಂಗ್ರಹ ಪ್ರಕಟನೆಯೂ ಸೇರಿದೆ. ಜಾನಪದವನ್ನು ಗಂಭೀರವಾಗಿ ಅಧ್ಯಯನ ಮಾಡುವವರಿಗೆ 'ದೇವ್ವ ಜಾನಪದ' ಗ್ರಂಥ ಪ್ರಕಟಣೆ ಉಪಯುಕ್ತವಾಗುವುದೆಂದು ಭಾವಿಸಿದೆ. ಪ್ರಸ್ತುತ ಗ್ರಂಥವನ್ನು ಪ್ರೊ.ಡಿ.ಲಿಂಗಯ್ಯ ಮತ್ತು ಡಾ. ಚಕ್ಕೆರೆ ಶಿವಶಂಕರ್ ಸಂಪಾದಿಸಿದ್ದಾರೆ. ತ್ರೈವಾರ್ಷಿಕ ಜಾನಪದ ಯೋಜನೆಯ ಪುಸ್ತಕ ಮಾಲೆಯ ಆರನೆಯ ಕುಸುಮವಾಗಿ ದೇವ್ವ ಜಾನಪದ ಗ್ರಂಥ ಪ್ರಕಟವಾಗುತ್ತಿದೆ. ಕನ್ನಡ ಸಹೃದಯರಿಗೆ ಈ ಗ್ರಂಥ ಪ್ರಿಯವಾಗಲಿ ಎಂದು ಆಶಿಸುತ್ತೇನೆ.

**ಜಿ. ನಾರಾಯಣ**

ಅಧ್ಯಕ್ಷ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು

೧೦-೦೨-೨೦೦೮

# ಪ್ರಸ್ತಾವನೆ

ಜಾನಪದ ಅಧ್ಯಯನದ ವಿವಿಧ ಪ್ರಕಾರಗಳಲ್ಲಿ 'ದೆವ್ವ ಜಾನಪದ'ವೂ ಇದೆಯೆಂಬುದು ವಿಸ್ಮಯವೆನಿಸುತ್ತದೆ. ಆದಿಮಾನವನ ಕಾಲದಿಂದಲೂ ಮನುಕುಲದ ಜೊತೆಜೊತೆಗೇ ಸೇರಿಕೊಂಡಿರುವ ದೆವ್ವ ಕಲ್ಪನೆ ಮೌಖಿಕ ಪರಂಪರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ವಿಶ್ಲೇಷಣೆಯ ಹಂತದಲ್ಲಿ ಮನುಷ್ಯನ ಬುದ್ಧಿಮತ್ತೆಯನ್ನು ಬಹಳವಾಗಿ ಕಾಡಿದೆ. ದೆವ್ವದ ಅಸ್ತಿತ್ವದ ಬಗ್ಗೆ ಖಚಿತವಾದ ನಿಲುವಿಗೆ ಬರಲಾರದಷ್ಟು ಸಮಸ್ಯೆ ಬಿಗಡಾಯಿಸಿದೆ. ಈ ವಿಷಯದಲ್ಲಿ ಜಾನಪದ ಮತ್ತು ವೈಜ್ಞಾನಿಕ ಚಿಂತನೆಗಳು ಮುಖಾಮುಖಿಯಾಗಿವೆ. ದೆವ್ವದ ಆವಾಹನೆ, ದೆವ್ವದ ಚಿಕಿತ್ಸೆಯ ಜೊತೆಯಲ್ಲಿ ಮಾನವ ಶಾಸ್ತ್ರೀಯ ಅಂಶಗಳು ಹೇರಳವಾಗಿ ತುಂಬಿಕೊಂಡಿವೆ. ವ್ಯಾಖ್ಯಾನಿಸಲು ತೊಡಗಿದರೆ ಮನುಕುಲದ ವಿಕಾಸವೇ ಬಿಚ್ಚಿಕೊಳ್ಳುತ್ತದೆ.

ನಂಬಿಕೆಯೋ ಮೂಢ ನಂಬಿಕೆಯೋ ಜ್ಞಾನವೋ ವಿಜ್ಞಾನವೋ ವಾಸ್ತವವೋ ಅವಾಸ್ತವವೋ ದೆವ್ವದ ಪರಿಕಲ್ಪನೆಯಲ್ಲಿ ಜನಪದ ಮನಸ್ಸು ಸಕ್ರಿಯವಾಗಿ ತೊಡಗಿಕೊಂಡಿದೆ. ಅದು ಅರಿವಿಗೆ ಸವಾಲಾಗಿ ಸಾಂಸ್ಕೃತಿಕ ಪರಿವೇಷವನ್ನು ತಾಳಿದೆ. ಅದರ ತಲಸ್ಪರ್ಶಿಯಾದ ಅಧ್ಯಯನ ಕುತೂಹಲಕಾರಿಯಾಗಿದೆ. 'ರೋಗ ಜಾನಪದ'ಕ್ಕೂ 'ದೆವ್ವ ಜಾನಪದ'ಕ್ಕೂ ಕೆಲವು ಸಮಾನ ಅಂಶಗಳಿವೆ. ಎರಡರ ಹಿನ್ನೆಲೆಯಲ್ಲೂ ಸಾಕಷ್ಟು ಸಮಾನ ಮನಸ್ಸಿದೆ. ಅದು ಜನಪದ ಮನಸ್ಸು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ದೆವ್ವಗಳಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳಿವೆ, ಅವು : ೧. ಸಾಧು ದೆವ್ವಗಳು, ೨. ಕ್ರೂರ ದೆವ್ವಗಳು. ಪ್ರತಿಯೊಂದರಲ್ಲೂ ಹೆಣ್ಣು ದೆವ್ವಗಳುಂಟು, ಗಂಡು ದೆವ್ವಗಳುಂಟು. ಹೆಣ್ಣು ದೆವ್ವಗಳ ಸಂಖ್ಯೆ ಅಧಿಕ, ಹೆಂಗಸರನ್ನು ಮೆಟ್ಟಿಕೊಳ್ಳುವ ದೆವ್ವಗಳ ಸಂಖ್ಯೆಯೂ ಅಧಿಕ. ಗಂಡು ದೆವ್ವಗಳ ಸಂಖ್ಯೆ ಕಡಮೆ. ಗಂಡಸರಿಗೆ ಕಾಡುವ ದೆವ್ವಗಳ ಸಂಖ್ಯೆಯೂ ಕಡಮೆ.

ಅಧ್ಯಯನದ ದೃಷ್ಟಿಯಲ್ಲಿ ದೆವ್ವಗಳನ್ನು ನಾನಾ ರೀತಿಯಲ್ಲಿ ವರ್ಗೀಕರಿಸುವುದುಂಟು. ಸಾಮಾನ್ಯಾರ್ಥದಲ್ಲಿ ದೆವ್ವ ಒಂದೇ ಆದರೂ ಅದರಲ್ಲಿ ಬೇರೆ ಬೇರೆ ಸ್ತರಗಳಿರುವುದನ್ನು ಸೂಚಿಸುತ್ತಾರೆ. ಪೀಡೆ, ಪಿಶಾಚಿ, ಭೂತ, ಪ್ರೇತ, ಕಾತ, ಗಾಳಿ, ಗರಾವು, ಕೊಳ್ಳಿದೆವ್ವ ರಣ, ಬ್ರಹ್ಮಪಿಶಾಚಿ, ಜಟಿಯಾ, ಬನ್ನಿ ಮೋಹಿನಿ - ಮೊದಲಾದವು ದೆವ್ವಗಳಾದರೂ ಅವುಗಳಿಗೆ ಪ್ರತ್ಯೇಕ ಸ್ವರೂಪವನ್ನು ಹೇಳುವುದಿದೆ. ಭೂತ ಅಶರೀರ; ಪ್ರೇತ ಅತೃಪ್ತ ಜೀವಿ ಎಂದು ಲಕ್ಷಣ ಹೇಳುವವರೂ ಉಂಟು.

ಪಕೃತಿಯಲ್ಲಿ ನಾನಾ ರೀತಿಯ ದೆವ್ವದ ಕಾಟವಿದೆಯೆಂದು ನಂಬಲಾಗಿದೆ. ಉದಾಹರಣೆಗೆ :

೧. ಮನುಷ್ಯರಿಗೆ ದೆವ್ವದಕಾಟ

೨. ಪ್ರಾಣಿಗಳಿಗೆ ದೆವ್ವದ ಕಾಟ

೩. ಸಸ್ಯಗಿಡ ಮರಗಳಿಗೆ ದೆವ್ವದ ಕಾಟ.

ಪ್ರತಿಯೊಂದಕ್ಕೂ ಜನಪದರೇ ಕಲ್ಪಿಸಿಕೊಂಡಿರುವ ನಂಬಿಕೆಗಳಿವೆ, ನಿವಾರಣಾ ವಿಧಾನಗಳಿವೆ. ಅವು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ, ಅಲ್ಪಸ್ವಲ್ಪ ವ್ಯತ್ಯಾಸವಾಗುತ್ತವೆ. ಆದರೆ ಎಲ್ಲಾ ಕಡೆಯೂ ಎಲ್ಲರಲ್ಲೂ ದೆವ್ವದ ಕಾಟ ಇದ್ದೇ ಇದೆ. ಅದರ ವಿವರಗಳು ವಿಚಿತ್ರವಾಗಿವೆ; ಕೆಲವು ಸಂದರ್ಭದಲ್ಲಿ ವಿಕಾರವಾಗಿದೆ. ಲೋಹ ಮತ್ತು ದೆವ್ವ, ನೀರು ಮತ್ತು ದೆವ್ವ ಮೊದಲಾದ ವಿಷಯಗಳ ಹಿನ್ನೆಲೆಯಲ್ಲಿ ದೆವ್ವ ಜಾನಪದವನ್ನು ಅಧ್ಯಯನ ಮಾಡಲು ಅವಕಾಶವಿದೆ.

ಜಾನಪದದ ಸಾಹಿತ್ಯೇತರ ಅಧ್ಯಯನದಲ್ಲಿ ದೆವ್ವ ಜಾನಪದವೂ ಒಂದು. ನಾಡೋಜ ಎಚ್.ಎಲ್.ನಾಗೇಗೌಡರ ಪ್ರಧಾನ ಸಂಪಾದಕತ್ವದಲ್ಲಿ ದೆವ್ವ ಜಾನಪದವನ್ನು ಕುರಿತು ಲೇಖನಗಳಿಗಾಗಿ ಪ್ರಕಟಣೆ ಹೊರಡಿಸಲಾಯಿತು. ಕೆಲವು ಜಾನಪದ ಆಸಕ್ತ ಕನ್ನಡ ವಿದ್ವಾಂಸರು ಲೇಖನಗಳನ್ನು ಬರೆದು ಕಳುಹಿಸಿದರು. ಅವು 'ಜಾನಪದ ಜಗತ್ತು', ಪತ್ರಿಕೆಯ ಅಕ್ಟೋಬರ್ - ಡಿಸೆಂಬರ್ ೧೯೯೯ ರ ಸಂಚಿಕೆಯಲ್ಲಿ ಪ್ರಕಟವಾದವು. ದೆವ್ವ ಕುರಿತ ಲೇಖನಗಳನ್ನು ಕಂಡು ನಾಗೇಗೌಡರು ಹೀಗೆ ಪ್ರತಿಕ್ರಿಯಿಸಿದರು:

"ದೆವ್ವಗಳನ್ನು ಕುರಿತು ಬರೆದಿರುವ ಲೇಖನಗಳನ್ನು ಓದಿದರೆ ಒಲೆ ಇಲ್ಲದ ಮನೆಯಿಲ್ಲ ಎಂಬಂತೆ ದೆವ್ವಗಳಿಲ್ಲದ ಊರಿಲ್ಲ ಎಂದು ಹೇಳಬೇಕಾಗುತ್ತದೆ. ಎಲ್ಲೆಲ್ಲೂ ದೆವ್ವಗಳು ಪೀಡೆ, ಪಿಶಾಚಿ, ಗಾಳಿ, ಶಂಕೆ ಎಂಬಿತ್ಯಾದಿ ಹೆಸರುಗಳಿಂದ ಮನುಷ್ಯರ ಬಾಳಿನ ಅವಿಭಾಜ್ಯ ಅಂಗವಾಗಿ ಬಿಟ್ಟಿವೆ. ನಮ್ಮ ಊರಿಗೆ ಮೂಡಣ ದಿಕ್ಕಿನಲ್ಲಿ ಕಾಣಿಸುವ ಹದ್ದಿನ ಕಲ್ಲು ಹನುಮಂತರಾಯನ ಬೆಟ್ಟದಲ್ಲಿ ಎಲ್ಲೆಲ್ಲಿಂದಲೋ ಬಂದ ಗಾಳಿಗಳು ಕಲ್ಲು ಹೊಯ್ಯಿಸಿಕೊಂಡು ಅಲ್ಲೇ ಬಿದ್ದು ಒದ್ದಾಡುತ್ತಿವೆ". ಆ ಎಲ್ಲ ಲೇಖನಗಳು ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿವೆ. ಕೊನೆಯ ಒಂದು ಲೇಖನ ಹೊಸದಾಗಿ ಸೇರಿದೆ.

ಪ್ರಾಚೀನ ಕಾಲದಿಂದ ಪ್ರಚಲಿತವಾಗಿರುವ ದೆವ್ವದ ನಂಬಿಕೆಯನ್ನು ಕುರಿತಂತೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಚಾಲ್ತಿಯಲ್ಲಿರುವ ಹಲವು ಅಂಶಗಳು ಈ ಲೇಖನಗಳಿಂದ ವೇದ್ಯವಾಗುತ್ತವೆ. ತಲಸ್ಪರ್ಶಿಯಾಗಿ ಕ್ಷೇತ್ರಕಾರ್ಯ ಮಾಡಿದರೆ ಇನ್ನೂ ರೋಚಕವಾದ ವಿಷಯಗಳು ಹೊರಬೀಳಬಹುದು. ಒಟ್ಟಿನಲ್ಲಿ ದೆವ್ವ ಜಾನಪದ ಅಧ್ಯಯನಕ್ಕೆ ಪ್ರಸ್ತುತ ಗ್ರಂಥ ಪ್ರಥಮ ಪ್ರವೇಶವಾಗುತ್ತದೆ. ಈ ಲೇಖನಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೂ ಕೃತಜ್ಞರಾಗಿದ್ದೇವೆ.

ಬೆಂಗಳೂರು
೦೪-೨-೨೦೦೮

**ಪ್ರೊ. ಡಿ. ಲಿಂಗಯ್ಯ**
ಸಂಪಾದಕರ ಪರವಾಗಿ

## ಪರಿವಿಡಿ

ಅಧ್ಯಕ್ಷರ ಮಾತು

ಪ್ರಸ್ತಾವನೆ

೧. ದೆವ್ವ: ಒಂದು ಜನಪದ ನಂಬಿಕೆ

ಡಾ|| ಸಿ.ಆರ್. ಚಂದ್ರಶೇಖರ್ ೧

೨. ದೆವ್ವ - ಪಿಶಾಚಿ

ಡಾ || ಬಸವರಾಜ ಮಲಶೆಟ್ಟಿ ೮

೩. ದೆವ್ವ ಜಾನಪದ

ಡಾ|| ಸಿ.ಕೆ. ನಾವಲಗಿ ೧೦

೪. ದೇವರು ದೆವ್ವಗಿವ್ವ: ನಮ್ಮೂರ ಸುತ್ತಮುತ್ತ

ಡಾ || ರಾಜೇಗೌಡ ಹೊಸಹಳ್ಳಿ ೨೫

೫. ದೆವ್ವ ಸಂಬಂಧಿ ನಂಬುಗೆಗಳು

ಡಾ || ವೀರಣ್ಣ ದಂಡೆ ೩೬

೬. ದೆವ್ವ ಜಾನಪದ ಕುರಿತು

ಡಾ || ವೈ.ಸಿ. ಭಾನುಮತಿ ೪೮

೭. ದೆವ್ವ: ಜನರು ಕಂಡಂತೆ

ಎಂ. ಬೈರೇಗೌಡ ೬೧

೮. ದೆವ್ವದ ಸುತ್ತ ಮುತ್ತಿಲಿನ ಕಥೆಗಳು

ಡಾ || ಚೆನ್ನಣ್ಣ ವಾಲೀಕಾರ ೭೪

೯. ದೆವ್ವ ಜಾನಪದದ ಬಗೆಗೆ

ಪ್ರೊ. ಎಂ.ಎಲ್. ನರಸಿಂಹಮೂರ್ತಿ ೭೭

೧೦.ಚನ್ನಾದೇವಿಯ ದೈವ್ವಗಳು : ಆದಿಮಕ ಆಧುನಿಕ ಅಭಿವ್ಯಕ್ತಿ:

ಡಾ || ಟಿ. ಗೋವಿಂದರಾಜು ೮೧

೧೧. ಮುಸ್ಲಿಂ ಜನಾಂಗದಲ್ಲಿ ದೆವ್ವ(ಸೈತಾನ)ದ ಕಲ್ಪನೆ

ಡಾ|| ದಸ್ತಗೀರ ಅಲ್ಲೀಭಾಯಿ ೯೩

೧೨. ದೆವ್ವ ನಮ್ಮದೆ ಒಂದು ವ್ಯಕ್ತಿತ್ವ

ಡಾ || ಹಿ.ಶಿ. ರಾಮಚಂದ್ರೇಗೌಡ ೯೭

೧೩. ಕುಲೆಯ ಆರಾಧನೆ ಅಥವಾ ಪಿತೃಪೂಜೆ

ಪಾಲ್ತಾಡಿ ರಾಮಕೃಷ್ಣ ಆಚಾರ್, ಮಾಡಾವು ೧೦೬

೧೪. ದೆವ್ವದ ಪುರಾಣ

ಪ್ರೊ. ಡಿ. ಲಿಂಗಯ್ಯ ೧೧೩

ಲೇಖಕರ ವಿಳಾಸಗಳು ೧೨೭

# ೧. ದೆವ್ವ: ಒಂದು ಜನಪದ ನಂಬಿಕೆ

ಡಾ|| ಸಿ.ಆರ್. ಚಂದ್ರಶೇಖರ್

ಮೆದುಳಿನ ನರಕೋಶಗಳಲ್ಲಿ ಉಂಟಾಗುವ ಕೆಲವು ರಾಸಾಯನಿಕ ಬದಲಾವಣೆಗಳಿಂದ ಬರುವ ಸ್ಕಿಜೋಫ್ರೀನಿಯ, ಮೇನಿಯಾ ದಂತಹ ಕಾಯಿಲೆಗಳು ದೆವ್ವ-ಭೂತಸೃಷ್ಟಿಗೆ ಕಾರಣ. ಮೈಮೇಲೆ ದೆವ್ವ ಬರುವುದು ವಿಶೇಷ ಮನೋ-ಸಾಮಾಜಿಕ ಘಟನೆ ಎನ್ನುತ್ತಾರೆ ಖ್ಯಾತ ಮನೋ ವಿಜ್ಞಾನಿ ಸಿ.ಆರ್. ಚಂದ್ರಶೇಖರ್ - ಸಂಪಾದಕ

ಪೂರ್ಣಿಮೆಯ ರಾತ್ರಿ. ಹಾಲು ಚೆಲ್ಲಿದಂತೆ ಎಲ್ಲೆಡೆ ಬೆಳದಿಂಗಳು. ಗಿಡಮರಗಳು. ನೀರವತೆ. ಇದ್ದಕ್ಕಿದ್ದಂತೆ ನಡೆಯುವ ಹೆಜ್ಜೆಗಳ ಗೆಜ್ಜೆ ಶಬ್ದ. ಹಿನ್ನಲೆಯ ಸಂಗೀತದ ಧಾಟಿಯಿಂದ, ಹೆಣ್ಣು ದೆವ್ವ ತೆರೆಯ ಮೇಲೆ ಮೂಡುತ್ತದೆ ಎಂದು ವೀಕ್ಷಕರು ನಿರೀಕ್ಷಿಸುತ್ತಿದ್ದಂತೆ, ಅಚ್ಚ ಬಿಳಿಯ ಸೀರೆಯುಟ್ಟು ಉದ್ದನೆಯ ಕೂದಲರಾಶಿಯ - ಮೋಹಿನಿ- ಇಂಪಾದ ದನಿಯಲ್ಲಿ ಹಾಡುತ್ತಾಳೆ. ನಾಯಕ ಕುತೂಹಲದಿಂದ ಆಕೆಯನ್ನು ಅನುಸರಿಸತೊಡಗುತ್ತಾನೆ. ಈ ಹೆಣ್ಣು ದೆವ್ವ ಒಮ್ಮೆ ಕಾಣಿಸಿಕೊಂಡು ಮರುಕ್ಷಣ ಮಾಯವಾಗುತ್ತಾ ಆತನ ದಾರಿತಪ್ಪಿಸಿ, ಕೊನೆಗೆ ಹಾಳು ಬಂಗಲೆಯೊಳಕ್ಕೆ ಹೊಕ್ಕು ಮರೆಯಾಗಿ ಬಿಡುತ್ತಾಳೆ.....

ಮನುಷ್ಯ, ತನ್ನ ಇಳಿವಯಸ್ಸಿನವರೆಗೆ ಬದುಕಿ, ತನ್ನೆಲ್ಲ ಆಸೆ ಬಯಕೆಗಳನ್ನು ಪೂರೈಸಿಕೊಂಡು, ತನ್ನ ಆಶ್ರಿತರಿಗೊಂದು ಶಾಶ್ವತ ವ್ಯವಸ್ಥೆಮಾಡಿ, ತೃಪ್ತಿಯಿಂದ ಸತ್ತರೆ, ಅವನ ಆತ್ಮ ವೈಕುಂಠಕ್ಕೊ ಕೈಲಾಸಕ್ಕೊ ಹೋಗುತ್ತದೆ. ಆದರೆ ಅದೇ ಮನುಷ್ಯ ಚಿಕ್ಕವಯಸಿನಲ್ಲೇ ಸತ್ತರೆ, ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವ ಮೊದಲೇ ತೀರಿಕೊಂಡರೆ, ಕೊಲೆ, ಆತ್ಮಹತ್ಯೆ, ಅಪಘಾತದಂತಹ ದುರ್ಮರಣಕ್ಕೆ ತುತ್ತಾದರೆ, ಆತನ ಆತ್ಮಕ್ಕೆ ಮುಕ್ತಿ ಇಲ್ಲ. ಅದು ದೆವ್ವ, ಭೂತ, ಪ್ರೇತ, ಪಿಶಾಚಿಯಾಗಿ ಸತ್ತ ಸ್ಥಳದಲ್ಲೇ ಸುತ್ತುತ್ತಿರುತ್ತದೆ. ತನಗೆ ಅನ್ಯಾಯ ಮಾಡಿದವರಿಗೆ ಕಾಟಕೊಟ್ಟು ಪೀಡಿಸಿ ಸಂತೋಷಪಡುತ್ತದೆ ಎಂದು ಜನ ನಂಬುತ್ತಾರೆ. ಕೆಲವು ದೆವ್ವಗಳು ಅತಿ ತುಂಟತನ, ಚೇಷ್ಟೆ ಮಾಡುತ್ತಾ, ಯಾರೆಂದರೆ ಅವರನ್ನು ಗೋಳು ಹೊಯ್ದುಕೊಳ್ಳುತ್ತವೆ. ಮನೆಗಳ ಮೇಲೆ ಕಲ್ಲು, ಬೂದಿ ತೂರುತ್ತವೆ. ವಸ್ತುಗಳ ಸ್ಥಾನಪಲ್ಲಟ ಮಾಡುತ್ತವೆ ಎಂದು ಹೇಳಲಾಗುತ್ತದೆ. ಅಲ್ಲದೆ ದೆವ್ವಗಳು ಕಾಮರೂಪಿಗಳಂತೆ. ಅವುಗಳ ನಿಜವಾದ ರೂಪ ವಿಕಾರವಾದುದಂತೆ. ರಕ್ತವರ್ಣದ ಕಣ್ಣುಗಳು, ಕೋರೆಹಲ್ಲುಗಳು, ಹಾರಾಡುವ, ಉದ್ದನೆಯ ಕೂದಲುಗಳು, ಚೂಪಾದ ಉದ್ದನೆಯ ಉಗುರುಗಳು, ಕಪ್ಪು ಮುಖ, ಹಿಂದು ಮುಂದಾದ ಕಾಲುಗಳು ನೋಡುವುದಕ್ಕೆ ಭಯಂಕರ ! ಆದರೆ ಅವು ಯಾವುದೇ ರೂಪವನ್ನು ಧರಿಸಬಲ್ಲವಂತೆ; ಸುಂದರ ಯುವಕ, ಯುವತಿಯಂತೆ, ಮಗುವಿನಂತೆ, ವೃದ್ಧರಂತೆ, ಪ್ರಾಣಿಗಳಂತೆ !

ದೆವ್ವಗಳನ್ನು ನೋಡಿದ್ದೇ ಎಂದು ಆಣೆ ಪ್ರಮಾಣ ಮಾಡಿ ಹೇಳುವ ಜನರಿದ್ದಾರೆ. ದೆವ್ವದ ಕೈಗೆ ಸಿಕ್ಕಿಹಾಕಿಕೊಂಡ ತಮ್ಮ ಪೇಚಾಟ, ಬವಣೆಗಳನ್ನು ಕಣ್ಣಿಗೆ ಕಟ್ಟಿದಂತೆ ವಿವರಿಸುತ್ತಾರೆ. ಬಾವಿ, ಕೆರೆಗಳ ಸಮೀಪ, ಈ ಬಾವಿಕೆರೆಯೊಳಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಂಡವರ ದೆವ್ವಗಳು ಓಡಾಡುವುದನ್ನು ನೋಡಿದ್ದೇವೆ ಎನ್ನುತ್ತಾರೆ. ನೀರಿನೊಳಕ್ಕೆ ಯಾರೋ ಬಿದ್ದ -ದುಡುಂ- ಶಬ್ದವನ್ನು ಕೇಳಿರುತ್ತಾರೆ. ದೆವ್ವಗಳು ಬಾವಿಯ ಕಟ್ಟೆಯ ಮೇಲೆ, ಕೆರೆದಂಡೆಯ ಮೇಲೆ ಕುಳಿತು, ಬಳಿಗೆ ಕರೆಯುತ್ತವೆ ಎನ್ನುತ್ತಾರೆ. ರಸ್ತೆಯ ಅಪಾಯಕಾರಿ ತಿರುವಿನಲ್ಲಿ ಪದೇಪದೇ ಅಪಘಾತಗಳಾಗಿ ಸತ್ತವರ ದೆವ್ವಗಳು, ಅಲ್ಲೇ ಇದ್ದು, ಚಾಲಕರ ಕಣ್ಣಿಗೆ ಕಾಣಿಸಿಕೊಂಡು ಅಥವಾ ಇನ್ನಾವುದೋ ರೀತಿಯಲ್ಲಿ ಅವರ ಚಾಲನೆಗೆ ಅಡ್ಡಿಯಾಗಿ ಮತ್ತು ಅಪಘಾತವನ್ನುಂಟು ಮಾಡುವುದನ್ನು, ಚಾಲಕರು ವರದಿ ಮಾಡುತ್ತಾರೆ. ನೇಣು ಹಾಕಿಕೊಂಡು ಸತ್ತ ವ್ಯಕ್ತಿಯ ದೆವ್ವ ಮತ್ತೆ ಮರದ ರೆಂಬೆಗೆ ನೇತು ಹಾಕಿಕೊಂಡು ತೂಗುತ್ತದೆ ಎನ್ನುವವರಿದ್ದಾರೆ. ಬಾಣಂತಿಯ ದೆವ್ವ ಮುಸ್ಸಂಜೆಯ ಹೊತ್ತು ತನ್ನ ಮಗುವಿಗಾಗಿ ಅಳುವುದನ್ನು ಕೇಳಿದೆವು ಎನ್ನುವವರಿದ್ದಾರೆ. ಹೆರಿಗೆ ಕೊಠಡಿ, ಬಾಣಂತಿಯರಿರುವ ವಾರ್ಡ್‌ಗಳಲ್ಲಿ, ಹಿಂದೆ ಸತ್ತ ಸ್ತ್ರೀಯರ ದೆವ್ವಗಳನ್ನು ನೋಡಿದೆವು ಎಂದು ಜನ ಹೇಳುತ್ತಾರೆ.

ಪಾಳು ಬಿದ್ದ ಬಂಗಲೆಗಳು, ಮಂಟಪಗಳು, ಹುಣಸೇ ಮರಗಳು, ಈಚಲು ಮರಗಳು, ಆಸ್ಪತ್ರೆ - ಶವಾಗಾರಗಳು, ಆತ್ಮಹತ್ಯೆ, ಕೊಲೆಗಳು ನಡೆದ ಜಾಗಗಳು, ದೆವ್ವಗಳ ಆವಾಸ ಸ್ಥಾನಗಳೆಂದು ಜನ ನಂಬುತ್ತಾರೆ. ಹಾಗೆಯೇ, ಪ್ರೇತಗಳ ಲೋಕವೂ ಇದೆಯಂತೆ. ಸತ್ತ ಎಲ್ಲರ ಆತ್ಮಗಳೂ ಅಲ್ಲಿ ವಾಸಿಸುತ್ತವೆಯಂತೆ. ತಮ್ಮ ವಾರ್ಷಿಕ ಶ್ರಾದ್ಧವಾಗುವ ದಿನ, ಕಾಗೆಗಳ ರೂಪದಲ್ಲಿ ಬಂದು, ಪಿಂಡವನ್ನು ಸ್ವೀಕರಿಸುತ್ತವೆಯಂತೆ. ಈ ಪ್ರೇತಾತ್ಮಗಳೊಂದಿಗೆ -ಸಂಭಾಷಿಸುವ - ಕೆಲವರು ತಮ್ಮದೇ ಒಂದು ಸಂಘವನ್ನೂ ಕಟ್ಟಿಕೊಂಡಿದ್ದಾರೆ. ಪ್ಲಾಂಚೆಟ್ ಮುಖಾಂತರ, ಅಕ್ಷರಗಳನ್ನು ಬರೆದ ಬೋರ್ಡಿನ ಮೇಲೆ ಇಟ್ಟ ಲೋಟ ಅಥವಾ ಮಣಿ ಓಡಾಡುತ್ತಾ, ಆತ್ಮದ ಮಾತುಗಳನ್ನು ನುಡಿಯುತ್ತವೆ ಎಂದು ನಂಬುವವರು ಇದ್ದಾರೆ.

ಇನ್ನು ದೆವ್ವಗಳು, ಜನರನ್ನು ಮೆಟ್ಟಿಕೊಳ್ಳುವುದು, ಮೈಮೇಲೆ ಬಂದು ಅಬ್ಬರಿಸುವುದು, ತನಗೆ ಅನ್ಯಾಯ ಮಾಡಿದವರನ್ನು ಅಥವಾ ಯಾರ ಮೇಲೆ ದೆವ್ವ ಬಂದಿದೆಯೋ ಆ ವ್ಯಕ್ತಿಗೆ ಅನ್ಯಾಯ-ಹಿಂಸೆ ಮಾಡುವವರನ್ನು ತರಾಟೆಗೆ ತೆಗೆದುಕೊಳ್ಳುವುದು, ದೆವ್ವ ತನ್ನ ಬೇಡಿಕೆಗಳನ್ನು ಮಂಡಿಸುವುದು, ಮಂತ್ರವಾದಿ ಬಂದು, ಆ ವ್ಯಕ್ತಿಯನ್ನು ಹೊಡೆದು ಬಡಿದು ಉಪವಾಸ ಕೆಡಹಿ, ಪ್ರತಿಯಾಗಿ ಅಬ್ಬರಿಸಿ ಮಾಡುವ ಭೂತೋಚ್ಚಾಟನೆ ನಮ್ಮ ನಾಡಿನ ಪ್ರತಿ ಹಳ್ಳಿಯಲ್ಲಿ, ಅನೇಕ ದೇವಸ್ಥಾನಗಳಲ್ಲಿ ಕಾಣಬಹುದು.

ದೆವ್ವಗಳಿಗೆ ಹಸಿವೂ ಆಗುತ್ತದಂತೆ. ದೆವ್ವ ಹಿಡಿದ ವ್ಯಕ್ತಿ ಹತ್ತು ಜನ ತಿನ್ನುವಷ್ಟು ಆಹಾರವನ್ನು ತಿಂದುಬಿಡುತ್ತಾನೆ. ಗಡಿಗೆ ಗಡಿಗೆ ಹಾಲು, ಪಾಯಸ, ಕುಡಿಯುತ್ತಾನೆ.

ಆದರೆ ದೆವ್ವಗಳಿಗೆ ರಕ್ತ, ಮಾಂಸ, ವೀರ್ಯಗಳು ಬಲು ಇಷ್ಟವಂತೆ. ಪ್ರಾಣಿಗಳ, ಮನುಷ್ಯರ ರಕ್ತಹೀರುವ, ಪಡ್ಡೆಹುಡುಗರ, ಕಟ್ಟುಮಸ್ತಾದ ಯುವಕರ ವೀರ್ಯವನ್ನುಕುಡಿಯುವ ದೆವ್ವಗಳ ಕಥೆಗಳನ್ನು ಜನ ಹೇಳುತ್ತಾರೆ. ದೆವ್ವ ಸತ್ತ ಹೆಣಗಳ ಮಾಂಸವನ್ನು ತಿನ್ನುತ್ತವೆಯಂತೆ ! ತಮ್ಮ ಕಾಲುಗಳನ್ನೇ ಒಲೆಯಲ್ಲಿಟ್ಟು ಬೆಂಕಿ ಉರಿಸಿ ಅಡುಗೆ ಮಾಡುತ್ತವೆಯಂತೆ. ಹೀಗೆ ದೆವ್ವಗಳ ಬಗ್ಗೆ ಹೇಳುವ ಇಂತಹ ಕಥೆಗಳಿಗೆ ಕೊನೆಮೊದಲಿಲ್ಲ. ಇದೆಲ್ಲವನ್ನೂ ಕೇಳಿದಮೇಲೆ, ದೆವ್ವಗಳಿವೆ ಎಂದು ಯಾರು ಬೇಕಾದರೂ ನಂಬಬಹುದು, ಭಯ ಭೀತರಾಗಬಹುದು.

## ದೆವ್ವ: ನಮ್ಮ ಕಲ್ಪನೆ

ಸಾವು ಅನಿರೀಕ್ಷಿತವಾಗಿ ಬಂದಾಗ, ಕೆಟ್ಟರೀತಿಯಲ್ಲಿ ಅಮಾನುಷವಾಗಿ ಬಂದಾಗ ಸತ್ತವ್ಯಕ್ತಿಯ ಆತ್ಮೀಯರು, ಬಂಧುಮಿತ್ರರು ಅತೀವ ದುಃಖಕ್ಕೆ ಈಡಾಗುತ್ತಾರೆ. ಆಘಾತದಿಂದ, ದುಃಖದಿಂದ ಸಾವನ್ನು ನಿರಾಕರಿಸಬಹುದು. ವ್ಯಕ್ತಿ ಸತ್ತಿಲ್ಲ, ಬದುಕಿದ್ದಾನೆ ಎಂಬ ಭ್ರಮೆ ಅವರನ್ನು ಆವರಿಸುತ್ತದೆ. ಸತ್ತವ್ಯಕ್ತಿ ಎದ್ದೇಳಬಾರದೇ, ಮಾತನಾಡಬಾರದೇ ಎಂದು ಅವರ ಮನಸ್ಸು ಆಸೆಪಡುತ್ತದೆ. ಆಗ ಮನಸ್ಸು ಭ್ರಮಾಧೀನವಾಗುತ್ತದೆ. ಸತ್ತವ್ಯಕ್ತಿ ಜೀವಂತವಾಗಿರುವಂತೆ, ಎದುರು ಬಂದಂತೆ, ಮಾತನಾಡಿದಂತೆ, ದೈನಂದಿನ ಚಟುವಟಿಕೆಗಳಲ್ಲಿ ಭಾಗಿಯಾದಂತೆ ಭಾಸವಾಗುತ್ತದೆ. ಇದೇ ವಿಭ್ರಮೆ ಅಥವಾ -ಹೆಲೂಸಿನೇಶನ್ಸ್. ಹೀಗಾಗಿ ಜನ ಇಂತಹ ಅನುಭವಗಳಿಂದ ಆತ್ಮ, ದೆವ್ವಗಳ ಕಲ್ಪನೆ ಮಾಡುವಂತಾಯಿತು.

ಹಾಗೆಯೇ ತೀವ್ರರೀತಿಯ ಮಾನಸಿಕ ಕಾಯಿಲೆಗಳಾದ ಸ್ಕಿಜೋಫ್ರೀನಿಯ ಮೇನಿಯಾ, ಸನ್ನಿ, ಅಂಗದೋಷದ ಚಿತ್ತವಿಕಲತೆಗಳಲ್ಲಿ ಕೂಡ, ಹೆಲೂಸಿನೇಶನ್ಸ್ ಕಾಣಿಸಿಕೊಳ್ಳುತ್ತವೆ. ಸುತ್ತಮುತ್ತ ಯಾರಿಲ್ಲದಿದ್ದರೂ ಯಾರೋ ಮಾತಾಡಿದಂತೆ, ಬಯ್ದಂತೆ, ಹೆದರಿಸಿದಂತೆ, ಹಾಸ್ಯ ಮಾಡಿದಂತೆ, ಧ್ವನಿಗಳು ಕೇಳತೊಡಗುತ್ತವೆ. ವ್ಯಕ್ತಿಯ ವಿಚಾರ ವರ್ತನೆಗಳನ್ನೆಲ್ಲಾ ಈ ಧ್ವನಿಗಳು ಕಾಮೆಂಟರಿ ರೂಪದಲ್ಲಿ ಹೇಳತೊಡಗಬಹುದು (ಆಡಿಟರಿ ಹೆಲೂಸಿನೇಶನ್ಸ್). ಕಣ್ಣು ಅಗಲಿಸಿ ನೋಡಿದರೆ, ಹೋಗಿ ಹುಡುಕಾಡಿದರೆ ಅಲ್ಲಿ ಯಾರೂ ಇರುವುದಿಲ್ಲ. ಮನೋರೋಗಿಗಳಿಗೆ ಅದರಲ್ಲೂ ಸನ್ನಿ ಪೀಡಿತರಿಗೆ ಸತ್ತವ್ಯಕ್ತಿಗಳು ಕಣ್ಣಿಗೆ ಕಾಣಿಸಿಕೊಳ್ಳಬಹುದು (ವಿಶುಯಲ್ ಹೆಲೂಸಿನೇಶನ್ಸ್) ಅಥವಾ ಕಲ್ಪನೆಯ ದೆವ್ವದಂತಹ ಆಕೃತಿಗಳು ಕಾಣಿಸಿಕೊಳ್ಳಬಹುದು. ರೋಗಿಗಳ ಈ ಅನುಭವಗಳನ್ನು ಕೇಳಿದ ಜನ ; ಮಾನಸಿಕ ಕಾಯಿಲೆಗಳು ಬರಲು ದೆವ್ವ ಭೂತಗಳು ಕಾರಣವಾಗಬಹುದು, ಈ ರೋಗಿಗಳಿಗೆ ಅವುಗಳು ಗೋಚರಿಸುತ್ತವೆ, ಅವರೊಂದಿಗೆ ಮಾತಾಡುತ್ತವೆ, ಅವರನ್ನು ಹೆದರಿಸುತ್ತವೆ, ಅವರಿಂದ ಬೇಡದ ಕೆಲಸಗಳನ್ನು ಮಾಡಿಸಿ ಇತರರಿಗೆ ತೊಂದರೆ ಕೊಡುತ್ತವೆ, ಎಂದು ತೀರ್ಮಾನಿಸಿದರು.

ಬಡಾಯಿಕೊಚ್ಚಿ ಬುರುಡೆಬಿಟ್ಟು, ಕೇಳುವವರು ಕಣ್ಣು ಬಾಯಿ ಬಿಟ್ಟುಕೊಂಡು, ಹೌದೇ, ಹೀಗೂ ನಡೆಯಿತೇ, ಅಬ್ಬಾ, ನಂಬಲು ಕಷ್ಟ, ಎಂದು ಉದ್ಗರಿಸುವಂತೆ ಮಾತನಾಡಿ ಸಖಿಸುವ ಜನರು ಎಲ್ಲೆಡೆ ಇದ್ದಾರೆ. ಇವರು ಈ ದೆವ್ವ ಭೂತಗಳನ್ನು ಕಲ್ಪಿಸಿಕೊಂಡು ಅವುಗಳ ಆಕಾರ, ವರ್ತನೆಗಳನ್ನು ಉತ್ಪ್ರೇಕ್ಷಿಸಿ ವಿವರಿಸುತ್ತಾ ತಮ್ಮ ಚಪಲವನ್ನು ತೀರಿಸಿಕೊಳ್ಳುತ್ತಾರೆ. ತಾವು ನೋಡಿರದಿದ್ದರೂ ಅಥವಾ ತಮಗಾದ ಒಂದು ದುರ್ಬಲ ಎಳೆಯ ಪ್ರಕರಣ, ಅನುಭವವನ್ನು ಉಪ್ಪುಕಾರ ಹಚ್ಚಿ ನಿಜವಾದ ಘಟನೆ, ಅನುಭವ, ಎಂದೇ ಹೇಳತೊಡಗುತ್ತಾರೆ. ಇಂತಹ ಸ್ವಾನುಭವ ಪ್ರಕರಣಗಳು ಬಾಯಿಂದ ಕಿವಿಗೆ ಹರಡಿ ಎಲ್ಲೆಡೆ ಚರ್ಚಿಸಲ್ಪಟ್ಟು ಕೊನೆಗೆ ಅದು ಬ್ರಹ್ಮಾಂಡ ರೂಪ ತಾಳಿ, ಅಧಿಕೃತ ನಿಜ ಎಂಬ ಮನ್ನಣೆಯನ್ನೂ ಗಳಿಸಿಕೊಂಡುಬಿಡುತ್ತವೆ. ನೂರುಸಲ ಹೇಳಿದ ಸುಳ್ಳು ನಿಜವಾಗುತ್ತದೆ ಅಲ್ಲವೇ !

## ಮನೋ ರೋಗಗಳು

ತೀವ್ರರೀತಿಯ ಮನೋರೋಗಗಳಾದ ಸ್ಕಿಜೋಫ್ರೀನಿಯಾ, ಮೇನಿಯಾ, ಸನ್ನಿ, ಅಂಗದೋಷದ ಚಿತ್ತವಿಕಲತೆಗಳಲ್ಲಿ, ರೋಗಿಗಳಿಗೆ ಶೂನ್ಯದಲ್ಲಿ ಧ್ವನಿ ಕೇಳಿಸುವ ಹಾಗೂ ದೃಶ್ಯ ಕಾಣಿಸುವ ಚಿತ್ತಭ್ರಮೆ - ಹೆಲೂಸಿನೇಶನ್ಸ್-ಗಳ ಅನುಭವವಾಗುತ್ತದೆ. ರೋಗಿ ಮತ್ತು ಮನೆಯವರು ಈ ಅನುಭವಗಳನ್ನು ದೆವ್ವ ಭೂತಗಳಿಗೆ ಅನ್ವಯಿಸಿಬಿಡುತ್ತಾರೆ. ರೋಗಿಯೊಂದಿಗೆ ದೆವ್ವಗಳು ಮಾತಾಡುತ್ತವೆ, ಅವನನ್ನು ಹೆದರಿಸುತ್ತವೆ, ಅವನ ಮನಸ್ಸನ್ನು ಕೆಡಿಸುತ್ತಿವೆ ಎಂದು ಅರ್ಥೈಸಿಬಿಡುತ್ತಾರೆ. ಸನ್ನಿಹಿಡಿದ ರೋಗಿ ಅಗೋ ನೋಡಿ, ಮೂಲೆಯಲ್ಲಿ ನನ್ನ ಸತ್ತ ತಂದೆ ನಿಂತಿದ್ದಾರೆ, ತಾತ ಮುತ್ತಾತಂದಿರೂ ಸಾಲುಗಟ್ಟಿ ನಿಂತಿದ್ದಾರೆ, ಎನ್ನಬಹುದು. ದೆವ್ವಗಳು ಇದೆ ಎನ್ನಲು ಜನರಿಗೆ ಇದೂ ಒಂದು ಆಧಾರ ! ಹೀಗಾಗಿ ಮಿದುಳಿನ ನರಕೋಶಗಳಲ್ಲಿ ಕೆಲವು ರಾಸಾಯನಿಕ ಬದಲಾವಣೆಯಿಂದ ಬರುವ ಸ್ಕಿಜೋಫ್ರೀನಿಯಾ, ಮೇನಿಯಾದಂತಹ ಕಾಯಿಲೆಗಳು ದೆವ್ವ- ಭೂತಗಳ ಸೃಷ್ಟಿ ಎಂದು ಈಗಲೂ ನಮ್ಮ ಜನ ನಂಬುತ್ತಾರೆ. ರೋಗಿಗಳನ್ನು ಆಸ್ಪತ್ರೆಗೆ ಕರೆತರದೆ, ಭೂತಬಿಡಿಸುವ ಮಂತ್ರವಾದಿಗಳ ಬಳಿಗೆ ಕರೆದೊಯ್ಯುತ್ತಾರೆ.

## ಪ್ರೇತ ಲೋಕ

ಸತ್ತಮೇಲೆ, ದೇಹವನ್ನು ಕಳೆದುಕೊಂಡ ಆತ್ಮಗಳು ವಾಸಿಸುವ ಸ್ಥಳವಿದೆ. ಆ ಸ್ಥಳ ಆಕಾಶದಲ್ಲಿ ಎಲ್ಲೋ ಇದೆ. ಈ ಆತ್ಮಗಳೊಂದಿಗೆ ನಾವು ಸಂಭಾಷಿಸಬಲ್ಲೆವು ಎಂದು ಕೆಲವರು ಬುರುಡೆಬಿಡುತ್ತಾರೆ. ದಕ್ಷಿಣ ಕನ್ನಡದಲ್ಲಿ ಡಿವೈನ್ ಪಾರ್ಕ್ ಎಂಬ ಸಂಸ್ಥೆಯನ್ನು ಸ್ಥಾಪಿಸಿರುವ ವೈದ್ಯರೊಬ್ಬರು ವಿವೇಕಾನಂದರ ಆತ್ಮ ತಮ್ಮೊಂದಿಗೆ ಸಂಭಾಷಿಸುತ್ತದೆ ಎಂದು ಜನರನ್ನು ನಂಬಿಸಿಬಿಟ್ಟಿದ್ದಾರೆ. ಕ್ಯಾನ್ಸರ್‌ನಿಂದ ಸತ್ತ ತಮ್ಮ ಮಗಳ ಆತ್ಮದೊಂದಿಗೆ ತಾವು

ಯೋಗ - ಕ್ಷೇಮ ಸಂಭಾಷಣೆ ಮಾಡುತ್ತೇವೆ ಎಂದು ಇದೇ ಜಿಲ್ಲೆಯ ನಿವೃತ್ತ ಶಿಕ್ಷಕರು ಹೇಳುತ್ತಾರೆ. ಪ್ರೇತಲೋಕದೊಂದಿಗೆ ಸಂಪರ್ಕ ಇಟ್ಟುಕೊಂಡಿರುವವರ ಸಂಘ ಮುಂಬಯಿ, ಲಂಡನ್‌ನಲ್ಲಿದೆ. ಅವರ ಪ್ಲಾಂಚೆಟ್ ಬರಹ, ಇಂಗ್ಲಿಷ್ ಬರಹಗಳ ತಟ್ಟೆಯ ಮೇಲೆ ಓಡಾಡುವ ಕಪ್ ಅವರ ಈ ಹೇಳಿಕೆಗಳಿಗೆ ಸಾಕ್ಷ್ಯ ಒದಗಿಸುವಲ್ಲಿ ಸೋಲುತ್ತವೆ. ಕ್ರಾಸ್ ಎಕ್ಸಾಮಿನೇಶನ್‌ಗೆ ಇವರು ಕೊಡುವ ಉತ್ತರಗಳು, ಅವರ ನಂಬಿಕೆ ವೈಜ್ಞಾನಿಕವಾದುದಲ್ಲ ಎಂಬುದನ್ನು ಸ್ಥಿರೀಕರಿಸುತ್ತದೆ.

## ಮೈಮೇಲೆ ದೆವ್ವ ಬರುವುದು

ವ್ಯಕ್ತಿಯ ಮೈಮೇಲೆ ಥಟ್ಟನೆ ದೆವ್ವ ಬರುವುದು, ಬಂದ ದೆವ್ವ ತನ್ನ ಹೆಸರು, ಕುಲಗೋತ್ರಗಳನ್ನು ಹೇಳುವುದು, ತನ್ನ ಬೇಡಿಕೆಗಳನ್ನು ಮಂಡಿಸುವುದು, ವೀಕ್ಷಕರನ್ನು ಆ ವ್ಯಕ್ತಿಯ ಕುಟುಂಬದವರನ್ನು ಹೆದರಿಸುವುದು, ಕೇಕೆಹಾಕಿ ಅಬ್ಬರಿಸುವುದು, ಸ್ವಲ್ಪ ಹೊತ್ತಿನ ನಂತರ ಬಿಟ್ಟುಹೋಗುವುದು, ಅವಧಿ ಗೊಂದಾವರ್ತಿ ಮತ್ತೆ ಬಂದು ವ್ಯಕ್ತಿ ಮತ್ತು ಎಲ್ಲರನ್ನು ಕಾಡುವುದು, ಅಷ್ಟೇ ನಾಟಕೀಯವಾಗಿ, ಭೂತಬಿಡಿಸುವ ಮಂತ್ರವಾದಿ ಪೂಜಾರಿ ವ್ಯಕ್ತಿಯನ್ನು ಹೊಡೆದು, ಬಡಿದು ಹಿಂಸೆ ಮಾಡಿ, ದೆವ್ವವು ನಾನು ಹೋಗುತ್ತೇನೆ ಎಂದು ಹೇಳುವಂತೆ ಮಾಡುವುದನ್ನು ಯಾವುದೇ ಹಳ್ಳಿಯಲ್ಲಿ ಕಾಣಬಹುದು.

ಈ ರೀತಿ ಮೈಮೇಲೆ ದೆವ್ವ ಬರುವುದು ನಿಜವೇ ? ಇದುವರೆಗೆ ನಡೆದಿರುವ ಅನೇಕ ಅಧ್ಯಯನಗಳ ಪ್ರಕಾರ, ಇದು ಒಂದು ವಿಶೇಷ ಮನೋ-ಸಾಮಾಜಿಕ ಸಾಂಸ್ಕೃತಿಕ ಘಟನೆ. ವ್ಯಕ್ತಿಯ ಮೇಲೆ ಯಾವ ದೆವ್ವವೂ ಬರುವುದಿಲ್ಲ, ದೆವ್ವ ಬಂದಂತೆ ಆ ವ್ಯಕ್ತಿ ವರ್ತಿಸುತ್ತಾನೆ. ಈ ವರ್ತನೆ ಅವನ ಜಾಗೃತ ಮನಸ್ಸಿಗೆ ಅರಿವಿರಬಹುದು ಅಥವಾ ಅರಿವಿಲ್ಲದಿರಬಹುದು. ಇದೊಂದು ಸುಪ್ತಮನಸ್ಸಿನ ವರ್ತನೆ ಎನ್ನುತ್ತಾರೆ ಮನಶಾಸ್ತ್ರಜ್ಞರು. ವ್ಯಕ್ತಿಯ ಮೈಮೇಲೆ ದೆವ್ವ ಬರುವುದನ್ನು ಮೂರು ಬಗೆಯ ವಿವರಣೆಗಳಿಂದ ವಿಶ್ಲೇಷಿಸಬಹುದು.

### (೧) ಉನ್ಮಾದ ಸ್ಥಿತಿ ( Hysterical Dissociation State)

ಶೇಕಡ ೭೫ ರಷ್ಟು ಪ್ರಕರಣಗಳಲ್ಲಿ, ದೆವ್ವ ಬರುವುದು ಸ್ತ್ರೀಯರ ಮೇಲೆ. ಸ್ತ್ರೀಯರು ಹಲವು ವಿಧಗಳಿಂದ ಶೋಷಣೆಗಳಿಗೆ ಮನೋಕ್ಲೇಶಗಳಿಗೆ ತುತ್ತಾಗಿರುತ್ತಾರೆ. ತಮ್ಮ ಅನಿಸಿಕೆ, ಭಾವನೆಗಳನ್ನು ನೇರವಾಗಿ ಪ್ರಕಟಿಸಲು ಅವರಿಗೆ ಅವಕಾಶವಿರುವುದಿಲ್ಲ. ನೋವು, ಅವಮಾನ, ದಂದ್ವಗಳಿಂದ ನಲುಗಿರುತ್ತಾರೆ. ಭಾವೋದ್ವೇಗಗಳಿಂದ ಅವರ ಮನಸ್ಸಿನ ತಳಮಳ ಗರಿಷ್ಠಮಟ್ಟವನ್ನು ಮುಟ್ಟುತ್ತದೆ. ಜಾಗೃತ ಮನಸ್ಸಿಗೆ ಇದನ್ನು ಸಹಿಸುವುದು ಕಷ್ಟವಾಗಿ, ಸಮಸ್ಯೆ ನೋವನ್ನು ಸುಪ್ತಮನಸ್ಸಿನೊಳಕ್ಕೆ ತಳ್ಳುತ್ತದೆ. ಅಲ್ಲೂ ಒತ್ತಡ ಹೆಚ್ಚಿದಾಗ, ಸುಪ್ತಮನಸ್ಸು, ನಮ್ಮ ಸಮಾಜದಲ್ಲಿ ಜನ ನಂಬುವ ದೆವ್ವ ಬರುವ ವಿಶೇಷವನ್ನು ಬಳಸಿಕೊಳ್ಳುತ್ತದೆ. ಹಿಂಸಿಸುವ, ಕ್ರೂರಿಗಳಾದ ಗಂಡ, ಅತ್ತೆ, ಮಾವಂದಿರನ್ನು ನೇರವಾಗಿ

ಎದುರಿಸಲಾಗದ ಸ್ತ್ರೀಯ ಮೇಲೆ ದೆವ್ವ ಬಂದು ಗಂಡ, ಅತ್ತೆ, ಮಾವಂದಿರ ದುಷ್ಕೃತ್ಯಗಳನ್ನು ಬಹಿರಂಗವಾಗಿ ಹೇಳಿ ಅವರ ಮೇಲೆ ಕ್ರೋಧವನ್ನು ಪ್ರಕಟಿಸುತ್ತದೆ. ಬದಲಾಗಿ, ಹಿಂಸೆ ನಿಲ್ಲಿಸಿ ಇಲ್ಲದಿದ್ದರೆ ನಿಮ್ಮನ್ನು ಬಲಿ ತೆಗೆದುಕೊಳ್ಳುತ್ತೇನೆ ಎಂದು ಎಚ್ಚರಿಸುತ್ತದೆ. ಹೀಗಾಗಿ ಸ್ತ್ರೀ ಎಲ್ಲರ ಗಮನವನ್ನು ಸೆಳೆದು, ತನ್ನ ಸಮಸ್ಯೆಗೆ ಪರಿಹಾರವನ್ನು ಕೇಳುತ್ತಾಳೆ. ದೆವ್ವದ ಭಯದಿಂದ, ಗಂಡ, ಅತ್ತೆಮಾವ ಸ್ವಲ್ಪ ಮೆತ್ತಗಾಗುತ್ತಾರೆ, ಇತರರ ಛೀಮಾರಿಗೆ ಒಳಗಾಗುತ್ತಾರೆ, ಸ್ತ್ರೀ ಎಲ್ಲರ ಸಹಾನುಭೂತಿಯನ್ನು ಗಳಿಸುತ್ತಾಳೆ. ಆಕೆಯ ಜಾಗೃತ ಮನಸ್ಸಿಗೆ ಇದೊಂದೂ ನೆನಪಿರುವುದಿಲ್ಲ. ಎಚ್ಚರವಾದ ಮೇಲೆ ನನಗೇನಾಯಿತು, ನಾನು ಹಾಗೆ ಹೇಳಿದೆನೇ, ನನ್ನ ಮೇಲೆ ದೆವ್ವ ಬಂದಿತ್ತೇ ಎಂದು ಕೇಳುವಂತಾಗುತ್ತದೆ. (Amnesia).

**(೨) ಸಂವಹನ :**

ವ್ಯಕ್ತಿ ನೇರವಾಗಿ ಹೇಳಲು ಧೈರ್ಯವಿಲ್ಲದಿದ್ದಾಗ, ಜನ ಪರಿಸರ ಅವಕಾಶ ಕೊಡದಿದ್ದಾಗ, ದೆವ್ವ ಬರುವ-ಮಾತಾಡುವ, ವಿಶೇಷದ ಮೂಲಕ ಸುರಕ್ಷಿತವಾಗಿ, ತನ್ನ ಮನದಾಳದ ಯಾವುದೇ ಅನುಭವ ಅನಿಸಿಕೆ ಪ್ರತಿಭಟನೆಯನ್ನು ಪ್ರಕಟಿಸಿ ಸಮಾಧಾನ ಪಡುತ್ತಾನೆ.

**(೩) ಅನುಕರಣೆ :**

ತನ್ನ ಅಕ್ಕನಿಗೆ ದೆವ್ವ ಬಂದದ್ದನ್ನು ನೋಡಿ, ತಂಗಿಯೂ ಯಾವುದೇ ಉದ್ದೇಶವಿಲ್ಲದೇ, ಅನುಕರಿಸಬಹುದು. ದೇವಸ್ಥಾನದಲ್ಲಿ, ಜಾತ್ರೆಯಲ್ಲಿ, ಮಂತ್ರವಾದಿಯ ಸಮ್ಮುಖದಲ್ಲಿ ಒಬ್ಬರ ಮೇಲೆ ದೆವ್ವ ಬಂದದ್ದನ್ನು ಅನುಕರಿಸಿ ಹಲವಾರು ಜನ ಹಾಗೇ ವರ್ತಿಸಬಹುದು. ಏಕೆಂದರೆ ಸಮಾಜದಲ್ಲಿ ಶೇಕಡಾ ೫೦ ರಷ್ಟು ಜನ ಸುಲಭವಾಗಿ ಇತರರು ಹೇಳಿದ್ದನ್ನು ನಂಬುತ್ತಾರೆ. ಇತರರು ಮಾಡಿದಂತೆ ಮಾಡುತ್ತಾರೆ (High Suggestibility). ಇವರು ಚಿಕ್ಕಂದಿನಿಂದಲೂ ಇತರರ ಮೇಲೆ ದೆವ್ವ ಬರುವುದನ್ನು ನೋಡುತ್ತಾ ಬೆಳೆಯುತ್ತಾರೆ. ಒಂದಲ್ಲ ಒಂದು ಸಮಯದಲ್ಲಿ ತಮ್ಮ ಮೈಮೇಲೂ ದೆವ್ವ ಬರುತ್ತದೆ ಎಂಬ ನಿರೀಕ್ಷೆ ಇಟ್ಟುಕೊಳ್ಳುತ್ತಾರೆ. ಯಾವುದೇ ಪ್ರಚೋದಕ ಪರಿಸರದಲ್ಲಿ, ಭಾವೋದ್ವೇಗಕ್ಕೆ ಒಳಗಾದಾಗ, ಈ ನಿರೀಕ್ಷೆಯಂತೆ, ದೆವ್ವ ಬಂದಂತೆ ಆಡತೊಡಗುತ್ತಾರೆ ಎಂದು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ.

ಎಲ್ಲಿಂದ ಬರುತ್ತದೆ ಶಕ್ತಿ ಸಾಮರ್ಥ್ಯ?

ಮೈಮೇಲೆ ದೆವ್ವ ಬಂದಾಗ, ದುರ್ಬಲಳಾದ ಸ್ತ್ರೀ ಎಷ್ಟೊಂದು ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸುತ್ತಾಳೆ. ನೋಡುವ ಜನರಿಗೆ ಆಶ್ಚರ್ಯವಾಗುತ್ತದೆ.

೧. ದೇಹಬಲ : ಹತ್ತು ಜನ ಹಿಡಿದರೂ ಅವಳನ್ನು ಹಿಡಯಲಾಗುವುದಿಲ್ಲ. ಹೊಡೆದರೆ, ಕಬ್ಬಿಣದ ಹೊಡೆತದಂತೆ ತೀವ್ರವಾಗಿರುತ್ತದೆ. ಅದು ಹೇಗೆ – ನಾಲ್ಕು ಜನ

ಎತ್ತಲಾಗದ ಭಾರವನ್ನು ಆಕೆ ಎತ್ತಬಹುದು ? ಗಂಟೆಗಟ್ಟಲೆ ಕುಣಿದು ಕುಪ್ಪಳಿಸಿ, ಕಿರಿಚಾಡಲು ಶಕ್ತಿ ಎಲ್ಲಿಂದ ಬರುತ್ತದೆ ?

೨. ದೆವ್ವದ (ಸತ್ತವ್ಯಕ್ತಿ) ವೈಯಕ್ತಿಕ ಜೀವನದ ವಿವರಗಳನ್ನು ಹೇಗೆ ಹೇಳುತ್ತಾಳೆ ?

೩. ಬೇರೊಂದು ಭಾಷೆಯಲ್ಲಿ ಮಾತಾಡುತ್ತಾಳೆ. ಕನ್ನಡ ಬಿಟ್ಟು ಬೇರೊಂದು ಭಾಷೆ ತಿಳಿಯದ ಸ್ತ್ರೀ, ದೆವ್ವಬಂದಾಗ ತೆಲುಗು, ಉರ್ದುವಿನಂತಹ ಅಪರಿಚಿತ ಭಾಷೆಯಲ್ಲಿ ಹೇಗೆ ಮಾತಾಡುತ್ತಾಳೆ ?

೪. ಇತರ ಅತಿಮಾನವ ಶಕ್ತಿ, ಭವಿಷ್ಯ ಹೇಳುವುದು ಹೇಗೆ ಸಾಧ್ಯ ?

ಉನ್ಮಾದ ಸ್ಥಿತಿಯಲ್ಲಿ, ಭಾವೋದ್ವೇಗ ಸ್ಥಿತಿಯಲ್ಲಿ ದೇಹದಲ್ಲಿ ಹೆಚ್ಚು ಅಡ್ರಿನಲಿನ್ ಹಾರ್ಮೋನು ಉತ್ಪತ್ತಿಯಾಗುತ್ತದೆ. ಇದರಿಂದ ವ್ಯಕ್ತಿಯ ದೈಹಿಕ ಬಲ ಹೆಚ್ಚುತ್ತದೆ. ಸಾಮಾನ್ಯ ಸ್ಥಿತಿಯಲ್ಲಿ ಸ್ವಲ್ಪದೂರವೂ ಓಡಲಾಗದ ವ್ಯಕ್ತಿ ಪ್ರಾಣಭಯದಿಂದ ಒಂದು ಮೈಲು ಓಡುವುದಿಲ್ಲವೇ !

ಸತ್ತವ್ಯಕ್ತಿಯ ವಿವರಗಳು ವ್ಯಕ್ತಿಗೆ ತಿಳಿದಿರುತ್ತವೆ. ಆದರೆ ಹೇಳಿರುವುದಿಲ್ಲ ಅಷ್ಟೆ. ಹಾಗೆಯೇ ಚಿಕ್ಕಂದಿನಲ್ಲೋ ಅಥವಾ ಯಾವಾಗಲೋ, ಬೇರೊಂದು ಭಾಷೆ ಕಿವಿಯ ಮೇಲೆ ಬಿದ್ದು ಮಿದುಳಿನಲ್ಲಿ ಮುದ್ರಿತ ಭಾಷೆ ಹೊರಬರುತ್ತದೆ ಅಷ್ಟೆ. ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆಯ ಕುಗ್ರಾಮ ಒಂದರಲ್ಲಿ ೧೪ ವರ್ಷದ ಹುಡುಗಿ ದೆವ್ವ ಬಂದಾಗ ತೆಲುಗಿನಲ್ಲಿ ಮಾತಾಡುತ್ತಿದ್ದಳು. ಆಂಧ್ರದ ದೆವ್ವ ಅವಳನ್ನು ಹಿಡಿದಿದೆ ಎಂದು ಪ್ರಚಾರ ಮಾಡಲಾಯಿತು. ಪರೀಕ್ಷಿಸಿದಾಗ, ವಿವರಗಳನ್ನು ಪತ್ತೆಮಾಡಿದಾಗ, ಆಕೆಗೆ ಎರಡುವರ್ಷ ವಯಸ್ಸಿನಲ್ಲಿ ಆಕೆಯ ಪಕ್ಕದ ಮನೆಯಲ್ಲಿ ತೆಲುಗು ಕುಟುಂಬವೊಂದು ಆರು ತಿಂಗಳ ಕಾಲ ವಾಸವಾಗಿತ್ತು. ಈ ಮಗುವನ್ನು ಅವರು ತೆಲುಗಿನಲ್ಲೇ ಮಾತಾಡಿಸುತ್ತಿದ್ದರು. ಇವಳೂ ಕೆಲವಾರು ತೆಲುಗು ಪದಗಳನ್ನು ಕಲಿತುಕೊಂಡಿದ್ದಳು. ಆಮೇಲೆ ಮರೆತಳು. ದೆವ್ವಬರುತ್ತದೆ ಎಂದಾಗ ಹಳೆಯ ರಿಕಾರ್ಡ್ ಹಾಕಿದ್ದಳು !

ದೆವ್ವ ಬರುವ ವ್ಯಕ್ತಿಗಳಿಗೆ, ಆಪ್ತ ಸಲಹೆ-ಸಮಾಧಾನ, ಪ್ರೀತಿ ವಿಶ್ವಾಸಗಳು ಸಿಗಬೇಕು. ನೇರವಾಗಿ ಮಾತಾಡಲು, ಭಾವನೆ ತೋರಿಸಲು ಅವಕಾಶಗಳು ಸಿಗಬೇಕು. ಆಗ ದೆವ್ವ ಮತ್ತೆ ಬರುವುದಿಲ್ಲ. ಮನೋವೈದ್ಯರು ಈ ವ್ಯಕ್ತಿಗಳಿಗೆ ಚಿಕಿತ್ಸೆ ನೀಡುತ್ತಾರೆ. ಸಮೀಪದ ಮಾನಸಿಕ ಆರೋಗ್ಯ ಆಸ್ಪತ್ರೆಗೆ ಅವರನ್ನು ಕರೆದೊಯ್ಯಬೇಕು. ಭೂತೋಚ್ಚಾಟನೆಯ ಹೆಸರಿನಲ್ಲಿ ಅವರನ್ನು ಹಿಂಸಿಸಬಾರದು.

ನೆನಪಿಡಿ : ದೆವ್ವ ನಮ್ಮ ಕಲ್ಪನೆ. ನಿಜವಾಗಿ ದೆವ್ವಭೂತಗಳಿಲ್ಲ. ದೆವ್ವ ಮೈಮೇಲೆ ಬರುವುದು ಒಂದು ಮನೋ ಸಾಮಾಜಿಕ ವಿಶೇಷ. ವಿದ್ಯಾಭ್ಯಾಸ, ವೈಜ್ಞಾನಿಕ ಚಿಂತನೆ ಮತ್ತು ಮನೋಭಾವ; ಭಾವೋದ್ವೇಗಗಳ ಪ್ರಕಟಣೆಗೆ ಅವಕಾಶಗಳಿದ್ದರೆ ಈ ದೆವ್ವ ಬರುವ ಪ್ರಕರಣಗಳು ಮರೆಯಾಗುತ್ತವೆ

# ೨. ದೆವ್ವ- ಪಿಶಾಚಿ

ಡಾ ।। ಬಸವರಾಜ ಮಲಶೆಟ್ಟಿ

ಹಳ್ಳಿಗರು ದೆವ್ವಗಳ ಬಗ್ಗೆ ಸಹಜವಾಗಿ ಪರಿಚಿತವ್ಯಕ್ತಿಯ ಕುರಿತು ಮಾತಾಡಿದಂತೆ ಮಾತಾಡುತ್ತಾರೆ. ದೆವ್ವಗಳು ಇದ್ದೇ ಇದೆ ಎಂಬುದು ಅವರ ಅಭಿಪ್ರಾಯ. ಕೊಲೆ ಆತ್ಮಹತ್ಯೆಗಳಿಂದ ಸತ್ತವರು ದೆವ್ವಗಳಾಗುತ್ತಾರೆ ಮತ್ತು ಅವರಿವರನ್ನು ಹಿಡಿದುಕೊಳ್ಳುತ್ತಾರೆ. ಅಂದರೆ ದೆವ್ವಗಳು ಜೀವಂತ ವ್ಯಕ್ತಿಯಲ್ಲಿ ಸೇರಿ ತನ್ನ ಆಸೆಗಳನ್ನು ತಿಳಿಯಪಡಿಸುತ್ತವೆ. ಇದೆಲ್ಲ ತೀರಾ ಸಾಮಾನ್ಯವೆಂಬಂತೆ ಹಳ್ಳಿಗಳಲ್ಲಿ ನಡೆಯುತ್ತವೆ.

ನಮ್ಮೂರ ಪರಿಸರದಲ್ಲಿ ಹಲವು ದೆವ್ವಗಳ ಬಗ್ಗೆ ಕೇಳಿದ್ದೆನಾದರೂ ಪ್ರತ್ಯಕ್ಷ ಅನುಭವ ನನಗಾಗಲಿಲ್ಲ. ಕೆಲವು ಸಲ ರಾತ್ರಿ ಸುಡುಗಾಡಿನಲ್ಲಿ ಹಾದುಹೋಗುವ ಪ್ರಸಂಗಗಳು ಬಂದವು. ದೆವ್ವಗಳು ಪ್ರತ್ಯಕ್ಷವಾಗಬಹುದೆಂಬ ಭಯ ಮನಸ್ಸಿನ ತುಂಬ ತುಂಬಿದ್ದರೂ ಧೈರ್ಯದಿಂದಿದ್ದೆ. ದೆವ್ವಗಳ ದರ್ಶನವಾಗಲಿಲ್ಲ. ದೆವ್ವಗಳ ಚಟುವಟಿಕೆಗಳನ್ನು' ಅನುಭವಗಳನ್ನು ಜನರು ಉತ್ಸಾಹದಿಂದ ರಂಜನೀಯವಾಗಿ ಹೇಳುವುದನ್ನು ಕೇಳಿದ್ದೇನೆ. ಅವರಿವರ ಮಾತುಗಳನ್ನು ಅಷ್ಟೊಂದು ಗಂಭೀರವಾಗಿ ಸ್ವೀಕರಿಸದ ನಾನು ನನ್ನ ಅಪ್ಪ ಹೇಳುತ್ತಿದ್ದ ಅನುಭವಗಳನ್ನು ಕುತೂಹಲದಿಂದ ಕೇಳುತ್ತ ಬಂದೆ.

ನನ್ನ ಅಪ್ಪ- ಮರಿಕಲ್ಲಪ್ಪ ಮಲಶೆಟ್ಟಿ ತಮಗಾದ ಎರಡು ಅನುಭವಗಳನ್ನು ಹೇಳುತ್ತಿದ್ದರು. ಅವರು ೪೨ರ ಚಳುವಳಿಯ ಒಬ್ಬ ಸ್ವಾತಂತ್ರ್ಯಯೋಧ. ಚಳುವಳಿಯ ನಂತರ ಪೋಲೀಸರ ಕೈಗೆ ಸಿಗಬಾರದೆಂದು ತಲೆಮರೆಸಿಕೊಂಡು ಹೊಲ ತೋಟಗಳಲ್ಲಿ ಅಡಗಿಕೊಂಡು ಕಾಲಕಳೆಯುತ್ತಿದ್ದ ಕಾಲದಲ್ಲಿ ಅವರಿಗೆ ದೆವ್ವಿನ ಅನುಭವಗಳಾದದ್ದು. ಒಮ್ಮೆ ರಾತ್ರಿ ಒಂದು ಗಿಡದ ಬುಡಕ್ಕೆ ಮಲಗಿದ್ದಾಗ ಯಾರೋ ಬಂದು ಇವರೊಂದಿಗೆ ಕುಸ್ತಿಗೆ ತೊಡಗಿದರು. ನನ್ನ ಅಪ್ಪ ಒಳ್ಳೆಯ ಕುಸ್ತಿಪಟು. ಇವರು ಮಲಗಿಕೊಂಡೇ ಇದ್ದರಂತೆ. ಎದುರಾಳಿ ಪಟ್ಟುಹಾಕಿದ ಅನುಭವ. ಕಣ್ಣಿಗೆ ಯಾರೂ ಕಾಣುತ್ತಿಲ್ಲ. ಇವರು ಪಟ್ಟಿಗೆ ಪ್ರತಿಯಾಗಿ ಡಾವ ಪೇಚುಗಳನ್ನು ಹಾಕುತ್ತಿದ್ದರಂತೆ. ಅರ್ಧಗಂಟೆ ಬಲಿಷ್ಠ ಪೈಲವಾನನೊಂದಿಗೆ ಕುಸ್ತಿಹಿಡಿದ ಅನುಭವ. ಇವರ ಮೈಬೆವರಿನಿಂದ ಒದ್ದೆಯಾಗಿ ನಂತರ ನಿಧಾನವಾಗಿ ತಣ್ಣಗಾಯಿತಂತೆ. ಎದುರಾಳಿ ದೂರ ಸರಿದಂತೆನಿಸಿತು.

ಇನ್ನೊಮ್ಮೆ ಹೀಗೇ ರಾತ್ರಿ ಒಂದು ಕೆರೆಯ ಏರಿಯ ಮೇಲಿರುವ ಗಿಡದ ಬುಡಕ್ಕೆ ಮಲಗಿದ್ದಾಗ ಒಮ್ಮೆಲೇ ಎಚ್ಚರವಾಯಿತಂತೆ. ಗಿಡದ ಮೇಲೆಲ್ಲ ಗ್ಯಾಸ್ (ಪೆಟ್ರೋಮ್ಯಾಕ್ಸ್) ಬೆಳಕು ಬಿದ್ದಿತ್ತಂತೆ. ಪೋಲಿಸರ ಭಯದಲ್ಲಿದ್ದ ಇವರಿಗೆ ಪೋಲೀಸರು ಜೀಪ್ ತೆಗೆದುಕೊಂಡು ಹಿಡಿದೊಯ್ಯಲು ಬಂದಿದ್ದಾರೆ, ಇದು ಜೀಪಿನ ಬೆಳಕು ಎಂದೆನಿಸಿತಂತೆ.

ತಕ್ಷಣವೇ ಕೆರೆ ಏರಿ ಜಿಗಿದು ಕೆಳಗಿನ ಗದ್ದೆಗಳಲ್ಲಿ ಹಿಂದೆ ನೋಡದೇ ಓಡಲಾರಂಭಿಸಿದರು. ತುಸು ದೂರ ಹೋಗಿ ಹಿಂದಿರುಗಿ ನೋಡಿದರೆ ಬೆಳಕು ಇರಲಿಲ್ಲ. ಪೋಲೀಸರು ತಿರುಗಿ ಹೋದರೆಂದು ಭಾವಿಸಿದರು. ಆದರೂ ಕುತೂಹಲ ಉಳಿಯಿತಂತೆ. ಅದು ಜೀಪ್ ಬರುವಂಥ ದಾರಿಯಲ್ಲ. ಹೇಗೆ ಬಂದಿರಬಹುದು ? ಬೆಳಗಾದ ಮೇಲೆ ಹುಡುಕಿದರೂ ಪೋಲೀಸರು ಜೀಪು ಬಂದುಹೋದ ಯಾವ ಗುರುತುಗಳೂ ಅಲ್ಲಿರಲಿಲ್ಲವಂತೆ.

# ೩. ದೆವ್ವ ಜಾನಪದ

ಡಾ|| ಸಿ.ಕೆ. ನಾವಲಗಿ

ಜನಪದರು ನಂಬಿಕೆಗಳ ಮೂಲಕ ಗಾಳಿ-ದೆವ್ವಗಳಿಗೆ ಜೀವ ಕೊಟ್ಟು ರೂಪ ಕೊಟ್ಟು ಮಾತನಾಡಿಸಿದ್ದಾರೆ; ಕುಣಿಸಿದ್ದಾರೆ. ಜನಪದ ಸಮಾಜದ ನಂಬಿಕೆಯನ್ನು ಪ್ರಶ್ನಿಸುವ ಹಕ್ಕು ನಮಗಿಲ್ಲವಾದರೂ ದೆವ್ವದ ಬಗೆಗಿನ ನಂಬಿಕೆ, ಆಚರಣೆಗಳ ಹಿಂದಿರುವ ಜಾನಪದೀಯ ಮನಸ್ಸನ್ನು ನಮ್ಮ ಪಾರಂಪರಿಕ ಸಂಸ್ಕೃತಿಯ ತಿಳುವಳಿಕೆಯ ದೃಷ್ಟಿಯಿಂದ ಅಧ್ಯಯನ ಮಾಡುವುದು ತಪ್ಪಲ್ಲ ಎನ್ನುತ್ತಾರೆ ಸಿ.ಕೆ.ಎನ್. -ಸಂಪಾದಕ

ಈಗಾಗಲೇ ನಮ್ಮಲ್ಲಿ ನಗರ ಜಾನಪದ, ಸಸ್ಯ ಜಾನಪದ, ಪ್ರಾಣಿ ಜಾನಪದ, ಖನಿಜ ಜಾನಪದ, ಕಡಲು ಜಾನಪದ, ಕೃಷಿ ಜಾನಪದ, ಆಕಾಶ ಜಾನಪದ ಇತ್ಯಾದಿ ಹೊಸ ಹೊಸ ಅಧ್ಯಯನಗಳು ಪಾಶ್ಚಾತ್ಯ ಸಿದ್ಧಾಂತಗಳ ನೆಲೆಯಲ್ಲಿ ಚರ್ಚೆಗೊಳಗಾಗಿವೆ. ಈಗ ಕರ್ನಾಟಕ ಜಾನಪದ ಪರಿಷತ್ತು ತನ್ನ 'ಜಾನಪದ ಜಗತ್ತು', ಪತ್ರಿಕೆಯ ಮೂಲಕ ದೆವ್ವಜಾನಪದವನ್ನು ಸೈದ್ಧಾಂತಿಕ ಅಧ್ಯಯನಕ್ಕೊಳಪಡಿಸಲು ಮುಂದಾದುದು ದೆವ್ವ ಜಾನಪದದ ಇನ್ನೊಂದು ಅಧ್ಯಯನ ಶಾಖೆಯನ್ನು ತೆರೆದುತೋರುವ ನೂತನ ಯೋಜನೆ. ದೆವ್ವಿನ ಬಗೆಗೆ ನಮ್ಮ ಜನರಲ್ಲಿ ಪ್ರಚಲಿತವಿರುವ ತಿಳಿವಳಿಕೆ, ನಂಬಿಕೆ, ಸಂಪ್ರದಾಯ, ಆಚರಣೆಗಳನ್ನರಿಯಲು ತುಂಬ ಕೆಲಸ ನಡೆಯಬೇಕಿದೆ. ದೆವ್ವಿನ ಪರಿಕಲ್ಪನೆ ಮಾನವ ಸಂಸ್ಕೃತಿಗೇ ಸಂಬಂಧಪಟ್ಟುದು.

ಜನಪದ ಸಮಾಜ ಸಂಪ್ರದಾಯಬದ್ಧವಾದದ್ದು. ಇದು ಹಳೆಯದನ್ನೇ ಅಪ್ಪಿದ, ಹೊಸದನ್ನು ಬೇಗ ಒಪ್ಪಿಕೊಳ್ಳಲಾರದ ಮನೋಧರ್ಮದ್ದು. ದೆವ್ವಿನ ವಿಚಾರದಲ್ಲಿಯೂ ಇದು ಸತ್ಯ. ದೆವ್ವ ಕುರಿತ ಜಾನಪದರ ಕಲ್ಪನೆಯೇ ವಿಶಿಷ್ಟವಾದುದು, ಕುತೂಹಲಕಾರಿಯಾದುದು. ಜನಪದ ಸಂಸ್ಕೃತಿಯಲ್ಲಿ ದೇವರಿಗೆ ಎಷ್ಟು ಬೆಲೆಯೋ ಅಷ್ಟೇ ಬೆಲೆ ದೆವ್ವಿಗೂ ಇದೆ. ಆದುದರಿಂದ ದೆವ್ವಜಾನಪದ ಅಧ್ಯಯನ ಗಮನಾರ್ಹವೆನಿಸುತ್ತದೆ. ದೆವ್ವಜಾನಪದಕ್ಕೆ ಸಾಂಸ್ಕೃತಿಕ ಮಹತ್ವವಿದೆ. ಜನಪದ ಬದುಕು ಮತ್ತು ಸಂಸ್ಕೃತಿಗಳ ವಿವಿಧ ಮಗ್ಗುಲಗಳನ್ನು ಅರಿಯಲು ಈ ಅಧ್ಯಯನ ಸಹಾಯಕ; ಇದರಿಂದ ಜನಪದರ ಭಾವನಾತ್ಮಕ ಸಂಬಂಧ ಎಂಥದು ! ಎಂಬುದರ ಕಲ್ಪನೆಯೂ ಮೂಡುತ್ತದೆ.

ದೆವ್ವ-ಭೂತ-ಪ್ರೇತಗಳ ಬಗೆಗೆ ಭಾರತೀಯ ಜನಪದ ಜನಾಂಗ ಆದಿಯಿಂದಲೂ ನಂಬಿಕೆಯನ್ನಿರಿಸಿಕೊಂಡು ಬಂದಿದೆ. ಆದಿಮಾನವ ನಿಸರ್ಗದ ಪ್ರಕೋಪಕ್ಕೆ ಭಯಪಟ್ಟಿದ್ದಾನೆ; ಸೋಜಿಗಪಟ್ಟಿದ್ದಾನೆ; ಸೃಷ್ಟಿಯ ಅಗೋಚರ ಶಕ್ತಿಗಳಲ್ಲಿ ದೈವೀ ಭಾವನೆಯನ್ನಿರಿಸಿದ್ದಾನೆ. ಆ ಕಾರಣದಿಂದ ಅವನ್ನು ನಾನಾ ರೀತಿಯಲ್ಲಿ ಆರಾಧಿಸಿದ್ದಾನೆ. ದುಷ್ಟಶಕ್ತಿಯನ್ನು ಅದು ಕೊಡುವ ಬಾಧೆಗೆ ಹೆದರಿ ಆರಾಧಿಸಿದ್ದಾನೆ. ಕೆಲವು ಸಂದರ್ಭಗಳಲ್ಲಿ ಅಣಕಿಸಿದ್ದಾನೆ. ಇಂಥ ದುಷ್ಟಶಕ್ತಿಗಳಲ್ಲಿ ದೆವ್ವವೂ ಒಂದು. ಅವನ ದೃಷ್ಟಿಯಲ್ಲಿ

ದೆವ್ವ-ಭೂತ-ಪಿಶಾಚಿ-ಪ್ರೇತವೆಂದರೆ ಕೇವಲ ಎಲುಬಿನ ಹಂದರವುಳ್ಳ ಮನುಷ್ಯಾಕಾರದ ಸುಡುಗಾಡದಲ್ಲಿ ವಾಸವಾಗಿರುವ ದೈತ್ಯಜೀವಿ. ಇದು ಬದುಕಿರುವಾಗ ಈಡೇರಿಸಿಕೊಳ್ಳಲಾಗದ ಎಷ್ಟೋ ಆಸೆಗಳನ್ನು ಅಕಾಲಮರಣಕ್ಕೀಡಾಗಿ ಸ್ವರ್ಗ / ನರಕಕ್ಕೆ ಹೋಗಲಾರದೆ ಭೂಮಿಯಲ್ಲಿಯೇ ಕಣ್ಣಿಗೆ ಕಾಣಲಾರದೆ ಇದ್ದು, ಬದುಕಿರುವವರನ್ನು ಕಾಡಿಬೇಡಿ ತೀರಿಸಿಕೊಳ್ಳುವುದು. ತನ್ನಾಸೆಯನ್ನು ಈಡೇರಿಸಿಕೊಳ್ಳುವುದೆಂದರೆ ಬದುಕಿರುವವರನ್ನು ನಾನಾ ಬಗೆಯಾಗಿ ಹಿಂಸಿಸುವುದು. ಆ ಹಿಂಸೆಯಲ್ಲಿ ನೋಯುವುದನ್ನು ನರಳುವುದನ್ನು ಕಂಡು ತಾನು ಅಟ್ಟಹಾಸಪಡುವುದು, ಸಂತೋಷಪಡುವುದು.... ಎಂದೆಲ್ಲ ಜಾನಪದರಲ್ಲಿರುವ ನಂಬಿಕೆಯೇ ದೆವ್ವಗಳು ಇರುವುದನ್ನು ಸ್ಥಾಪಿಸುತ್ತದೆ.

ಹರೆಯದ ಹುಡುಗ / ಹುಡುಗಿ ಕೆರೆ, ಹೊಳೆ, ಬಾವಿಗೆ ಬಿದ್ದು ಸತ್ತರೆ, ವಿಷ ಸೇವಿಸಿ ಮರಣಿಸಿದರೆ, ಅಪಘಾತದಲ್ಲಿ ಮಡಿದರೆ, ಹಾವು ಕಡಿದು ತೀರಿದರೆ, ಗಿಡದ ಮೇಲಿಂದ ಬಿದ್ದು ಸತ್ತರೆ, ಆಯಸ್ಸು ತುಂಬುವ ಮೊದಲೇ ಅಸುನೀಗಿದರೆ, ಖಂಡಿತವಾಗಿಯೂ ದೆವ್ವವಾಗುವರು. ಹರೆಯದ ಹುಡುಗಿ ತೀರಿಹೋದರೆ ಮೋಹಿನಿಯಾಗಿ ಕಾಡುವಳೆಂದು ನಂಬಿಕೆ ಇದೆ.

ದೆವ್ವ- ಇದೊಂದು ಅಮೂರ್ತ ಕಲ್ಪನೆ. ಹೀಗಿದ್ದರೂ ಅದನ್ನು ಕೇವಲ ಎಲುಬುಳ್ಳ ಮನುಷ್ಯಾಕಾರದಲ್ಲಿ, ಬೆಕ್ಕು, ನಾಯಿ, ಹಂದಿಗಳ ರೂಪದಲ್ಲಿ ಕಂಡಿದ್ದೇವೆಂದು ಹೇಳುವವರಿದ್ದಾರೆ. ಅವು ರಾತ್ರಿ ಕಾಣಿಸಿಕೊಳ್ಳುತ್ತವಂತೆ. ನಾಲಿಗೆ ತೆರೆದುಕೊಂಡು, ಕೈಯಲ್ಲಿ ಪಂಜು ಹಿಡಿದು, ಕುಣಿಯುತ್ತ ಕಟ್‌ಕಟ್ ಸದ್ದು ಮಾಡುತ್ತ ಸುಡುಗಾಡದಲ್ಲಿ ತಿರುಗುತ್ತಿರುತ್ತವಂತೆ. ಅಂಥವನ್ನು ಕೊಳ್ಳಿದೆವ್ವ ಎಂತಲೂ ಕರೆಯುವರು. ಕೆದರಿದ ತಲೆ, ಚೂಪಾದ ಕೋರೆದಾಡೆಗಳಿಂದ ಕೂಡಿ ಹುಬ್ಬುಗಂಟಿಕ್ಕಿಕೊಂಡಿರುತ್ತವಂತೆ. ಮನುಷ್ಯರ ದಾರಿಯಲ್ಲಿ ನಡೆಯುವುದಿಲ್ಲವಂತೆ. ಅಡ್ಡಡ್ಡಾಗಿ ಚಲಿಸುತ್ತವಂತೆ; ಅವುಗಳ ಪಾದಗಳು ಹಿಂದು ಮುಂದಾಗಿರುತ್ತವಂತೆ. ಹೀಗೆ, ನಾನಾ ಕಲ್ಪನೆಗಳನ್ನು ದೆವ್ವಿನ ಬಗೆಗೆ ಜಾನಪದರು ಇಟ್ಟುಕೊಂಡಿದ್ದಾರೆ. ಇದ್ದಕ್ಕಿದ್ದಂತೆ ಮನೆ ಮೇಲೆ ಕಲ್ಲು ಬೀಳುವುದು, ಮರದ ಮೇಲಿನಿಂದ ನರಳಿದ ಧ್ವನಿ ಕೇಳುವುದು, ರಾತ್ರಿ ಸಮಯದಲ್ಲಿ ಪರಿಚಿತ ಧ್ವನಿಯಂತೆ ಕೂಗುವುದು, ಇದ್ದುದಿದ್ದಂತೆ ಉರಿಹತ್ತಿಕೊಳ್ಳುವುದು, ನಾಯಿಯಂತೆ ಬೊಗಳುವುದು, ನೆಲಗುಮ್ಮನಂತೆ ಒದರುವುದು, ಹಂದಿಯಂತೆ ಕಿರಿಚುವುದು, ಗೂಗೆಯಂತೆ ಧ್ವನಿಗೈಯುವುದು.... ಇವೆಲ್ಲ ದೆವ್ವಿನ ಚರ್ಯೆಗಳೆನ್ನುವರು. ಇದರಿಂದ ಜನ ಭಯಪೀಡಿತರಾಗುವರು. ಚಿಕ್ಕಮಕ್ಕಳಂತೂ ರಾತ್ರಿ ಹೊತ್ತು ಮನೆಯಿಂದ ಹೊರಬರಲಾರರು.

ದೆವ್ವದ ಪೀಡೆ ತೊಲಗಿಸಲು ಮುಗ್ಧಜನ, ಅದಕ್ಕೆ ಪೂಜೆ ಸಲ್ಲಿಸಿದೆ, ಬಲಿ ಕೂಡ ಕೊಡುತ್ತ ಬಂದಿದೆ; ಭೂತಗಳನ್ನು ನಾನಾ ಬಗೆಯಾಗಿ ಆರಾಧಿಸಿದೆ. ಈ ಭೂತಾರಾಧನೆ

ಪ್ರಪಂಚದಲ್ಲೆಲ್ಲ ಇದೆ. ದ.ಕ.ಜಿಲ್ಲೆಯ ಸಾಂಪ್ರದಾಯಿಕ ಭೂತಾರಾಧನೆ ವಿಶಿಷ್ಟವಾದುದು. ಇಲ್ಲಿ ಜನರ ಕಷ್ಟಗಳನ್ನು ನಿವಾರಿಸುವ ತಮ್ಮ ಬಯಕೆಗಳು ಇವೆಯೆಂಬುದಾಗಿ ಹೇಳುತ್ತಾರೆ[೧೦] ಬೇತಾಳೇಶ್ವರ, ಭೂತೇಶ್ವರ ಮುಂತಾದ ಹೆಸರಿನ ಅನೇಕ ಗುಡಿಗಳು ಕರ್ನಾಟಕದಲ್ಲಿವೆ; ಈ ಭೂತದ ಜಾತ್ರೆಗಳೂ ನಡೆಯುತ್ತಿವೆ. ಭೂತದ ಹೆಸರನ್ನು ಊರಿಗೆ, ವ್ಯಕ್ತಿಗಳಿಗೆ ಇಟ್ಟುದೂ ಉಂಟು. ಆದರೂ ದೆವ್ವ ಮನುಷ್ಯನಿಗೆ ಹಿತವನ್ನು ಉಂಟು ಮಾಡಿದುದಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಬಗೆದಿದೆ.

ನಾಡಿನ ಜನಪದ ಜನ ದೆವ್ವಿಗೆ -ಗಾಳಿ, ಪಿಶಾಚಿ, ಭೂತ, ಪ್ರೇತ, ಪೀಡೆ, ಜಕ್ಕಣಿ, ಕ್ಷುದ್ರಶಕ್ತಿ, ಸೋಂಕು ಇತ್ಯಾದಿಯಾಗಿ ಕರೆದಿದೆ. ಜನಪದ ಸಂಸ್ಕೃತಿಯಲ್ಲಿ ಪ್ರಚಲಿತದಲ್ಲಿರುವ ಗಾಳಿಬಡಕೋ, ಗಾಳಿಪಾಲಾಗು, ಗಾಳಿಹಿಡಿದವನ್ಹಂಗೆ, ಗಾಳಿಹೊಕ್ಕವನಂಗೆ, ಭೂತಚೇಷ್ಟೆ, ಗಾಳಿಚೇಷ್ಟೆ, ಮುಂತಾದ ನುಡಿಗಳಲ್ಲಿ ದೆವ್ವ-ಪಿಶಾಚಿ-ಈ ದುಷ್ಟಶಕ್ತಿಯ ಅರ್ಥವೇ ಹುದುಗಿದೆ. ಕನ್ನಡ ನಿಘಂಟುವಿನಲ್ಲಿಯೂ ಗಾಳಿಪೂಜೆ ಎಂದರೆ ದೆವ್ವಗಾಳಿಗೆ ಪೂಜೆಮಾಡುವುದು[೨] ಎಂದಿದೆ. ದೆವ್ವ ಹಿಡಿದವನಿಗೆ ದೈವದ ಯೋಚನೆ ಏನು ? ಅಯ್ಯನಿಗಿಂತ ದೈಯ ವಾಸಿ, ಅಡವಿ ದೆವ್ವ ಬಂದು ಮನೆದೆವ್ವ ಓಡ್ಸಿತಂತೆ. ಹೆಣ್ಣದೆವ್ವ ಹಿಡಿದೋರ್ನ ಮಾತಾಡ್ಸಿದ್ರೆ ಉಟ್ಟ ಪಂಚೇನ ಬಿಚ್ಚಿಸ್ಕಂಡಂಗೇ - ಈ ಎಲ್ಲ ಗಾದೆಮಾತುಗಳಲ್ಲಿ ದೆವ್ವದ ವಿಚಾರವೇ ಇದೆ.

ಅಕಾಲಮರಣಕ್ಕೆ ತುತ್ತಾದ ಅತೃಪ್ತಜೀವಿಗಳು ಭೂತ-ಪ್ರೇತ, ದೆವ್ವ-ಪಿಶಾಚಿಗಳಾಗಿ ಅಲೆಯುತ್ತ ತಮಗೆ ಪ್ರಿಯರಾಗಿದ್ದವರ ಮೈಯಲ್ಲಿ ಬಂದು, ಅವರ ಮೂಲಕ ತಮ್ಮ ಅತೃಪ್ತ ಬಯಕೆಗಳನ್ನು ಈಡೇರಿಸಿಕೊಳ್ಳುತ್ತ ತೃಪ್ತಿ ಪಡುತ್ತವೆ ಎಂಬುದು ಜನಪದರಲ್ಲಿರುವ ಸಾಮಾನ್ಯ ನಂಬಿಕೆ. ನಡುವಯಸ್ಸಿನಲ್ಲಿ ಅಸುನೀಗಿದ ವ್ಯಕ್ತಿ ತಾನು ಬದುಕಿದ್ದಾಗ ಮೋಹಿಸಿದ ಹುಡುಗಿಯ ಮೈಯಲ್ಲಿ ಗಾಳಿಯಾಗಿ ಹೊಕ್ಕು ಅವಳನ್ನು ನಾನಾ ವಿಧವಾಗಿ ಪೀಡಿಸುತ್ತಾನೆಂದು ಕಂಡು ಕೇಳಿದ ಹಳ್ಳಿಗರು ಹೇಳುತ್ತಾರೆ. ಯಾವನೋ ಒಬ್ಬ ತನ್ನ ಶತ್ರುವಿನಿಂದ, ಯಾವುದೋ ಕಾರಣಕ್ಕಾಗಿ ಕೊಲೆಗೈಯಲ್ಪಟ್ಟಾಗ, ಆ ಸೇಡಿಗೋಸ್ಕರ ಗಾಳಿಯಾಗಿ ಆತನನ್ನು ಬೆನ್ನುಹತ್ತಿ ಕಾಡುತ್ತಾನೆನ್ನುವ ನಂಬಿಕೆಯೂ ಜನಪದರಲ್ಲಿದೆ. ತುಪ್ಪದಲ್ಲಿ ನೊಣಬಿದ್ದರೂ ಚೀಪಿ ಒಗೆಯುವಂಥ ವ್ಯಕ್ತಿ ಏನಾದರೂ ಅಕಾಲ ಮರಣಕ್ಕೆ ತುತ್ತಾದರೆ, ಆತನ ಜೀವ ಅಥವಾ ಆತ್ಮ ಲೌಕಿಕ ವಸ್ತುಗಳ ಮೇಲಿನ ಆಸೆ - ಆಮಿಷಗಳಿಂದ ಪಿಶಾಚಿಯಾಗಿ ಅಲೆಯುತ್ತದೆ ಎನ್ನುವುದೂ ಕೂಡ ಜನಪದರಲ್ಲಿರುವ ದೃಢವಾದ ನಂಬುಗೆ. ಶವಸಂಸ್ಕಾರಗಳು ಕ್ರಮವಾಗಿ ಮತ್ತು ಸರಿಯಾಗಿ ನಡೆಯದೆ ಮಣ್ಣಾದವರು ಗಾಳಿಯ ರೂಪದಲ್ಲಿ ಕಾಡುತ್ತಾರೆಂಬ ನಂಬಿಕೆಯೂ ಇದೆ. ಬದುಕು ಬೇಸರವಾಗಿ ಉದ್ದೇಶಪೂರ್ವಕ ಪ್ರಾಣ ಕಳೆದು ಕೊಂಡವರು ಗಾಳಿಯಾಗಿ ಬೇರೊಬ್ಬರನ್ನು ಪೀಡಿಸುತ್ತಾರೆಂಬ ನಂಬಿಕೆಯಿದೆ. ಹೆಂಗಸರಿಗೆ ಹೆಂಗಸರ ಗಾಳಿ, ಗಂಡಸರಿಗೆ ಗಂಡಸರ ಗಾಳಿ, ಮತ್ತು ಹೆಂಗಸರಿಗೆ ಗಂಡಸರ

ಗಾಳಿ, ಗಂಡಸರಿಗೆ ಹೆಂಗಸರ ಗಾಳಿ ಬಡಿದುಕೊಳ್ಳುವ ಸಾಧ್ಯತೆಯಿದೆಯೆಂದೂ ಇನ್ನೊಂದು ನಂಬಿಕೆಯಿದೆ. ಪ್ರಾಯಶಃ ಅವರವರ ಸಂಬಂಧಗಳ ಮೇಲಿಂದ ಗಾಳಿಯು ಹಿಡಿದುಕೊಳ್ಳುತ್ತದೆಂದು ಕಾಣುತ್ತದೆ. ಉರಿಬಿಸಿಲಿನಲ್ಲಿ, ಅಮಾವಾಸ್ಯೆ ರಾತ್ರಿಯಲ್ಲಿ, ಊರಬಯಲಿನಲ್ಲಿ ಒಂಟಿಯಾಗಿ ತಿರುಗಾಡಬಾರದೆಂಬ ನಂಬಿಕೆಯಿದೆ. ಆ ವೇಳೆಯಲ್ಲಿ, ಆ ಜಾಗದಲ್ಲಿ ಗಾಳಿ ಸುಳಿದಾಡುತ್ತಿರುತ್ತದೆನ್ನುವ ನಂಬಿಕೆಯಿದೆ. ಗಾಳಿಗೆ ರೂಪವಿಲ್ಲದುದರಿಂದ, ಕರಿಬೆಕ್ಕು, ಕರಿನಾಯಿ ಮೊದಲಾದ ಪ್ರಾಣಿ ರುಪದಲ್ಲಿ ಕಾಣಿಸಿಕೊಂಡು ಭಯವನ್ನುಂಟುಮಾಡುತ್ತದ್ದಂತೆ. ಇದ್ದಕ್ಕಿದ್ದಂತೆ ಬೆಂಕಿಯಂತೆ ಕಾಣಿಸಿಕೊಳ್ಳುವುದು, ಮಾಯವಾಗುವುದು, ಮರಗಿಡಗಳನ್ನು ಅಲುಗಾಡಿಸಿದಂತಾಗುವುದು, ಜೋರಾಗಿ ಗಾಳಿಬೀಸಿದಂತಾವುವುದು - ಇವೆಲ್ಲ ಗಾಳಿಯಿಂದಾಗುವ ಭಯಗಳು. ಇವನ್ನೆಲ್ಲ ಕಂಡವರು ಅದರಲ್ಲಿಯೂ ದುರ್ಬಲ ಮನಸ್ಸಿನವರು (ಹೆಚ್ಚಾಗಿ ಹೆಂಗಸರು) ನಿಂತ, ಕುಳಿತ ಸ್ಥಳದಲ್ಲೇ ಕರಕಂಪನ, ಚೀರುವುದು, ಹಲ್ಲುಕಡಿಯುವುದು, ಯದ್ವಾತದ್ವಾ ಕುಣಿಯುವುದು, ನಾಲ್ಕಾರು ಜನ ಹಿಡಿದರೂ ಕೊಸರಿಕೊಳ್ಳುವುದು ಮಾಡುವರು. ಈ ಎಲ್ಲಾ ಸೂಚನೆಗಳು ಗಾಳಿ ಹಿಡಿದುದರ ಲಕ್ಷಣಗಳೇ ಎಂದು ನಂಬಲಾಗಿದೆ. ಗಾಳಿಬಿಟ್ಟನಂತರ, ಗಾಳಿಹಿಡಿದಾಗ ತಾನು ಏನೇನು ಮಾಡಿದೆ ನೆಂಬುದು ಆತನಿಗೆ ತಿಳಿಯದೇ ಹೋಗಿರುತ್ತದೆ. ಬಹುಶಃ ಅಂಥ ಮಾನಸಿಕ ಕ್ರಿಯೆಗೆ (ಭ್ರಮಗೆ) ಆತ ಒಳಗಾಗಿರುವುದರಿಂದ ಹಾಗಾಗುತ್ತದೆಂದು ತೋರುತ್ತದೆ. ಈ ನಂಬಿಕೆಗಳಲ್ಲಿ ವಿಜ್ಞಾನ ಯುಗದಲ್ಲಿ ಬದುಕುತ್ತಿರುವ ನಮಗೆ ವಿಶ್ವಾಸ ಇಲ್ಲದೇ ಇದ್ದರೂ ಅವುಗಳಲ್ಲಿ ಸತ್ಯ ತೋರದೆ ಇದ್ದರೂ ಅವು ಶ್ರೀಸಾಮಾನ್ಯರ ಜನಮನದಲ್ಲಿ ಮಾತ್ರ ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದುದು ಮಾತ್ರ ಸುಳ್ಳಲ್ಲ.

ಇಂದಿಗೂ, ಹಳ್ಳಿಗಳಲ್ಲಿ ಆದೇ ಹುಟ್ಟಿದ ಮಕ್ಕಳನ್ನು ಮನೆಯ ಹೊರಗೆ ಒಯ್ಯುವುದಿಲ್ಲ. ಬಸುರಿಯಾದ ಹೆಣ್ಣುಮಕ್ಕಳು ಸುಡುಗಾಡದ ಸಮೀಪಕ್ಕೆ ಹಾಯುವುದಿಲ್ಲ ಸುಡುಗಾಡಿನಲ್ಲಿ ದೆವ್ವ ಇರುತ್ತದೆನ್ನುವ ನಂಬಿಕೆಯ ಕಾರಣದಿಂದ. ಮದುವೆಯಾದ, ಹಸಿಮೈಯಲ್ಲಿರುವ ನವ ದಂಪತಿಗಳು, ಪುಷ್ಪವತಿಯರಾದ ಹೆಣ್ಣು ಮಕ್ಕಳು ಸುಮಾರು ದಿನಗಳವರೆಗೆ ಮನೆಯ ಒಳಗಡೆಯೇ ಇರುತ್ತಾರೆ. ಹೊರಗಡೆ ಬರುವುದಿಲ್ಲ. ಏಕೆಂದರೆ ಗಾಳಿಗೆ ಬಸುರಿ, ಬಾಣಂತಿ, ಹಸುಗೂಸುಗಳೆಂದರೆ ಎಲ್ಲಿಲ್ಲದ ಪ್ರಾಣವಂತೆ.[೩] ತನ್ನ ಪ್ರಾಣಪ್ರಿಯರಾದ ಇವರನ್ನು ಗಾಳಿ ಬಡಿದುಕೊಳ್ಳಬಾರದೆನ್ನುವ ಕಾರಣದಿಂದ ಗ್ರಾಮೀಣರು ಎಷ್ಟೇ ಎಚ್ಚರಿಕೆ ವಹಿಸಿದರೂ ದುಷ್ಟಶಕ್ತಿಯಾದ ಗಾಳಿ ಹೇಗೋ ಮೈಯಲ್ಲಿ ಸೇರುವುದುಂಟು. ಆ ಸಂದರ್ಭದಲ್ಲಿ ಮೂರುದಾರಿ ಕೂಡಿದ ಸ್ಥಳದಲ್ಲಿಂದ ಹಿಡಿಮಣ್ಣು ತಂದು, ಗಾಳಿಬಡಿದವರ ಮುಖದ ಮೇಲೆ ಮೂರುಬಾರಿ ನಿವಾಳಿಸಿ ಥೂ ಎಂದು ಉಗುಳಿ, ಅದನ್ನು ಒಲೆಯಲ್ಲಿ ಹಾಕುವುದುಂಟು. ಆಗ ಗಾಳಿ ಸುಟ್ಟು ಭಸ್ಮವಾಗಿ ಮತ್ತೆ ಬರುವುದಿಲ್ಲವೆಂಬ ನಂಬಿಕೆಯಿದೆ. ಮೈಯಲ್ಲಿ ಗಾಳಿ ಸೇರಿದೆ ಎಂಬ ಸಂಶಯ ಬಂದಲ್ಲಿ ಐದು ಪ್ರಕಾರದ ಫಳಾರ

(ಪಂಚಪಾಳಿಕೆ)[೪] ವನ್ನು ಮೂರು ದಾರಿ ಕೂಡಿದಲ್ಲಿ ಇಟ್ಟು ತಿರುಗಿ ನೋಡದೆ ಬರುತ್ತಾರೆ. (ತಿರುಗಿ ನೋಡಿದರೆ ಮತ್ತೆ ಆ ದೆವ್ವ ಎಲ್ಲಿ ತಮ್ಮ ಬೆನ್ನಹಿಂದೆಯೇ ಬರುತ್ತದೆಯೋ ಏನೊ ಎಂಬ ಭಯ). ಹೀಗೆ ಮಾಡಿದರೆ ಬಡಿದುಕೊಂಡ ಗಾಳಿ ತೊಲಗುತ್ತದೆನ್ನುವ ಭಾವನೆ ಜನಪದರದು. ಗಾಳಿಗೆ ಹಾರವಾಗಿ ಇಟ್ಟ ಪಂಚಪಾಳಾರವನ್ನು ಕೆಲವರು ಎಡಗಾಲಿನಿಂದ ಒದ್ದು ತೆಗೆದುಕೊಂಡು ತಿನ್ನುವುದುಂಟು. ಕಾಲಿನಿಂದ ಒದೆದು ತಿಂದರೆ ದೆವ್ವ ಬಡಿಯುವುದಿಲ್ಲವೆನ್ನುವ ಪ್ರತೀತಿಯೂ ಇದೆ. ಹಾಗೆಯೇ ದೆವ್ವ ಬಡಿದವರು ಇಟ್ಟ ಪಳಾರವನ್ನು, ಆಸೆಯ ಕಣ್ಣುಗಳಿಂದ ಯಾರಾದರೂ ನೋಡಿದರೆ, ಹಿಡಿದವರನ್ನು ಬಿಟ್ಟು, ಅಂಥವರನ್ನು ದೆವ್ವ ಬಡಿದುಕೊಳ್ಳುತ್ತದೆನ್ನುವ ನಂಬಿಕೆಯೂ ಹಳ್ಳಿಗರಲ್ಲಿದೆ. ಈ ಗಾಳಿ ಮನುಷ್ಯರಿಗೆ ಮಾತ್ರ ಹಿಡಿದುಕೊಳ್ಳುವುದಿಲ್ಲ. ಹಿಂಡುವ ಎಮ್ಮೆ, ಆಕಳು, ಅವುಗಳ ಕರುಗಳನ್ನೂ ಹಿಡಿದುಕೊಳ್ಳುವುದುಂಟು. ಪ್ರಾಣಿಗಳನ್ನು ಹಿಡಿದುಕೊಂಡ ಗಾಳಿಯನ್ನು ತೊಲಗಿಸಲೂ ಸಹ ಮನುಷ್ಯರಿಗೆ ಕೈಕೊಂಡ ಮೇಲಿನ ಕ್ರಮಗಳನ್ನೇ ಅನುಸರಿಸುತ್ತಾರೆ. ಇವೆಲ್ಲ ಸಂಗತಿಗಳನ್ನು ಕೇಳಿದವರಿಗೆ, ಕಣ್ಣಾರೆ ಕಂಡವರಿಗೆ ಮನಶಾಸ್ತ್ರಾದಿ ವಿಜ್ಞಾನಗಳು ಹೇಳುವ ಕಾರಣಗಳಲ್ಲಿ ನಂಬಿಕೆಯಿರುವುದಿಲ್ಲ. ಅಷ್ಟೆ ಏಕೆ! ಹೊಸಮನೆ ಕಟ್ಟಿಸಿ ಹಾಗೆಯೇ ಪ್ರವೇಶಿಸದೆ, ದೆವ್ವ - ಗಾಳಿ - ಪಿಶಾಚಿಗಳು ಬಡಿಯಬಾರದೆಂದು, ಅದಕ್ಕೆ ಶಾಂತಿ - ಮಾಡಿಸಿ, ಒಳಪ್ರವೇಶಿಸುವ ಮನಶಾಸ್ತ್ರಜ್ಞರಿಗೇ ಅದು ಹೇಳುವ ಕಾರಣಗಳಲ್ಲಿ ನಂಬಿಕೆ ಉಳಿದಿರುವುದಿಲ್ಲ.

ಇನ್ನು ಈ ಗಾಳಿಯ ಬಗೆಗೆ ಆದಿವಾಸಿಗಳ ಭಾವನೆ ಹೇಗಿರಬೇಡ! ಗಾಳಿ ಮನುಷ್ಯ, ಪ್ರಾಣಿಗಳಲ್ಲಷ್ಟೇ ಅಲ್ಲ. ಸಸ್ಯಗಳಲ್ಲಿಯೂ ಕಂಡುಬರುವುದುಂಟು. "ಗಾಳಿ ಬೀಸಿ ಗಿಡಮರಗಳು ಒಂದಕ್ಕೊಂದು ತಿಕ್ಕಿ ಬೆಂಕಿ ಹುಟ್ಟಿಕೊಂಡರೆ, ಗಾಳಿಯ ರಭಸಕ್ಕೆ ಮರಗಳು ಮುರಿದುಬಿದ್ದರೆ, ಅದರಲ್ಲಿರುವ ದೆವ್ವ- ಪಿಶಾಚಿ ಶಕ್ತಿಯೇ ಕಾರಣವೆಂದು ಆದಿವಾಸಿಗಳ ನಂಬಿಕೆಯಾಗಿತ್ತು. ಮರಮುರಿದು ಬೀಳುವಾಗ ಆಗುವ ಶಬ್ದದಲ್ಲಿ ಗಾಳಿಯ ದೈತ್ಯಶಕ್ತಿಯಿದೆಯೆನ್ನುವ ಭಾವನೆ ಆದಿವಾಸಿಗಳ ಕಾಲದಲ್ಲಿತ್ತು. ತದನಂತರ ಆ ಮರ ಒಣಗಿಹೋದಾಗ, ಅದರಲ್ಲಿರುವ ಪ್ರೇತಶಕ್ತಿ ತೊಲಗಿಹೋಗಿರುತ್ತದೆಂದು ಜನರ ನಂಬಿಕೆಯಾಗಿತ್ತು.[೫]" "ಗಾಳಿಗೆ ಅಲ್ಲಾಡಿದ ಮರದ ಎಲೆಗಳು ಧ್ವನಿಗೈದರೆ, ಅದು ತಮ್ಮ ಪೂರ್ವಜರ ಧ್ವನಿಯೆನ್ನುವ ನಂಬಿಕೆಯೂ ಇತ್ತು.[೬]" ಸಮುದ್ರತೀರದ ಗಾಳಿಯ ಮರಗಳಲ್ಲಿ ಗಾಳಿ ಭೋರೆಂದು ಬೀಸುತ್ತಿದ್ದರೆ, ಪುರಾತನ ಮಾನವನಿಗೆ ಗಾಳಿಯ ಮರಗಳಲ್ಲಿ ಆತ್ಮವಿದೆ ಎಂಬ ಭಾವನೆಯಿತ್ತು. ಆದುದರಿಂದ ಆ ಮರಗಳಿಗೆ (WEEPING TREES) ಎಂದು ಕರೆಯುತ್ತಾರಂತೆ,[೭]. ಹುಣಸೇಮರದಲ್ಲಿ, ಆಲದ ಮರದಲ್ಲಿ, ಬೇವಿನ ಮರದಲ್ಲಿ, ಜಾಲಿ ಮರದಲ್ಲಿ ಮತ್ತು ಕಳ್ಳಿಗಿಡದಲ್ಲಿ ಗಾಳಿ ವಾಸಿಸುತ್ತದೆನ್ನುವ ನಂಬಿಕೆ ಜನಪದರಲ್ಲಿಯೂ ಇದೆ. ಹಾಗೆ ನೋಡಿದರೆ ಎಲ್ಲ ಗಿಡ-ಮರಗಳಲ್ಲಿಯೂ ಗಾಳಿ ನೆಲೆಸಿರುತ್ತದೆಂದು ಹೇಳಬಹುದು. ಇದಕ್ಕೆ ಮಕ್ಕಳು ದೆವ್ವಿನ ಆಟ ಆಡುವಾಗ ಹೇಳುವ ಹಾಡೇ ನಿದರ್ಶನ: ಈ ಆಟ ಆಡುವಾಗ

ನಾಲ್ಕಾರು ಮಕ್ಕಳು ಅಡಗಿಕೊಳ್ಳುತ್ತಾರೆ. ಅವರಲ್ಲಿ ಒಬ್ಬರನ್ನು ಪತ್ತೆಮಾಡಿ, ಮುಟ್ಟಬೇಕು. ಮುಟ್ಟಬೇಕಾದ ಮಗುವಿಗೆ ಇನ್ನೊಂದು ಮಗು, ಅದರ ಬೆನ್ನ ಮೇಲೆ ಚಪ್ಪರಿಸುತ್ತಾ - ಮಾವಿನ ಗಿಡದಾಗ ದೆವ್ವ ಬಂದ ಇಡಕೋ ಬಡಕೋ, ಬೇವಿನ ಗಿಡದಾಗ ದೆವ್ವ ಬಂದ ಇಡಕೋ ಬಡಕೋ, ಹುಣಸೀಗಿಡದಾಗ ದೆವ್ವ ಬಂದ ಇಡಕೋ ಬಡಕೋ.... ಇತ್ಯಾದಿಯಾಗಿ ತಮಗೆ ತಿಳಿದಿರುವ ಎಲ್ಲ ಗಿಡಗಳಲ್ಲಿಯ ದೆವ್ವಗಳನ್ನು ಜ್ಞಾಪಿಸಿಕೊಂಡು, "ದೆವ್ವತುಂಬಿ"ಸುವುದು. ಆಗ ಆ ಮಾತು ನಿಜವಾಗಿಯೂ ತನ್ನಲ್ಲಿ ದೆವ್ವತುಂಬಿದೆಯೆಂದು ಭಾವಿಸಿ, ಬೇಸರವಿಲ್ಲದೆ ಓಡಾಡಿ, ಅಡಗಿಕೊಂಡವರನ್ನು ಹುಡುಕತೊಡಗುವನು. ಆದುದರಿಂದ ಮದುಮಕ್ಕಳು - ಬಾಣಂತಿಯರು - ಹಸುಗೂಸುಗಳು, ಆಲದಮರ, ಹುಣಸೀಮರ, ಜಾಲಿಗಿಡ, ಕಳ್ಳಿಗಿಡ - ಮೊದಲಾದವುಗಳು ಇರುವ ಕಡೆ ಹೋಗಬಾರದೆನ್ನುತ್ತಾರೆ. ಈ ನಂಬಿಕೆಯಲ್ಲಿ ಅರ್ಥವಿದ್ದಂತೆ ತೋರುತ್ತದೆ. ಮದುವೆ ವ್ಯಕ್ತಿಯ ಬದುಕಿನಲ್ಲಿ ಮಹತ್ವದ ಘಟ್ಟ. ಇದಕ್ಕಾಗಿ ಕುಟುಂಬದವರು ಸಾಕಷ್ಟು ದುಡ್ಡು ಖರ್ಚು ಮಾಡುತ್ತಾರೆ. ವಿವಾಹಕ್ಕೆ ಸಂಬಂಧಿಗಳು ಸ್ನೇಹಿತರೆಲ್ಲ ಬಂದಿರುತ್ತಾರೆ. ಅವರ ಸಲುವಾಗಿ ಊಟದ ವ್ಯವಸ್ಥೆ ಮಾಡಿಸಿರುತ್ತಾರೆ. ಚಪ್ಪರ ಹಾಕಿಸಿರುತ್ತಾರೆ. ಊದು-ಬಾರಿಸುವವರನ್ನು ಕರೆಸಿರುತ್ತಾರೆ. ಇದೆಲ್ಲ ಖರ್ಚು-ವೆಚ್ಚ ಮದುಮಕ್ಕಳ ಸಲುವಾಗಿ ಅಲ್ಲವೆ! ಇವರಿಗೆ ಅಕಸ್ಮಾತ್ ಏನಾದರೂ ಅಪಾಯ ಒದಗಿದರೆ, ಇಷ್ಟೆಲ್ಲ ತೊಂದರೆಯಿಂದ ಕಾರ್ಯಕ್ರಮ ಏರ್ಪಡಿಸಿದ್ದು ಹಾಳಾಗುತ್ತದೆ. ಆದುದರಿಂದ ಅಪಾಯದ ಸ್ಥಳಕ್ಕೆ ಮದುಮಕ್ಕಳು ಹೋಗಬಾರದೆನ್ನುತ್ತಾರೆ. ಈ ಗಿಡ-ಮರಗಳು ಇರುವುದು ಹೆಚ್ಚಾಗಿ ಬೇಲಿ, ಮುಳ್ಳು ಕಂಟೆಗಳಿರುವಲ್ಲಿ. ಮೇಲಾಗಿ, ಜಾಲಿಗಿಡದ ಮುಳ್ಳು, ಕಳ್ಳಿಗಿಡದ ಹಾಲು-ಅಪಾಯವನ್ನುಂಟುಮಾಡುವಂಥವು. ಹೀಗೆ, ಕಲ್ಲು, ಮುಳ್ಳುಗಳಿರುವಲ್ಲಿಗೆ ಹೋಗುವುದರಿಂದ ಅವು ಚುಚ್ಚಿ ಗಾಯಮಾಡಬಹುದು. ಅದೂ ಅಲ್ಲದೆ, ಅಲ್ಲಿಯ ಹಾವೂ ಕಚ್ಚಿ ಸಾಯಿಸಬಹುದು. ಹಾಗಾಗಿ ಇಂಥ ಕಡೆಗೆ ಮದುಮಕ್ಕಳು ಹೋಗಬಾರದೆನ್ನುವ ನಂಬಿಕೆಯಿದೆ. ಆದರೆ, ಕೆಲವರು ಇದನ್ನು ನಂಬದೆ ಅದರ ವಿರುದ್ಧವಾಗಿ ಮೊಂಡವಾದ ಮಾಡುವಾಗ, ಅವರನ್ನು ಹೆದರಿಸಲು, ಹುಣಸಿ, ಜಾಲಿ.... ಮರಗಳಲ್ಲಿ ದುಷ್ಟಶಕ್ತಿಗಳಿರುತ್ತವೆ, ಅವು ಮದುಮಕ್ಕಳನ್ನು ಹಿಡಿದುಕೊಳ್ಳುತ್ತವೆ ಎಂಬ ನಂಬಿಕೆಯನ್ನು ಮುಂದಿಡುತ್ತಾರೆಂದು ತೋರುತ್ತದೆ. ಈ ಹೆದರಿಕೆಯಿಂದ ಆ ಮರಗಳ ಹತ್ತಿರ ಯಾರೂ ಸುಳಿಯುವುದಿಲ್ಲ. ಭೀತಿಯೇ ಭೂತವಲ್ಲವೆ ? ಇನ್ನು ಬಾಣಂತಿಯರು - ಹಸುಮಕ್ಕಳು - ತುಂಬ ಸೂಕ್ಷ್ಮ ಪ್ರಕೃತಿಯವರಿರುತ್ತಾರೆ. ಅಂಥವರಿಗೆ, ಈ ಮರಗಳಿರುವ ಸ್ಥಳದಲ್ಲಿಯ, ಕಲ್ಲು, ಮುಳ್ಳು, ತಾಕುವಷ್ಟರಲ್ಲಿಯೇ ಅಪಾಯ ಒದಗುತ್ತದೆ. ಆದುದರಿಂದ ವಿಶೇಷವಾಗಿ, ಇಂಥವರು ಅಲ್ಲಿ ಹೋಗಬಾರದೆನ್ನುವ ಕಾರಣದಿಂದ - ಗಾಳಿದೆವ್ವ ಇದೆ ಎನ್ನುವ ನಂಬಿಕೆ ಮುಂದೊಡ್ಡುತ್ತಾರೆ.

ಹಾಗೆಯೇ ಧೂಳುಗಾಲಿನಿಂದ ಮನೆಯೊಳಗೆ ಹೋಗಬಾರದು. ಹೊರಗಿನ ಗಾಳಿ

ಕಾಲುಗಳ ಮೂಲಕ ಒಳಪ್ರವೇಶಿಸುತ್ತದೆಂಬ ನಂಬಿಕೆಯೂ ಇದೆ. ಆದುದರಿಂದ ಕೈಕಾಲು ತೊಳೆದುಕೊಂಡು ಮನೆಯೊಳಗೆ ಸೇರಬೇಕೆನ್ನುತ್ತಾರೆ. ಕಾಲಿಗೆ ಮೆತ್ತಿದ ಧೂಳಿಕಣಗಳು, ಒಳಗೆ ಬಾರದಿರಲಿ ಎಂಬ ಕಾರಣದಿಂದ, ಕಾಲು ತೊಳೆದುಕೊಂಡು ಬರಬೇಕು ಎನ್ನುವ ಸೂಚನೆ ಮೇಲಿನ ನಂಬಿಕೆಗಳಲ್ಲಿ ಇದ್ದಂತೆ ತೋರುತ್ತದೆ. ಹಾಗೆಯೇ ಬಕ್ಕ (ಬರೀ) ತಲೆಯಲ್ಲಿ, ಬರೀ ಮೈಯಲ್ಲಿ ಊರ ಹೊರವಲಯಕ್ಕೆ ತಿರುಗಾಡಲು ಹೋಗಬಾರದು. ಅಲ್ಲಿಯ ದೆವ್ವ ಬಡಿದುಕೊಳ್ಳುತ್ತದೆ ಎಂತಲೂ ನಂಬಿಕೆಯಿದೆ. ಊರ ಹೊರವಲಯದಲ್ಲಿರುವ ಒಣಗಿದ ಗಿಡಮರಗಳ ಟೊಂಗೆ ಏನಾದರೂ, ತಲೆಯ ಮೇಲೆ, ಮೈಮೇಲೆ ಮುರಿದು ಬಿದ್ದು ಅಪಾಯವಾಗದಿರಲಿ ಎಂಬ ಎಚ್ಚರಿಕೆಯ ಸೂಚನೆ ಮೇಲಿನ ನಂಬಿಕೆಯಲ್ಲಿ ಇದ್ದಂತೆ ತೋರುತ್ತದೆ. ರಾತ್ರಿ ಹೊತ್ತು ಗಿಡದ ಬುಡದಲ್ಲಿ ಕೂಡ್ರಬಾರದು, ಮಲಗಬಾರದು. ಏಕೆಂದರೆ ಅಲ್ಲಿ ದೆವ್ವಗಳಿರುತ್ತವೆ ಎಂಬ ನಂಬಿಕೆ. ರಾತ್ರಿಯಲ್ಲಿ ಗಿಡಮರಗಳು ಆಮ್ಲಜನಕ ತೆಗೆದುಕೊಂಡು, ಇಂಗಾಲದ ಡೈ ಆಕ್ಸೈಡ್ ಹೊರಹಾಕುತ್ತವೆ. ಇದು ಮನುಷ್ಯನ ಉಸಿರಾಟಕ್ಕೆ ಬೇಡವಾದುದು. ಈ ವೈಜ್ಞಾನಿಕ ವಿಚಾರ ಮೇಲಿನ ನಂಬಿಕೆಯಲ್ಲಿ ಸೂಚಿತವಾದಂತಿದೆ.

## ಗಾಳಿ ಕಲ್ಲು

ಮೈಮೇಲೆ ಬಂದಿರುವ ಗಾಳಿಯನ್ನು ಬಿಡಿಸಲು ಅಥವಾ ಓಡಿಸಲು ನಮ್ಮ ಗ್ರಾಮೀಣರು ಅನುಸರಿಸುತ್ತ ಬಂದ ಒಂದು ಸಾಂಪ್ರದಾಯಿಕ ಪದ್ಧತಿಯೇ ಗಾಳಿಕಲ್ಲು. ಕಲ್ಲಿನಲ್ಲಿ ಮನುಷ್ಯಾಕೃತಿಯನ್ನು ಬಿಡಿಸಿ, ಬಡಿದುಕೊಂಡ ಗಾಳಿಯ ಹೆಸರಿನ ಮೊದಲನೇ ಅಕ್ಷರವನ್ನು ಅದರಲ್ಲಿ ಕೆತ್ತಿ ಅದರ ಮೇಲೆ, ಹೆಂಡ, ನೀರು ಸುರುವಿ, ಬಯ್ಯುತ್ತಾ ದೆವ್ವ ಓಡಿಸಲು ಪೂಜಾರಿ ಪ್ರಯತ್ನಿಸುತ್ತಾನೆ. ಹೀಗೆ ಮಾಡುವುದರಿಂದ ಮೈಮೇಲಿನ ದೆವ್ವ ಕಲ್ಲಿನಲ್ಲಿ ಸೇರಿಕೊಳ್ಳುತ್ತದೆಂದೂ ಮತ್ತೆ ಬರುವುದಿಲ್ಲವೆಂದೂ ನಂಬಿಕೆಯಿದೆ. ಊರ ಅಗಸಿಬಾಗಿಲಲ್ಲಿ ಮತ್ತು ದೇವಸ್ಥಾನದ ಮೆಟ್ಟಿಲುಗಳಲ್ಲಿ ಇಂಥ ಕಲ್ಲುಗಳಿರುತ್ತವೆ. ಓಡಾಡುವಾಗ ಜನ ಅದನ್ನು ತುಳಿಯುತ್ತಾರೆ. ಅದರ ಮೇಲೆ ಥೂ ಎಂದು ಉಗುಳುತ್ತಾರೆ. ಇದರಿಂದ ಹಿಂಸೆಯಾಗಿ, ಅಲ್ಲಿಯ ಗಾಳಿ ಮತ್ತೆಂದೂ ಸುಳಿಯುವುದಿಲ್ಲವೆಂದು ನಂಬುತ್ತಾರೆ.

## ಗಿಡಕ್ಕೆ ಮಳೆ ಬಡಿಯುವುದು

ಗಾಳಿಯಾದ ಗಂಡಸರು-ಹೆಂಗಸರು ವಿಚಿತ್ರವಾಗಿ ವರ್ತಿಸುವುದು, ಆವೇಶದಿಂದ ಮಾತನಾಡುವುದು, ಕೂಗಾಡುವುದು, ಕಿರಿಚಾಡುವುದು, ಓಡಾಡುವುದು ಮಾತ್ರವಲ್ಲ ಅಸಾಧ್ಯ ಕೆಲಸಗಳನ್ನು ಸಾಧ್ಯಮಾಡಿ ತೋರಿಸುತ್ತಾರೆ. ಮರಹತ್ತುತ್ತಾರೆ, ಭಾರ ಎತ್ತುತ್ತಾರೆ. ಗಾಳಿ ಬಂದ ಆವೇಶದಲ್ಲಿ ಹೀಗೆಲ್ಲ ಮಾಡುತ್ತಾರೆಂದು ತೋರುತ್ತದೆ. ಮನುಷ್ಯ ಆವೇಶಕ್ಕೊಳಗಾದಾಗ ಆತನ ಶಕ್ತಿ ಇಮ್ಮಡಿಯಾಗುತ್ತದೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ "ಕರೋಶಿ"ಯ ದರ್ಗಾಕ್ಕೆ ಗಾಳಿಯಾದವರು ಅಮಾವಾಸ್ಯೆಗೆ ಬರುತ್ತಾರೆ. ಅವರು ದರ್ಗಾದ ಸಮೀಪಕ್ಕೆ ಬರುತ್ತಲೇ, ಹಿಂದೆಂದೂ ಗಿಡ ಏರದವರು ಏರಿ ನಿಲ್ಲುತ್ತಾರೆ. ಆಗ ಮುಲ್ಲಾ / ಖಾಜಿ ಆ ಗಿಡಕ್ಕೆ ಗಟ್ಟಿಯಾಗಿ ಮಳಿ ಬಡಿಯುತ್ತಾನೆ. ಗಿಡಕ್ಕೆ ಮಳಿ ಬಡಿಯುವುದರಿಂದ, ಹಿಡಿದ ದೆವ್ವ ಬಿಟ್ಟುಹೋಗುತ್ತದೆ, ಮರಳಿ ಮತ್ತೆಂದೂ ಬರುವುದಿಲ್ಲವೆಂಬ ನಂಬಿಕೆಯಿದೆ. ಗಾಳಿಯಾದ ಎಲ್ಲಾ ಜಾತಿಯವರೂ ಕರೋಶಿಯ ದರ್ಗಾಕ್ಕೆ ನಡೆದುಕೊಳ್ಳುತ್ತಾರೆ.

ಹಾಗೆಯೇ, ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರದ ದೂದ್ ಫೀರಾ ಎಂಬ ಸಂತನ ಸಮಾಧಿಗೆ ದೆವ್ವ ಬಡಿದವರು ಬರುತ್ತಾರೆ. ಇಲ್ಲಿಯೂ ಮುಲ್ಲಾ ಬೇವಿನಮರಕ್ಕೆ ಮಳಿ ಜಡಿಯುವುದರ ಮೂಲಕ ದೆವ್ವ ಬಿಡುಸುತ್ತಾನೆ. ಮೈಯಲ್ಲಿಯ ದೆವ್ವ ಗಿಡದಲ್ಲಿ ಸೇರಲಿ, ಮತ್ತೆ ತಿರುಗಿ ಬಾರದಿರಲಿ ಎಂಬುದರ ದ್ಯೋತಕವಾಗಿಯೇ ಮರಕ್ಕೆ ಗಟ್ಟಿಯಾಗಿ ಮೊಳೆ ಜಡಿಯುತ್ತಾರೆಂದು ತೋರುತ್ತದೆ.

## ಹನುಮಂತ ದೇವರ ಮಹಿಮೆ

ವಿಜಾಪುರ ಜಿಲ್ಲೆಯ ಅಚನೂರಿನ ಹನುಮಂತ ದೇವರಿಗೆ "ದೆವ್ವ" ಹಿಡಿದವರನ್ನು ಕರೆದೊಯ್ಯುತ್ತಾರೆ. ಅಲ್ಲಿ ಇವರು ಗುಡ್ಡದಲ್ಲಿಯ ದೊಡ್ಡ ದೊಡ್ಡ ಕಲ್ಲುಗಳನ್ನು ಹೊತ್ತು ನಡೆಯುತ್ತಾರೆ. ಹೀಗೆ ಭಾರವಾದ ಕಲ್ಲುಗಳನ್ನು ಹೊತ್ತು ನಡೆಯುವುದರಿಂದ, ಅವರಲ್ಲಿದ್ದ ಗಾಳಿ ಬಿಟ್ಟು ದೂರ ಹೋಗುತ್ತದೆಂದು ಜನಗಳ ನಂಬಿಕೆ. ಗಾಳಿ ತುಂಬಿದವರು ಮಾತ್ರ, ಇಂಥ ಕಲ್ಲು ಹೊರಲು ಸಾಧ್ಯ ಎಂದೂ ನಂಬಿಕೆಯಿದೆ. ಇದೆಲ್ಲ ಅಲ್ಲಿಯ ಹನುಮಂತ ದೇವರ ಮಹಿಮೆಯಂತೆ. ಹೀಗೆ, ಭಾರವಾದ ಕಲ್ಲನ್ನು ಹೇರುವುದು, ಒಂದು ರೀತಿಯಲ್ಲಿ ಗಾಳಿಯಾದವನಿಗೆ ಶಿಕ್ಷೆಯೇ. ಶಿಕ್ಷಿಸುವುದರ ಮೂಲಕ ಗಾಳಿ ಮಾಯವಾಗುತ್ತದೆಂಬ ನಂಬಿಕೆಯೂ ಇನ್ನೊಂದೆಡೆಯಿದೆ. ಕಲ್ಲು ಹೊತ್ತರೆ ಗಾಳಿ ತೊಲಗುತ್ತದೆನ್ನುವ ಒಂದು ಭಾವನೆಯಷ್ಟೇ.

ಗಾಳಿಯಾದವರು, ಹನುಮಂತದೇವರಿಗೆ ಸುಮರು ೫ ವಾರ ತಪ್ಪದೇ ತೊಯ್ದ ಬಟ್ಟೆಯಲ್ಲಿ ಪ್ರದಕ್ಷಿಣೆ ಬಂದರೆ, ಗಾಳಿ ಓಡಿಹೋಗುತ್ತದೆಂಬ ಬಲವಾದ ನಂಬುಗೆ. ಹನುಮಂತ ಶನಿದೇವರು ಎಂಬ ನಂಬಿಕೆ ಗ್ರಾಮೀಣರದು. ಅಲ್ಲದೆ, ಈತ ದೆವ್ವ-ಭೂತ-ಪಿಶಾಚಿಗಳನ್ನು ಮೆಟ್ಟಿನಿಂತವ. ಆದುದವರಿಂದ ಹನುಮಂತನಿಗೆ ನಡೆದು ಕೊಂಡರೆ ಗಾಳಿ ಬಿಡುತ್ತದೆಂಬ ನಂಬಿಕೆಯಲ್ಲಿ ಜನಪದರಿಗೆ ಅಚಲ ವಿಶ್ವಾಸವಿದೆ.

## ಕವಡಿ ಲೋಬಾನ

ಮೊಹರಂ ಹಬ್ಬದಲ್ಲಿ ಅಲ್ಲಾ ದೇವರನ್ನು ಕೂಡ್ರಿಸಿದಾಗ, ವ್ಯಕ್ತಿಯ ಮೈಯೊಳಗಿದ್ದ

ಗಾಳಿದೆವ್ವ ಎಚ್ಚರಗೊಂಡು ಒದರಾಟ, ಚೀರಾಟ ಆರಂಭಿಸುತ್ತದೆ. ಮುಲ್ಲಾ ಕವಡಿಲೋಬಾನ ಹಾಕಿ ಗಾಳಿಯನ್ನು ಓಡಿಸುತ್ತಾನೆ. ಇದಕ್ಕೆ ದೆವ್ವ ಇನ್ನಷ್ಟು ಕೂಗಾಟ ಮಾಡಿ ಹೆದರಿ ಓಡಿಹೋಗುತ್ತದೆಂದು ಅನುಭವಿಕರೆಲ್ಲರ ಹೇಳಿಕೆ. ಕವಡಿ ಲೋಬಾನ ಗಾಳಿಯ ಶತ್ರುವಂತೆ. ಈ ಲೋಬಾನದಿಂದ ದೆವ್ವ ಬಿಡಿಸುವುದು ಒಂದು ತಂತ್ರವೆಂದು ತೋರುತ್ತದೆ. ಇದಕ್ಕೆ ಗುಗ್ಗಳಿ ಊದು ಎಂತಲೂ ಕರೆಯುವ ವಾಡಿಕೆ. ಗುಗ್ಗಳದಲ್ಲಿ ಹೊರಗಿನ ಕ್ರಮುಗಳನ್ನು ತಡೆಯುವ ಮತ್ತು ಒಳಗಿನ ದುಷ್ಟಶಕ್ತಿಯನ್ನು ಹೊರಹಾಕುವ ಸಾಮರ್ಥ್ಯವಿದೆ. ಹಸು ಹಾಲು ಕರೆಯದಿದ್ದರೆ, ಗಾಳಿ ಸೋಂಕಿದೆಯೆಂಬ ನಂಬಿಕೆಯಿಂದ, ಅವರ ಕೆಚ್ಚಲಿಗೆ ಕವಡಿ ಲೋಬಾನ ಹಿಡಿಯುತ್ತಾರೆ. ಚಿಕ್ಕಮಕ್ಕಳನ್ನು ಎರೆದು, ಬಾಣಂತಿಯರಿಗೆ ಸ್ನಾನಮಾಡಿಸಿಯೂ ಗಾಳಿ ಸೋಂಕಬಾರದೆಂಬ ಕಾರಣದಿಂದ ಕವಡಿ ಲೋಬಾನವನ್ನು ಬೆಂಕಿಯಲ್ಲಿ ಹಾಕಿ ಹಿಡಿಯುತ್ತಾರೆ.

ಹಾಗೆಯೇ ಮೆಣಸಿನಕಾಯಿ ಇಳಿ ತೆಗೆಯುವ, ಪೊರಕೆ ಕಡ್ಡಿಗಳನ್ನು ಮುರಿದು ಸುಡುವ, ಅರಳಿಯನ್ನು ಗೋಡೆಗೆ ಅಂಟಿಸಿ ಸುಡುವ, ಮಂತ್ರಿಸಿದ ಅರಿಸಿನ ಬೇರನ್ನು ತೋಳಿಗೆ ಕಟ್ಟುವ, ಭತ್ತ ಅಥವಾ ಗೋದಿಯ ತೆನೆಯನ್ನು ಮನೆಯ ಸೂರಿಗೆ ನೇತುಹಾಕುವುದರ ಮೂಲಕವಾಗಿಯೂ ದೆವ್ವ- ಪಿಶಾಚಿಯನ್ನು ಓಡಿಸಲು ಸಾಧ್ಯವೆಂದು ಜನಪದರ ನಂಬಿಕೆ.

ಚಿಕ್ಕ ಆಲೂಗಡ್ಡೆ, ಚಿಕ್ಕ ಗಜ್ಜರಿ, ಬೆಳ್ಳುಳ್ಳಿ - ಇವುಗಳಲ್ಲಿ ಯಾವುದೇ ಒಂದು ಹತ್ತಿರವಿದ್ದರೆ ಗಾಳಿ ಸೋಂಕುವುದಿಲ್ಲವೆಂಬ ನಂಬಿಕೆಯಿದೆ. ಮಲಗಿಕೊಂಡಾಗ, ತಲೆಯ ಹತ್ತಿರ, ಚಪ್ಪಲಿ, ಕಸಬರಿಗೆ ಇರಿಸಿಕೊಂಡಿದ್ದರೆ ಗಾಳಿ ಬರುವುದಿಲ್ಲವೆಂಬ ಇನ್ನೊಂದು ನಂಬಿಕೆಯಿದೆ. ಕಸಬರಿಗಿ, ಚಪ್ಪಲಿಗಳಂತೆ ಕಬ್ಬಿಣಕ್ಕೂ ದೆವ್ವ ಹೆದರುತ್ತದೆಂಬ ನಂಬಿಕೆಯೂ ಇದೆ.

## ಮಂತ್ರ-ತಂತ್ರ-ಯಂತ್ರ

ಗಾಳಿ ಹಿಡಿದುಕೊಂಡವರ ಮಾತು-ಕತೆ, ಹಾವ-ಭಾವ, ಅದನ್ನು ಬಿಡಿಸಲು ಪ್ರಯತ್ನಿಸುವ ಮಂತ್ರಗಾರ; ಆತನ ಮಂತ್ರ-ತಂತ್ರ-ಯಂತ್ರ ಮೊದಲಾದವುಗಳು ಪ್ರಪಂಚದ ಬಹುಭಾಗಗಳಲ್ಲಿ ಇಂದಿಗೂ ಕಂಡುಬರುತ್ತಿರುವುದು ತುಂಬ ವಿಚಿತ್ರವೆನಿಸಿದರೂ ವಾಸ್ತವ ಸಂಗತಿಯೇ ಆಗಿದೆ. ಕರ್ನಾಟಕದ ನಾನಾ ಕಡೆಗಳಲ್ಲಿ ಗಾಳಿ ಬಿಡಿಸುತ್ತಾರೆ. ಖಾಜಿ/ಮುಲ್ಲಾ ಅಥವಾ ಸ್ವಾಮಿಗಳು ಸಾಮಾನ್ಯವಾಗಿ ಗಾಳಿ ಬಿಡಿಸುತ್ತಾರೆ. ಧರ್ಮಸ್ಥಳ, ಮಹದೇಶ್ವರ ಬೆಟ್ಟ, ವಿಜಾಪುರ ಜೋಡಗುಂಬಜ್, ಬೆಳಗಾವಿಯ ಕರೋಶಿ-ಮೊದಲಾದ ಪ್ರಮುಖ ಸ್ಥಳಗಳಲ್ಲದೆ, ಕರ್ನಾಟಕದ ಇತರ ಭಾಗಗಳಲ್ಲಿಯೂ ದೆವ್ವಬಿಡಿಸುತ್ತಾರೆ. ಗಾಳಿಬಿಡಿಸುವ ಮಾಂತ್ರಿಕರು ಸಾಮಾನ್ಯವಾಗಿ ಎಲ್ಲ ಗ್ರಾಮೀಣ ಪ್ರದೇಶಗಳಲ್ಲಿ ಸಿಕ್ಕುತ್ತಾರೆ.

ಹೆಣ್ಣುಮಕ್ಕಳಿಗೇ ಹೆಚ್ಚಾಗಿ ಬಡಿದುಕೊಳ್ಳುವ ಈ ಗಾಳಿಯನ್ನು ತೊಲಗಿಸಲು, ಮಂತ್ರಗಾರ ಕೈಗೊಳ್ಳುವ ಕ್ರಮ ತುಂಬ ಗಂಭೀರವಾಗಿರುತ್ತದೆ, ಭಯಂಕರವಾಗಿರುತ್ತದೆ. ಮಂತ್ರವಾದಿ ಗಾಳಿಹೊಕ್ಕವಳ ಕೂದಲನ್ನು ಕೈಯಿಂದ ಜಗ್ಗಿಹಿಡಿದು, ಬಾಯಲ್ಲಿ ಪಿಟಿ ಪಿಟಿ ಎಂದು ಮಂತ್ರ ಹೇಳುತ್ತ ಅವಳ ಮೈಮೇಲೆ ವಿಭೂತಿ ಪುಡಿ ಅಥವಾ ಬೂದಿಯನ್ನು ಉಫ್ ಎಂದು ಊದುತ್ತಾನೆ. ನಿಂಬೆಹಣ್ಣನ್ನು ಮಂತ್ರಿಸಿ, ಅವಳ ಮೈಮೇಲೆ ನಿವಾಳಿಸಿ ಒಗೆಯುತ್ತಾನೆ. ಇಷ್ಟಕ್ಕೆ ಅವಳ ಮೈಯಿಂದ ದೆವ್ವ ಹೊರಗೆ ಬರದೇ ಇದ್ದಾಗ, ಬೇವಿನಸೊಪ್ಪಿನಿಂದ ಮುಖಕ್ಕೆ ಚೆನ್ನಾಗಿ ಹೊಡೆಯುತ್ತಾನೆ. ಇದಕ್ಕೂ ಬಗ್ಗದೇ ಇರುವ ಗಾಳಿಯನ್ನು ನೋಡಿ ಮಂತ್ರಗಾರ ಸಿಟ್ಟಿನಿಂದ ಕಣ್ಣುಗಳನ್ನು ಕೆಂಪಗೆ ಮಾಡಿ, ಚಪ್ಪಲುಗಳಿಂದ, ಅವಳ ದೇಹದ ಸಿಕ್ಕ ಸಿಕ್ಕ ಭಾಗಗಳಲ್ಲಿ ಚೆನ್ನಾಗಿ ಹೊಡೆಯುತ್ತಾ ನೀನು ಯಾರು? ಇಲ್ಲಿಗೇಕೆ ಬಂದೆ? ನಿನ್ನ ಆಸೆ ಏನು? - ಮೊದಲಾದ ಪ್ರಶ್ನೆಗಳನ್ನು ಹಾಕುತ್ತಾನೆ. ಮಂತ್ರಗಳಿಗೆ ಬಡಿತಕ್ಕೆ ಮತ್ತು ಆತನು ಹಾಕುವ ಮಂತ್ರಗಳಿಗೆ ಮಣಿದ ಗಾಳಿ ತನ್ನ ನಿಜಸಂಗತಿಯನ್ನು ಆತನ ಮುಂದೆ ಅರುಹುತ್ತದೆ. ಇನ್ನು ಮೇಲೆ ನೀನು ಬರಕೂಡದೆಂದು ಗಾಳಿಗೆ ಹೇಳಿದ ಮಂತ್ರಗಾರ, ಯಂತ್ರವೊಂದನ್ನು ಮಾಡಿ ಗಾಳಿ ಬಂದವಳ ಕೊರಳಲ್ಲಿ ಕಟ್ಟುತ್ತಾನೆ. ಮುಂದೆಂದೂ ಅವಳಿಗೆ ಗಾಳಿ-ಪಿಶಾಚಿಗಳು ಅಂಟಿಕೊಳ್ಳುವುದಿಲ್ಲವೆಂದು ನಮ್ಮ ಜನಪದರು ಹೇಳುತ್ತಲೇ ಬಂದಿದ್ದಾರೆ. ಇಂಥ ವಿಚಿತ್ರ ಸಂಗತಿಗಳು ನಂಬಲಸಾಧ್ಯವಾದರೂ ಒಂದೆರಡು ಸಲ ಅವು ಸತ್ಯಸಂಗತಿಗಳಾಗಿದ್ದುದು ಹಳ್ಳಿಗರಿಂದಲೇ ತಿಳಿದುಬರುತ್ತದೆ. ಗಾಳಿ ಹಿಡಿದ ಹೆಣ್ಣೊಬ್ಬಳನ್ನು ಒಮ್ಮೆ ಸಿದ್ಧಗಂಗಾ ಕ್ಷೇತ್ರಕ್ಕೆ ಕರೆತಂದಿದ್ದರು. ಸ್ವಾಮಿಗಳು ಆಕೆಯ ಸ್ವಲ್ಪ ಕೂದಲನ್ನು ಬೆರಳಲ್ಲಿ ಸುತ್ತಿಕೊಂಡು (ಹಾಗೆ ಸುತ್ತಿಕೊಂಡರೆ ಮೈಮೇಲಿರುವ ಗಾಳಿ ಪರಾರಿಯಾಗಲು ಸಾಧ್ಯವಿಲ್ಲವಂತೆ) ಮಂತ್ರಗಳನ್ನು ಪಠಿಸಿ, ವಿಭೂತಿಯ ಧೂಳನ್ನು ಆಕೆಯ ಮೈಮೇಲೆ ಉರುಬಿದಾಗ ಸುಟ್ಟುಕೊಂಡವಳಂತೆ ಬೆದರಿದ ಆಕೆ ಎಲ್ಲವನ್ನೂ ಹೇಳುವುದಾಗಿ ಬಾಯಿಬಿಟ್ಟಳು. ಸ್ವಾಮಿಗಳು ಒಂದೊಂದು ಪ್ರಶ್ನೆ ಕೇಳುತ್ತ ಹೊರಟರು. ಅವಳ ಮೈಮೇಲಿದ್ದ ಗಾಳಿ ಉತ್ತರಿಸುತ್ತ ಹೋಯಿತು. ತಾನು ಇಂಥವಳೆಂದೂ ಹಗೆಗಳು ಅನ್ಯಾಯದಿಂದ ತನ್ನನ್ನು ಸಾಯಿಸಿದರೆಂದೂ ಅದಕ್ಕಾಗಿ ದೆವ್ವವಾಗಿ ಅವರ ಮನೆಯ ಇಷ್ಟು ಜನರನ್ನು ಆಹುತಿ ತೆಗೆದುಕೊಂಡೆನೆಂದೂ ಗಾಳಿ ಹೇಳಿತು. ಬಾವಿಯಬಳಿ ನೀರು ಕುಡಿಯಲು ಬಂದಾಗ ಬಾವಿಗೆ ತಳ್ಳಿದರೆಂದೂ ಅವರ ಹೆಸರು ಇಂಥದೆಂದೂ ಗಾಳಿ ಹೇಳಿದ ಮಾತುಗಳು ವಾಸ್ತವ ವಿಷಯಗಳಾಗಿದ್ದವು. ಇಷ್ಟು ಜನರನ್ನು ಕೊಂದು ಗಳಿಸಿದ ಶಾಪ ಸಾಕೆಂದು, ಇನ್ನು ಆ ಕ್ಷೇತ್ರದಲ್ಲಿ ತಂಗಿ ಪಾಪ ಪರಿಹಾರ ಮಾಡಿಕೊಳ್ಳಬೇಕೆಂದೂ ಒಪ್ಪಿಗೆಯಿದ್ದರೆ ಏನಾದರೂ ಗುರುತು ಕೊಡತಕ್ಕದ್ದೆಂದೂ ಸ್ವಾಮಿಗಳು ಕೇಳಿದಾಗ ಗಾಳಿಹಿಡಿದ ಹೆಣ್ಣು ತನ್ನ ತಲೆಯಿಂದ ಒಂದು ಹಿಡಿಗೂದಲನ್ನು ಕಿತ್ತುಕೊಟ್ಟಿತು. ಆಮೇಲೆ ಆಕೆಯ ಮೈಮೇಲೆ ಮತ್ತೆ ದೆವ್ವ ಇರಲಿಲ್ಲವೆಂದೂ ಸುಖವಾಗಿದ್ದಳೆಂದೂ ತಿಳಿದುಬಂತಂತೆ.[೮] ವ್ಯಕ್ತಿಯಲ್ಲಿ ಉಂಟಾಗಿರಬಹುದಾದ ಭ್ರಮೆಯೇ ಇಂಥ ನಂಬಿಕೆಗಳಿಗೆ ಮೂಲವಿರಬೇಕು ಎಂದು ಸಮಾಧಾನ ಪಡಬಹುದಾದರೂ ಈ

ನಿಟ್ಟಿನಲ್ಲಿ ಅಧ್ಯಯನ-ಸಂಶೋಧನೆ ನಡೆಯಬೇಕಿದೆ.

ಮೈಮೇಲೆ ದೆವ್ವ ಬಂದವರಿಗೆ ಕುತ್ತಿಗೆಯಲ್ಲಿ, ರಟ್ಟೆಯಲ್ಲಿ ಅಥವಾ ನಡುವಿನಲ್ಲಿ ಮಂತ್ರವಾದಿ ಮಂತ್ರಿಸಿದ ದಾರ ಅಥವಾ ತಾಯಿತದ ಯಂತ್ರಮಾಡಿ ಕಟ್ಟುತ್ತಾನೆ. ಮಂತ್ರಿಸಿದ ಬರೀ ಚೀಟಿ ಕೂಡ ಕಟ್ಟುತ್ತಾನೆ. ತಗಡಿನ ಮೇಲೆ, ಚರ್ಮದ ಮೇಲೆ, ಕಾಗದದ ಮೇಲೆ ಮಾಂತ್ರಿಕ ಚಿಹ್ನೆಗಳನ್ನೋ, ಅಕ್ಷರಗಳನ್ನೋ ಬರೆಯುತ್ತಾನೆ. ಮಂತ್ರಕ್ಕೆ ಮಣ್ಣಿನ ಪ್ರತಿಮೆ, ವೀಳೆಯದೆಲೆ, ಅಡಿಕೆ, ತೆಂಗಿನಕಾಯಿ ಮೊದಲಾದ ನಿರ್ದಿಷ್ಟ ವಸ್ತುಗಳೇ ಬೇಕಾಗುತ್ತವೆ. ಮಂತ್ರವಾದಿ ತನ್ನೀ ವಿದ್ಯೆಯನ್ನು ಯಾರಿಗೂ ಹೇಳಿಕೊಡುವುದಿಲ್ಲ. ಸಾಯುವಾಗ ತನ್ನ ಮಗನಿಗೆ ಮಾತ್ರ ಹೇಳುತ್ತಾನೆ. ದಾರ-ತಾಯಿತಗಳನ್ನು ಈತನಿಂದ ಕಟ್ಟಿಸಿಕೊಂಡರೆ, ಈಗಾಗಲೇ ಮೈಮೇಲೆ ಬಂದ ದೇವರು / ದೆವ್ವ ಬಿಟ್ಟುಹೋಗುತ್ತದೆ. ಬರಬಹುದಾದುದು ಬರುವುದಿಲ್ಲ. ಈ ನಂಬಿಕೆಯೇ ಮಂತ್ರಗಾರನ ಮೇಲೆ ಗ್ರಾಮೀಣರು ಅಷ್ಟೊಂದು ವಿಶ್ವಾಸವಿರಿಸಲು ಕಾರಣವಾಗಿದೆ. ಹಾಳುಭಾವಿ, ಮರ, ಸುಡುಗಾಡುಗಳಲ್ಲಿಯ ಯಾವುದೇ ದೆವ್ವ ಮನೆ ಪ್ರವೇಶಿಸಬಾರದೆಂಬ ಕಾರಣದಿಂದ, ಎಂಟೂ ದಿಕ್ಕುಗಳಲ್ಲಿ ಸೀಸೆಯಲ್ಲಿ ಮಂತ್ರಿಸಿದ ತಾಯಿತ, ನಿಂಬೆಹಣ್ಣು ಮೊದಲಾದುವನ್ನು ಹಾಕಿ ಹುಗಿಯುತ್ತಾರೆ. ಇದು ಹೊರದೆವ್ವಗಳಿಗೆ ಬೇಲಿಯಿದ್ದಂತೆ. ಹಾಗೆಯೇ ಗಾಳಿ ದೇವರು-ದೆವ್ವ ಮೈಯಲ್ಲಿ ಸೇರಿದರೆ ಮಂತ್ರಿಸಿದ ನಿಂಬೆಹಣ್ಣನ್ನು ಮೂರು ದಾರಿ ಸಂಗಮಿಸಿದಲ್ಲಿ, ಮೂರು ಸಂಜೆ ಹೊತ್ತಿನಲ್ಲಿ ಇಟ್ಟು ಬರಬೇಕು. ಇವನ್ನು ಮೊದಲು ಯಾರು ಗಮನಿಸುತ್ತಾರೋ ಅವರಿಗೆ ಇವು ಸೇರಿಕೊಳ್ಳುತ್ತವೆ. ಮೊದಲಿನವರಿಗೆ ಮರಳಿ ಬರುವುದಿಲ್ಲ. ಮಂತ್ರಿಸಿದ ನಿಂಬೆಹಣ್ಣನ್ನು ಒದ್ದು ದಾಟಿದರೆ, ಅದರಲ್ಲಿಯ ದೇವ-ದೆವ್ವ ಅಂತಹವರಿಗೆ ಬಡಿದುಕೊಳ್ಳುವುದಿಲ್ಲ. ಮಂತ್ರವಾದಿ ಮಂತ್ರ ಮಾಡುವಾಗ ಏನಾದರೂ ತಪ್ಪಿದರೆ, ಅವು ಈತನ ಮೇಲೆ ಬರುತ್ತವೆಂಬ ನಂಬಿಕೆಯೂ ಇದೆ. ಮಂತ್ರಿಸಿದ ಬೊಂಬೆ ಸುಡುವುದರ ಮೂಲಕವೂ ಗಾಳಿದೆವ್ವ ಬಿಡಿಸುತ್ತಾನೆಂಬ ನಂಬಿಕೆಯಿದೆ.

ಈ ಮಂತ್ರವಾದಿಗಳು ಮಾಟಮಾಡುವುದರ ಮೂಲಕ ಇನ್ನೊಬ್ಬರಿಗೆ ತೊಂದರೆ ಕೊಡುವುದೂ ಉಂಟು. ಇವರು ಮಂತ್ರದಿಂದ ಸುಂಟರಗಾಳಿ ಸೃಷ್ಟಿಸಿ, ಇನ್ನೊಬ್ಬರಿಗೆ ಕೇಡು ಬಗೆಯುತ್ತಾರೆಂಬ ನಂಬಿಕೆ ಅನೇಕ ಕಡೆ ಇದೆ. ಮಂತ್ರದಿಂದ ಸುಂಟರಗಾಳಿಯನ್ನು ತಡೆ ಹಿಡಿಯಲು ಸಾಧ್ಯ, ಮಂತ್ರವಾದಿ ಇಂಥ ಅದ್ಭುತ ಶಕ್ತಿ ಹೊಂದಿರುತ್ತಾನೆಂಬ ನಂಬಿಕೆಯೂ ಇದೆ. ಇಂಥ ಮಾಟಗಾರನನ್ನು ಜನ ನಂಬುತ್ತಾರೆ. ಗೌರವದಿಂದ ಕಾಣುತ್ತಾರೆ. ನೈಸರ್ಗಿಕ ಶಕ್ತಿಯನ್ನು ಕೈವಶ ಮಾಡಿಕೊಂಡಿದ್ದೇನೆ ಎಂಬ ನಂಬಿಕೆ ಸಾಮಾನ್ಯರಲ್ಲಿ ಹುಟ್ಟುವಂತೆ ಮಾಡಿ, ಅವರಿಗೆ ಮಂಕುಬೂದಿ ಎರಚಿರುತ್ತಾನೆ. ದುರ್ಬಲ ಮನಸ್ಸಿನವರನ್ನು ತನ್ನ ಬುಟ್ಟಿಯಲ್ಲಿ ಹಾಕಿಕೊಂಡಿರುತ್ತಾನೆ. ರಾಮಾಯಣ - ಮಹಾಭಾರತಗಳಲ್ಲಿಯೂ ಮಾಟ-ಮಂತ್ರ - ತಂತ್ರ - ಯಂತ್ರಗಳ ಉಲ್ಲೇಖವಾಗಿವೆ.

ದೆವ್ವ ಭಾರತೀಯ ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗದಂತಿದೆ. ಈ ಜನ ನಂಬಿಕೆಗಳ ಮೂಲಕ ಗಾಳಿ ದೆವ್ವಗಳಿಗೆ ಜೀವಕೊಟ್ಟು ರೂಪಕೊಟ್ಟು ಮಾತನಾಡಿಸಿ, ಕುಣಿಸಿದ್ದಾರೆ. ಈ ದೆವ್ವಿನ ಬಗೆಗೆ ತುಂಬ ಕುತೂಹಲಕರ ಸಂಗತಿಗಳನ್ನು ಜನಪದ ಮನಸ್ಸು ಕಲ್ಪಿಸಿರುವುದು ಚಕಿತಗೊಳಿಸುತ್ತದೆ. ಗ್ರಾಮೀಣ ಜನ ಎಲ್ಲ ಬಿಡಬಹುದು; ಜಾತಿ ಬಿಟ್ಟರೂ ಬಿಡಬಹುದು; ಈ ದೆವ್ವದ ಬಗೆಗಿನ ನಂಬಿಕೆಯನ್ನು ಬಿಡಲಾರರು. ಬಹುಜನ ವಿಚಾರವಾದಿಗಳು, ಏಕೆ? ವಿಜ್ಞಾನಿಗಳೂ ಕೂಡ ಇದರ ಬಗೆಗೆ ನಂಬಿಕೆಯುಳ್ಳವರಾಗಿದ್ದಾರೆ. ಅಕಸ್ಮಾತ್ ಇದು ಇದ್ದರೆ, ತಮಗೇನಾದರೂ ಕೇಡು ಬಗೆದರೆ ಎಂಬ ಭಯದಿಂದ ಎಲ್ಲರೂ ನಂಬುತ್ತಾರೆ. ನಂಬುತ್ತಲೇ ಬಂದಿದ್ದಾರೆ. ಮನಸ್ಸಿನ ಈ ನಂಬಿಕೆ-ಕಲ್ಪನೆ ದೂರಾಗಲು ದೇವರೇ ಬರಬೇಕಲ್ಲವೆ !!

ಈ ದೆವ್ವಿನ ಬಗೆಗೆ ಜನ ನಂಬಿಕೆಯನ್ನಿರಿಸಿಕೊಂಡುದನ್ನು ತುಂಬ ಸುಲಭವಾಗಿ ಗುರುತಿಸಬಹುದು. ಆದಿಮಾನವ ತನಗೆ ಯಾವುದೇ ಕಷ್ಟ-ತೊಂದರೆಯಾದಾಗ, ಪ್ರಕೃತಿ ಮುನಿಸಿಕೊಂಡಾಗ, ರೋಗರುಜಿನ ಬಂದಾಗ ಅವುಗಳಿಗೆ ನಿಶ್ಚಿತಕಾರಣ ತಿಳಿಯಲಾರದೆ, ಭಯಗ್ರಸ್ತನಾಗಿ, ಅವೆಲ್ಲಕ್ಕೆ ದೆವ್ವ-ಪಿಶಾಚಿಗಳೆ ಕಾರಣ ಅಥವಾ ದೇವರಶಾಪ ಕಾರಣ ಎಂದು ಊಹಿಸಿದ. ತನ್ನ ಗುಂಪಿನಲ್ಲಿ ಯಾರಾದರೂ ಮತಿಭ್ರಮಣೆಗೊಳಗಾಗಿ ಕೂಗಾಟ, ಚೀರಾಟ ಆರಂಭಿಸಿದಾಗ ತಾಳ್ಮೆಗೆಟ್ಟ ಆತ, ಇವರಿಗೆ ದೆವ್ವ ಬಡಿದಿರಬೇಕು ಎಂದು ಕಲ್ಪಿಸಿದ. ಐರೋಪ್ಯ ದೇಶಗಳಲ್ಲಿ ಮಾನಸಿಕ ಕಾಯಿಲೆಗಳಿಗೆ ತುತ್ತಾದವರನ್ನು ಪಿಶಾಚಿಗಳು ಎಂದು ನಂಬಿ, ಅವರಿಂದ ಇತರರಿಗೆ ತೊಂದರೆಯಾಗುತ್ತದೆ ಎಂದು ಭಾವಿಸಿ, ಅವರನ್ನು ಜೀವಂತ ಸುಟ್ಟುಬಿಡುತ್ತಿದ್ದರು. ಹಾಗೆಯೇ ಕೆಲವು ವಿಧಿ ವಿಧಾನಗಳಿಂದ ಕೆಲವರು ದುಷ್ಟಶಕ್ತಿಗಳನ್ನು ವಶಪಡಿಸಿಕೊಂಡು ಬೇರೆಯವರಿಗೆ ಕಷ್ಟ, ಕಾಯಿಲೆ, ಕಸಾಲೆಗಳನ್ನು ಹಾಗೂ ಸಾವನ್ನು ತರಬಲ್ಲರು ಎಂಬ ನಂಬಿಕೆ ಜಗತ್ತಿನ ಎಲ್ಲ ಜನಾಂಗಗಳಲ್ಲಿಯೂ ಕಂಡುಬರುತ್ತದೆ. ಮಾಟ ಮತ್ತು ಮಂತ್ರ ಪ್ರಪಂಚದಾದ್ಯಂತ ವಿವಿಧ ಹೆಸರುಗಳಲ್ಲಿ ಅಂದಿನಿಂದ ಇಂದಿನವರೆಗೂ ಪ್ರಚಲಿತವಿದೆ.

ಏನೇ ಆದರೂ ದೆವ್ವ, ಎನ್ನುವುದು ನಮ್ಮ ಚಿತ್ತದ ವಿಕಲ್ಪವೇ ಹೊರತು, ಹೊರಜಗತ್ತಿನ ಪರಿಕಲ್ಪನೆಯಲ್ಲ. ಅದರ ನಿಜವಾದ ಇರುವಿನ ಬಗೆಗೆ ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ. "ಭೂತ ಪ್ರೇತಗಳ ಬಗೆಗೆ ಇನ್ನೂ ಯಾರೂ ಕಟ್ಟಕಡೆಯ ತೀರ್ಮಾನ ಹೇಳಿಲ್ಲ,[೧೧]" ಎಂಬ ದೇಜಗೌ ಅವರ ಮಾತೂ ಗಮನಿಸುವಂಥದು. ಈ ಮಾನಸಿಕ ವ್ಯಾಪಾರ ಕುರಿತ ವಿಶ್ಲೇಷಣೆ ನಡೆಯಬೇಕಿದೆ. ಫ್ರಾಯ್ಡ್‌ನ ನಂತರ ಈ ದಿಶೆಯಲ್ಲಿ ನಮ್ಮ ಸಂಶೋಧನೆ ಮುಂದುವರಿದಂತೆ ಕಾಣುತ್ತಿಲ್ಲ.

## ಗಾಳಿಗೆ-ದೆವ್ವ ಎನ್ನಲು ಕಾರಣ

ಮೈಯಲ್ಲಿ ಬಂದ ದೆವ್ವ ಕಣ್ಣಿಗೆ ಕಾಣುವುದಿಲ್ಲ ಎಂಬ ನಂಬಿಕೆಯಿದೆ. ಗಾಳಿ ಕೂಡ ಕಣ್ಣಿಗೆ ಕಾಣುವುದಿಲ್ಲ. ಅದಕ್ಕೆ ಪ್ರಾಣವೆಂತಲೂ ಕರೆಯುತ್ತಾರೆ. ಪ್ರಾಣ ಇಡೀ ದೇಹವನ್ನು ಆವರಿಸಿರುತ್ತದೆ. ದೆವ್ವ-ಕೂಡ (ಏಕಕಾಲದಲ್ಲಿ ಅಲ್ಲ) ಮೈ - ಮನ ತುಂಬಿರುತ್ತದೆಂಬ ಭಾವನೆಯಿದೆ. ಹೀಗೆ, ಬೀಸುವ ಗಾಳಿ ಪ್ರಾಣರೂಪದಲ್ಲಿ ಮೈಯನ್ನೆಲ್ಲ ಹೇಗೆ ಆವರಿಸಿರುತ್ತದೆಯೋ ಹಾಗೆಯೇ ದೆವ್ವ ಕೂಡ ಗಾಳಿರೂಪದಲ್ಲಿ ಶರೀರವನ್ನು ಪ್ರವೇಶಿಸಿರುತ್ತದೆನ್ನುವ ನಂಬಿಕೆಯೇ ಬಹುಶಃ ಗಾಳಿಗೂ, ದೆವ್ವ- ಎನ್ನುವ ಕಲ್ಪನೆಗೂ ಸಂಬಂಧ ಇದ್ದಂತೆ ತೋರುತ್ತದೆ. ಒಂದೇ ನುಡಿಯಲ್ಲಿ ಹೇಳುವುದಾದರೆ - ಗಾಳಿಯ ನಿರಾಕಾರಾತ್ವ-ಸ್ಪರ್ಶಾದಿ ಕೆಲವು ಲಕ್ಷಣಗಳು, ದೆವ್ವಗಳಲ್ಲಿ ಕಾಣುವುದರಿಂದ, ಗಾಳಿಯನ್ನೇ ದೆವ್ವ-ಎಂದು ಗ್ರಾಮೀಣ ಜನ ಕರೆಯಲು ಕಾರಣವಾದಂತೆ ತೋರುತ್ತದೆ.

ಈ ಗಾಳಿ, ದೆವ್ವ ಎನ್ನುವ ನಂಬಿಕೆ ಪಟ್ಟಣಿಗರಿಗಿಂತಲೂ ಹಳ್ಳಿಗರಲ್ಲಿಯೇ ಹೆಚ್ಚು ಕಾರಣ, ಬೇರೆ ನಿಟ್ಟಿನಲ್ಲಿ ಆಲೋಚಿಸಲು ಅವರಿಗೆ ಅವಕಾಶಗಳೇ ಇರುವುದಿಲ್ಲ. ವೈಚಾರಿಕ ಕೊರತೆಯೂ ಇನ್ನೊಂದು ಕಾರಣ. ಹಳ್ಳಿಗಳಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಇಲ್ಲದಿರುವುದು, ಮೇಲಾಗಿ ಬಡತನ, ಎಲ್ಲಕ್ಕೂ ಹೆಚ್ಚಾಗಿ ಪರಂಪರಾಗತವಾಗಿ ಬಂದ ನಂಬಿಕೆಗಳಲ್ಲಿ ವಿಶ್ವಾಸ. ಹೀಗಾಗಿ, ಅತ್ಯಂತ ಪುರಾತನ ಕಾಲದಿಂದಲೂ ಇಂದಿನ ಈ ಕ್ಷಣದವರೆಗೂ, ದೆವ್ವ ಮಾಟ - ಮಂತ್ರಗಳ ಬಗೆಗೆ ನಂಬಿಕೆಗಳು ಅಧಿಕ. ದೆವ್ವ- ಭೂತ ನೋಡಿದ್ದೇವೆ; ಅವುಗಳ ಜೊತೆಗೆ ಮಾತನಾಡಿದ್ದೇವೆ. ಅವು ಹಿಂದು-ಮುಂದಾಗಿ ಗಾಳಿಯಲ್ಲಿ ಸಂಚರಿಸುತ್ತವೆ. ಸತ್ತವರ ಆತ್ಮಗಳೇ ದೆವ್ವ, ಕಬ್ಬಿಣ್ಣಕ್ಕೆ ದೆವ್ವ ಅಂಜುತ್ತದೆ. ರಂಗೋಲಿಗೆ ದೆವ್ವ ಹೆದರುತ್ತದೆ. ಅತಿ-ಲೋಭಿ, ಬಾಣಂತಿ, ಕೆಟ್ಟವರು, ಲಂಬಾಣಿಗಳು ಸತ್ತರೆ ತೀವ್ರವಾಗಿ ದೆವ್ವ ಆಗುತ್ತಾರೆ ಎಂದು ವಾದಿಸುವವರೂ ಸಾಧಿಸುವವರೂ ಜಾನಪದರಲ್ಲಿ ಅಸಂಖ್ಯ.

ಗಾಳಿ ಓಡಿಸಲು, ಗಾಳಿಯಾದ ವ್ಯಕ್ತಿಗೆ ನಾನಾ ರೀತಿಯ ಹಿಂಸೆಯನ್ನು ಮಂತ್ರವಾದಿ ನೀಡುತ್ತಾನೆ. ಬೇವಿನಸೊಪ್ಪು, ಪೊರಕೆ, ಚಪ್ಪಲಿಯಿಂದ ಹೊಡೆಯುವುದು; ಕಿವಿ ಹರಿಯುವಂತೆ, ಕೂದಲು ಕೀಳುವಂತೆ ಜಗ್ಗುವುದು, ಕೈ-ಕಾಲು-ಕಿರಿಬೆರಳನ್ನು ಹತ್ತಿಕ್ಕಿ ಹಿಡಿಯುವುದು, ಬೆನ್ನಮೇಲೆ ಭಾರ ಹೊರಿಸುವುದು... ಇತ್ಯಾದಿ ಮಂತ್ರವಾದಿ ಕೊಡುವ ಹಿಂಸೆಗಳಿಂದ, ಗಾಳಿ ಬಿಟ್ಟು ಓಡತ್ತದೆಂಬ ನಂಬಿಕೆಯಿದೆ. ಈ ನಂಬಿಕೆಗಳೇ ಕಾಲಾನಂತರದಲ್ಲಿ ಜನಪದ ಕತೆಗಳ ಹುಟ್ಟಿಗೆ ಕಾರಣವಾಗುತ್ತವೆ. ಗಾಳಿ, ದೆವ್ವ ಎನ್ನುವ ನಂಬಿಕೆಯ ಕಾರಣದಿಂದ ಜನಪದರ ಬದುಕು ದುರಂತಮಯವಾಗಿವೆ. ಸಮಾಜದಲ್ಲಿ ಇದರಿಂದ ಶ್ರೀ ಸಾಮಾನ್ಯರಿಗೇ ಹಾನಿ ಹೆಚ್ಚು.

## ದೆವ್ವಗಾಳಿ :

"ದೆವ್ವಿನ" ಆರ್ಭಟ ಈ ಗಾಳಿಯಲ್ಲಿ ಕಾಣಬರುವುದರಿಂದ ಇದಕ್ಕೆ ದೆವ್ವಗಾಳಿ ಎನ್ನುತ್ತಾರೆ. ಈ ಗಾಳಿ ಬೀಸಲು ಸುರುಮಾಡಿದರೆ ದೆವ್ವ ಬರುತ್ತದೆನ್ನುವ ನಂಬಿಕೆಯಿದೆ. ಆದುದರಿಂದ ದೆವ್ವಗಾಳಿ ಎದ್ದಾಗ ಅದು ತಮ್ಮ ಹತ್ತಿರ ಸುಳಿಯಬಾರದೆಂದು ಅದಕ್ಕೆ ಥೂ ಎಂದು ಉಗುಳುತ್ತಾರೆ. ಉಗುಳುವುದರಿಂದ ದೆವ್ವಗಾಳಿ ಹತ್ತಿರ ಬರುವುದಿಲ್ಲವೆಂಬ ನಂಬಿಕೆ. ಈ ಗಾಳಿ ಬೀಸುವಾಗ, ಅದರಲ್ಲಿ ಒಂದಿಷ್ಟು ಉಪ್ಪು ಹಾಕಿದರೆ ಅದರಲ್ಲಿರುವ ದೆವ್ವ ಕಣ್ಣಿಗೆ ಕಾಣಿಸುತ್ತದೆ ಎಂಬ ನಂಬಿಕೆಯೂ ಇದೆ. "ದೆವ್ವಗಾಳಿ ಬಿಟ್ಟಾಗ ಅಗ್ಗಿಷ್ಟಗಿ ( ಬಾಣಂತಿ ಬೆಂಕಿ) ಹೊರಗಿಡಬಾರದು" ಎಂಬ ನಂಬಿಕೆಯಲ್ಲಿ ದೆವ್ವ ಅಗ್ಗಿಷ್ಟಿಗೆಯಲ್ಲಿ ಸೇರಿಕೊಂಡು ಬಾಣಂತಿಗೆ ಮೆಟ್ಟಬಾರದೆನ್ನುವ ಎಚ್ಚರಿಕೆಯ ಸೂಚನೆ ಇದ್ದಂತೆ ತೋರುತ್ತದೆ. ಗಾಳಿಗೆ ಅಗ್ಗಿಷ್ಟಗಿಯನ್ನು ತೆರೆದಿಟ್ಟರೆ, ಅದರಲ್ಲಿರುವ ಕಿಡಿಗಳು ಹಾರಿಹೋಗಿ ಅನಾಹುತವಾಗುವ ಸಂಭವ ಇರುತ್ತದೆ. ಆ ಕಾರಣದಿಂದಲೂ ಮೇಲಿನ ಮಾತನ್ನು ಆಡಿರುವ ಸಾಧ್ಯತೆಯಿದೆ. ದೆವ್ವ ಗಾಳಿಗೆ ಹಾರಿಹೋದ ಬಟ್ಟೆಗಳನ್ನು ಮರಳಿ ತರಬಾರದು, ಏಕೆಂದರೆ ದೆವ್ವ ಮನೆಯೊಳಗೆ ಬರುತ್ತದೆಂಬ ನಂಬಿಕೆಯೂ ಇದೆ.

ಒಟ್ಟಿನಲ್ಲಿ, ನಂಬಿಕೆ ಜಾನಪದ ಸಂಸ್ಕೃತಿಯ ಜೀವಾಳ. ಅಂತೆಯೇ ಜಾನಪದರು ದೆವ್ವಿನ ಬಗೆಗೆ ಅಚಲ ನಂಬಿಕೆಯಿರಿಸಿಕೊಂಡು ಬಂದಿದ್ದಾರೆ. ಜಾನಪದ ಸಮಾಜದ ಈ ನಂಬಿಕೆಯನ್ನು ಪ್ರಶ್ನಿಸುವ ಹಕ್ಕು ನಮಗಿಲ್ಲವಾದರೂ ಈ ದೆವ್ವಿನ ಬಗೆಗಿನ ನಂಬಿಕೆ ಆಚರಣೆಗಳ ಹಿಂದಿರುವ ಜಾನಪದ ಮನಸ್ಸನ್ನು ನಮ್ಮ ಪಾರಂಪರಿಕ ಸಂಸ್ಕೃತಿಯ ತಿಳಿವಳಿಕೆಯ ದೃಷ್ಟಿಯಿಂದ ಅಧ್ಯಯಿನಿಸುವುದು ತಪ್ಪಲ್ಲವಲ್ಲ!.

ಅಡಿಟಿಪ್ಪಣಿ

೧. ನೋಡಿ : ಕರ್ನಾಟಕದ ಜನಪದ ಕಲೆಗಳು : ಗೊ.ರು.ಚ.; ಪು ೧೩೭ - ೧೩೮.

೨. ಕನ್ನಡ ನಿಘಂಟು : ಸಂ: ೨, ಪು : ೨೪೯೨.

೩. ಬೇರೆ ಬೇರೆ ದೆವ್ವಿನ ಹೆಸರು, ಅವು ಇರುವ ಸ್ಥಳ, ಅವುಗಳ ಕ್ರೂರಕಾರ್ಯ ಮತ್ತು ಅವು ಎಂತಹವರನ್ನು ಬಲಿತೆಗೆದುಕೊಳ್ಳುತ್ತವೆ. - ಇತ್ಯಾದಿ ವಿಷಯಕ್ಕೆ ನೋಡಿ, ಬಸವಣ್ಣನವರ ವಚನಗಳು; ಆರ್.ಸಿ.ಹಿರೇಮಠ.

೪. ಪಂಚಫಲಾರಗಳು : ಚುರುಮುರಿ, ಸೇಂಗಾ, ಪುಠಾಣಿ, ಕೊಬ್ಬರಿ, ಖಾರೀಕ ಮತ್ತು ಬಾಳೇಹಣ್ಣು.

೫. ಜಾನಪದ ಅಧ್ಯಯನ : ದೇಜಗೌ : ಪು. ೩೪೯.

೬. ಜಾನಪದ ಅಧ್ಯಯನ : ದೇಜಗೌ;, ಪು. ೩೫೦.

೭. ಮೂಢನಂಬಿಕೆಗಳು : ಎಲ್.ಆರ್. ಹೆಗಡೆ; ಪು: ೫.

೮. ಕನ್ನಡ ವಿಶ್ವಕೋಶ : ಸಾ: ೬; ಪು. ೨೪೯.

೯. ಡಾ|| ಸಿ.ಆರ್. ಚಂದ್ರಶೇಖರ : ಭಾನಾಮತಿ , ಪು. ೨೦; ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ; ೧೯೮೫.

೧೦. ಡಾ || ದೇಜಗೌ: ಜಾನಪದ ಅಧ್ಯಯನ; ಪು. ೨೮೮.

# ೪. ದೇವರು ದೆವ್ವಗಿವ್ವ: ನಮ್ಮೂರ ಸುತ್ತಮುತ್ತ

ಡಾ ।। ರಾಜೇಗೌಡ ಹೊಸಹಳ್ಳಿ

ದೆವ್ವಗಳು ದೇವರುಗಳಾಗುವ, ದೇವರುಗಳು ದೆವ್ವಗಳಾಗಿ ಪರಿಣಮಿಸುವ ಪ್ರಕ್ರಿಯೆಯನ್ನು ರಾಜೇಗೌಡರು ಓದುಗರ ಮುಂದಿಟ್ಟದ್ದಾರೆ. ಪ್ರಸ್ತುತ ಲೇಖನವು ಸೂಕ್ಷ್ಮ ಒಳನೋಟಗಳಿಂದ ಕೂಡಿದ್ದು ಚಿಂತನೆಗೆ ಹಚ್ಚುತ್ತದೆ. ಸಂಪಾದಕ

(೧) ನಮ್ಮ ಊರಿನಲ್ಲಿ (ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ಮರಸು ಹೊಸಹಳ್ಳಿ) ಮಾರಮ್ಮನಿದ್ದಾಳೆ, ಕಲ್ಲಮ್ಮನಿದ್ದಾಳೆ, ಮಲಕನ ಹಳ್ಳಿಯಮ್ಮನಿದ್ದಾಳೆ, ಮಾಸ್ತಿಯಮ್ಮನಿದ್ದಾಳೆ, ಹೊಟ್ಟೆಪುರದಮ್ಮನಿದ್ದಾಳೆ. ಇವರನ್ನು ಕಂಡರೆ ನನಗೆ ಭಯ ಭಕ್ತಿಯಿತ್ತು. ಈಗ ಕುತೂಹಲವಿದೆ. ಇವರೆಲ್ಲರೂ ಸ್ತ್ರೀ ದೇವತೆಗಳು. ಯಾಕೆ? (೨) ನಮ್ಮೂರಿನಲ್ಲಿ ಬಸವಣ್ಣನಿದ್ದಾನೆ, ಬಾನದಯ್ಯನಿದ್ದಾನೆ, ಕಾಡು ಬಸವಣ್ಣನಿದ್ದಾನೆ. ಇವರೆಲ್ಲ ಗಂಡು ದೇವರು. ಇದೇನು ಸಂಬಂಧ? (೩) ಇಷ್ಟೂ ಸಾಲದೆಂಬಂತೆ ದೂರದೂರಿನಲ್ಲಿ ಚನ್ನಳ್ಳಿಯಮ್ಮನಿದ್ದಾಳೆ. ಕುಂದೂರು ಮಠದ ಬಳಿ ಮೆಣೆಯಮ್ಮನಿದ್ದಾಳೆ. ಇವರೆಲ್ಲ ನಡೆದುಕೊಳ್ಳುವ ದೇವರುಗಳು. ಇವರು ಯಾರು ?

ಮೊದಲನೆಯದಾಗಿ ಗ್ರಾಮವೆಂದಾಕ್ಷಣ ಒಂದು ಕೋಡುಗಲ್ಲು, ಕರಿಗಲ್ಲು, ಒಂದು ಮಾರಿಗುಡಿ ಇರುತ್ತದೆಂಬುದು ಸ್ವಾಭಾವಿಕ. ಮಾರಿ ಶಕ್ತಿಯ ಸ್ವರೂಪ. ಬೇಟೆಯ ಹಂತವನ್ನು ದಾಟಿದ ಮಾನವ ಸಂಸ್ಕೃತಿಯು ಪ್ರಾಕೃತಿಕ ಸಹಜತೆಗೆ ಹೊಂದಿಕೊಳ್ಳುವಾಗ ಭಯ ವಿಸ್ಮಯಗಳಿಗೆ ಇದಿರಾಗಿ ಹಿಡಿದ ಸ್ವರೂಪವೇ ಮಾರಿಕಲ್ಲು. ತಾನು ಬೇಟೆಯಾಡಿದ ಅನೇಕ ಯುಗಗಳನ್ನು ದಾಟಿ ವಾಸ್ತವ್ಯ ಹೂಡಿದಾಗ ಭಯಕ್ಕೆ ಇದಿರಾಗಿ ಹೊಟ್ಟೆ ತುಂಬಲು ಕಾರಣವಾಗಿದ್ದ ಕಲ್ಲಿನ ಆಯುಧವನ್ನು ಪೂಜಿಸಿ ಆಶ್ರಯ ಕೇಳಿದ್ದಾನೆ. ಇದು ಕೃಷಿಯ ಹಂತಕ್ಕೆ ಮುಟ್ಟಿದಾಗ ನೆಲೆ ಕಂಡವುಗಳಿರಬೇಕು. ಅನೇಕ ಆಚರಣೆಗಳನ್ನು ರೂಢಿಸಿಕೊಂಡಿರಬೇಕು. ಮಾರಮ್ಮನಿಗೆ ಮೂರ್ತಿಯ ಆಕಾರ ಇತ್ತೀಚಿನದಿರಬೇಕು.

ಕಲ್ಲಮ್ಮನನ್ನು ಬೇಟೆಯ ಅನಂತರದ ಹಂತವಾಗಿ ಪರಿಗಣಿಸಬಹುದು. ಶಿವಶಕ್ತಿಯರು ಅದ್ವಯವಾಗುವ ಕ್ರಿಯೆಯಿದು. ಉಭಯ ಲಿಂಗಿಗಳ ಸ್ವರೂಪವೂ ಹೌದು. ಅಮ್ಮನೆಂದರೆ ಹಿಂದಿನ ಅರ್ಥದಲ್ಲಿ ಅಪ್ಪ, ಈಗಿನ ಅರ್ಥದಲ್ಲಿ ಅಮ್ಮ. ಸಾಮಾನ್ಯವಾಗಿ ಕಲ್ಲಮ್ಮನ ವಿಗ್ರಹವು ಅಥವಾ ವಿಗ್ರಹಗಳು ನಿರ್ವಾಣ ಸ್ತ್ರೀ ಚಿತ್ರದವು. ಬೆತ್ತಲೆ ಪೂಜಾ ರೂಪದವು. ಕೃಷಿಯ ಹಂತದಲ್ಲಿ ಮಾತ್ರವೇ ಪ್ರಧಾನ ಸ್ಥಾನ ಹೊಂದಿದ್ದವಳು. ಅವಳ ರೂಢಿ, ಸಂಪ್ರದಾಯ, ಆಚರಣೆಗಳನ್ನು ಅವಳನ್ನು ಮುಂದಿಟ್ಟುಕೊಂಡೇ ಸಮಾಜವು ರೂಢಿಸಿಕೊಂಡಿತ್ತು. ಬೆತ್ತಲೆಯಾಗಿ ಉತ್ತು ಬಿತ್ತಿದರೆ ಫಸಲು ಚೆನ್ನಾಗಿ ಬರುತ್ತದೆಂಬುದು, ಬೆತ್ತಲೆಯಾಗಿದ್ದು ಕೊಂಡು ತಾನು ಕೂಡುವ ಗಂಡನ್ನು ಅಹ್ವಾನಿಸಿ ಕೃಷಿ ಕ್ಷೇತ್ರದಲ್ಲಿ ಸಂಭೋಗಿಸಿದರೆ ಉತ್ತಮ

ಬೆಳೆ ಬರುತ್ತದೆಂದೂ ನಂಬಿಕೆಗಳಿದ್ದವು. ಹೀಗೆ ಗಂಡು ಹೆಣ್ಣುಗಳ ಮಿಲನವು ಒಂದು ನೈಸರ್ಗಿಕ ಕ್ರಿಯೆಯಾಗಿ ಅರಳುವ ಹೂವಿಗೆ, ಮರಿಮಾಡುವ ಪ್ರಾಣಿ ಪಕ್ಷಿಗಳಿಗೆ ಸಂವಾದಿಯಾಗಿತ್ತು. ಈ ಕ್ರಿಯೆಯೂ ಸಹ ಕ್ರಮೇಣ ಪೂಜೆಗೊಳಗಾಯಿತು. ಶಿವಲಿಂಗ ಲಿಂಗಪೀಠಗಳ ಹೊಂದಾಣಿಕೆಯೂ ಪೂಜೆಗೊಳಗಾಗಿದ್ದು ಹೀಗೆ. ಮಾನವನ ಬದುಕಿಗೆ ಕುಡಿಯಾದ ಲೈಂಗಿಕ ಕ್ರಿಯೆಗಳು ಪೂಜ್ಯಮಯವಾಗಿದ್ದು ಹೀಗೆ. ದೇವಾಲಯದಲ್ಲಿ ಸಂಭೋಗ ನಿರತರು ದೇವರನ್ನು ಸಂಪ್ರೀತಿಗೊಳಿಸುತ್ತಿದ್ದರು. ಜಗತ್ತಿನ ಸಾಂಸ್ಕೃತಿಕ ಸ್ತರಗಳಲ್ಲಿ ಮಾತೃಪ್ರಧಾನ ಮತ್ತು ಪಿತೃಪ್ರಧಾನ ಸಂಸ್ಕೃತಿಗಳು ಇಬ್ಭಾಗವಾದವೇ? ಅಥವಾ ಮಾತೃ ಸಂಸ್ಕೃತಿಯನ್ನು ಪಿತೃ ಸಂಸ್ಕೃತಿಯು ತುಳಿದು ಆಳಲು ಪ್ರಾರಂಭಿಸಿತೇ? ಎಂಬುದು ಚಿಂತಿಸಬೇಕಾದ ವಿಚಾರ. ಅತಿ ಹಿಂದುಳಿದ ನೀಲಗಿರಿ ತೋಡರನ್ನು ಪಿತೃಪ್ರಧಾನದವರೆಂದು ಹೇಳುತ್ತಾರೆ. ಅತಿ ಮುಂದುವರಿದ ಕೇರಳದ ನಾಯರನ್ನು, ದಕ್ಷಿಣ ಕನ್ನಡದ ಶೆಟ್ಟರನ್ನು ಮಾತೃ ಪ್ರಧಾನದವರೆನ್ನುತ್ತಾರೆ. ಕ್ರಮವಾಗಿ ಅಂತಾ ಸಂಸ್ಕೃತಿಯನ್ನು ಸೂರ್ಯ ಮತ್ತು ಚಂದ್ರ ಸಂಸ್ಕೃತಿಯೆನ್ನುತ್ತಾರೆ. ಚಂದ್ರನು ಕತ್ತಲಲ್ಲಿ ಮೂಡುವವನು. ಅವನು ನಾಗಕುಲಕ್ಕೆ ಹತ್ತಿರದವನು. ನಾಗಮಿಥುನ ಸಾಮಾನ್ಯವಾಗಿ ಎಲ್ಲಾ ಗ್ರಾಮದಲ್ಲುಂಟು. ಯಥಾ ರೀತಿ ನಾಗರೂಪದ ಸಂಭೋಗವು ಪೂಜೆಗೊಳಗಾಗಿರುವುದುಂಟು. ಈ ಮಾತೃಸಂಸ್ಕೃತಿಯು ಕತ್ತಲು ರಾಜ್ಯದಿಂದ ಉದಿಸುವಂತಹದು . ತಂತ್ರ ಮಂತ್ರದ ಸಾಮ್ರಾಜ್ಯಕ್ಕೊಳಪಟ್ಟದ್ದು. ತಾಂತ್ರಿಕರು ಬೆಳಕು ಮೂಡುವ ಮುನ್ನ ಹೆಣ್ಣಿನಲ್ಲಿ ದರ್ಶನ ಕಾಣುವವರು. ಸಂಭೋಗ ಕ್ರಿಯೆಯಲ್ಲಿ ಮುಕ್ತಿ ಬಯಸುವವರು. ರಸಸಿದ್ಧಾಂತದಲ್ಲಿ ಬದುಕಿನ ವಿಸ್ತಾರವನ್ನು ಕಂಡವರು. ಈಗಿನ ರಜನೀಶರಂತವರಿಗೂ ಹಾದಿ ತೋರಿಸಿದವರು.

ಮಾಸ್ತಿಯ ಹಂತಕ್ಕೆ ತಲುಪುವಾಗ ಬದುಕಿನ ಅನೇಕ ಮಜಲುಗಳೇ ದಾಟಿ ಹೋಗಿವೆ. ಕೃಷಿಯು ಗಣ ಸಮಾಜವನ್ನು ದಾಟಿ ಸಾಮ್ರಾಜ್ಯ ವಿಸ್ತರಣೆ ಮೂಲಕ್ಕೆ ಬಂದಾಗ ಜಗತ್ತಿನಾದ್ಯಂತ ಪಿತೃಪ್ರಾಬಲ್ಯವು ಮಾತೃಮೂಲವನ್ನು ಅಮುಕಿ ಅಡಿಯಾಗಿಸಿದೆ. ಮಹಾಭಾರತದ ಮಾದ್ರಿ ಪತಿ ಕಳೆದುಕೊಂಡು ಸತಿಯಾದರೆ, ರಾಮಾಯಣದ ಸೀತೆ ಪತಿಯಿದ್ದೂ ಸತಿಯಾಗಿದ್ದಾಳೆ. ಅನೇಕ ಇಸಂಗಳ ತಾಕಲಾಟದಲ್ಲಿ ಹೆಣ್ಣು ಸುಟ್ಟು ಸತಿಯಾಗುವುದು ಒಂದು ಆಚರಣೆಯ ಹಂತ ತಲುಪಿದೆ. ಹೀಗೆ ಒಂದು ಗ್ರಾಮದ ದೇವತೆಗಳ ಬಗ್ಗೆ ಆಲೋಚಿಸುವಾಗ ಬದುಕಿನ ಅನೇಕ ಶಾಸ್ತ್ರಗಳ ಅನೇಕ ಮಗ್ಗುಲುಗಳ ಪರಿಚಯವಾಗುತ್ತದೆ. ನನ್ನ ಊರಿನಲ್ಲಿರುವ ಮಲಕನ ಹಳ್ಳಿಯಮ್ಮ ವಿಳ್ಳೇದೆಲೆಗೆ ಹಚ್ಚುವ ಸುಣ್ಣದಲ್ಲಿ ಬಂದವಳಂತೆ. ಮಲಕನಹಳ್ಳಿ ಎಂಬ ಊರಿನಲ್ಲಿದ್ದ ಚೌಡಿಯು ಇಲ್ಲಿನ ಯಾರೋ ಎಲೆಗೆ ಸುಣ್ಣಕೇಳಿ ಪಡೆದಾಗ ಹಿಂದೆ ಬಂದವಳಂತೆ. ಇವಳಿಗೆ ವರ್ಷಕ್ಕೊಂದು ಸಾರಿ, ಕೂಗೋ ಹುಂಜವನ್ನು ತಲೆತರೆದು ಬಿಟ್ಟು ಅದು ಬೆಳೆದಾಗ ಒಪ್ಪಿಸಿ ಸೋನೆ ಮಳೆಗಾಲದಲ್ಲಿ ಅಡಿಗೆ ಮಾಡಿಕ್ಕಿ ಅಲ್ಲೇ ಉಂಡು ಬರುವುದುಂಟು. ಅವಳು ನೆಲೆಸಿದ್ದ

ಊರ ಹೊರಗಿನ ಬಸಿರಿ ಮರವೊಂದು ಈಚೆಗೆ ವಯಸ್ಸಾಗಿ ಬೇರು ಸಡಿಲಾಗಿ ಬಿದ್ದು ಹೋಗಿದ್ದರೂ ಒಲೆ ಉರಿಗಾಗಿ ಅದರ ಕಡ್ಡಿಯನ್ನು ಸಹಾ ತರುತ್ತಿಲ್ಲ. ಮರದ ಬುಡದಲ್ಲಿ ಪೂಜಿಸುತ್ತಿದ್ದ ರೀತಿ, ಸಾಮಾನ್ಯವಾಗಿ ಗದ್ದುಗೆ ಮಾಡಿ ಮೂರು ಬೆಣಚುಕಲ್ಲು ಇಡುವ ಪದ್ಧತಿಯದು. ಈ ಬೆಣಚು ಕಲ್ಲುಗಳು ಸಹಾ ಆದಿಮಾನವನ ಶಿಲಾಯುಗದ ಆಯುಧ ಹೇಳುತ್ತಿರಬೇಕು. ಹೊಟ್ಟೆಪುರದಮ್ಮ ಮತ್ತೊಬ್ಬಳು ಚೌಡಿ. ಅವಳಿಗೆ ಕೋಳಿ ಕುಯಿದು ಎಡೆಮಾಡಿ ತೃಪ್ತಿಗೊಳಿಸದಿದ್ದರೆ ಮದುವೆಯಾದ ಹೆಣ್ಣುಮಕ್ಕಳ ಮಡಿಲಕ್ಕಿಯೊಡನೆ ಅವರ ಗಂಡಂದಿರ ಮನೆಗೆ ಹೋಗಿ ತೊಂದರೆ ಕೊಡುತ್ತಾಳೆಂದು ಇಲ್ಲೆ ಉಳಿಸಿಕೊಳ್ಳಲು ನಮ್ಮೂರ ಹರಿಜನರು ಹಬ್ಬದೋಪಾದಿಯಲ್ಲಿ ಮಾಡುತ್ತಾರೆ. ಪುರವೆಂದರೆ ಹೆಣ್ಣು. ವೈದಿಕ ಸಂಸ್ಕೃತಿಯಲ್ಲಿ ಅನೇಕ ಪುರಗಳನ್ನು ಹಾಳುಮಾಡಿದ ಇಂದ್ರನಿಗೆ ಪುರಂದರನೆಂದು ಹೆಸರುಂಟು. ಹೊಟ್ಟೆ ಎಂಬ ಪುರವನ್ನು ತೃಪ್ತಿಪಡಿಸದಿದ್ದರೆ ಕೊಟ್ಟ ಸಂತಾನಕ್ಕೂ ಕ್ಷೇಮವಲ್ಲ ನಮಗೂ ಕ್ಷೇಮವಲ್ಲ ಎಂಬ ಅಭಿಪ್ರಾಯವು ಹೊಟ್ಟೆಪುರದಮ್ಮ ಎಂಬ ಅಪರೂಪದ ಹೆಸರಿನಲ್ಲಿದೆ. ಯಾವಾಗಲೂ ಹೊಟ್ಟೆಪಾಡಿನಲ್ಲೆ ಇರುವ ಕೀಳು, ಅತಿ ಕೀಳುಜನರು ಸಾಂಕೇತಿಕವಾಗಿ ಉಳಿಸಿಕೊಂಡ ಚೌಡಿ ಸ್ವರೂಪಳಿವಳು. ಆ ಚೌಡಿಯೇ ಹೊಟ್ಟೆ! ಈ ಮೇಲಿನ ಹೆಣ್ಣುದೇವರುಗಳೆಲ್ಲಾ ದೇವರುಗಳೋ ದೆಯ್ಯಗಳೋ ಎಂದು ತುಸು ಆಲೋಚಿಸಿದರೆ ಗಾಳಾಗಿ ಕಾಣುವ ಅಂಶವೆಂದರೆ ಇವರೆಲ್ಲಾ ಬದುಕಿಗೆ ಒಲಿದ ದೇವರುಗಳು; ಮುನಿದರೆ ಬೆದರಿಸುವ ದೆಯ್ಯಗಳೂ ಹೌದು. ಹೀಗಾಗಿ ಇಲ್ಲಿ ದೇವರು ದೆಯ್ಯಗಳಿಗೆ ಅಂತರ ಬಹಳ ಕಡಿಮೆ. ಇವರೆಲ್ಲರೂ ಮಾತೃ ಸ್ವರೂಪರು, ಎಂಬಲ್ಲಿ ಗ್ರಾಮೀಣ ಮೂಲ ಸಮಾಜವು ಮಾತೃಕುಲದ್ದು ಎಂಬರಿವಾಗುತ್ತದೆ. ಮಲೆಲಾಡಿನಲ್ಲಿ ಚೌಡಿ ಹರಕೆಯನ್ನು ದೆಯ್ಯದ ಹರಕೆ ಎಂದೇ ಹೇಳುವುದುಂಟು.

ದಿವ್ ಎಂದರೆ ಬೆಳಕು. ಬೆಳಕೆಂಬ ಮೂಲದಿಂದ ದೇವರ ಕಲ್ಪನೆ ಬಂದದ್ದು. ವಿಶಾಲಾರ್ಥದಲ್ಲಿ ಒಬ್ಬನೇ ದೇವರು ಒಳ್ಳೆಯದನ್ನು ಮಾಡಬಲ್ಲ, ಕೆಟ್ಟದನ್ನು ಮಾಡಬಲ್ಲ. ಇದಕ್ಕೆ ತಿರುಪತಿ ವೆಂಕಟ್ರಮಣನಾಗಲೀ ಧರ್ಮಸ್ಥಳದ ಮಂಜುನಾಥನಾಗಲೀ ಹೊರತಲ್ಲ. ಪಾರ್ವತಿಯನ್ನು ಸೌಮ್ಯಮೂರ್ತಿಯಾಗಿ ದುರ್ಗೆಯನ್ನು ರುದ್ರಮೂರ್ತಿಯಾಗಿ ನೋಡುವ ಬಗೆ ಕೂಡ ಇದೆ. ಹೀಗೆ ಸೌಮ್ಯತೆ ಕಡೆಗೆ ಭಕ್ತಿಯ ಕಡೆಗೆ ಒಲಿದಾಗ ದೇವರಾಗಿ, ರೌದ್ರತೆಯ ಕಡೆಗೆ ಭಯದ ಕಡೆಗೆ ಒಲಿದಾಗ ದೆವ್ವ ಸಾದೃಶ್ಯವಾಗುವ ಮನೋವಿಶ್ಲೇಷಣೆ ಇದರಲ್ಲಿದೆ. ಜಗತ್ತಿನ ಸಾಂಸ್ಕೃತಿಕ ಚಲನೆಯಲ್ಲಿ ಗ್ರೀಸ್, ರೋಂ ಸುತ್ತಲಿನ ಮಧ್ಯ ಏಷಿಯಾ ಮೂಲವು ಹೆಚ್ಚಾಗಿ ಪೂರ್ವದ ಕಡೆಗೆ, ಕ್ವಚಿತ್ತಾಗಿ ಪಶ್ಚಿಮದ ಕಡೆಗೆ ಚದುರಿದ ದಾಖಲೆಗಳಿವೆ. ಹಾಗೆ ಹೊರಟು ಬಂದ ಗಂಡುಗಳು ಭಾರತದಲ್ಲಿ ಕೂಡ ಇಲ್ಲಿನ ಮಾತೃಮೂಲದ ವ್ಯವಸ್ಥೆಗೆ ಹೊಂದಿಕೊಳ್ಳುವಾಗ ಸಾಂಸ್ಕೃತಿಕ ತಳಿಕೆಗಳು ಗಾಢವಾಗಿವೆ. ಹಾಗಾಗಿ ಭಾರತ ಕಪ್ಪು ಬಿಳುಪಿನ ಮಿಶ್ರದೇಶ. ಕ್ರೈಸ್ತ ಮೂಲದ Saitan ಎಂಬುದು ಇಸ್ಲಾಂ ಮೂಲದ Saitan ಎಂಬಿವು ಭಾರತ ಮೂಲದ ದೆವ್ವ ಎಂಬ ಕಲ್ಪನೆಗೆ

ಹತ್ತಿರ ದವಾದರೂ ಇಲ್ಲಿ ದೆವ್ವವು ದೇವ ಮೂಲಕ್ಕೆ ಬೇರಿದ್ದಂತೆ. ಅಲ್ಲಿನ God ಮತ್ತು Saitan ಗಳು ಪರಸ್ಪರ ವಿರುದ್ಧ ಮನೋಬಲವುಳ್ಳವು. ಹೀಗಾಗಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಮೂಲದ ದೇವರು ದೆವ್ವಗಳನ್ನು ಸೂಕ್ಷ್ಮವಾಗಿ ಅವಲೋಕಿಸ ಬೇಕಾಗುತ್ತದೆ. ಅಲ್ಲಿನ Deman ಎನ್ನುವುದು ಇಲ್ಲಿನ ಅಸುರ ಎಂಬ ಪದಕ್ಕೆ ಸಂವಾದಿಯಾಗಿದ್ದು ಮನುಷ್ಯ ಲೋಕದ ಇಬ್ಭಾಗದಂತೆ ಕಾಣುತ್ತದೆ. ದ್ರಾವಿಡ ಪ್ರವೃತ್ತಿಗಳೆಲ್ಲಾ ದೆವ್ವ ಪ್ರಕೃತಿಯಾಗಿ ಭೂಸುರ ಉತ್ತಮಾಂಗರಿಗೆ ಕಂಡಿರಬೇಕು! Evil Spiritಗಳು ಗಾಳಿಮೈಯುಂಡಿದೆ ಎಂದಾದರೆ Witches ಇಲ್ಲಿನ ಪಿಶಾಚಿಗಳಾಗಿತ್ತವೆ. ಹೀಗೆ ದೆವ್ವಲೋಕದಲ್ಲೂ ಮೇಲು ಕೀಳುಗಳುಂಟು. ಸಣ್ಣವು ದೊಡ್ಡವುಗಳುಂಟು. ಎರಡನೆಯದಾಗಿ ನಮ್ಮೂರ ಬಸವಣ್ಣ ಪಶುಮೂಲದ ಸಂಸ್ಕೃತಿಯನ್ನು ಹೇಳುವವನು. ಚಲನೆಯ ಸಮಾಜವು ಕೃಷಿ ರೂಪದಲ್ಲಿ ನೆಲೆನಿಂತಾಗ ಪಶುಪಾಲನೆ ಆರ್ಥಿಕ ಮೂಲವನ್ನು ಪ್ರತಿನಿಧಿಸುತ್ತದೆ. ಆಡುಕುರಿ ದನಕರುಗಳು ವ್ಯಾಪಾರ ಸೌಲಭ್ಯವನ್ನೊಡ್ಡುತ್ತವೆ. ಬಾಣದೇವರನ್ನು ನಮ್ಮ ಊರಿನಲ್ಲಿ ಬಾಣದಯ್ಯನೆಂದೇ ಕರೆಯುತ್ತಾರೆ. ಬಾಣ ಅರ್ಥಾತ್ ಬೇಟೆ ಮೂಲದ ಬಾಣಬಿಲ್ಲು ಪ್ರತಿನಿಧಿಸುವವನು. ಅವನನ್ನು ಶಿವಗಣದಲ್ಲೊಬ್ಬನೆಂದು ಕರೆಯುತ್ತಾರೆ. ಶಿವ, ಶಕ್ತಿ ಗಣ, ಬಿಲ್ಲುಬಾಣ, ಇವೆಲ್ಲವೂ ಆದಿಮೂಲದಿಂದ ಕೃಷಿ ಮೂಲದಲ್ಲಿ ಬಯಲಾಗಿನಿಂತ ಸ್ವರೂಪಗಳು. ಮಾತೃ ಸಮಾಜವನ್ನು ಮನೆಯೊಳಗಿಟ್ಟು ಕೃಷಿಗೆ ಪಿತೃ ಸಮಾಜವು ಹರಡಿಕೊಂಡಾಗ ಅನೇಕ ಬದಲಾದ ಸಾಂಸ್ಕೃತಿಕ ಕ್ರಿಯೆಗಳುಂಟು. ಹಾಗಾಗಿ ಬಾಣದಯ್ಯ ಈಗ ಮೂರು ನಾಮ ಬಳಿದುಕೊಂಡು ಶಂಖ ಜಾಗಟೆಯ ದಾಸಪ್ಪಗಳ ಮನೆತನದಲ್ಲಿದ್ದಾನೆ.

ಇಲ್ಲಿನ ಬಾಣದಯ್ಯ ವೈಷ್ಣವ ಪಂಥದ ಕಡೆ ಯಾವಾಗ ಒಲಿದಿರಬಹುದು ಎಂದು ಊಹಿಸುವುದು ಕಷ್ಟವಲ್ಲ. ಆಳುವ ದೊರೆ ವಿಷ್ಣುವರ್ಧನನಾದಾಗ ಅವನಿಗೆ ಗಾಳಿಬೀಸುವ ಪ್ರಜೆಗಳೂ ಒಲಿದಿರಬೇಕು. ಬಾಣದಯ್ಯನಿರಲಿ ನಮ್ಮೂರ ಮಾರಮ್ಮನೂ ಬ್ರಾಹ್ಮಣೀಕರಣಗೊಂಡಿದ್ದಾಳೆ. ಅಲ್ಲಿನ ಅವಳು ಗ್ರಾಮಭಕ್ತರಿಗೆ ಮಾಂಸ ಮಡ್ಡಿ ತಿನ್ನಬಹುದೆಂದು ರಿಯಾಯಿತಿ ತೋರಿದರೂ ಹಂದಿಯನ್ನು ತಿನ್ನಬೇಡಿ ಎಂದು ಕತ್ತಿ ಮುಟ್ಟಿಸಿಕೊಂಡಳಂತೆ. ನಮ್ಮೂರಲ್ಲಿ ಹಂದಿ ಸಾಕುವುದಿಲ್ಲ. ಹೊರಗಿಂದ ಮಾಂಸ ತಂದು ತಿನ್ನುತ್ತಾರೆ. ಹೀಗೆ ಇಲ್ಲಿನ ದಾಸಪ್ಪದಿರು ಬ್ರಾಹ್ಮಣೀಕರಣಗೊಳ್ಳಲು ಹೋಗಿ ಮಗುಚಿ ಬಿದ್ದು ಶೂದ್ರರಾಗಿಯೇ ಉಳಿದಿದ್ದಾರೆ. ಹಂದಿಯು ಜಗತ್ತಿನಾದ್ಯಂತ ಪ್ರಮುಖ ಆಹಾರ ಸಾಧನವಾಗಿರುವುದು ಕಂಡುಬರುತ್ತದೆ. ಭಾರತದಲ್ಲಿ ವೈದಿಕರು ಶಿವಮೂಲದ ಪ್ರಧಾನ ಆಹಾರ ಹಂದಿಯನ್ನು ವಿಷ್ಣುಮೂಲಕ್ಕೆ ಪಕ್ಷಾಂತರ ಮಾಡುವಾಗ ವರಾಹ ಅವತಾರ ನೀಡಿದ್ದಾರೆ. ವಿಜಯನಗರದ ವೈಭವವು ವರಾಹ ಲಾಂಛನದಲ್ಲಿ ಹಾರಾಡಿರುವುದುಂಟು. ಇದು ಭಾರತದಗಲ ಮುಸಲ್ಮಾನರ ವಿರುದ್ಧ ಹಾರಾಡಿದ ಲಾಂಛನವೆನ್ನುವುದುಂಟು. ಏನಾದರಿರಲಿ ನಮ್ಮೂರ ಮಾರಮ್ಮನೂ ವೈಷ್ಣವ ಲಾಂಛನದ ಹಂದಿಯನ್ನು ಊರಲ್ಲಿ ಸಾಕಬೇಡಿ ಎನ್ನುವುದರೊಡನೆ ಹಂದಿ ತಿನ್ನುವುದನ್ನು ನಿಯಂತ್ರಿಸಲು ನೋಡಿದ್ದಾಳೆ.

ನಮ್ಮೂರ ಮಾರಮ್ಮ ಸಸ್ಯಾಹಾರಿ. ಒರಟು ಕಲ್ಲಿನವಳಾದರೂ ಸೌಮ್ಯಮಾರಿ. ಗ್ರಾಮ ಕಾಯುವವಳು. ಅವಳ ಗುಡಿ ಮುಂದಿರುವ ಕರಿಕಲ್ಲುಗಳೆರಡರ ಮಧ್ಯೆ ಸ್ತಂಭವೊಂದಿದೆ. ಹತ್ತಿರದಲ್ಲಿ ನೋಡಿದರೆ ಬೆತ್ತಲೆ ಹೆಣ್ಣಿನ ಚಿತ್ರವಿದೆ. ಕುಳಿತ ಭಂಗಿಯಲ್ಲಿ ಫಲಮೂಲಗಳಿಗೆ ಕೈ ಅಡ್ಡ ಮಾಡಿಕೊಂಡಿದ್ದಾಳೆ. ಬಸ್ವಣ್ಣ ದೇವರ ಗುಡಿವೊಳಗೆ ನಾಗ ಮಿಥುನದ ಕಲ್ಲುಗಳಿವೆ. ಗುಡಿಹೊರಗೆ ಅಳಿಸಿಹೋದ ಅಕ್ಷರಗಳುಳ್ಳ ಮೂರು ಹಂತದ ಮಾಸ್ತಿಕಲ್ಲುಗಳನ್ನು ಹೋಲುವ ಕಲ್ಲುಗಳಿವೆ. ಅವುಗಳಲ್ಲಿ ಕಾಳಗ ವೀರನದ್ದು ಒಂದು ಹಂತ, ಶಿವಲಿಂಗ ಪೂಜೆ ಮತ್ತೊಂದು ಹಂತ, ತಪಸ್ಸು ಮಾಡಿತ್ತಿರುವ ಮುನಿಯದ್ದು ಇನ್ನೊಂದು ಹಂತ. ಹೀಗೆ ಮಾರಿ, ಸಗ್ಣಹೆಣ್ಣು, ಮುನಿ, ಲಿಂಗಪೂಜೆ, ಕಾಳಗ, ಗಣ, ಪಶು ಮೂಲದ ಬಸವಣ್ಣ ಎಲ್ಲರೂ ಒಂದಾಗಿ ಗ್ರಾಮವೊಂದರಿಂದ ಜಗತ್ತಿನ ಸಂಸ್ಕೃತಿಯ ಕಾಲಕಾಲದ ಚರಿತ್ರೆ ಹೇಳುತ್ತಿದ್ದಾರೆ. ಮೂರನೆಯದಾಗಿ ಚನ್ನಳ್ಳಿಯಮ್ಮನೆಂದು ಕರೆಯುವ ಮಹಾನ್ ಚೌಡಿ ನಮ್ಮ ಹತ್ತಿರದ ಚನ್ನಳ್ಳಿ ಗ್ರಾಮದಲ್ಲುಂಟು. ಎರಡುಕಾಲಿನ ಕೋಳಿ ಬ್ಯಾಟೆಗೆ ಅವಳು ಗಕ್ಕನೆ ಇಳಿಯುವುದಿಲ್ಲ. ನಾಲ್ಕು ಕಾಲಿನ ಹಂದಿಯನ್ನು ಕಂಡರೆ ಅವಳಿಗೆ ಬಲುಪ್ರೀತಿ. ಯಾರಾದರೂ ಹೋಗಿ ಮೊರೆಬಿದ್ದರೆ ಉಳಿಸುತ್ತಾಳೆ. ಅವಳು ತಿರುಗಿ ಬಿದ್ದರೆ ಮನೆಮಠ ಉಳಿಯುವುದಿಲ್ಲವಂತೆ. ನಮ್ಮಜ್ಜ ಹೇಳುತ್ತಿದ್ದ ಚಿಕ್ಕ ಪ್ರಸಂಗವೊಂದರ ಮೂಲಕ ಇವಳ ಸ್ವರೂಪ ಹೇಳುತ್ತೇನೆ. ದಾಯಾದಿಯೊಬ್ಬರ ಗದ್ದೆ ತುಂಡೊಂದನ್ನು ಆಪತ್ತಿನಲ್ಲಿ ಹಣ ಕೊಟ್ಟು ಕೊಂಡಿದ್ದರಂತೆ. ಆಪತ್ತು ತೀರಿಸಿಕೊಂಡ ಮನುಷ್ಯ ಎಷ್ಟೋ ವರುಷಗಳ ಅನಂತರ ನಾನು ಗದ್ದೆಯನ್ನು ಖರೀದಿಗೆ ಕೊಟ್ಟರಲಿಲ್ಲ ಬಿಟ್ಟುಕೊಡು ತಗೋ ನಿನ್ನ ಹಣ ಯಾವನಿಗೆ ಬೇಕು ಎಂದು ಬಂದ. ತೆಗೆದುಕೊಂಡಿದ್ದು ಕೇವಲ ಐವತ್ತು ರೂಪಾಯಿ. ಕಾಲ ದಾಟಿದ್ದು ಐವತ್ತು ವರ್ಷ. ಇದು ಹ್ಯಂಗೆ ಆಗುತ್ತೆ ಎಂದು ಇವರೆಂದರು. ಚನ್ನಳ್ಳಿಯಮ್ಮನಿಗೆ ಹೇಳಿಕೊಳ್ಳುವುದೇ ಸೈ ಎಂದು ಅವನೆಂದ. ಹೀಗೇ ಆಯ್ತು. ಕೈ ಮುಗಿದು ಮೊರೆ ಹೋದವನ ಪ್ರತಿವಾದಿ ಮನೆಯಲ್ಲಿ ದನಕರು ದುಡಿಯುವ ಮಗ ಉದುರಿಹೋದರು. ಅಯ್ಯಯ್ಯೋ ಉಳಿಸವ್ವ ತಪ್ಪು ಮಾಡಿದೆ ಎಂದು ಕೈಮುಗಿದು ಚೌಡಿಗೆ ಹೇಳದವನು ಬಂದ. ನನ್ನನ್ನು ಏನು ಕೇಳ್ತೀಯಾ ಆ ಮಾತಾಯಿಯನ್ನೇ ಕೇಳು. ಎಲ್ಲವನ್ನು ಹೊಟ್ಟೆಗೆ ಹಾಕಿಕೊಂಡು ಸಾಕುತ್ತಾಳೆಂದು ನನ್ನಜ್ಜ ಹೇಳಿದರಂತೆ. ಹೀಗೆ ಚೌಡಿ ಏನು ಮಾಡೀತು ಅದಕ್ಕೂ ಕಣ್ಣಿಲ್ಲವೇ! ನಾವು ಸತ್ಯವಂತರಾಗಿರಬೇಕು ಎಂದು ಲೋಕದ ನೀತಿ ಹೇಳಿದ್ದರು. ಯಾವುದಾದರು ಬೇಲೆ ಬಾಳುವ ಪದಾರ್ಥ ಕಳೆದು ಹೋಯಿತೆನ್ನಿ! ಚನ್ನಳ್ಳಿಯಮ್ಮನಿಗೆ ಒಣಮೆಣಸಿನ ಗೊಡ್ಡುಗಾರ ಅರೆದು ಹಚ್ಚಿದರೆ ಕದ್ದವನು ಉರಿ ಉರಿ ಎಂದು ಕುಣಿದುಕೊಂಡು ಬರುತ್ತಾನೆಂಬುದು ನಂಬಿಕೆ. ಚನ್ನಳ್ಳಿಯಮ್ಮನು ಯಥಾಪ್ರಕಾರ ಮೊಳದುದ್ದದ ಒಂದು ಕಾಡುಕಲ್ಲಿನ ರೂಪದವಳು. ಬಾಳಿ ಬದುಕುವ ಮನುಷ್ಯ ನೆರೆಹೊರೆಯಲ್ಲಿ ನಿಯತ್ತಾಗಿರಬೇಕು. ಹೊಟ್ಟೆ ಕೇಳುತ್ತದೆ ನಿಜ. ಅದನ್ನು ದುಡಿದು ತುಂಬಿಸಬೇಕೇ ಹೊರತು ಕದ್ದು ತುಂಬಿಸಬಾರದು. ಹಾಗೆ ಅಡ್ಡ ದಾರಿ ಹಿಡಿದವರ ಮಾನಸಿಕ ಕ್ಷೋಭೆಯ ನಾಡಿಹಿಡಿದು ಆಸ್ತಿ ಉಳಿಸಿಕೊಳ್ಳುವುದನ್ನು ಮನುಷ್ಯ ಕಂಡುಕೊಂಡಿದ್ದಾನೆ.

ಕದ್ದವನಿಗೂ ಸೇರಿದಂತೆ ಊರಿಗೆಲ್ಲಾ ಕೇಳುವಂತೆಯೇ ಹೇಳಿ ಹರಕೆ ಹೊತ್ತು ಅಮ್ಮನಿಗೆ ಖಾರ ಹಚ್ಚುವುದುಂಟು. ಈ ಕ್ರಿಯೆ ದೇವರ ಮೂಲಕ ಕಳ್ಳನ ಹೊಟ್ಟೆಗೆ ಮುಟ್ಟಿ ನರನಾಡಿಗಳಿಗೆಲ್ಲಾ ಹರಿದು ಕದ್ದಮಾಲನ್ನು ಕಕ್ಕುವುದುಂಟು. ಅದಕ್ಕೂ ಮೊಂಡು ಬಿದ್ದವನು ಅದೇ ದೇವರಿಗೆ ಹರಕೆ ಹೊತ್ತು ಅಂದು ತಪ್ಪಿಸಿಕೊಂಡು ಮಾನ ಉಳಿಸಿಕೊಂಡು ಆನಂತರದಲ್ಲಿ ಆಕೆಯ ಭಕ್ತನಾಗುವುದುಂಟು. ಕುಂದೂರು ಮಠದ ಬಳಿ (ಶಾಂತಿಗ್ರಾಮ ಹೋ-ಹಾಸನ) ಯಿರುವ ಮೆಣೆಯಮ್ಮ ಮಲೆನಾಡ ಮೂಲೆಯನ್ನು ಸಹಾ ಆವರಿಸಿಕೊಂಡು ಭಕ್ತರನ್ನು ಕರೆಸಿಕೊಳ್ಳುವ ಮಹಾನ್ ಚೌಡಿ. ಅವಳಿಗೆ ಕರಿಹೋತ ಎಂದರೆ ಬಲು ಆಸೆ. ಶೂಲಕ್ಕೇರಿಸುವ ಹಂದಿಮರಿ ಕೀರಾಡುತ್ತಿದ್ದರೆ ಬಲು ಖುಷಿ. ಹಿಂದಿನ ವಾತಾವರಣದಂತೆ ಗಾಡಿ ಕಟ್ಟಿಕೊಂಡು ಜೊತೆಗಾಡಿಗಳನ್ನು ಕೂಡಿಸಿಕೊಂಡು ರಾತ್ರಿ ಬೆಳಗೆಲ್ಲಾ ಪ್ರಯಾಣ ಮಾಡಿ ಬೆಳಗಾಗುವಾಗ ದೇವರ ಬಳಿ ಹೋಗಿ ಗಾಡಿಬಿಟ್ಟು ಮುಖ ಮೋರೆ ತೊಳೆದು ಮಠದೊಳಗಿರುವ ಕಲ್ಯಾಣಿಯಲ್ಲಿ ಸ್ನಾನ ಮಡಿಯಾಗಿ ದೇವಿಗೆ ಹಣ್ಣು ಕಾಯಿಮಾಡಿ ಮೊಸರನ್ನ ತಳಿಗೆ ಮಾಡಿ (ಮೊಸರನ್ನ ಆಕೆಯ ಹೊಟ್ಟೆ ತಣ್ಣಗೆ ಮಾಡುತ್ತದಂತೆ) ಬರುವರು. ಬಂದವರು ಹೋತವನ್ನೊ ಹಂದಿಮರಿಯನ್ನೊ ಅಲ್ಲಿಗೆ ಒಯ್ಯುತ್ತಾರೆ. ಬ್ಯಾಬ್ಯಾ ಅನ್ನುವ ಅನೇಕ ಹೋತಗಳು ಇಂಥಾ ಭಕ್ತರಿಂದ ಅಮ್ಮನಿಗೆ ಬಂದಿರುತ್ತವೆ. ಒಂದೇ ಏಟಿಗೆ ಕಂದಲಿಂದ ಕಡಿಯುವ ಶೂರರು ಅಲ್ಲಿರುತ್ತಾರೆ. ಶೂಲ ನೆಟ್ಟು ಹಂದಿಯನ್ನು ಎತ್ತಿಹಾಕಿ ಇರಿಯುವ ನರರು ಇರುತ್ತಾರೆ. ಒಪ್ಪಿಸಿದ ನೈವೇದ್ಯವನ್ನು ಹೊತ್ತು ಗಾಡಿ ಬಳಿ ತಂದು ಹದಮಾಡಿ ಅಡಿಗೆಗೆ ಪ್ರಾರಂಭಿಸುತ್ತಾರೆ. ಆದ ಬಾಡಿನ ಅಡುಗೆ ಅಮ್ಮನ ಗುಡಿ ಮುಂದೆ ಎಡೆಯಾಗುತ್ತದೆ. ಅದನ್ನು ತಿನ್ನುವ ಭಕ್ತರು ಮನುಷ್ಯರಲ್ಲ, ನಾಯಿಗಳು. ತಿಂದೂ ತಿಂದೂ ಬೊಜ್ಜು ಬಂದು ಕೊಬ್ಬಿದ ಕೋಣದಂತಾ ನಾಯಿಗಳಿರುತ್ತವೆ. ಅವು ನೆಣ ಹೆಚ್ಚಾಗಿ ಮುಂದಿನ ವರ್ಷ ಕಾಣದೆ ಸಾಯುವುದಂಟಂತೆ. ಎಡೆ ಹಾಕಿದವರು ಹಿಂದಿರುಗಿ ಬರುವಾಗ ಅರ್ಧ ದಾರಿಗೆ ಉರಿಯುವ ಕೊಳ್ಳಿಯೊಂದನ್ನು ತಂಬಿಗೆ ನೀರನ್ನು ತಂದು ಇದಿರಾಗಿ ಇಬ್ಬರು ಬಂದು ದಾರಿಗೆ ಕೊಳ್ಳಿ ಮಡಗಿ ನೀರು ಉಯಿದು ಎಡೆ ಮಾಡಲು ಹೋದವರನ್ನು ಕರೆದು ಕೊಂಡು ಬರಬೇಕು. ಇಲ್ಲದಿದ್ದರೆ ಅಮ್ಮ ಹಿಂದೆಯೇ ಬಂದು ಬಿಡುತ್ತಾಳೆಂದು ನಂಬಿಕೆ.

ಮಳಲಿ ಗಿಡ್ಡಿ ಹಾಸನ ಕಡೆಯ ಕೆಲವು ಮನೆತನದವರ ದೇವಿಯೂ ಹೌದು. ಚೌಡಿಯೂ ಹೌದು. ಅವಳಿಗೆ ಎರಡು ಕಾಲಿನ ಕೋಳಿಗಿಂತಾ ನಾಲ್ಕು ಕಾಲಿನ ಹೋತಗಳಿಗಿಂತಾ ಹಂದಿಯೇ ಶ್ರೇಷ್ಠ. ಸಾಮಾನ್ಯವಾಗಿ ಹಂದಿಯನ್ನು ಮನೆವೊಳಗೆ ಬೇಯಿಸಿ ಅಡಿಗೆ ಮಾಡುವುದಿಲ್ಲ. ಆದರೆ ಹರಕೆ ಹೋಗುವ ದಿನ ಅಡಿಗೆ ಮನೆಯಲ್ಲಿದ್ದ ಹಳೇ ಮಡಕೆ ಕುಡಿಕೆ ವಸ್ತು ವಿನ್ಯಾಸಗಳನ್ನೆಲ್ಲಾ ಅಟ್ಟದ ಮೇಲೆ ಏರಿಸಬೇಕು. ಹೊಸದಾಗಿ ಮಡಕೆ ತರಬೇಕು. ಒಲೆಪೂಜೆ ಮಾಡಿ ಹೊರಗೆ ಹಂದಿ ಕಡಿದು ದಿನಾ ಕ್ವಾಣೆಯಲ್ಲಿ ಅಡುಗೆ ಮಾಡುವ ಒಲೆಯ ಮೇಲೆ ಎಡಗೆ ಬೇಯಿಸಿ ಮಾಡಬೇಕು. ಬೆಳಗಿನಿಂದ ಅಡುಗೆ

ಮಾಡುವವರು ನಿಷ್ಠೆಯಿಂದ ಇರುವ ಹೆಂಗಸು ಉಪವಾಸದಿಂದ ಇದ್ದು ಅಮ್ಮನಿಗೆ ಪಾಷಾಣದ ಬುತ್ತಿ ಕಟ್ಟಬೇಕು. (ಇಲ್ಲಿ ಪಾಷಾಣವೆಂಬ ಮಾತನ್ನು ಗಮನಿಸಬೇಕು.) ಆಗ ಗಂಡಸು ಪಾಷಾಣವನ್ನು ಹೊತ್ತು ದೇವರಿಗೆ ಹೊರಡಬೇಕು. ಒಂದು ಮೊಸರನ್ನದ ಬುತ್ತಿಯನ್ನು ಕಟ್ಟುವುದುಂಟು. ಅದು ಮಳಲಿಯಮ್ಮನ ಗುಡಿಯಲ್ಲಿರುವ ಕಂಬದ ರಾಯನಿಗಂತೆ. ಅಮ್ಮನಿಗೆ ಹಂದಿ ಮಾಂಸದ ತುಂಡನ್ನು ತಲೆ ಮೇಲಿಟ್ಟು ಪೂಜೆ ಮಾಡುತ್ತಾರೆ. ಎಡೆಹಾಕಿದ ಪಾಷಾಣವು ಪೂಜೆಮಾಡಿ ಹಿಂದಿರುಗಿ ನೋಡಿದರೆ ಮೂರು ಭಾಗವಾಗುತ್ತದೆಂದೂ ಅದರಲ್ಲಿ ಒಂದು ಭಾಗ ಅಲ್ಲಿನ ಗೊಲ್ಲರ ಕುಲದ ಪೂಜಾರಿಗೂ ಮತ್ತೊಂದು ಭಾಗ ಭಕ್ತರಿಗೂ ಮಗದೊಂದು ಭಾಗ ಬಂದ ಜನಕ್ಕೂ ಕೊಡುವುದುಂಟು. ಹಾಸನ ಸುತ್ತಿನ ಕೆಲವು ಮನೆತನಗಳಲ್ಲಿ ಹಂದಿಯನ್ನು ಮನೆಯ ಬಾಗಿಲಲ್ಲಿ ಕಡಿದು ಸಾರಿಸಿ ಗುಡಿಸಿದ ಕ್ವಾಣೆ ಒಲೆ ಮೇಲೆ ಹಂದಿ ತಲೆಯನ್ನು ಇಟ್ಟು ಒಲೆಯನ್ನು ಪೂಜೆ ಮಾಡುವ ಕ್ರಮದಾಚರಣೆಗಳುಂಟು. ಅದಕ್ಕೆ ಒಲೆ ಮೊಸಳೆ ಎನ್ನುತ್ತಾರೆ. ಅಂಥವರ ಮನೆಯಿಂದ ಹೆಣ್ಣುತರಲು ಸ್ವಲ್ಪ ಹಿಂದುಮುಂದು ನೋಡುವ ಗೌಡರುಗಳು ಅದೇ ಸುತ್ತಿನಲ್ಲುಂಟು. (ಉದಾ:ಆಲೂರು ತಾ. ಹೊಸಪುರ ಗ್ರಾಮದವರ ಬಗ್ಗೆ). ಮಳಲಿಯಮ್ಮ ಹಂದಿ ಬೇಡುತ್ತಾಳೆ. ಆಗ ಎಮ್ಮೆ ರೂಪದಲ್ಲಿ ಕನಸಿಗೆ ಕಾಣಿಸಿಕೊಳ್ಳುತ್ತಾಳೆ ಎಂಬುದು ಒಂದು ನಂಬಿಕೆ. ಹಾಗೆಯೇ ಮೆಳೆಯಮ್ಮ ತಲೆಗೆದರಿಕೊಂಡು ಕನಸಿನಲ್ಲಿ ಕಾಣಿಸಿಕೊಳ್ಳುತ್ತಾಳಂತೆ.

ಹೀಗೆ ನಮ್ಮ ಸುತ್ತಿನಲ್ಲಿ ಇರುವ ಈ ದೇವರುಗಳೆಲ್ಲಾ ದೇವರುಗಳೇ ದೆಯ್ಯಗಳೇ ಎಂಬುದು ಚರ್ಚಿಸಬೇಕಾದ ವಿಚಾರ. ಮೆಳೆಯಮ್ಮನ ಎಡೆತಿನ್ನುವ ನಾಯಿಗಳು ಏನನ್ನು ಪ್ರತಿನಿಧಿಸುತ್ತವೆ! ಮುಟ್ಟುಚಿಟ್ಟೆಂದು ಹಂದಿಯ ಬಾಡನ್ನು ಕೊಟ್ಟಗೇಲಿ ಬೇಯಿಸಿ ಅಲ್ಲೇ ತಿಂದು ಒಳಗೆ ಬರುವಾಗ ಒಳಗಿನ ನೀರಿನಲ್ಲಿ ಕೈಬಾಯಿ ತೊಳೆದು ಶುದ್ಧಮಾಡಿಕೊಂಡು ಬರುವವರು ಹರಕೆ ದಿನ ಮಾತ್ರ ಕ್ವಾಣೆ ಒಲೆ ಮೇಲೆ ಮಾಡುವುದೆಂದರೇನು! ಹಾಸನದ ಬಳಿ ಮೊಸಳೆ ಎಂಬ ಊರುಂಟು. ಅದು ಈ ಆಚರಣೆಯನ್ನು ಪ್ರತಿನಿಧಿಸುತ್ತದೆಯೇ! ಮಳಲಿಯಮ್ಮ ಚೋಟುದ್ದ ಮಳಲಿ ಮೀನಿನಾಕಾರದಲ್ಲಿದ್ದಾಳಂತೆ. ಅವಳನ್ನು ನೋಡಬೇಕೆಂದವರಿಗೆ ಪೂಜಾರಿಯು ದಬಾಕಿದಕಲ್ಲು ಎತ್ತಿ ತೋರಿಸುತ್ತಾನಂತೆ. ಕಂಬದ ರಾಯ ಅಲ್ಲಿನ ಹೊಲಸನ್ನು ನೋಡಲಾರದೆ ಮುಖ ತಿರುಗಿ ನಿಂತಿದ್ದಾನಂತೆ. ಇವೆಲ್ಲವೂ ವಿಚಾರಕ್ಕೊಡ್ಡಬೇಕಾದ ಅಂಶಗಳು. ಶುನಕ ಸಂಪ್ರದಾಯವೆನ್ನುವುದು ಭಾರತೀಯ ತತ್ವಶಾಸ್ತ್ರದಲ್ಲಿ ಕೇಳಿ ಬರುವ ವಿಚಾರ. ಮಹಾಭಾರತ ಕತೆಯನ್ನು ನಾರದನು ಪ್ರಾರಂಭಿಸಿದಾಗ ಅಲ್ಲಿದ್ದ ಶುನಕವೊಂದನ್ನು ಹೊಡೆದಟ್ಟುವ ವಿಚಾರವುಂಟು. ಈ ಶುನಕರು ಅವೈದಿಕರಾಗಿದ್ದಿರಬಹುದು. ಅರ್ಜುನನು ಶಿವನೂ ಹಂದಿಗಾಗಿ ಹೋರಾಡಿದ್ದುಂಟು. ಹಂದಿಯ ರೂಪ ತಾಳಿ ವಿಷ್ಣು ಅವತಾರವೆತ್ತಿದ್ದುಂಟು. ಮೀನಿನ ಮೊಸಳೆಯ ರಾಶಿ ಪಂಚಾಂಗಗಳುಂಟು. ಮೀನು ಮೊಸಳೆ ಹಂದಿಗಳೆಲ್ಲಾ 'ವಿಕಾಸ ವಾದ'ಕ್ಕೆ ಸಹಕಾರ ವಾಗುವುದುಂಟು. ಕಂಬದರಾಯನು ಮೂಲದ ಜೈನರ ಸ್ಥಂಬವನ್ನು, ತಾಂತ್ರಿಕರ

ಲಿಂಗವನ್ನು, ಮಳಲಿಗಿಡ್ಡಿಯ ಈಗಿನ ಮೂರ್ತಿಯು ವೈಷ್ಣವ ಪಂಥವನ್ನು ಹೇಳುವುದುಂಟು. ಹೀಗೆ ಚೌಡಿಚಾಮುಂಡಿಯರು ಜೈನ ಬೌದ್ಧ ಸಮಾಜ ವೈದಿಕ ಸಮಾಜಗಳೆಲ್ಲವನ್ನು ಹೇಳುವುದುಂಟು. ಗ್ರಾಮಗಳಲ್ಲಿ ಈಗಲೂ ಇರುವ ಮೂರ್ತಿಗಳ ಸ್ವರೂಪವನ್ನು ಬಿಚ್ಚಿದರೆ ಪೂರ್ವೇತಿಹಾಸ, ಇತಿಹಾಸ, ಮಾನವ ಶಾಸ್ತ್ರ, ಪುರಾಣ ಶಾಸ್ತ್ರಗಳೆಲ್ಲವನ್ನು ಹೇಳುವ ದೆವ್ವ ದೈವಗಳು ಒಂದೇ ತತ್ವದ ಅಭೇದ ಕಲ್ಪನೆಯನ್ನೊದಗಿಸುತ್ತವೆ. ಹರಪ್ಪಾ ಮೊಹೆಂಜದಾರೋಗಳಲ್ಲಿ ಕಾಣುವ ಹರಕು ಮುರುಕು ವಿಗ್ರಹಗಳು, ಫಲಮೂಲದ ಬೆತ್ತಲೆ ವಿಗ್ರಹಗಳು, ಚಿಹ್ನೆಗಳು ಸಹಾ ಪ್ರೋಟೋಜನಾಂಗದ ಕತೆ ಹೇಳುವುದಿಲ್ಲವೆ! ಅಲ್ಲಿನ ಚಿಹ್ನೆಗಳನ್ನು ದ್ರಾವಿಡಮೂಲದ ಅಕ್ಷರಗಳೆಂದು ಕೆಲವರೆಂದರೆ ಮಧ್ಯ ಏಷಿಯಾ ಈಜಿಫ್ಟ್ ಸಂಸ್ಕೃತಿಯಲ್ಲಿ ಹೋಲುವ ಸಂಖ್ಯೆಗಳೆಂದು ಕೆಲವರ ವಾದಗಳುಂಟು. ಹೀಗೆ ಮಾರಮ್ಮ, ಕಲ್ಲಮ್ಮ, ಚೌಡಿ, ದೆಯ್ಯಗಳೆಲ್ಲಾ ಜಗತ್ತಿನ ಚರಿತ್ರೆ ಹೇಳುವುದುಂಟು. ಈ ಲಿಖಿತ ಅಥವಾ ದೃಶ್ಯ ಜಾನಪದಗಳಿಂದ ಗ್ರಾಮ ಮೂಲದ ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ.

ಮೂರ್ತಿ ಸ್ವರೂಪದಲ್ಲಿ ಕಾಣುವ ದೇವ ದೆಯ್ಯ ಚೌಡಿ ಮಾರಿ ಮಸಣಿಯರೆಲ್ಲರ ದೃಶ್ಯ ಮೂಲವನ್ನು ನಾನಿಲ್ಲಿ ಲಿಖಿತ ಜಾನಪದವೆಂದು ಕರೆಯಲಿಚ್ಛಿಸುತ್ತೇನೆ. ಗ್ರಾಮ ಮೂಲದಲ್ಲಿ ದೆವ್ವ, ಪೀಡೆ, ಪಿಶಾಚಿ, ರಣ, ಮುನಿ ಇಂಥವುಗಳ ನೆಲೆಗಳಿವೆ. ಅವುಗಳ ಕತೆಗಳಿವೆ, ವಾಸ್ತವ್ಯಗಳಿವೆ. ಆದರೆ ಅವು ಪ್ರಧಾನವಾಗಿ ಶ್ರವಣ ಮೂಲದವು. ಇವುಗಳನ್ನು ಅಲಿಖಿತ ಜಾನಪದಗಳೆನ್ನಬಹುದು. ಈ ವಿಂಗಡಣೆ ತೆಳುಗೆರೆಯನ್ನೆಳೆಯುವಂತಹದು. ದೃಶ್ಯ ಮೂಲದವುಗಳಲ್ಲಿ ಶ್ರವ್ಯ ಮೂಲದ ಕತೆಗಳಿರುವುದು ನಿಜ. ಆದರೆ ಅದೃಶ್ಯ ಮೂಲದವುಗಳು ಬದುಕಿನಲ್ಲಿ ಭಕ್ತಿಗಾಗಿ ಆಸರೆಗಾಗಿ ಮೊರೆ ಹೋಗುವಂತವಲ್ಲ.

## ೨

(೧) ನನ್ನಜ್ಜ ಹೇಳುತ್ತಿದ್ದರು : ನನ್ನದು ಸಿಂಡುಬೆವರು. ದೆವ್ವ ಮೂಸಿನೋಡುತ್ತದೆ. ಸಿಂಡುಬೆವರನ್ನು ನೋಡಿ ಹತ್ತಿರ ಬರುವುದೇ ಇಲ್ಲ. (೨) ನನ್ನಪ್ಪನು ಕತ್ತಲೆಭೋಗೆಗೆ ಹೆದರದೆ ಬರುತ್ತಿದ್ದರು . 'ಆಯಪ್ಪನು' ಮೆಟ್ಟುಹಾಕಿ ಜಿಯಂಕ ಜಿಯಂಕನೆ ಹಿಂದುರುಗಿ ನೋಡದೆ ಬೀಡಿ ಸೇದುತ್ತಾ ಬರುತ್ತಿದ್ದರೆ ದೆವ್ವ ಹತ್ತಿರ ಬಂದರೂ ಅಡ್ಡಬರುವುದಿಲ್ಲ. ಹಾಗೇ ವಾಪಸ್ಸು ಹೋಗುತ್ತದೆ ಎಂದು ಕತೆ ಕಟ್ಟುತ್ತಿದ್ದರು. ಇಂಥಾ ಕತೆಗಳನ್ನು ನನ್ನಪ್ಪ ಅವರಪ್ಪ ಅವರಪ್ಪನ ಅಪ್ಪ ಅವರ ತಾತ ಮುತ್ತಾತಂದಿರಿಗೂ ಹೇಳುತ್ತಿದ್ದಿರಬೇಕು. (೩) ನಮ್ಮೂರಲ್ಲಿ ಒಬ್ಬ ಸೋಮಣ್ಣನೆಂಬ ರೈತನಿದ್ದ. ಸಂಜೆ ಖರ್ಚಿಗಾಗಿ ಸೌದೆಗಾಡಿಯನ್ನು ಹಗಲು ಪೇಟೆಗೆ ಹೊಡೆಯುತ್ತಿದ್ದ. ರಾತ್ರಿ ತಿಂಗಳು ಬೆಳಕಲ್ಲಿ ಬೇಸಾಯ ಮಾಡಿತ್ತಿದ್ದ. ಸೋಮಣ್ಣ ಒಬ್ನೆ ಸರೊತ್ತಿನಲ್ಲಿ ಉಳ್ತಾ ಇರ್ತಿಯಲ್ಲಾ ದೆವ್ವ ಏನೂ ಮಾಡಕಿಲ್ವ ಎಂದರೆ ಅಯ್ ಅದೇನ್ಮಾಡೀತು! ಬೀಡಿ ಕೇಳುತ್ತಾ; ಕೊಡ್ತಿನಿ. ಸೇದ್ತದೆ. ಹೊಂಟೋಯ್ತದೆ. ಹಿಂದಿರುಗಿ ನೋಡಕಾಗದು,

ಆಯ್ತು! ಎಂದುಬಿಡುತ್ತಿದ್ದ. (೪) ನಮ್ಮೂರಿನಲ್ಲಿ ಒಬ್ಬ ನಮ್ಮ ದಾಯಾದಿ ಇಂಟರ್ ಮೀಡಿಯಟ್ ಮಾಡಿದವರಿದ್ದರು. ನೌಕರಿಗೆ ಹೋಗಲಿಲ್ಲ. ಅವರಪ್ಪ ಕಾಫಿ ಏಲಕ್ಕಿ ತೋಟ ಮಾಡಲು ಕಳುಹಿಸಿದರು. ತೋಟ ಮಾರಿ ಕಳೆದು ಮನೆಗೆ ಬಂದರು. ಅಲ್ಲಾ ಏನಂತೀಯಾ! ಆ 'ತೋಟ' ಮಾಡಿದವರಾರೂ ಉದ್ಧಾರವಾಗಿಲ್ಲ ಬಿಡು. ಅದು ದೆಯ್ಯದ ತೋಟ ಎಂದುಬಿಡುತ್ತಿದ್ದರು. (೫) ನಮ್ಮ ಊರಿನ ಗುಡ್ಡದ ಮೇಲೆ ರಂಗಸ್ವಾಮಿ ಗುಡಿಯಿತ್ತಂತೆ. ಗುಡ್ಡದ ಕಟ್ಟೆಯಲ್ಲಿ ಹಾಕಿದ ಹೆಣದ ವಾಸನೆಯನ್ನು ತಡೆಯಲಾರದೆ ಆಲೂರು ಬಳಿ ಹೋಗಿ ನೆಲೆಸಿತಂತೆ. ಇಗೋ ಅಲ್ಲೊಂದು ಪಾದ ಇಲ್ಲೊಂದು ಪಾದ ಎನ್ನುತ್ತಾರೆ. (೬) ಆ ಜಡೆಮುನಿ ಬೋರೆಮ್ಯಾಲೆ ತಿರುಗ್ತಾ ಇರುತ್ತೆ ಕಂಡ್ಯ. ಅದರ ಹಿಂದುಗಡೆ ದೆಯ್ಯ ಪೀಡೆ ಪಿಶಾಚಿ ಎಲ್ಲಾ ದಂಡುದಂಡಾಗಿ ಹೋಗ್ತಾ ಇರ್ತವೆ. ಅವಕ್ಕೆಲ್ಲಾ ಅದೇ ಮುಂದಾಳಲ್ಲವೆ! ಎನ್ನುತ್ತಾರೆ. (೭) ಒಮ್ಮೆ ಓಲೆಕಾರ ರಂಗಣ್ಣನೆಂಬುವನು ಮಲೆಸೀಮೆ ವ್ಯಾಪಾರಕ್ಕೆ ಹೋಗಿದ್ದ. ಬರುವಾಗ ಕತ್ತಲಲ್ಲಿ ಒಂದು ಮಿಗ ಬಿದ್ದಿತ್ತು. ತೆಗೆದು ಗಾಡಿ ಮ್ಯಾಲೆ ಹಾಕೊಂಡ. ಇವೊತ್ತೊಳ್ಳೆ ದೆಸೆ ಬಿಡು ಅಂತಾ ಬಂದ. ಊರಿಗೆ ಬರೋವೊತ್ಗೆ ಬೆಳಕಾಗಿತ್ತು. ಗಾಡಿಂದ ಎಳೆತಾನೆ! ಕೆಳಗೆ ಹಾಕಿದ್ದೆ ತಡಾ ನಾಯಿ ಆಗೋದೆ! ಅಯ್ಯೋ ಇದೆಲ್ಲ ದೆವ್ವದ ಆಟ ಬಿಡು ಎಂದಾಗ ಊರೋರೆಲ್ಲಾ ನಕ್ಕರು. ಅದನ್ನು ಕುಳುವಾಡಿ ಕೆರೆಕೋಡಿಗೆ ಎಳೆದು ಹಾಕಿ ನೆತ್ತಿಗೆ ಹರಳೆಣ್ಣೆ ಇಸ್ಕೊಂಡು ಹಾಕೆಂದು ಹೋದ. (೮)ಹನುಮಣ್ಣ ಬ್ಯಾಟೆಗೆ ಹೋದನು; ಬರ್ತಾ ಇದ್ದನಾ! ಮೊಲ ಅಡ್ಡ ಬಂತು. ಕುಣ್ಕುಕುಣ್ಕಂದು ಬಂದಾಗ ಎತ್ತಿ ಈಡು ಬಾರಿಸಿದ. ಅಯ್ಯೋ ಕಪ್ಪರೊಂಡೆ ಆಗೋದೆ! ಇದು ದೆಯ್ಯದ ಆಟ ಬಿಡು. (೯) ಆ ಕರಿ ಅತ್ತಿಮರದ ಹತ್ತಿರ ಬರೋವೊತ್ಗೆ ಸರಿಯಾಗಿ ಅಡ್ಡ ಬರೋದೆ ದೆವ್ವ! ನನ್ಗೆ ಒಂದಾ ಎರಡಾ ಎಲ್ಲಾ ಆಗೋಯ್ತು. ಯವ್ವಿ ಕಾಲು ಕೈಯೆಲ್ಲಾ ಹಿಂದುಮುಂದು. ಅಂಬಾರದುದ್ದ ಬೆಳ್ಳಗೆ. ಯವ್ವಿ ಸಳಿಜರ ಎಂಟು ದಿನಾ ಬಿಡ್ಲಿಲ್ಲಾ.

ಇವೆಲ್ಲವೂ ಸಹಾ ಸಾಂಸ್ಕೃತಿಕ ಬದುಕಿನೊಳಗೆ ಮಾನಸಿಕ ಆಸರೆಯನ್ನು ಬೇಡುತ್ತವೆ. ಗಟ್ಟಿ ಮನಸಿನವರಿಗೆ ಹಿಂದೇಟು ಹಾಕುತ್ತವೆ. ತೆಳು ಮನಸಿನವರಿಗೆ ಅಮುಕಿಕೊಳ್ಳುತ್ತವೆ. ಈ ಅಗೋಚರ ಸ್ಥಿತಿಗಳು ನಂಬುವವರಿಗೆ ಎದುರು ಬಂದು ನಿಲ್ಲುತ್ತವೆ. ನಂಬದಿರುವವರಿಗೆ ಹಿಂದಕ್ಕೆ ಹೋಗುತ್ತವೆ. ದೆವ್ವವನ್ನೆ ಹೆದರಿಸುವ ಸಿಂಡು ಬೆವರಿನ ಮನುಷ್ಯ ಅಡವಿಯೊಳಗಿದ್ದು ಊರಿಗೆ ಬಂದು ನೆಲೆ ನಿಂತವನು. ಭಯ ವಿಸ್ಮಯಗಳಿಗೆ ಹೆದರಿದವನಲ್ಲ. ಅದೇ ಮನುಷ್ಯ ಮೆಟ್ಟುಹಾಕಿ ನಡೆವ ಹಂತಕ್ಕೆ ಬಂದಾಗ ಆ ಎಕ್ಕಡ ಮನುಷ್ಯರನ್ನು ಎದುರಿಸುವುದಿರಲಿ ದೆವ್ವವನ್ನು ಸಹಾ ಎದುರಿಸಬಲ್ಲದು. 'ಮೆಟ್ಟನೇಟು ಬಿದ್ದಾವೆಂಬುದು' ಸಾಮಾನ್ಯ ಅವಮಾನದ್ದಲ್ಲ! ಮನುಷ್ಯರೊಡನೆ ಬೆರೆತು ಬೀಡಿ ಸೇದಿ ಹೋಗುವ ದೆವ್ವ ರಾತ್ರಿ ಹಗಲೆನ್ನದೆ ಗೇದುತಿನ್ನುವ ಮನುಷ್ಯನ ಸ್ನೇಹಿತನೂ ಹೌದು. ಅದೇ ಗೆಯ್ಯಲಾರದ ನಾಗರಿಕ ಓದಿದ ಮಗನು ತೋಟಮಾರಿ ದೆಯ್ಯದ ಮೇಲೆ ಹಾಕಿಬಿಡುತ್ತಾನೆ. ರಂಗನಾಥ ಸ್ವಾಮಿಯು ವೈಷ್ಣವ ಮೂಲದವನು. ಶೈವ ಮೂಲದ ಸ್ಮಶಾನದ ಪಿಶಾಚಿಗಳ ಹತ್ತಿರ ನಿಲ್ಲಲಾರದೆ

ಓಡಿಹೋದವನು. ಇಲ್ಲಿ ಹೆಣದ ವಾಸನೆ ಎಂಬುದು ಕಲ್ಲುಸೇವೆ ಎಂಬ ಅಂತ್ಯಕ್ರಿಯೆಯನ್ನು ಬಯಲು ಹೆಣವೆಂಬ ವಿಧಿ ವಿನ್ಯಾಸವನ್ನೇ ಹೇಳುತ್ತಿದ್ದಿರಬೇಕು. ಇದೆಲ್ಲಾ ಸಮಾಜದಲ್ಲಿ ಆಗಿಹೋಗಿರುವ ವಿಚಾರ. ಅನೇಕ ಖಾಯಿಲೆ ಕಸಾಲೆ ಸಾಮೂಹಿಕ ಹೆಣಗಳನ್ನು ಸ್ಮಶಾನ ಕಟ್ಟೆಯಂತಹ ಜಾಗಕ್ಕೆ ಒಟ್ಟಿದಾಗ ದೇವನಾದವನು ಅರಗಿಸಿಕೊಳ್ಳಲಾದೀತೆ! ಅದೇನಿದ್ದರೂ ದೆವ್ವರೂಪದವನು ಮಾತ್ರ ಅರಗಿಸಿಕೊಳ್ಳುವಂತಹದು. ಜಡೆಮುನಿ ಮಾರುದ್ದ ಕೂದಲು ಬಿಟ್ಟು ಕೆಂಡದಂತಹ ಕಣ್ಣು ಬಿಟ್ಟು ಅವರದೇ ಹಾದಿಯಲ್ಲಿ ಆರಬ್ಬರಿಸಿ ಕಲ್ಲುನೀರು ಕರಗೋ ಹೊತ್ತಿನಲ್ಲಿ ಸಂಚರಿಸುತ್ತದಂತೆ. ಅಡ್ಡಸಿಕ್ಕಿದವರನ್ನು ಕಿಮುಕ್ಕನ್ನದೆ ಮುಗಿಸಿ ಬಿಡುತ್ತದ್ದಂತೆ. ಅದೇ ರೀತಿ ಕೊಳ್ಳಿದೆವ್ವಗಳು ತಿರುಗುತ್ತಿರುತ್ತವೆಂಬುದು ಒಂದು ನಂಬಿಕೆ ಉಂಟು. ಇದು ಮೀಥೇನ್ ಅನಿಲ ಕುರಿತ ವಿಚಾರವೂ ಹೌದು. ಮಿಕವೊಂದು ನಾಯಿಯಾಗಿ ಬದಲಾದದ್ದು, ಆದ ಪ್ರಮಾದವೊಂದನ್ನು ದೆವ್ವದ ಮೇಲೆ ಹಾಕುವ ವಿಧಾನ. ಬೇಟೆಯ ಕೋವಿಯಿಂದ ಕಪ್ಪೆರೊಂಡೆಯಂತಾ ಕೆಸರಾದದ್ದು ತಪ್ಪಿಹೋದ ಬೇಟೆಯನ್ನು ಈಡುಗಾರ ಮುಚ್ಚಿಕೊಳ್ಳುವ ವಿಧಾನ. ಅಂಬಾರದುದ್ದ ಕೈಕಾಲು ಹಿಂದುಮುಂದಾಗಿದ್ದ ದೆವ್ವ ಮರದ ನಡುವೆಲಿ, ಅಳುಕುವ ಮನುಷ್ಯನೊಬ್ಬ ಆಕಾಶನೋಡದ ಪರಿ. ಹೀಗೆ ಗ್ರಾಮೀಣರಲ್ಲಿ ದಿನದಿನವೂ ಹಗಲಿರುಳು ಕಾಡುವ ಈ ಪರಂಪರೆಗಳು ಮಾನವನ ಮಾನಸಿಕ ಸ್ಥೈರ್ಯ ಧೈರ್ಯ ಅಳುಕು ಸ್ವಭಾವಗಳನ್ನು ಕುರಿತವುಗಳಾಗಿರುತ್ತವೆ. ನಮ್ಮ ಸಾಕಿದ ಚೌಡಿ ಕಡಿಮೆಯಲ್ಲ! ಹಣ್ಣು ಕದಿಯಲು ಬಂದರೆ ಹಾಗೇ ಮರದ ಬಳಿ ನಿಲ್ಲಿಸಿಕೊಂಡಿರುತ್ತಾಳೆ ಗೊತ್ತಾ! ಎಂದು ನಂಬಿಸಿ ಬಿಡುವವರುಂಟು. ನಮ್ಮ ಚೌಡಿಗೆ ಹೇಳಿಕೊಂಡರೆ ಆ ಕಳೆದುಹೋದ ಮಾಲು ಕುಣಕೊಂಡು ಬರುವುದುಂಟು ಎನ್ನುವರು. ಈ ಹೋದ ವಸ್ತುಗಳಿಗಾಗಿ ಕಾಯೊಂದನ್ನು ಮಂತ್ರಿಸಿ, ನಂಬಿದ ಚೌಡಿಯ ಹೆಸರು ಹೇಳಿ ಧೂಪಹಾಕಿ ಮನೆಮನೆಗೆಲ್ಲ ಬಂದು ಕಾಯಿಮುಟ್ಟಿಕೊಡಿ ಅವರ ಮನೇಲಿ ಕಡುಕತ್ತಿ ಹೋಗಿದೆಯಂತೆ ಎಂದೋ ಮತ್ತೇನೋ ಹೋಗಿದೆಯೆಂದೋ ಕುಳುವಾಡಿ ಕಾಯಿ ಮುಟ್ಟಿಸಿಕೊಂಡು ದೇವರಿಗೆ ಹೆಸರುಹೇಳಿ ಒಡೆಯುವುದುಂಟು.

ಒಮ್ಮೆ ನಮಗೆ ತೋಟಮಾರಿದ ಮಾಲೀಕ ಒಂದು ಗುಟ್ಟುಹೇಳಿದ: ನೋಡಿ ಈ ತೋಟದ ಚೌಡಿ ನನಗೆ ಬಹಳ ಉಪಕಾರ ಮಾಡಿದೆ. ನೀವು ಬಿಡಬೇಡಿ. ಹೆಂಗೆ ಅನ್ನಿ: ಯಾವಾಗಲೂ ಹಾರೆ ಗುದ್ದಲಿ ಪಿಕಾಸಿ ಕಳುವಾಗಿ ಹೋಗ್ತನೆ ಇದ್ದವು. ನಾನೊಂದು ಸಾರಿ ಏನ್ಮಾಡಿದೆ ಅಂದ್ರೆ! ಹೊರಗೆ ಒಂದು ಒಳಕಲ್ಲು ಇತ್ತು. ಸಾಯಿಂಕಾಲ ಆಳೆಲ್ಲಾ ಹೋದ ಮೇಲೆ ಒಳಗೆ ರೂಮಿಗೆ ಉರುಳಿಸ್ದೆ. ಬೆಳಗ್ಗೆ ಬಂದವನೇ ಅಯ್ಯೋ ಯಾರೋ ಒಳಕಲ್ಲು ಕದ್ದವರಲ್ಲ! ಅಂದೆ. ಅಂಥಾ ತೂಕದ್ದು ಯಾರು ಕದ್ದರು! ನಮ್ಮ ಚೌಡಿ ಬಿಡೋಳಲ್ಲ! ಅವಳು ಧೂಪಗೀಪ ಬೇಕಾದ್ರೆ ತರ್ಸಿಕೊಡಲಿ. ಇಲ್ಲಾ ಎಂದರೆ ಎಲ್ಲಾ ಬಂದ್! ಎಂದು ಕೈಮುಗಿದು ಧೂಪ ಹಾಕಿದೆ. ಮತ್ತೆ ಸಾಯಿಂಕಾಲ ಒಳಕಲ್ಲು ತೆಗೆದು ಹೊರಗೆ ಇಟ್ಟೆ. ಕತ್ತಲಾದ ಮೇಲೆ ಕೋಲಿಗೊಂದು ಬಟ್ಟೆ ಕಟ್ಟಿ ಬೆಂಕಿ ಹಚ್ಗೆಂಡು ತೋಟದ ಸುತ್ತ

ದೆವ್ವದಂತಾ ಕೂಗು ಹಾಕಿದೆ. ಬೆಳಗ್ಗೆ ಬಂದರೆ ಆಳು ಕಾಳಿಲ್ಲಾ ಸ್ತಬ್ದ. ಅಯ್ಯೋ ನಮ್ಮವ್ವಾ! ಎಂಥಾ ಚೌಡವ್ವನೇ! ಅಂಥಾ ತೂಕದ ಒಳಕಲ್ಲು ತರಿಸವಳಲ್ಲಾ! ರಾತ್ರಿ ಎಲ್ಲಾ ಏಸಾರಬ್ಬರಿಸ್ತಾ ಇದ್ದಳು! ಎಂದು ಭಯಭಕ್ತಿ ಜಾಸ್ತಿಯಾದವು. ಕಳ್ಳತನ ನಿಂತುಹೋಯಿತು. ಹೀಗೆಂದು ನಕ್ಕು ಹೇಳಿದ್ದರು.

ಇದು ತನ್ನದನ್ನು ಮಾನವ ಉಳಿಸಿಕೊಳ್ಳುವ ರೀತಿ. ಭಯ ಹುಟ್ಟಿಸಿ ಮನುಷ್ಯರನ್ನು ತಿದ್ದುವ ರೀತಿಯಿದೇನೊ ಹೌದು. ಅದೇ ಭಯವನ್ನು ಮತ್ತೊಂದು ರೀತಿ ಬಲ್ಲವರು ದೀನದಲಿತರ ಬಗ್ಗೆ ಶೂದ್ರಾತಿ ಶೂದ್ರರ ಬಗ್ಗೆ ಈ ಹಿಂದಿನ ಸಮಾಜದಲ್ಲಿ, ಈಗಿನ ಸಮಾಜದಲ್ಲಿ ಬಿತ್ತಿದ್ದಾರೆ. ಬಿತ್ತುತ್ತಲೇ ಇದ್ದಾರೆ. ದೇವಸ್ಥಾನಗಳಲ್ಲಿ ದೇವರ ಹಿಂದೆ ಕುಳಿತು ಮಾತಾಡಿ ನಂಬಿಸಿ ಸುಲಿಗೆ ಮಾಡಿದ್ದಾರೆ. ಬಾವಿವೊಳಗೆ ಗುಂಗುಂ ಎಂದು ಭಯ ಬಿತ್ತಿ ದೆವ್ವದ ಮೇಲೆ ದೇವರು ಛೂಬಿಟ್ಟು ಸುಲಿದಿದ್ದಾರೆ. ಇದೆಲ್ಲವನ್ನು ಚಾಣಕ್ಯ ನಂತವರೆ ತಮ್ಮ ರಾಜ್ಯ ಶಾಸ್ತ್ರ ಅರ್ಥಶಾಸ್ತ್ರಗಳಲ್ಲಿ ದಾಖಲಿಸಿದ್ದಾರೆ. ಇದರಿಂದ ಸಮಾಜವು ಯಾವ ಸ್ಥಿತಿಗೆ ಮುಟ್ಟಿತು ! ತಿಳಿದವರು ತಿಳಿಯದವರನ್ನು ಮುಗ್ಧರನ್ನು ದೆವ್ವದ ಮೂಲಕ ಬೆದರಿಸಿ ದೇವರ ಮೂಲಕ ಕಸಿದುಕೊಂಡಿದ್ದಾರೆ. ಒಮ್ಮೆ ದೇವಾಲಯಗಳು ಇಂಥಾ ಸಂಪತ್ತನ್ನು ತರುವ ಮಾರ್ಗಗಳಾಗಿದ್ದವಂತೆ. ಧರ್ಮಸ್ಥಳದ ಅಣ್ಣಪ್ಪನು ಶೂದ್ರರ ದೆಯ್ಯನಾದರೂ ಊರ ಹೊರಗೆ ನಿಂತು ಇಂಥಾ ವಸೂಲಿಯನ್ನು ಶತಶತಮಾನಗಳಿಂದ ಮಾಡಿಕೊಟ್ಟಿದ್ದಾನೆ. ಅವನು ದೇವರಿಗೆ ಬಂಟನಾಗಿ ಕೆಲಸ ಮಾಡಿದ್ದಾನೆ. ದೆಯ್ಯ ಎಂಬ ಪದವನ್ನು ಮಲೆನಾಡಿನಲ್ಲಿ ಈಗಲೂ ದೇವರು ಎಂಬ ಪದಕ್ಕೆ ಸಂವಾದಿಯಾಗಿ ಬಳಸುತ್ತಾರೆ. ರಾಮ ಭೂತೇಶ್ವರ ರಾಮೇದೇವರು ಎಂದು ಎರಡೂ ಪದಗಳನ್ನು ಬಳಸುವುದುಂಟು. ಇನ್ನು ಹರೆಯದವರು ಸತ್ತಾಗ ರಣವಾಗಿ ಕಾಡುವುದು. ದೆವ್ವವಾಗಿ ಯಾರಿಗೊ ಹಿಡಿದುಕೊಳ್ಳುವುದು. ಇವೆಲ್ಲವೂ ಮಾನಸಿಕ ಚಿಕಿತ್ಸೆಗೆ ಸಂಬಂಧಿಸಿದ ವಿಚಾರಗಳಾಗುತ್ತವೆ. ಬಲವಾದ ದೇವರ ಮುಂದೆ ಅಂಥವರನ್ನು ನಿಲ್ಲಿಸಿ ಪೂಜಾರಿ ನಜ್ಜಾಗುಜ್ಜ ಹೊಡೆದು ಹಿಂಸೆ ಕೊಡುವುದುಂಟು. ಇಂಥಾ ನಂಬಿಕೆಗಳನ್ನು ಮೂಢ ನಂಬಿಕೆಗಳಾಗಿ ಬೆಳೆಸಿದ ಸಮಾಜವನ್ನು ತಿದ್ದುವುದು ವಿದ್ಯಾವಂತರಿಗೆ ಸೇರಿದ್ದು. ಇದನ್ನೆ ಸಮಾಜ ಕಾರ್ಯವೆನ್ನುವುದು. ಅನೇಕ ಶತಮಾನಗಳಿಂದ ಅನೇಕ ನಂಬಿಕೆಗಳನ್ನು ಮೂಢನಂಬಿಕೆಗಾಗಿ ಪರಿವರ್ತಿಸಿಕೊಂಡು ಅದರಲ್ಲೂ ತಿಂದುಂಡ ಸಂಗತಿಗಳು ಬಹಳ ಉಂಟು. ಅಕ್ಷರ ಬಲ್ಲಂಥವರು ಇಂಥಾ ಕೆಲಸ ಮಾಡಿದ್ದಾರೆ. ಹರೆಯದಲ್ಲಿ ಸತ್ತವನೊಬ್ಬನಿಗೆ 'ವೀರಗಾರ'ನೆಂದು ಕರೆದು ಗ್ರಾಮೀಣರು ಬದುಕಿರುವ ಮಗನ ಮದುವೆಯಾಗುವಾಗ ಸತ್ತವನಿಗೂ ಹೊಸ ಮದುವೆ ಮಾಡುತ್ತಾರೆ. ಇದೊಂದು ಆಚರಣೆಯಷ್ಟೆ. ಅದೇ ಮದುವೆಯನ್ನು ಗೋಕರ್ಣದಲ್ಲಿ ಅಕ್ಷರ ಬಲ್ಲ ಶಾಸ್ತ್ರಿಗಳು ಅವರ ಪುಸ್ತಕದಲ್ಲಿ ಗುರುತಿಸಿಕೊಂಡಿದ್ದ ಯಾವುದೋ ಹುಡುಗಿಯ ಸತ್ತ ಜಾತಕಕ್ಕೆ ಹೊಂದಿಸಿ ಮದುವೆ ಮಾಡಿ ಹಣ ಕೀಳುತ್ತಾರೆ. ಹೇಗಿದೆ ! ದೆವ್ವ ದೇವರುಗಳನ್ನು ಹಿಡಿದು ಆಡುವ ಆಟ ! ಪಂಪ ರನ್ನ ವ್ಯಾಸ ವಾಲ್ಮೀಕಿ ಷೇಕ್ಸ್‌ಪಿಯರ್‌ಗಳಂಥ ಮಹಾಕವಿಗಳು ಇಂಥಾ

ಆಟ ಆಡಿಲ್ಲ. ಅಂತಾ ಆಟವನ್ನು ಸುಖ ಸಂಸ್ಕೃತಿಯ ವೀರರು ಆಡಿದ್ದಾರೆ. ಮಹಾಕವಿಗಳಾದರೋ ಭೀಭತ್ಸರಸವನ್ನು ತರಲು ತಮ್ಮಗಳ ಕಾಲದ ರಣಭೀಭತ್ಸವನ್ನು ನಮ್ಮ ಮುಂದಿಡಲು ದೆವ್ವ ಭೂತ ಪಿಶಾಚಿಗಳನ್ನು ಬಡಿದೆಬ್ಬಿಸುತ್ತಾರೆ. ಅದೇ ಭಯಭೀತಿಯನ್ನು ವರ್ಣೋತ್ತಮರು ಲಿಖಿತ ಅಲಿಖಿತ ಪರಂಪರೆಯಲ್ಲಿ ಸಮಾಜಕ್ಕೆ ಬಿತ್ತುತ್ತಾ ಹೋಗಿದ್ದಾರೆ. ಬಿತ್ತುತ್ತಲೇ ಇದ್ದಾರೆ.

# ೫. ದೆವ್ವ ಸಂಬಂಧಿ ನಂಬುಗೆಗಳು

ಡಾ || ವೀರಣ್ಣ ದಂಡೆ

---

ದೆವ್ವ ಭಯದ ಪ್ರತೀಕ. ಜನಪದರ ಮಾನಸಿಕ ಭಯವೇ ದೆವ್ವದ ಬಗೆಗಿನ ನಾನಾ ನಂಬಿಕೆಗಳಿಗೆ ಕಾರಣವಾಗಿದೆ. ರೋಚಕವಾದ, ಅರ್ಥೈಸಲಾಗದ ದೆವ್ವ ಸಂಬಂಧಿ ಕಲ್ಪನೆಗಳು ಜನಪದ ಕಥೆಗಳಲ್ಲಿ ಆಶಯಗಳ ರೂಪದಲ್ಲಿ ಗೋಚರಿಸುತ್ತವೆ ಎಂಬುದನ್ನು ಲೇಖಕರು ಸಾಧಾರವಾಗಿ ವ್ಯಾಖ್ಯಾನಿಸಿದ್ದಾರೆ. ಸಂಪಾದಕ

---

ದೆವ್ವ ಇಡೀ ಪ್ರಪಂಚದ ತುಂಬ ಮನುಷ್ಯನ ಮೆದುಳು, ಮನಸ್ಸುಗಳನ್ನು ಆವರಿಸಿಕೊಂಡು ಬಂದ ಒಂದು ನಂಬುಗೆ. ದೆವ್ವದ ಕಲ್ಪನೆ ಇಲ್ಲದ ಜನಾಂಗವೇ ಇಲ್ಲವೆಂದು ತೋರುತ್ತದೆ. ಮನುಷ್ಯ ನಂಬಿದ ಸಾವಿರಾರು ನಂಬುಗೆಗಳಲ್ಲಿ ದೇವರು ಮತ್ತು ದೆವ್ವ ಅತ್ಯಂತ ಅಪಾಯಕಾರಿ ಮತ್ತಿ ಅನರ್ಥಕಾರಿ ನಂಬುಗೆಗಳು. ಇವು ಮನುಷ್ಯನ ದೇಹ, ಮನಸ್ಸು ಮತ್ತು ಸಂಪತ್ತನ್ನು ಹಾಳುಮಾಡುವ ನಂಬುಗೆಗಳಾಗಿವೆ.

ದೆವ್ವವನ್ನು ಕುರಿತ ಸಂಗತಿಗಳನ್ನು ಗಮನಿಸುತ್ತ ಹೋದರೆ, ನಾನಾ ಬಗೆಯ ವಿಶ್ವಕೋಶಗಳಲ್ಲಿ, ಮಹತ್ವದ ಗ್ರಂಥಗಳಲ್ಲಿ ಸುದೀರ್ಘವಾದ ಮಾಹಿತಿ ಇರುವುದನ್ನು ಗಮನಿಸುತ್ತೇವೆ. ಕರ್ನಾಟಕದಲ್ಲಿಯೇ ಉಡುಪಿ ಸುತ್ತ ಮುತ್ತ ತುಳುನಾಡು ಪ್ರದೇಶದಲ್ಲಿ ಭೂತಾರಾಧನೆಯ ದೊಡ್ಡ ಪರಂಪರೆಯೇ ಇರುವುದನ್ನು ನಾವು ಗಮನಿಸುತ್ತೇವೆ. ಕೇಳುತ್ತಾ ಹೋದಂತೆ ಪ್ರತಿಯೊಬ್ಬ ಮನುಷ್ಯನೂ ತನಗೆ ಗೊತ್ತಿರುವ ದೆವ್ವದ ಪರಿಚಯವನ್ನು ಹೇಳುತ್ತಾ ಹೋಗುತ್ತಾನೆ. ದೆವ್ವನ ಪರಿಚಯವಿಲ್ಲದ ಮನುಷ್ಯನೆ ಈ ಪ್ರಪಂಚದಲ್ಲಿ ದೊರೆಯಲಾರ. ಹೀಗಾಗಿ ದೆವ್ವದ ಬಗೆಗೆ ದೊರೆಯುವ ನಂಬುಗೆಗಳು, ಈ ನಂಬುಗೆಗಳನ್ನಾಧರಿಸಿದ ಸತ್ಯ ಘಟನೆಗಳೆಂದೇ ಹೇಳುವ ನಾನಾಬಗೆಯ ಕಥೆಗಳು ಪ್ರತಿಯೊಂದು ಊರಿನಲ್ಲಿ ದೊರೆಯುತ್ತವೆ.

ಈ ಹಿನ್ನೆಲೆಯಲ್ಲಿ ನಮ್ಮ ಸುತ್ತಲೂ ಇರುವ ಜನಗಳ ದೆವ್ವದ ಕುರಿತು ನಂಬಿಕೆಗಳಿಗೆ ಈ ಪ್ರಬಂಧವನ್ನು ಸೀಮಿತಗೊಳಿಸಿದ್ದೇನೆ. ಈ ದೆವ್ವದ ಬಗೆಗಿನ ನಂಬುಕೆಗಳನ್ನು ಕಲೆಹಾಕುತ್ತಾ ಹೋದಂತೆ, ಜನಪದ ಕಥೆಗಳ ಅನೇಕ ಆಶಯಗಳು ನೆನಪಿಗೆ ಬರುತ್ತಾ ಹೋದವು. ಹೀಗಾಗಿ ದೆವ್ವಕುರಿತ ನಂಬುಗೆಗಳನ್ನು ಜನಪದ ಕಥೆಗಳ ಜೊತೆಯಲ್ಲಿ ಆನ್ವಯಿಕವಾಗಿ ಇಲ್ಲಿ ಚರ್ಚಿಸಲು ಪ್ರಯತ್ನಿಸಿದ್ದೇನೆ.

ಈಗ ನಾವು ದೆವ್ವವನ್ನು ನಂಬಿದ ಪರಿ ಹೇಗಿದೆ ಎಂಬುದನ್ನು ನೋಡೋಣ: ೧೯೮೨ರಲ್ಲಿ ಕಲಬುರ್ಗಿ ಜಿಲ್ಲೆಯ ತಾಲೂಕಾ ಸ್ಥಳವಾದ ಆಳಂದದ ಮಹಾವಿದ್ಯಾಲಯ ವೊಂದರಲ್ಲಿ ನೌಕರಿ ದೊರಕಿ ಅಲ್ಲಿಗೆ ಹೋಗಬೇಕಾಗಿ ಬಂತು. ವಾಸಿಸಲು ಒಂದು

ಖೋಲಿ ಬಾಡಿಗೆಗೆ ಹಿಡಿಯಲು ಹೋದರೆ ೯೦ ರೂ. ಬಾಡಿಗೆಗೆ ಒಂದು ದೊಡ್ಡ ಮನೆಯಲ್ಲಿ ಎರಡು ಖೋಲಿಗಳು ದೊರಕಿದವು. ನಾವು ನಾಲ್ಕು ಜನ ಸ್ನೇಹಿತರು ಅದರಲ್ಲಿ ಉಳಿದುಕೊಂಡೆವು. ಆ ಮನೆ ಸು. ೧೦-೧೩ ಕೋಣೆಗಳುಳ್ಳ ಬಹುದೊಡ್ಡ ಮನೆ. ಬೃಹತ್ತಾದ ತಲಬಾಗಿಲು, ಕರಿಕಲ್ಲಿನ ಮನೆ. ಆದರೆ ಆ ಮನೆಯಲ್ಲಿ ಮನೆಯವರು ವಾಸಿಸುತ್ತಲೇ ಇರಲಿಲ್ಲ. ಅವರು ತಮ್ಮ ಮನೆಯ ಮಗ್ಗುಲಿಗೆ ಒಂದೆರಡು ಚಪ್ಪರ ಹಾಕಿಕೊಂಡು ವಾಸವಾಗಿದ್ದರು.

ಇದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದ ನಾವು ಮೊದಲ ರಾತ್ರಿಯನ್ನು ಅತ್ಯಂತ ಉತ್ಸಾಹದಿಂದಲೇ ಕಳೆದೆವು. ಹಾಡುವುದು, ಕುಣಿಯುವುದು ಎಲ್ಲ ಆಯಿತು. ರಾತ್ರಿ ೧೨ ಗಂಟೆ ಸುಮಾರಿಗೆಲ್ಲ ಬಸ್‌ಸ್ಟ್ಯಾಂಡ್ ಕಡೆ ಹೋಗಿ ಚಹಾ ಕುಡಿದು ಬಂದೆವು. ಎಂದಿನಂತೆ ಕಾಲೇಜಿಗೆ ಹೋಗಿಬಂದೆವು.

ನಂತರ ದಾರಿಯಲ್ಲಿ ಬಂದ ಜನ ನಮ್ಮನ್ನು ದುರುಗುಟ್ಟಿ ನೋಡತೊಡಗಿದರು. ಕೆಲವರು ನಮ್ಮನ್ನು ಬಯ್ಯಲೂ ತೊಡಗಿದರು. ಆ ಮನೆಯಲ್ಲಿ ದೆವ್ವವಿದೆಯೆಂದೂ ಅದಕ್ಕಾಗಿಯೇ ಮನೆಕಟ್ಟಿಸಿ ನಾಲ್ಕು ವರ್ಷವಾದರೂ ಮನೆಯ ಮಾಲಿಕರು ಅದರಲ್ಲಿ ವಾಸವಾಗಿಲ್ಲವೆಂದೂ ಹೇಳಿದರು. ನಾವೆಲ್ಲಾ ಅದನ್ನು ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ. ಆದರೆ ನಾವು ಕಳೆದ ರಾತ್ರಿ ಮಾಡಿದ ದಾಂಧಲೆಗೆ ಸುತ್ತಮುತ್ತಲಿನ ಮನೆಯವರು ರಾತ್ರಿ ಹೆದರಿಕೊಂಡು, ದೆವ್ವಗಳೇ ಹಾಡುತ್ತ ಕುಣಿಯುತ್ತಿವೆ ಎಂದು ಭಾವಿಸಿದ್ದರಂತೆ. ಅಂದು ರಾತ್ರಿ ಅವರೆಲ್ಲ ನಿದ್ರೆಯೇ ಮಾಡಿರಲಿಲ್ಲವೆಂಬುದು ನಮಗೆ ಆಮೇಲೆ ತಿಳಿದು ಬಂದ ಸಂಗತಿ.

ಒಂದೆರಡು ದಿನಗಳಲ್ಲಿ ಆ ಮನೆಯವರನ್ನು ಸೂಕ್ಷ್ಮವಾಗಿ ಗಮನಿಸತೊಡಗಿದೆವು. ಮುಂಜಾನೆ ಸ್ನಾನದ ನಂತರ ಮನೆಯವರು ಯಾರಾದರೂ ಒಬ್ಬರು ಈ ಮನೆಯೊಳಗೆ ಬಂದು, ಯಾವಾಗಲು ಮುಚ್ಚಿರುತ್ತಿದ್ದ ಕೋಣೆಯ ಬಾಗಿಲು ತೆರೆದು, ಒಳಗೆ ಹೋಗಿ ಕೆಲಹೊತ್ತಿನ ನಂತರ ಹೊರಬರುತ್ತಿದ್ದರು. ನಂತರ ನಾವು ಶೋಧಿಸಿದ್ದು - ಒಳಗಡೆ ಪೂಜೆಸಲ್ಲಿಸಿ ಬರುತ್ತಾರೆ ಎಂದು.

ನಮ್ಮ ಕುತೂಹಲದ ಶೋಧದ ಮುಂದೆ ಅವರ ಸಂಗತಿಗಳೆಲ್ಲ ನಮಗೆ ಬಹುಬೇಗನೆ ದೊರೆಯಲಾರಂಭಿಸಿದವು. ಅವರ ಮನೆಯ ಮಗಳೊಬ್ಬಳು ಆ ಕೋಣೆಯಲ್ಲಿ ದುರ್ಮರಣಕ್ಕೆ ಈಡಾಗಿದ್ದಳಂತೆ. ಆ ಸ್ಥಳದಲ್ಲಿ ಅವಳ ಭಾವಚಿತ್ರ ಹಾಕಿ ಭಕ್ತಿಭಾವದಿಂದ ಪೂಜೆಸಲ್ಲಿಸುವ ಕಾರಣವೆಂದರೆ, ಆಕೆ ದೆವ್ವವಾಗಿದ್ದಾಳೆ ಎಂಬುದು. ಹೀಗಾಗಿಯೇ ಅಂತಹ ದೊಡ್ಡ ವಠಾರದ ಮನೆಯನ್ನು ತೊರೆದು ಕೀಲಿಹಾಕಿ, ಮಗ್ಗುಲಲ್ಲಿ ಚಪ್ಪರ ಹಾಕಿಕೊಂಡು ವಾಸಮಾಡಿದ ಸಂಗತಿ ತಿಳಿಯಿತು.

ನಾವೇನೂ ಜಗ್ಗಲಿಲ್ಲ. ದೆವ್ವಿನ ಭಯವೂ ಇರಲಿಲ್ಲ. ಆ ಊರಲ್ಲಿ ಬೇರೆಡೆ ಬಾಡಿಗೆ

ಖೋಲಿಗಳು ಸಿಗುವ ಹಾಗಿರಲಿಲ್ಲ. ಆದರೆ ಮುಂದೆ ನಡೆದದ್ದು ಆಶ್ಚರ್ಯದ ಸಂಗತಿ. ತಿಂಗಳೆರಡು ತಿಂಗಳು ಕಳೆದಂತೆ, ಆ ಮನೆಯ ಹುಡುಗರು ನಮ್ಮ ಜೊತೆ ಬಹಳ ಹೊತ್ತಿನವರೆಗೆ ಇರತೊಡಗಿದರು. ಬರಬರುತ್ತ ಮನೆಯವರೆಲ್ಲ ತಲಬಾಗಿಲ ಒಳಗಡೆ ಢಳೆಜಗಳಲ್ಲಿ ಕುಳಿತುಕೊಳ್ಳತೊಡಗಿದರು. ರಾತ್ರಿ ೯, ೧೦ ರವರೆಗೆ ಹರಟೆ ಹೊಡೆಯುವುದು ನಡೆಯಿತು. ಮುಂದೆ ಅಲ್ಲಿಯೇ ರಾತ್ರಿ ಮನೆಯ ಹುಡುಗರು ಮಲಗತೊಡಗಿದರು. ಕೆಲ ದಿನಗಳ ನಂತರ ಅವರ ತಂದೆ - ತಾಯಿಗಳು ಢಳೆಜಗಳಲ್ಲಿ ಮಲಗತೊಡಗಿದರು.

ಒಂದು ವರ್ಷ ಕಳೆಯಿತು. ಆ ಮನೆಯ ಇತರ ಖೋಲಿಗಳಿಗೂ ಜನ ಬಾಡಿಗೆದಾರರಾಗಿ ಬರಲು ತೊಡಗಿದರು. ಆ ಮನೆಯವರು ಸಾವಕಾಶವಾಗಿ ಈ ಮನೆಗೆ ಹೊಂದಿಕೊಳ್ಳ ತೊಡಗಿದರು. ಮತ್ತೆ ಒಂದು ವರ್ಷ ಕಳೆಯಿತು. ರಜೆಗೆ ಊರಿಗೆ ಹೋದ ನಮಗೆ ಪುನಃ ಅಲ್ಲಿ ಖೋಲಿಗಳು ದೊರೆಯಲಿಲ್ಲ, ಮನೆಯವರು ಚಪ್ಪರಗಳಿಂದ ಈ ಕರಿಕಲ್ಲಿನ ಮನೆಗೆ ಸ್ಥಳಾಂತರವಾಗಿದ್ದರು. ನಂತರ ನಾವು ಆ ಮನೆಗೆ ಹೋದರೆ ನಮಗೆ ತಲಬಾಗಿಲಲ್ಲಿಯೇ ಕೂಡ್ರಿಸಿ ಹೊರ ಕಳಿಸುವ ವ್ಯವಸ್ಥೆಯಾಯಿತು.

ಇದೊಂದು ದೆವ್ವದ ಬಗೆಗಿನ ನಂಬುಗೆಯ ನಿದರ್ಶನ. ದೆವ್ವ ಭಯದ ಕಾರಣವಾದ ಒಂದು ಕಲ್ಪನೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸತ್ತವರ ಅದರಲ್ಲೂ ದುರ್ಮರಣಕ್ಕೀಡಾದವರು ದೆವ್ವವಾಗುತ್ತಾರೆ, ತಮ್ಮ ಮನೆಯವರಿಗೇ ಬಡಕೊಳ್ಳುತ್ತಾರೆ ಎಂಬ ಅಂಶ ಇಲ್ಲಿ ಕೆಲಸಮಾಡಿದೆ. ಮನೆಯವರು ಕೇವಲ ಹಗಲು ಹೊತ್ತಿನಲ್ಲಿ ಮಾತ್ರ ಆ ಮನೆಯಲ್ಲಿ ಪ್ರವೇಶ ಮಾಡುತ್ತಿದ್ದುದು, ದೆವ್ವಗಳು ರಾತ್ರಿ ಸಂಚರಿಸುತ್ತವೆ ಎಂಬ ನಂಬುಗೆಗೆ ಕಾರಣವಾಗಿದೆ. ಜೊತೆಗೆ ಪೂಜೆ, ಪುನಸ್ಕಾರಗಳಿಂದ ದೆವ್ವಗಳು ಸಂತೃಪ್ತಿಪಡುತ್ತವೆ ಎಂಬುದರಿಂದಲೇ ಅವರು - ದಿನನಿತ್ಯ ಪೂಜೆಸಲ್ಲಿಸುವ ಕ್ರಮ ಅವಲಂಬನೆಯಾಗಿದೆ.

ಈ ಅಂಶಗಳನ್ನು ಗಮನಿಸಿದಾಗ ಅವರು ಮನೆಬಿಡಲು ಕಾರಣ ದೆವ್ವದ ಮಾನಸಿಕ ಭಯವೇ. ಅಂದರೆ ದೆವ್ವ ಭಯದ ಪ್ರತೀಕ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಆ ಮನೆಯವರು ಸುದೀರ್ಘ ಕಾಲದವರೆಗೆ ಪರೀಕ್ಷಿಸಿ ನೋಡಿ, ಸಾವಾಕಾಶವಾಗಿ ಮನಸ್ಸಿನ ಭಯ ಕಳೆದುಕೊಳ್ಳುತ್ತಾ, ಸುಮಾರು ಎರಡು ವರ್ಷಗಳ ನಂತರ ದೆವ್ವದ ಭಯದಿಂದ ಪೂರ್ತಿ ಬಿಡುಗಡೆ ಹೊಂದಿದ್ದು ನಮಗೆ ಅವರ ನಡತೆಯಿಂದ ಮನೆಯ ಬದಲಾವಣೆಯಿಂದ ಸ್ಪಷ್ಟವಾಗುತ್ತದೆ. ಬಾಡಿಗೆದಾರರಿಗೆ ಏನೂ ಮಾಡದ ದೆವ್ವ ತಮಗೆ ಏನೂ ಮಾಡದೆಂಬ ನಂಬುಗೆ ವಿಶ್ವಾಸವಾಗಿ, ದೆವ್ವದ ನಂಬುಗೆಯನ್ನೇ ಕಳೆದುಕೊಂಡ ನಿದರ್ಶನವಿದು. ಇಡೀ ದೆವ್ವದ ಕಲ್ಪನೆ ಮತ್ತು ಪರಿಹಾರ ನೀತಿ ಈ ಘಟನೆಯಲ್ಲಿರುವುದು ಗಮನಾರ್ಹ ಸಂಗತಿ.

## ೧. ಸತ್ತವರು ದೆವ್ವಾಗುವುದು :

ದೆವ್ವದ ಕಲ್ಪನೆ ಸತ್ತವನ ಆತ್ಮ ತೊಡುವ ರೂಪ ಎಂಬಂತೆ ಇದೆ. ಅತಿಲೋಭ, ಸಂಸಾರದಲ್ಲಿ ಆಸೆ ಉಳ್ಳವನು, ಮದುವೆಯಾದ ಯುವಕ-ಯುವತಿ, ಬಾಣಂತಿ, ತೀರ ಕೆಟ್ಟ ಸ್ವಭಾವದವರು, ಲಂಬಾಣಿ ಹೆಂಗಸು - ಇವರೆಲ್ಲ ತೀರಿಕೊಂಡರೆ ದೆವ್ವವಾಗುತ್ತಾರೆಂಬ ಸಾಮಾನ್ಯ ನಂಬುಗೆ ಇದೆ. ಮತ್ತು ಯಾರೇ ಆಗಲಿ - ಅಕಾಲಿಕ ಅಥವಾ ದುರ್ಮರಣಕ್ಕೆ ಈಡಾದರೆ ಅಂಥವರ ಆತ್ಮಗಳು ಅತ್ಯಂತ ಕೆಟ್ಟ ದೆವ್ವಗಳಾಗುತ್ತವೆ ಎಂದು ಜನರ ವಿಶ್ವಾಸ.

ಈ ಮೇಲೆ ಉಲ್ಲೇಖಿಸಿದವರು ತೀರಿಕೊಂಡು, ಶವಸಂಸ್ಕಾರ ಆದ ಹೊಸದರಲ್ಲಿ - ಅಂದರೆ ಅದೇ ದಿನದಿಂದಲೇ ಆಗಬಹುದು - ದೆವ್ವವಾಗಿ ಪರಿಣಮಿಸುತ್ತಾರೆಂಬ ನಂಬುಗೆ ಬಲವಾಗಿದೆ. ಹೀಗೆ ಸತ್ತವರು ಬೇರೆ ಯಾವುದೇ ಆಕಾರದಲ್ಲಿ ಕಾಣದೆ ಅವೆಲ್ಲ ತಮ್ಮ ಜೀವಂತ ಅವಧಿಯಲ್ಲಿದ್ದ ಸಮೀಪದ ಸಂಬಂಧಿಗಳನ್ನು ಬಡಿದುಕೊಳ್ಳುತ್ತವೆ. ಇದಕ್ಕೆ ದೆವ್ವ ಮೈಮೇಲೆ ಬರುವುದು ಎನ್ನುತ್ತಾರೆ. ಕುಣಿಯ ಸಮೀಪದಿಂದ ಹಾಯ್ದು ಹೋಗುವಾಗ ಯಾರ್‍ಯಾದರೂ ಹೆದರಿಕೊಂಡರೆ ಅಂಥವರಿಗೆ ದೆವ್ವ ಬಡಿದುಕೊಳ್ಳುತ್ತದೆ ಎನ್ನುತ್ತಾರೆ. ವಿಶೇಷವಾಗಿ ಯುವಕ ಯುವತಿಯರು ಮದುವೆ ಇಲ್ಲದೆ ತೀರಿಕೊಂಡಾಗ, ಜೀವನದಲ್ಲಿ ತಾನು ಬಯಸಿದ ಆ ವ್ಯಕ್ತಿಯನ್ನೆ ದೆವ್ವಾಗಿ ಕಾಡುತ್ತಾರೆ. ಲೋಭಿ ತಾನು ಸಾಲ ಕೊಟ್ಟವರನ್ನು ಬಡಿದುಕೊಳ್ಳುತ್ತಾನೆ. ಬಾಣಂತಿ - ಮನೆಯವರಿಗೆ ಬಡಿದುಕೊಂಡು ತನ್ನ ಮಗುವಿನ ಜೋಪಾನದ ಬಗ್ಗೆ ಎಚ್ಚರಿಕೆ ಕೊಡಬಹುದು. ಇಲ್ಲವೆ ಆ ಮಗುವನ್ನೇ ತನ್ನತ್ತ ಕರೆದುಕೊಂಡು ಹೋಗಬಹುದಾಗಿದೆ.

ಹೀಗೆ ಸತ್ತವರು ಕೂಡಲೇ ದೆವ್ವಾಗುವ ನಂಬುಗೆಯ ಒಂದು ಪ್ರಕಾರವಿದ್ದು, ಕೆಲ ಸುಲಭವಾದ ಪರಿಹಾರದ ಮಾರ್ಗಗಳೂ ಇವೆ :

೧. ಹೆಣ ಹೂಳುವಾಗ ಅವರ ಬಯಕೆಯ ಪದಾರ್ಥಗಳನ್ನು ಕುಣಿಯಲ್ಲಿಯೇ ಹಾಕುವುದು.

೨. ಬಯಕೆಯ ಪದಾರ್ಥಗಳನ್ನು ನೈವೇದ್ಯ ರೂಪದಲ್ಲಿ ಅರ್ಪಿಸುವುದು.

೩. ಕುಣಿಯ ಮೇಲೆ ಯಾವುದಾದರೂ ಸಸ್ಯ ನೆಡುವುದು. ಸತ್ತವರ ಆತ್ಮಗಳು ಈ ವೃಕ್ಷದಲ್ಲಿಯೇ ವಾಸವಾಗುವವು ಎಂಬ ನಂಬುಗೆ ಇದೆ.

## ೨. ದೆವ್ವವೇ ಮಗುವಾಗಿ ಜನಿಸುವುದು :

ಅಪರೂಪಕ್ಕೆ ದೆವ್ವಗಳೇ ಮಕ್ಕಳಾಗಿ ಹುಟ್ಟುವವೆಂಬ ನಂಬುಗೆಯೂ ಕಾಣಿಸುತ್ತದೆ. ಮಹಾರಾಷ್ಟ್ರದ ನಿಲಂಗಾ ತಾಲೂಕಿನ ಸಂಗಾರೆಡ್ಡಿವಾಡಿ - ಎಂಬ ಊರಿನ ವೃತ್ತಾಂತ ಒಂದು ಹೀಗಿದೆ : ಒಬ್ಬ ಹೆಣ್ಣುಮಗಳಿಗೆ ಚೊಚ್ಚಲ ಮಗುವೊಂದು ಜನಿಸಿತು. ತಿಂಗಳೊಪ್ಪತ್ತು ಕಳೆದ ಮೇಲೆ, ತಾಯಿ ಊಟ ಮಾಡಲು ಕುಳಿತಾಗ ಒಂದು ದಿನ ಇದ್ದಕ್ಕಿದ್ದಂತೆ ಕೂಸು ಬೃಹತ್ಕಾರ

ತಾಳಿ, ತಾಯಿಯ ಊಟವನ್ನು ತಾನೇ ತಿಂದಿತು. ಮತ್ತೆ ಈ ಸಂಗತಿ ಯಾರ ಮುಂದಾದರೂ ಹೇಳಿದರೆ, ನಿನ್ನನ್ನೇ ತಿನ್ನುವುದಾಗಿ ಹೆದರಿಸಿತು.

ಪ್ರತಿ ದಿನವೂ ಅದು ಊಟದ ವೇಳೆಯಲ್ಲಿ ಹೀಗೆಯೇ ಆಕಾರ ತಾಳಿ, ತಾಯಿಯ ಊಟ ತಿನ್ನುತ್ತ ನಡೆಯಿತು. ಅವಳ ದೇಹ ಕೃಶವಾಗತೊಡಗಿತು. ಇದನ್ನು ಗಮನಿಸಿದ ಆ ಹೆಣ್ಣುಮಗಳ ತಾಯಿ ಕಾರಣ ಕೇಳಿದಾಗ, ನಾನು ಏನನ್ನೂ ಹೇಳಲಾರೆ, ನಾನು ಊಟಕ್ಕೆ ಕುಳಿತಾಗ ಬಾಗಿಲು ಸಂದಿಯಿಂದ ಗಮನಿಸು ಎಂದಳು. ತಾಯಿ ಹಾಗೇ ಮಾಡಿದಳು. ಕೂಸು ದೆವ್ವಾಗಿ ತನ್ನ ಮಗಳ ಆಹಾರ ತಿನ್ನುವುದನ್ನು, ನಂತರ ಮಗುವಾಗುವುದನ್ನು ಗಮನಿಸಿದಳು. ಅತ್ಯಂತ ಚಾಣಾಕ್ಷತನದಿಂದ ಕೂಸಿಗೆ ಎರೆಯುವ ನೆಪದಲ್ಲಿ ಕುದಿಯುವ ನೀರು ಹಾಕಿ, ಕುತ್ತಿಗೆ ಹಿಸುಕಿ ಕೂಸನ್ನು ಕೊಂದಳು. ಹೀಗೆ ದೆವ್ವಿನಿಂದ ಮಗಳನ್ನು ಪಾರುಮಾಡಿದಳು.

ಇಂತಹ ರೋಚಕವಾದ, ಪ್ರಚಲಿತ ನಂಬುಗೆಗಳನ್ನೂ ಮೀರಿದ, ಅರ್ಥೈಸಲು ಬಾರದ ದೆವ್ವದ ಬಗೆಗಿನ ಕಥೆಗಳು ನಮ್ಮಲ್ಲಿ ಸಾಕಷ್ಟು ದೊರೆಯುತ್ತವೆ. ಇಂಥಲ್ಲಿ ನಮ್ಮ ತರ್ಕವೂ ಒಂದುಕಡೆ ನಿಲ್ಲುವ ಸಾಧ್ಯತೆಯಿದೆ. ಈ ಬಗೆಯ ಘಟನೆಗಳನ್ನು ವ್ಯಾಪಕವಾಗಿ ಸಂಗ್ರಹಿಸಿ, ಅಭ್ಯಸಿಸಿದರೆ, ಈ ಪರಿಕಲ್ಪನೆಯ ಬಗ್ಗೆ ಅರಿತುಕೊಳ್ಳಲು ನಮಗೆ ಸಹಾಯವಾಗುತ್ತದೆ.

### ೩. ದ್ರವ್ಯ - ದೆವ್ವವಾಗುವುದು :

ದ್ರವ್ಯದ ಮೇಲೆ ಆಸೆವುಳ್ಳವರು ದೆವ್ವಾಗಿ ಮನೆಯಲ್ಲಿಯೇ ವಾಸಿಸುವರೆಂಬ ನಂಬುಗೆಯ ಜೊತೆಗೆ, ಹೂಳಿಟ್ಟ ಸಂಪತ್ತೇ ಬಹಳ ವರ್ಷಗಳ ನಂತರ ದೆವ್ವಾಗಿ ಪರಿಣಮಿಸುವುದೆಂಬ ನಂಬುಗೆಯೂ ಇದೆ. ಅಂಥ ದ್ರವ್ಯವಿರುವ ಸ್ಥಳದಿಂದ ಯಾರಾದರೂ ಹಾಯ್ದು ಹೋಗುತ್ತಿದ್ದರೆ, ನಾ ಬರ್‍ತೀನಿ, ನಾ ಬರ್‍ತೀನಿ, ಎಂದು ಕೂಗುತ್ತದಂತೆ. ಸಾಮಾನ್ಯವಾಗಿ ಅದು ಕೂಗುವುದು ರಾತ್ರಿ ಹಾಗೂ ನಡು ಮಧ್ಯಾಹ್ನದಲ್ಲಿ. ಧೈರ್ಯವಿಲ್ಲದವರು ಈ ಕೂಗು ಕೇಳಿ ದೆವ್ವೆಂದು ತಿಳಿದು ಹೆದರಿಕೊಂಡರೆ ಅಂಥವರು ಜ್ವರಬಂದು ಹಾಸಿಗೆ ಹಿಡಿಯುತ್ತಾರಂತೆ. ಧೈರ್ಯವಿದ್ದವರು ಬರ್‍ತೀನಿ ಎಂದು ಕೇಳುತ್ತಾರಂತೆ. ಅದು ತನಗೆ ಬೇಕಾದುದನ್ನು ಹೇಳುತ್ತದಂತೆ. ಕುರಿ, ಕೋಳಿ ಅಥವಾ ವಿಶೇಷವಾದ ಆಹಾರ ಕೇಳಬಹುದು. ಅದನ್ನು ಅರ್ಪಿಸಿದಾಗ ದ್ರವ್ಯದ ಗಂಟು ಕಾಣಿಸಿಕೊಳ್ಳುತ್ತದೆ, ಇಲ್ಲವೆ ಅಗೆದು ತೆಗೆಯಬೇಕು.

ಈ ಸಮಯದಲ್ಲಿ ಹೆದರಿಕೊಂಡರೆ ದೆವ್ವ ಹಿಡಿಯುತ್ತದೆ ಎಂಬ ನಂಬುಗೆ ಇದೆ. ಈ ಬಗೆಯ ದ್ರವ್ಯಕ್ಕಾಗಿ ಮನುಷ್ಯರಿಗೇ ಬಲಿಕೊಟ್ಟ ಕಥೆಗಳೂ ದೊರೆಯುತ್ತವೆ.

### ೪. ಹಳೆಯ ದೆವ್ವಗಳು :

ಇವುಗಳನ್ನು ಭೂತಗಳು, ಪಿಶಾಚಿಗಳು, ಪ್ರೇತಗಳು ಎಂಬ ನಾನಾ ಹೆಸರುಗಳಿಂದ

ಕರೆಯಲಾಗುತ್ತದೆ. ಭೂತಗಳು ಮಾಟ ಬಲ್ಲ ಮಾಟಗಾರರ ಕೈವಶವಾಗಿರುತ್ತವೆಂಬ ನಂಬುಗೆ ಇದೆ. ಪಿಶಾಚಿಗಳು - ಮಧ್ಯರಾತ್ರಿ ತಿರುಗಾಡುವ, ಜನರನ್ನು ಪೀಡಿಸುವ, ಕಲ್ಪನೆಗಳಿವೆ. ಪ್ರೇತಗಳು ಸ್ಮಶಾನದಲ್ಲಿ ವಾಸವಾಗುವುದು ಎಂಬ ಕಲ್ಪನೆ ಇದೆ.

ಇಂತಹ ಹಳೆಯ ದೆವ್ವಗಳ ನೂರಾರು ಕಥೆಗಳು ನಮಗೆ ಕೇಳಲು ದೊರೆಯುತ್ತವೆ : ದೆವ್ವಗಳ ಪಾದಗಳು ಹಿಂದು ಮುಂದಾಗಿರುತ್ತವೆ. ಬೇಕಾದ ಆಕಾರಗಳನ್ನು ಪಡೆಯುತ್ತವೆ. ಹೆಚ್ಚಾಗಿ ಎಮ್ಮೆ, ಕೋಣ, ಕುರಿ ಮುಂತಾದ ಆಕಾರಗಳಲ್ಲಿ ಕಾಣುತ್ತವೆ. ಹುಣಸೆಮರ, ಆಲದಮರ, ಹಳೆಯಬಾವಿ, ನಾಲಾಗಳು ಮುಂತಾಗಿ ನೀರಿರುವ ಸ್ಥಳಗಳಲ್ಲಿ ವಾಸಿಸುತ್ತವೆ. ದೆವ್ವಗಳು ಒಲಿಸಿಕೊಂಡ ಜನರ ಗುಲಾಮಗಳಾಗಿ ಬೇಡಿದ್ದನ್ನು ತಂದುಕೊಡುತ್ತಿರುತ್ತವೆ. ಮೆಳ್ಳಗಣ್ಣನವರಿಗೆ, ಕಾಲುಮುಂದಾಗಿ ಹುಟ್ಟಿದವರಿಗೆ - ಕಾಣುತ್ತವೆ. ಮುಂತಾಗಿ ನೂರಾರು, ಸಾವಿರಾರು ನಂಬುಗೆಗಳು ಇಂತಹ ದೆವ್ವಗಳಿಗೆ ಸಂಬಂಧಿಸಿ ದೊರೆಯುತ್ತವೆ.

ಇಂತಹ ಹಳೆಯ ದೆವ್ವಗಳಿಗೆ ಸಂಬಂಧಿಸಿದ ನಂಬುಗೆಗಳು ಆಶಯಗಳ ರೂಪಗಳಲ್ಲಿ ಜನಪದ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ದೆವ್ವದ ಬಗೆಗಿನ ಅನೇಕ ನಂಬುಗೆಗಳನ್ನು ಘಟನೆಗಳನ್ನು ಸಂಗ್ರಹಿಸುತ್ತ ಹೋದಂತೆ, ಜನಪದ ಕಥೆಗಳಲ್ಲಿ ಕಾಣುವ ಅನೇಕ ಪಾತ್ರಗಳು, ಘಟನೆಗಳು - ನನ್ನ ನೆನಪಿಗೆ ಬರುತ್ತ ಹೋದವು. ನಾವು ಅರ್ಥ ಬರೆಯಲು ಸಾಧ್ಯವಾಗದ ಅನೇಕ ಪಾತ್ರಗಳು, ಘಟನೆಗಳು - ದೆವ್ವದ ಸ್ವಭಾವ ಮತ್ತು ಕ್ರಿಯೆಗಳ ಅಭ್ಯಾಸದ ಹಿನ್ನೆಲೆಯಲ್ಲಿ ಒಂದು ಅರ್ಥ ಪಡೆಯಬಹುದೆಂದು ಅನ್ನಿಸತೊಡಗಿತ್ತು. ಆ ವ್ಯಕ್ತಿಗಳೂ ದೆವ್ವದ ಕಲ್ಪನೆಗಳಂತೆ ಮಾನವನ ಮಾನಸಿಕ ವಿಭ್ರಮೆಗಳೇ ಇರಬೇಕೆಂಬ ಅನುಮಾನವೂ ಬರುತ್ತದೆ. ಆದರೆ ಜನಪದರು ಅವುಗಳನ್ನು ಅತ್ಯಂತ ಕಲಾತ್ಮಕವಾಗಿ ಕಥೆಗಳಲ್ಲಿ ನಿರೂಪಿಸಿರುವುದು ನಮಗೆ ಅಚ್ಚರಿಯನ್ನುಂಟು ಮಾಡುವಂತಿದೆ. ಜಲಗನ್ನೆಯರು, ನೆಲಗನ್ನೆಯರು, ವೃಕ್ಷಗನ್ನೆಯರು, ದೇವಗನ್ನೆಯರು ಗಂಧರ್ವಸ್ತ್ರೀಯರು - ಈ ಎಲ್ಲಾ ವ್ಯಕ್ತಿಗಳು ಆದಿಮಾನವನ ಯಾವುದೋ ಕಾಲದ, ದೆವ್ವಿನಂತಹ ಹಳೆಯ ಆತ್ಮದ ಪ್ರತೀಕಗಳ ಕಲ್ಪನೆಗಳೇ ಆಗಿರಬೇಕೆನಿಸುತ್ತದೆ. ಅವೆಲ್ಲವುಗಳನ್ನು - ಹಳೆಯ ದೆವ್ವಗಳ ಬಗೆಗೆ ನಮ್ಮ ಜನಪದರಲ್ಲಿರುವ ಸಾವಿರಾರು ನಂಬಿಗೆ ಮತ್ತು ಘಟನೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದೆನಿಸುತ್ತದೆ.

## ಎಣ್ಣೆ ಮತ್ತು ದೆವ್ವ :

ಎಣ್ಣೆಯ ಪದಾರ್ಥಗಳಿಗೂ ದೆವ್ವಿಗೂ ನಂಟು ಕಲ್ಪಿಸುವ ಅನೇಕ ಕಲ್ಪನೆಗಳು ಜನಪದರದಲ್ಲಿವೆ. ಗಾಣಿಗರು ಗಾಣ ಹೂಡುವಲ್ಲಿ ದೆವ್ವಗಳು ವಾಸಿಸುತ್ತವೆ ಎಂಬ ನಂಬುಗೆ ಇದೆ. ಆದರಲ್ಲೂ ಹಾಳುಬಿದ್ದ ಗಾಣಬರಿಗಳಲ್ಲಿ ದೆವ್ವಗಳು ವಾಸವಾಗಿರುತ್ತವಂತೆ. ಅದಕ್ಕಾಗಿ ಎಣ್ಣೆ ಪದಾರ್ಥಗಳನ್ನು ಹೊರಗಿನಿಂದ ಮನೆಯಲ್ಲಿ ತರುವಾಗ, ವಿಶೇಷವಾಗಿ ಸೀಮೆದಾಟಿ ಬರುವಾಗ ಒಮ್ಮೆಲೇ ಮನೆಯಲ್ಲಿ ತರಬಾರದು, ಬರಬಾರದು. ಕಟ್ಟೆಯ

ಮೇಲೆ ಇಟ್ಟು, ಕೈಕಾಲು ತೊಳೆದುಕೊಂಡು, ಸ್ವಲ್ಪ ಹೊತ್ತು ಕುಳಿತು ನಂತರ ಒಳಗೆ ಬರಬೇಕು ಎಂಬ ನಂಬುಗೆ ಇದೆ. ದೆವ್ವಗಳು ಬಡಿದುಕೊಂಡಾಗ, ಅವುಗಳು ವಾಸವಾಗಿರುವವೆಂಬ ಸ್ಥಳದಲ್ಲಿ ವಿಶೇಷವಾಗಿ ಎಣ್ಣೋಳಗಿ ನೈವೇದ್ಯ, ಎಣ್ಣೆದೀಪ ಅರ್ಪಿಸುವ ನಂಬುಗೆ ನಮ್ಮಲಿದೆ. ಒಂದು ಕಥೆಯಲ್ಲಿ ಒಬ್ಬ ಸಾಹುಕಾರನ ಆಳುಗಳು ಎಣ್ಣೆ ಡಬ್ಬಗಳನ್ನು ಹೊತ್ತು ತರುತ್ತಿದ್ದರು. ಬಿಸಿಲಿನಲ್ಲಿ ಎಣ್ಣೆ ಕರಗಿ, ತಿಳಿಯಾಗಿ - ಅಲುಗಾಡಿ ಸಪ್ಪಳವಾಗಲು, ಡಬ್ಬಿಯಲ್ಲಿ ದೆವ್ವವೇ ಹೊಕ್ಕಿದೆ ಎಂದು ತಿಳಿದ ಆಳುಗಳು, ಡಬ್ಬಗಳನ್ನು ಒಗೆದು, ಕಲ್ಲುಹಾಕಿ ಮನೆಗೆ ತಂದರು. ಇನ್ನೊಂದು ಸಲ ಕಣಕಿ ಹೇರಿದ ಗಾಡಿಗಳು, ಗಾಲಿಗೆ ಎಣ್ಣೆ ಕಡಿಮೆಯಾಗಿ ಸಪ್ಪಳವಾಗುತ್ತಿರಲು - ದೆವ್ವ ಹೊಕ್ಕಿದೆಯೆಂದು ಭಾವಿಸಿ ಕಣಕಿ ಗಾಡಿಗೆ ಉರಿ ಹಚ್ಚಿದರು (ಮಾದರಿ ೧೦೦೨).

## ಲೋಹ ಮತ್ತು ದೆವ್ವ:

ದೆವ್ವವು ಲೋಹಕೆ ಹೆದರುವುದು ಎಂಬ ನಂಬಿಕೆ ಸಾಮಾನ್ಯವಾಗಿದೆ. ಬಾಣಂತಿಯ ಮಗ್ಗುಲಿಗೆ ಲೋಹದ ಅಸ್ತ್ರವಿಡುವುದು, ಮದುಮಕ್ಕಳ ಕೈಯಲ್ಲಿ ಲೋಹದ ಸಾಮಾನು ಕೊಡುವುದು, ಭೂಮ ಒಯ್ಯುವ ಸಮಯದಲ್ಲಿ ಕೊಡ್ಲಿ, ಹತಿಯಾರದಂತಹ ವಸ್ತುವನ್ನು ಬಗಲಲ್ಲಿ ಹಿಡಯುವುದು, ಎಣ್ಣೋಳಗಿ ಇತ್ಯಾದಿ ಎಣ್ಣೆ ಪ್ರಮುಖ ಬುತ್ತಿಯಲ್ಲಿ ಲೋಹದ ಚೂರು, ಇದ್ದಲಿ ಮುಂತಾದವನ್ನು ಇಡುವುದು ಇವೆಲ್ಲಾ ಲೋಹಕ್ಕೂ ದೆವ್ವಿಗೂ ಇರುವ ಸಂಬಂಧವನ್ನು ಹೇಳುತ್ತವೆ. ಒಂದು ಜನಪದ ಕಥೆಯಲ್ಲಿ - ದಾರಿಯಲ್ಲಿ ನಾವಿದನೊಬ್ಬನಿಗೆ ದೆವ್ವ ಗಂಟುಬೀಳಲು, ಮೂಗು ಕೊಯ್ಯುತ್ತೇನೆಂದು ಚಾಕು ತೆಗೆದಾಗ ದೆವ್ವ ಅಂಜಿ ಓಡಿಹೋದ ಕಥೆ - ದೆವ್ವವು ಲೋಹದ ವಸ್ತುಗಳಿಗೆ (ಅಸ್ತ್ರಗಳಿಗೆ) ಹೆದರುತ್ತದೆ ಎಂಬ ನಂಬುಗೆಯನ್ನವಲಂಬಿಸಿದೆ.

## ವೃಕ್ಷಗನ್ನಿಕೆಯರು ಮತ್ತು ದೆವ್ವ:

ದೆವ್ವಗಳು ವೃಕ್ಷದಲ್ಲಿ ವಾಸವಾಗುತ್ತವೆ ಎಂಬ ಸಾಮಾನ್ಯ ನಂಬುಗೆ ಇದೆ. ಆಲದಮರ, ಹುಣಸೆ ಮರ, ಜಾಲಿಮರಗಳಲ್ಲಿ ವಾಸವಾಗಿರುವ ಸಂಗತಿ ಸಾಮಾನ್ಯ. ಈ ನಂಬುಗೆಯ ಕಾರಣದಿಂದಾಗಿಯೇ ಅನೇಕ ಜನಪದ ಕಥೆಗಳಲ್ಲಿ ವಿಶೇಷವಾಗಿ ಮಲತಾಯಿ ಮಕ್ಕಳಿಗೆ ಕಾಡುತ್ತಿದ್ದರೆ, ಅಂತಹ ಮಕ್ಕಳ 'ಸತ್ತತಾಯಿ' ವೃಕ್ಷದಿಂದ ಬಂದು ಅವರು ಬೇಡಿದ್ದನ್ನು ಕೊಡುವ, ಅವರ ಸಹಾಯಕ್ಕೆ ನಿಲ್ಲುವ ಘಟನೆಗಳುಳ್ಳ ಕಥೆಗಳು ನಮ್ಮಲ್ಲಿ ಸಾಕಷ್ಟು ದೊರೆಯುತ್ತವೆ. ಹೆಣ್ಣು ಸಿಂಡ್ರೆಲ್ಲಾ ಮತ್ತು ಗಂಡು ಸಿಂಡ್ರೆಲ್ಲಾ - ಎರಡೂ ಬಗೆಯ ಕಥೆಗಳಲ್ಲಿ - ಮಲತಾಯಿಯ ಸಹಾಯಕ್ಕೆ ಬರುವ ಅತಿಮಾನುಷ ಹೆಣ್ಣು - ಗಿಡದಿಂದ ಪ್ರತ್ಯಕ್ಷವಾಗಿ ಸಹಾಯ ಮಾಡುತ್ತಾಳೆ.

ಸಿಂಡ್ರೆಲ್ಲಾ (೫೧೦ಎ) ಕಥೆಯಲ್ಲಿ ರಾಜಕುಮಾರನೊಬ್ಬ ಹೆಂಡತಿಯನ್ನಾರಿಸಲು

ಚಲುವೆಯರ ಸಭೆ ಕೂಡಿಸುತ್ತಾನೆ. ಸಹಾಯಕ್ಕೆ ಬಂದ ಹೆಣ್ಣು (ದೇವಿ) ಮಲಮಗಳಿಗೆ ಹೊಳೆಯುವ ಉಡುಗೆ - ತೊಡುಗೆ ಒದಗಿಸಿ, ರಥ ಏರಿಸಿ ರಾಜಕುಮಾರ ಕರೆದ ಸುಂದರಿಯರ ಸಭೆಗೆ ಕಳುಹಿಸುತ್ತಾಳೆ.

ಮಾದರಿ ೫೧೧- ಒಕ್ಕಣ್ಣು ಇಕ್ಕಣ್ಣು ಮುಕ್ಕಣ್ಣು, ಎಂಬಲ್ಲಿ ಮಲಮಗಳನ್ನು ಮಲತಾಯಿ ಕಾಡುತ್ತಾಳೆ. ಮಲಮಗಳು ಅಡವಿಯಲ್ಲಿ ದನಕಾಯುತ್ತಿರುವಾಗ ಶಿವಪಾರ್ವತಿ ಬಂದು ಅಲ್ಲಿರುವ ಬೇವಿನಗಿಡ - ಬೇಕಾದುದನ್ನು ಪೂರೈಸುವುದು ಎಂದು ಹೇಳಿ ಹೋಗುತ್ತಾರೆ. ಗಿಡದಿಂದ ಒಬ್ಬ ಹೆಣ್ಣುಮಗಳು ಬಂದು ಹುಡಿಗಿಗೆ ಬೇಡಿದನ್ನು ಪೂರೈಸುತ್ತಿದ್ದಳು. ಮಲತಾಯಿ ಆ ಗಿಡವನ್ನು ಕಡಿಸಿದಳು. ಮತ್ತೊಮ್ಮೆ ಹೆಣ್ಣುಮಗಳು ಬಂದು ಮಲಮಗಳ ಎಡಗೈಯ ಅಂಗೈಯಲ್ಲಿ ಬಯಸಿದ್ದನ್ನು ಕೊಡುವಂತೆ ಬರೆದು ಹೋಗುತ್ತಾಳೆ.

ಹೀಗೆ ಅಸಾಮಾನ್ಯ ಸಹಾಯಕರು ಸಹಾಯಕ್ಕೆ ಬಂದಾಗ ಅದನ್ನು ದೈವ ಎಂಬ ಹೆಸರಿನಿಂದ ಕರೆಯದಿದ್ದರೂ ದೈವದ ನಂಬುಗೆಗಳನ್ನು ಗಮನಿಸಿದರೆ - ಅವು ಕೂಡ ದೈವದ ಪುರಾತನ ನಂಬುಗೆಗಳಂತೇ ತೋರುತ್ತದೆ.

ಈ ಹಿನ್ನೆಲೆಯಲ್ಲಿ ಸುಂದರ ಸ್ತ್ರೀಯರು ವೃಕ್ಷದಲ್ಲಿ ವಾಸವಾಗಿರುವ ಕಥೆಗಳು ಕೂಡ - ದೈವದ ನಂಬುಗೆಗಳ ಹಿನ್ನೆಲೆಯಲ್ಲಿಯೇ ಅರ್ಥೈಸಿಕೊಳ್ಳಬುದೇನೋ ಎನಿಸುತ್ತದೆ.

ರಾಜಕುಮಾರಿ ಗಿಡದಲ್ಲಿ ವಾಸವಾದಳು (೮೫೦ ಬಿ ) ಎಂಬ ಮಾದರಿಯಲ್ಲಿ ರಾಜಕುಮಾರಿ ತೋಟದ ಗಿಡವೊಂದರ ಪೊಡ್ಡೆಯಲ್ಲಿ ವಾಸವಾಗಿದ್ದಳು. ಈಕೆ ರಾತ್ರಿ ಸಮಯದಲ್ಲಿ ಗಿಡದಿಂದ ಹೊರಗೆ ಬಂದು ತೋಟದಲ್ಲಿ ಸಂಚರಿಸುತ್ತ, ಅಲ್ಲಿಯ ಹಣ್ಣು - ಹಂಪಲು ತಿಂದು, ಬಾವಿಯ ನೀರುಕುಡಿದು ಹೋಗುತ್ತಿದ್ದಳು. ತನ್ನ ತೋಟದ ಹಣ್ಣುಗಳು ಹೇಗೆ ಮಾಯವಾಗುತ್ತಿವೆ ಎಂಬುದನ್ನು ಕಂಡುಹಿಡಿಯಲು ಬಯಸಿದ ಮಾಲೀಕ, ರಾತ್ರಿ ಗಿಡ ಏರಿ ಕುಳಿತನು. ಈ ಹೆಂಗಸು ಬುಡದಿಂದ ಹೊರಗೆ ಬಂದು ಹಣ್ಣು ತಿಂದು ನೀರು ಕುಡಿಯಲು ಬಂದಾಗ, ಸೆರಗು ಹಿಡಿದು ಮದುವೆಯಾಗಲು ನಿಶ್ಚಯಿಸಿದನು. ಮದುವೆ ಗಿಡದೊಂದಿಗೇ ನಡೆಯಬೇಕೆಂದು ಕರಾರು ಹಾಕಿದಳು. ಅದರಂತೆ ಆಕೆ ವಾಸವಾಗಿದ್ದ ಬಾಳೆಗಿಡದೊಂದಿಗೇ ಮದುವೆ ನಡೆಯಿತು. ಬೀಗರೆಲ್ಲ ಊಟಕ್ಕೆ ಕುಳಿತಾಗ 'ಬಾಳೆಗಿಡದ ಬಾಲಾವತಿ ತುಪ್ಪ ನೀಡು ಬಾ' ಎಂದಾಗ ಗಿಡದ ಪೊಡ್ಡೆಯಿಂದ ಸುಂದರವಾದ ಹೆಣ್ಣು ಬಂದು ತುಪ್ಪ ನೀಡಿದಳು. ಇದನ್ನು ಗಮನಿಸಿದ ಒಬ್ಬ ತಾನೂ ತನ್ನ ಹೊಲದಲ್ಲಿಯ ಜಾಲಿಯ ಮರಕ್ಕೆ ಮದುವೆಯಾಗಲು ಬಯಸಿದ. ಮದುವೆಯಾಗಿ ಬಾ, ಎಂದರೆ ಗಿಡದಲ್ಲಿನ ದೆವ್ವ ಬಂದಿತು ಎಂದು ಕಥೆ ವಿವರಣೆ ನೀಡುತ್ತದೆ.

### ೫. ನೀರು - ದೈವ

ದೈವಕ್ಕೂ ನೀರಿಗೂ ಸಂಬಂಧಿಸಿದ ಅನೇಕ ನಂಬುಗೆಗಳು ನಮ್ಮಲಿವೆ. ದೈವಗಳು

ವಾಸಮಾಡುವ ಪ್ರಮುಖ ಸ್ಥಳಗಳಲ್ಲಿ ಈ ನೀರಿನ ಸ್ಥಳಗಳೂ ಪ್ರಮುಖವಾದವುಗಳು. ಬೃಹತ್ತಾದ ಬಾವಿ, ನಿರ್ಜನ ಪ್ರದೇಶದ ಹಳ್ಳಗಳು, ವಿಶಾಲವಾದ ಸರೋವರಗಳು - ಇವುಗಳಲ್ಲಿ ದೆವ್ವಗಳು ವಾಸವಾಗಿರುತ್ತವೆ ಎಂಬ ಸಾಮಾನ್ಯ ನಂಬುಗೆ ಇದೆ. ಸುಮಾರಾಗಿ ಮಧ್ಯಾಹ್ನದ ಹೊತ್ತಿನಲ್ಲಿ ಯುವಕ - ಯುವತಿಯರು ಅಲ್ಲಿಂದ ಹಾಯ್ದರೆ, ಅಲ್ಲಿಗೆ ಹೋದರೆ - ಅವು ಬಡಿದುಕೊಳ್ಳುತ್ತವೆ ಎಂದು ನಂಬಲಾಗುತ್ತದೆ.

ಏಳು ಮಕ್ಕಳ ತಾಯಿ ದೆವ್ವಿನ ಕಲ್ಪನೆಯೊಂದಿದ್ದು, ಅದು ನಿರ್ಜನ ಪ್ರದೇಶದಲ್ಲಿ ನೀರಿರುವ ಸ್ಥಳದಲ್ಲಿ ವಾಸವಾಗಿರುತ್ತದೆ ಎಂಬ ನಂಬುಗೆ ಇದೆ. ಈ ನೀರಿನಲ್ಲಿರುವ ದೆವ್ವಗಳು ಹೆಚ್ಚಾಗಿ ಯುವಕರನ್ನು ಬಡಿದುಕೊಳ್ಳುತ್ತವೆ - ಎಂಬ ಹಿನ್ನೆಲೆಯಲ್ಲಿ ಅನೇಕ ಘಟನೆಗಳು ಪ್ರದೇಶದಿಂದ ಪ್ರದೇಶಕ್ಕೆ ದೊರೆಯುತ್ತವೆ. ಈ ಏಳು ಮಕ್ಕಳ ತಾಯಿ, ದೆವ್ವಿನ ಕಲ್ಪನೆಯ ಆಧಾರದ ಮೇಲೆಯೇ ಜನಪದ ಕಥೆಗಳಲ್ಲಿ ಬರುವ ಜಲಗನ್ನೆಯರ (ಜಕಣಿಯರು) ಮತ್ತು ನೆಲಗನ್ನೆಯರ ಕಲ್ಪನೆಗಳು ಹುಟ್ಟಿಕೊಂಡಿರ ಬೇಕೆಂಬ ಸಂಶಯ ಬರುತ್ತದೆ. ಈ ಜಲ ಮತ್ತು ನೆಲಗನ್ನೆಯರು ಪುರಾತನ ದೆವ್ವಿನ ಕಲ್ಪನೆಗಳೇ ಆಗಿರಬೇಕೆನಿಸುತ್ತದೆ.

ದೆವ್ವಿನ ಕಲ್ಪನೆ, ಏಳು ಮಕ್ಕಳ ತಾಯಿ, ಎಂದಾದರೆ, ಜಲ, ನೆಲಗನ್ನೆಯರ ಕಲ್ಪನೆ, ಏಳು ಜನ ಮಕ್ಕಳ ಕಲ್ಪನೆಗೆ ಸಂಬಂಧಿಸಿದಂತಿದೆ. ಇವರು ಏಳುಜನ ಅಕ್ಕತಂಗಿಯರು (ಮಾದರಿ ೫೯೦).

೧. ಒಂದು ಕೆರೆಯ ದಂಡೆಯ ಮೇಲೆ ಬೀಡುಬಿಟ್ಟ ಮದುವೆಯ ದಿಬ್ಬಣದಲ್ಲಿಯ ಕಿರಿಯ ರಾಜಕುಮಾರನನ್ನು ಮೋಹಿಸಿ ಕದ್ದೊಯ್ಯುತ್ತಾರೆ. ಅವನ ಹೆಂಡತಿ ಹುಡುಕಲು ಬಂದಾಗ ಅವನನ್ನು ಅನೇಕ ಕಡೆ ಸಾಗಿಸುತ್ತಾರೆ (ಮಾದರಿ : ೩೧೬).

೨. ಒಂದು ಕಡೆ ರಾಜನೊಬ್ಬ ಮೋಹಿಸಲು ಒಬ್ಬ ಜಲಕನ್ಯೆ ಮದುವೆಯಾಗಿ - ರಾಣಿಯಾಗಿ ಇರುತ್ತಾಳೆ. ಮಾನವರ ಕೈಹಿಡಿದ ಮೇಲೆ ಜಕಣಿಯರೂ ಸಾಮಾನ್ಯ ಹೆಂಗಸರಂತೆಯೇ ವರ್ತಿಸುತ್ತಾರೆ ( ಮಾದರಿ : ೫೧೬).

೩. ತಾವು ವಾಸಿಸುವ ನೀರಿನ ಕೊಳದ ಹತ್ತಿರ ಒಂದು ಹೆಂಗಸಿನ ಅಳುವ ಧ್ವನಿ ಕೇಳುತ್ತದೆ. ಅವಳನ್ನು ಸಂತೈಸಿ, ತಮ್ಮಲ್ಲಿಯೇ ಇಟ್ಟುಕೊಳ್ಳುತ್ತಾರೆ.

೪. ಮತ್ತೊಂದು ಕಡೆ ಮಲತಾಯಿ ರಾಜ ಕುಮಾರನ ಹೆಂಡತಿಯಾದ ತನ್ನ ಮಲ ಮಗಳನ್ನು ಬಾವಿಗೆ ಹಾಕುತ್ತಾಳೆ. ಅಲ್ಲಿ ನೆಲೆಸಿರುವ ಏಳುಜನ ನೆಲಗನ್ನೆಯರು ಅವಳನ್ನು ತಮ್ಮಲ್ಲಿಯೇ ಇಟ್ಟುಕೊಂಡು ಸಂರಕ್ಷಿಸುತ್ತಾರೆ. ಬಾಣಂತನ ಮಾಡುತ್ತಾರೆ. ಅವಳ ಗಂಡ ಬರಲು ಅವನಿಗೆ ಒಪ್ಪಿಸುತ್ತಾರೆ. (ಮಾದರಿ ೪೩೧ ಸಿ).

೫. ಒಂದು ಕಡೆ ಸವತಿಗೆ ಜನಿಸಿದ ಕೂಸುಗಳನ್ನು ಒಬ್ಬಾಕೆ ಚೂರು ಚೂರು ಮಾಡಿ ಗಂಟು ಕಟ್ಟಿ ಸಮುದ್ರಕ್ಕೆ ಎಸೆಯುತ್ತಾಳೆ. ಅಲ್ಲಿ ವಾಸವಾದ ನೆಲಗನ್ನೆಯರು ಆ ಗಂಟನ್ನು

ಹಿಡಿದು ಕೂಸುಗಳ ಅವಯವಗಳನ್ನು ಜೋಡಿಸಿ, ಜೀವತುಂಬಿ ಸಾಕುತ್ತಾರೆ. ರಾತ್ರಿ ಆ ಕೂಸುಗಳ ತಾಯಿಯಲ್ಲಿಗೆ ಒಯ್ದು, ಮೊಲೆಯುಣಿಸಿಕೊಂಡು ಬರುತ್ತಾರೆ.

ಈ ಮೇಲಿನ ವಿವರಗಳೆಲ್ಲ ಅಗಲಿದ ಆತ್ಮಗಳ ಚಟುವಟಿಕೆಗಳಂತೆಯೇ ತೋರುತ್ತವೆ. ಇವುಗಳನ್ನು ಜ್ಞಾಪಿಸಿಕೊಳ್ಳುತ್ತ ಈ ಕೆಳಗಿನ ದೆವ್ವದ ಬಗೆಗಿನ ನಂಬುಗೆಗಳನ್ನು ಗಮನಿಸಬೇಕು.

೧. ನೀರಿರುವ ಕಡೆಯಲ್ಲಿ ಏಳುಮಕ್ಕಳ ತಾಯಿ ವಾಸಿಸುತ್ತದೆ.

೨. ದೆವ್ವಗಳು ರಾತ್ರಿ ಅಡ್ಡಾಡುತ್ತವೆ.

೩. ಮದುವೆಯ ಸಂದರ್ಭದಲ್ಲಿ ದಂಪತಿಗಳನ್ನು ಕಂಕಣ ಕಟ್ಟಿದ ಬಳಿಕ ದೆವ್ವ ಬಡಿಯುತ್ತದೆ. ಅದಕ್ಕಾಗಿ ಅವರ ಹತ್ತಿರ ನಿಂಬೆಹಣ್ಣು ಕೊಡಲಿ, ಹತಿಯಾರ ಇರಬೇಕೆಂದು ಜನ ನಂಬುತ್ತಾರೆ.

೪. ಹರೆಯದ - ಯುವತಿಯರು ಮದುವೆಯಾಗದೆ ತೀರಿಕೊಂಡರೆ, ತಾನು ಬಯಸಿದವರಲ್ಲಿ ಕಾಣಿಸಿಕೊಳ್ಳುತ್ತಾರೆ.

೫. ಸತ್ತವರು ದೆವ್ವಾಗಿ ತಮಗೆ ಬೇಕಾದವರ ಸಹಾಯಕ್ಕೆ ಬರುತ್ತಾರೆ.

## ೬. ಗಾಳಿ ಮತ್ತು ದೆವ್ವ:

ದೆವ್ವ ಬಡಿದುಕೊಂಡವರಿಗೆ 'ಗಾಳಿಶಕ' ವಾಗಿದೆ ಎಂಬ ಮಾತನ್ನು ಬಳಸಲಾಗುತ್ತದೆ. ಸುಂಟರಗಾಳಿಯನ್ನು 'ದೆವ್ಗಾಳಿ' ಯೆಂತಲೂ ಕರೆಯುತ್ತಾರೆ. ದೆವ್ಗಾಳಿಯಲ್ಲಿ ಹಾರಿಹೋದ ಬಟ್ಟೆಗಳನ್ನು ಪುನಃ ಮನೆಯಲ್ಲಿ ತರಬಾರದು. ತಂದರೆ ಅವುಗಳ ಜೊತೆ ಮನೆಯಲ್ಲಿ ದೆವ್ವ ಬರುತ್ತದೆ ಎಂಬ ನಂಬುಗೆ ಇದೆ.

ದೆವ್ವಗಳು ಗಾಳಿಯಲ್ಲಿ ಚಲಿಸುತ್ತವೆ ಎಂದೂ ನಂಬಲಾಗುತ್ತದೆ. ಹೀಗಾಗಿ ಗಾಳಿಯಲ್ಲಿ ವಾಸಿಸುವ ದೇವಗನ್ನಕಿ ಮತ್ತು ಗಂಧರ್ವ ಸ್ತ್ರೀಯರು ವ್ಯಕ್ತಿತ್ವಗಳು ಜನಪದ ಕಥೆಗಳಲ್ಲಿ ಬರುವುದನ್ನು ಗಮನಿಸಿದರೆ ಮಾನವನ ಈ ಅತಿಮಾನುಷ ದೆವ್ವದ ಕಲ್ಪನೆಯಂತಿರುವುದೆಂದೇ ಭಾಸವಾಗುತ್ತದೆ. ಇವರು ಭೂಲೋಕದಿಂದ ಕಲ್ಪಿತ ಗಂಧರ್ವ ಲೋಕಕ್ಕೆ ಅಲೆದಾಡುತ್ತಿರುತ್ತಾರೆ. ಭೂಲೋಕದ ನಿರ್ಜನ ಪ್ರದೇಶದ ನೀರಿನ ಸ್ಥಳಗಳಿಗೆ ಬಂದು ಬೆತ್ತಲೆಯಾಗಿ ಈಜಾಡುತ್ತಿರುತ್ತಾರೆ. ಈ ಸಮಯದಲ್ಲಿ ಭೂಲೋಕದ ಗಂಡಸರ ಜೊತೆ ಸಂಬಂಧವನ್ನು ಬೆಳೆಸುತ್ತಾರೆ (೩೦೩, ೪೪೮). ಅತ್ಯಂತ ಸುಂದರ ಸ್ತ್ರೀಯರು ಇವರಾಗಿದ್ದಾರೆ. ಇವರ ಪಾತ್ರಗಳು ಬಂದಾಗಲೆಲ್ಲ ಯಾವುದೋ ಕಾಲದ ಹಳೆದೆವ್ವದ ಕಥೆಗಳೇ ಇವಾಗಿರಬೇಕೆಂಬ ಭಾಸ ಉಂಟಾಗುತ್ತದೆ.

ಜಲಗನ್ನೆಯರು, ನೆಲಗನ್ನೆಯರು ಜಲದಲ್ಲಿ ವಾಸಮಾಡುವವರು ದೇವಗನ್ನಿಕೆಯರು, ಗಂಧರ್ವಸ್ತ್ರೀಯರು ಗಾಳಿಯಲ್ಲಿ ವಾಸಮಾಡುವವರು; ವೃಕ್ಷಗನ್ನಿಕೆಯರು ಗಿಡಗಳಲ್ಲಿ ವಾಸಮಾಡುವವರು - ಇವೆಲ್ಲಾ ಸತ್ತ ಸ್ತ್ರೀಯರ ಆತ್ಮದ ಪ್ರತೀಕಗಳೇ ಆಗಿರಬೇಕೆಂದೆನಿಸುತ್ತದೆ.

**ಪರಿಹಾರ :**

ದೆವ್ವ ಬಡಕೊಂಡಾಗ ಪರಿಹಾರಕ್ಕಾಗಿ ಆಹಾರ ಅರ್ಪಿಸುವುದೇ ಜಾಸ್ತಿಯಾಗಿ ಕಾಣುತ್ತದೆ. ಎಣ್ಣೋಳ್ಗಿ, ಅನ್ನ, ತೆಂಗು ಮುಂತಾದವುಗಳನ್ನರ್ಪಿಸಲು ರಾತ್ರಿಯಾದ ಮೇಲೆ ವಯಸ್ಸಾದವರೇ ಒಯ್ಯಬೇಕು. ಯಾರಜೊತೆಯೂ ಮಾತನಾಡಬಾರದು. ನೈವೇದ್ಯ ಅರ್ಪಿಸಿ ಬರುವಾಗ ಹಿಂದಕ್ಕೆ ತಿರುಗಿ ನೋಡಬಾರದು. ಮನೆಯ ಮಕ್ಕಳು ಯುವಕರು ಎದುರಾಗಬಾರದು. ದೆವ್ವಿಗೆ ಅರ್ಪಿಸಿದ ಆಹಾರವನ್ನು ತಿನ್ನಲು ಬಯಸುವವರು ಇದ್ದಾರೆ. ಕೈಯಿಂದ ಆಹಾರ ತೆಗೆದುಕೊಳ್ಳಲು ಹೋದರೆ ಕೈಗಳೇಮೇಲೇಳದ ಕಥೆಗಳಿವೆ. ಎರಡೂ ಕೈಗಳನ್ನು ನೆಲಕ್ಕೆ ಊರಿ ನೇರವಾಗಿ ಬಾಯಿಯಿಂದಲೇ ದೆವ್ವಿನ ಆಹಾರ ಸೇವಿಸಬೇಕೆಂಬ ನಂಬಿಕೆ ಇದೆ.

ಕೆಲವು ಕಡೆ ದೆವ್ವದ ಪೀಡೆ ಬಿಡಿಸುವವರೂ ಇರುತ್ತಾರೆ. ಯಂತ್ರ, ಮಂತ್ರಗಳ ಸಹಾಯ ದಿಂದ ದೆವ್ವ ಹೋಗುವುದೆಂಬ ನಂಬುಗೆ ಜನಮನದಲ್ಲಿದೆ.

ಕೊನೆಯಾಗಿ, ಇಂದಿನ ವಿಜ್ಞಾನಿಗಳ ತರ್ಕಬದ್ಧವಾದ ದೆವ್ವದ ಕಲ್ಪನೆ ಕುರಿತ ಮಾತುಗಳನ್ನು ನಾವು ಗಮನಿಸಲೇಬೇಕು. ಅವರ ಪ್ರಕಾರ ಅದೊಂದು ವಿಭ್ರಮೆ (Hallucihnation) - ಇಲ್ಲದ್ದನ್ನು ಇದ್ದಂತೆ ಕಾಣುವ ಮನಸ್ಥಿತಿ. ಡಾ. ಚಂದ್ರಶೇಖರ ಅವರು ಹೀಗೆ ಬರೆಯುತ್ತಾರೆ : ಭಯಭೀತ ಮನಸ್ಸು ಪರಿಸರದಲ್ಲಿರುವ, ನಡೆಯುವ ಸಂಗತಿಗಲನ್ನು ದೆವ್ವ ಭೂತ ಎಂದು ತಪ್ಪಾಗಿ ಅರ್ಥೈಸುತ್ತದೆ. ಸಹಿಸಲಾಗದ ಕಷ್ಟ ಸಮಸ್ಯೆಗಳು ಎದುರಾಗಿ ಅಸಹಾಯಕತೆ ಆವರಿಸಿದಾಗ - ವ್ಯಕ್ತಿಯ ಸುಪ್ತ ಮನಸ್ಸು ಈ ನಂಬಿಕೆಗಳನ್ನು ಉಪಯೋಗಿಸಿ ಕೊಂಡು, ಇತರರ ಗಮನ ಸೆಳೆಯಲು, ಅವರ ಸಹಾಯ ಸಹನಾಭೂತಿಯನ್ನು ಪಡೆಯಲು ಯತ್ನಿಸುತ್ತದೆ. ವ್ಯಕ್ತಿಯು ಅದುವರೆಗೆ ಉಪಯೋಗಿಸದೇ ಇರುವ ಆತನ ಮೀಸಲು ಶಕ್ತಿ ಸಾಮರ್ಥ್ಯಗಳನ್ನು ಸುಪ್ತ ಮನಸ್ಸು ಉಪಯೋಗಿಸಿಕೊಂಡು ಈ ಅವಧಿಯಲ್ಲಿ ಕೆಲವು ಸಾರಿ ಅತಿಮಾನುಷ ಅಥವಾ ನಂಬಲಸಾಧ್ಯವಾದ ಕಾರ್ಯಗಳನ್ನು ಮಾಡಿ ತೋರಿಸುತ್ತದೆ. ಇದರಿಂದ ದೆವ್ವ ಅಥವಾ ಮಾಟಮಂತ್ರದಲ್ಲಿ ಜನರ ನಂಬಿಕೆ ಮತ್ತಷ್ಟು ಹೆಚ್ಚುತ್ತದೆ. ನಿರ್ಭೀತವಾಗಿ ಆಲೋಚಿಸುವ ಪ್ರವೃತ್ತಿ ಇದಕ್ಕೆ ಇತಿ ಶ್ರೀ ಹಾಡಬಲ್ಲದು.*

* ಸೃಷ್ಟಿಯ ಅದ್ಭುತ ಮಿದುಳು : ಡಾ. ಸಿ.ಆರ್. ಚಂದ್ರಶೇಖರ, (ಪುಟ - ೧೦೯, ೧೧೦)

# ೬. ದೆವ್ವ ಜಾನಪದ ಕುರಿತು

ಡಾ॥ ವೈ.ಸಿ. ಭಾನುಮತಿ

ಜಾನಪದೀಯ ಹಿನ್ನಲೆಯಲ್ಲಿ ದೆವ್ವಗಳ ಸುತ್ತ ಬೆಳೆದು ನಿಂತ ವಿಚಾರಗಳನ್ನು ಅವಲೋಕಿಸಿರುವ ಲೇಖಕಿ ದೆವ್ವ ನಿವಾರಣಾ ತಂತ್ರಗಳ ಮಾಹಿತಿಯನ್ನು ವಿವರವಾಗಿ ಒದಗಿಸಿದ್ದಾರೆ. ಸಂಪಾದಕ

ನಿಸರ್ಗವೆನ್ನುವುದು ಮಾನವನಿಗೆ ವಿಶಿಷ್ಟ ಅನುಭವದ ಕೇಂದ್ರ. ಇದರ ವಿಕೋಪಗಳೊಂದಿಗೆ ನಿರಂತರ ಹೋರಾಟ ನಡೆಸಿ ಬಾಳಬೇಕಾದ ಅನಿವಾರ್ಯತೆ ಇದ್ದ ಆದಿಮಾನವನು ಸೃಷ್ಟಿವೈಚಿತ್ರ್ಯದ ಹಿಂದೆ ಅತಿಮಾನುಷ ಶಕ್ತಿಯ ಅಸ್ತಿತ್ವವನ್ನು ಕಲ್ಪಿಸಿಕೊಂಡು, ಅದರಲ್ಲಿ ಗಾಢನಂಬಿಕೆ ಬೆಳಸಿಕೊಂಡು, ತನ್ನನ್ನು ಕಾಪಾಡುವ, ಗಾಳಿ ನೀರು ಆಹಾರದಂಥ ಬದುಕಿನ ಮೂಲಭೂತ ಅಗತ್ಯಗಳನ್ನು ಪೂರೈಸಲು ನೆರವಾಗುವ ಆಗೋಚರ ಅತಿಮಾನುಷ ಶಕ್ತಿಗೆ ವಿನೀತಭಾವದಿಂದ ದೇವರೆಂದು ಕರೆದು ಗೌರವಿಸಿದ, ಆರಾಧಿಸಿದ. ಆತನನ್ನು ಕಾಡಿದ ಶಕ್ತಿಗೆ ದೆವ್ವವೆಂದು ಕರೆದಂತೆ ತೋರುತ್ತದೆ. ದೆವ್ವ ಶಬ್ದ ಶಿಷ್ಟರಲ್ಲಿ ಪ್ರಚಲಿತ ವಿರುವಂಥದ್ದು. ಇದರ ಗ್ರಾಮ್ಯರೂಪ 'ದಯ್ಯ'. ಅಕ್ಷರಸಾಮ್ಯವಿದ್ದರೂ ಎರಡಕ್ಕೂ ಸ್ವರೂಪ ಮತ್ತು ಆಶಯಗಳಲ್ಲಿ ಭಿನ್ನತೆಯಿದೆ. ದೇವರು ಸ್ತುತಿಗೆ ಪೂಜ್ಯತೆಗೆ ಅರ್ಹವಾದರೆ ದೆವ್ವ ವಿಕೃತಿಗೆ ದ್ಯೋತಕ. ದೇವರು ಮಂಗಳಕರವಾದ ಧವಳ ಕೀರ್ತಿಯ ಸಂಕೇತವಾದರೆ ದೆವ್ವ ಕುಪ್ರಸಿದ್ಧಿಯ ಸಂಕೇತ. ದೆವ್ವ ಮತ್ತು ದೇವರುಗಳಿಗಿರುವ ವ್ಯತ್ಯಾಸವನ್ನು ಟಾಲ್‌ಸ್ಟಾಯ್ ಅವರ 'ದೆವ್ವ - ದೇವರು' ಕಥೆ ಸಮರ್ಥವಾಗಿ ಚಿತ್ರಿಸಿರುವುದನ್ನು ಇಲ್ಲಿ ನೆನೆಯಬಹುದು.

ಪ್ರಧಾನ ಸಂಸ್ಕೃತಿಯ ದೇವತೆಗಳು ಉಪ ಸಂಸ್ಕೃತಿಯ ಸಂಪರ್ಕಕ್ಕೆ ಬರುವ ಮೊದಲು ಅಲ್ಲಲ್ಲಿ ಕುಟುಂಬದ ಮೂಲಪುರುಷರೇ, ಆಳಿದ ಹಿರಿಯರೇ ದೇವರೆಂದು ಪೂಜೆಗೊಳ್ಳುತ್ತಿದ್ದರು. ಇಂದಿಗೂ ಈ ಸಮಾಜದ ಹಬ್ಬ ಹರಿದಿನಗಳಲ್ಲಿ ಸತ್ತ ಹಿರಿಯರಿಗೆ 'ಎಡೆಹಾಕುವ' ಸಂಪ್ರದಾಯ ಉಳಿದುಬಂದಿದ್ದು ಮೂಲದ ಆಶಯ ಹುದುಗಿರುವುದನ್ನು ಗುರುತಿಸಬಹುದು. ಆಯುಷ್ಯವನ್ನು ಪೂರ್ಣಗೊಳಿಸಿ ಸಹಜ ಸಾವನ್ನಪ್ಪಿದವರು ಮತ್ತು ನಾಡಿಗಾಗಿ ಮಾನಿನಿಯರ ರಕ್ಷಣೆಗಾಗಿ ಬಲಿದಾನವಾದ ವ್ಯಕ್ತಿಗಳು ಈ ಸಮಾಜದಲ್ಲಿ ದೇವರ ಸ್ಥಾನ ಪಡೆಯುತ್ತಾರೆ. ಆದರೆ ಬದುಕನ್ನು ಅಪೂರ್ಣಗೊಳಿಸಿ ಅಪಘಾತ, ಕೊಲೆ, ಆತ್ಮಹತ್ಯೆಯಂಥ ಅಸಹಜ ಮರಣಕ್ಕೆ ದುರ್ಮರಣಕ್ಕೆ ಈಡಾದ ವ್ಯಕ್ತಿಗಳ ಆತ್ಮವು ಮುಕ್ತಿ ಪಡೆಯಲಾರದೆ ನೆಲೆತಪ್ಪಿ ಅತೃಪ್ತಿಯಿಂದ ಅಲೆದಾಡುತ್ತಿರುತ್ತದೆ. ಅಂಥವರು ದೆವ್ವವಾಗಿ ಸುಳಿದಾಡುವರೆಂಬ ಭಾವನೆ ಎಲ್ಲ ಸಮಾಜದಲ್ಲಿಯೂ ಬೇರೂರಿದೆ. ದೆವ್ವದ ಬಗೆಗಿನ ನಂಬಿಕೆ ಗ್ರಾಮವಾಸಿಗಳಿಗೆ ಸೀಮಿತವೇನಲ್ಲ. ನಗರ ವಾಸಿಗಳೂ ಇದರ ಅಸ್ತಿತ್ವವನ್ನು

ಸತ್ಯವೆಂದು ಒಪ್ಪುತ್ತಾರೆ. ಜನಪದ ಸಮಾಜದಲ್ಲಂತು ಇವುಗಳಿಗೆ ಮಹತ್ವದ ಸ್ಥಾನವಿದೆ.

ದೆವ್ವದ ಪ್ರಪಂಚ ವಿಶಾಲವಾದುದು. ಈ ಕ್ಷುದ್ರ ಶಕ್ತಿಯ ಸಾಲಿಗೆ ಸೇರುವ ಶಕ್ತಿಗಳು ಇನ್ನೂ ಕೆಲವು ಕಂಡುಬರುತ್ತವೆ. ಉದಾಹರಣೆಗೆ ಪೀಡೆ, ಪಿಶಾಚಿ, ಭೂತ, ಗಾಳಿ, ರಣ, ಈರ, ಮೋಹಿನಿ, ಕೊಳ್ಳಿದೆವ್ವ, ಚೌಡಿ, ಮುನೇಶ್ವರ ಇತ್ಯಾದಿ. ಸಾಮಾಜಿಕವಾಗಿ ಭೂತ ಚೌಡಿ ಮುನೇಶ್ವರಗಳಿಗೆ ದೆವ್ವಕ್ಕಿಂತ ಅಧಿಕ ಸ್ಥಾನವಿದೆ. ಇವು ದೇವರುಗಳಿಗಿಂತ ಕೆಳಸ್ತರದಲ್ಲಿ ದೆವ್ವಕ್ಕಿಂತ ಉಚ್ಚಸ್ತರದಲ್ಲಿ ಮನ್ನಣೆ ಪಡೆಯುತ್ತವೆನ್ನಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಭೂತವಂತು ದುರ್ಬಲವರ್ಗದವರಿಗೆ ನಿಕಟವಾಗಿರುವಂಥ ದೇವತೆ. ಮನುಷ್ಯನ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಿ ಅವನ ಸಮಸ್ಯೆಗಳಿಗೆ ಪರಿಹಾರ ಸೂಚಿಸುವಷ್ಟು ಶಕ್ತಿಯುತ. ಆದರೆ ಚಾಮರಾಜನಗರ ಭಾಗದಲ್ಲಿ ಭೂತದ ಪರಿಕಲ್ಪನೆ ಬೇರೆಯಾಗಿ ನಿಲ್ಲುತ್ತದೆ. ಇಲ್ಲಿ ಇದು ಗಂಡಸರ ಮೇಲೆ ಬರುವಂಥ ಉಗ್ರಸ್ವರೂಪದ ದೆವ್ವವೆನ್ನುವ ಭಾವನೆಯಿದೆ. ಚೌಡಿ ಮಲೆನಾಡಿನ ತೋಟಗಳಲ್ಲಿ ತಾವು ಪಡೆದಿರುವಂಥದ್ದು. ಚಿಕ್ಕಮಗಳೂರು ಜಿಲ್ಲೆಯ ಕೆಲವಡೆ 'ಗೌಡಿಭೂತ' ಎಂದು ಹೆಸರಿಸುವ ಭೂತವುಂಟು. ಇದು ಹರಿಜನರ ಮೇಲೆ ಆವೇಶವಾಗಿ ಬರುತ್ತದೆ. ಮುನೇಶ್ವರ ಎಂಬುದು ಬಯಲು ಸೀಮೆಯಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈತನಿಗೆ ಕೊಳ್ಳಿದೆವ್ವಗಳು ಕೊಳ್ಳಿ ಹಿಡಿದು ಪ್ರದಕ್ಷಿಣೆಗೈಯುವುದರಿಂದ ಕೊಳ್ಳಿ ದೆವ್ವಗಳೇ ಮುನೇಶ್ವರನ ಸೇವಕರೆಂದು ಹೇಳುತ್ತಾರೆ. ಆತನನ್ನು ಖುಷಿಪಡಿಸಲು ಇವು ಆಟವಾಡುವುದೂ ಉಂಟಂತೆ. ಶ್ರೀರಂಗಪಟ್ಟಣದ ಸಮೀಪ ಮುನೇಶ್ವರನಿಗೆ ಒಂದು ಗುಡಿ ಕಟ್ಟಲಾಗಿದೆ. ದೆವ್ವಕ್ಕೆ 'ಗಾಳಿ', 'ರಣ' ಎಂಬ ಪರ್ಯಾಯ ರೂಪಗಳಿವೆ. ಇದಕ್ಕೆ ಸಂವಾದಿಯಾಗಿ ಶಾಸನ ಭಾಗದಲ್ಲಿ 'ಈರಾ' ಶಬ್ದದ ಬಳಕೆ ವಿರಳವಾಗಿ ಕಾಣಸುತ್ತಿರುವುದನ್ನು ಗಮನಿಸಬೇಕು. ಅವಿವಾಹಿತರು ಸತ್ತು ದೆವ್ವವಾಗಿದ್ದರೆ ಹಾಗೂ ಯಾರ ಮೇಲಾದರೂ ಬಂದರೆ 'ಈರಾ ಹಿಡ್ಕಂಡಿದೆ' ಎನ್ನುತ್ತಾರೆ. ಮೋಹಿನಿ ಸ್ತ್ರೀಯಾಗಿರುವುದರಿಂದ ತನಗೆ ಇಷ್ಟವಾದ ಪುರುಷರನ್ನು ಹಿಡಿದುಕೊಳ್ಳುತ್ತಾಳೆಂಬ ಪ್ರತೀತಿಯಿದೆ. ಇತರ ಶಕ್ತಿಗಳು ದೆವ್ವಕ್ಕೆ ಸಮಾನಾಂತರವಾಗಿರುವಂಥವು.

ದೆವ್ವ ಗಾಳಿ ಇತ್ಯಾದಿಗಳ ಕಲ್ಪನೆ ಪ್ರಪಂಚದಾದ್ಯಂತ ಕಂಡುಬರುವ ಅಂಶವಾಗಿರುವುದರಿಂದ ಇದನ್ನು ಕೇಂದ್ರವಾಗಿಟ್ಟುಕೊಂಡು ಅನೇಕ ಕಥೆಗಳು ಶಿಷ್ಟ ಪರಿಶಿಷ್ಟ ಸಾಹಿತ್ಯದಲ್ಲಿ ಎಡೆಪಡೆದಿವೆ. ಪ್ರಖ್ಯಾತ ನಾಟಕಕಾರ ಷೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ (Ghost) ಪಾತ್ರಗಳನ್ನು ರಚಿಸಿದ್ದನೆಂಬುದು ತಿಳಿದ ವಿಚಾರ. ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧ ದೊರೆಯಾಗಿದ್ದ ವಿಷ್ಣುವರ್ಧನನ ಮಗಳಿಗೆ ಹಿಡಿದ ದೆವ್ವವನ್ನು ರಾಮಾನುಜಾಚಾರ್ಯರು ಬಿಡಿಸಿದರೆಂದೂ ಈ ಕಾರಣದಿಂದ ಆತ ವೈಷ್ಣವಧರ್ಮ ಸ್ವೀಕರಿಸಿದನೆಂದೂ ದಂತಕಥೆ ಇದೆ. ದೆವ್ವಗಳು ಮನುಷ್ಯನ ಮೇಲೆ ಅದ್ಭುತ ನಿಯಂತ್ರಣ ಪಡೆದಿರುತ್ತವೆ. ಇವು ವ್ಯಕ್ತಿಯನ್ನು ಸ್ಥಾನಾಂತರಗೊಳಿಸಿ ಆತನ ಭವಿಷ್ಯವನ್ನೇ ಬದಲಿಸುವಷ್ಟು ಶಕ್ತಿಯುತವಾಗಿರುತ್ತವೆಂಬ ವಿಚಾರವನ್ನು ಬತ್ತೀಸಪುತ್ಥಳಿ ಕಥೆಯಲ್ಲಿ ನಿರೂಪಿಸಲಾಗಿದೆ.

ಹೀಗೆ ಇವು ಕಾಲ ದೇಶ ವರ್ಗ ವರ್ಣದಿಂದ ಅತೀತವಾದವು. ಆದರೂ ನಿಮ್ನ ವರ್ಗದಲ್ಲಿ ದೆವ್ವ ಪೀಡೆ ಪಿಶಾಚಿಗಳ ಪ್ರಭಾವ ದಟ್ಟವಾಗಿದೆ. ಇದಕ್ಕೆ ಅನಕ್ಷರತೆ, ಕೌಟುಂಬಿಕ ವಾತಾವರಣ, ಆರ್ಥಿಕ ಅಭಾವ, ಸಾಮಾಜಿಕ ಶಿಥಿಲತೆ ಕಾರಣವಾಗಿದ್ದರೆ ಆಶ್ಚರ್ಯವೇನಲ್ಲ. ಹೀಗೆ ದೆವ್ವದ ಪರಿಕಲ್ಪನೆಗೂ ಬಡತನ ಮೌಢ್ಯ ಮೊದಲಾದ ಸಾಮಾಜಿಕ ಸಮಸ್ಯೆಗಳಿಗೂ ಸಂಬಂಧವಿರುವುದನ್ನು ತಳ್ಳಿಹಾಕುವಂತಿಲ್ಲ. ದೆವ್ವದ ಬಗೆಗಿನ ಮನಶಾಸ್ತ್ರಜ್ಞರ ಚಿಂತನೆಗಳಿಗೆ ಕೈಹಾಕದೆ ಜಾನಪದೀಯ ಹಿನ್ನೆಲೆಯಲ್ಲಿ ದೆವ್ವದ ಸುತ್ತ ಬೆಳೆದುನಿಂತ ವಿಚಾರಗಳನ್ನು ಅವಲೋಕಿಸುವುದು ಪ್ರಸ್ತುತ ಬರಹದ ಉದ್ದೇಶ.

ಆಕೃತಿ :

ದೆವ್ವಗಳಿಗೆ ನಿರ್ದಿಷ್ಟ ಆಕೃತಿ ಮತ್ತು ನೆಲೆಗಳಿಲ್ಲವೆಂಬುದು ಖಚಿತವಾದರೂ ಈ ಬಗೆಗೆ ಜನಪದರಲ್ಲಿ ರೋಚಕ ಕಲ್ಪನೆಗಳಿವೆ. ಇವುಗಳಿಗೆ ನಿರ್ದಿಷ್ಟ ರೂಪಿಲ್ಲದಿದ್ದರೂ ಪ್ರಾಣಿಯ ರೂಪದಲ್ಲಿ ಅಥವಾ ಮನುಷ್ಯನ ರೂಪದಲ್ಲಿ ಪ್ರಕಟಗೊಳ್ಳುತ್ತವೆಯೆಂದು ಹೇಳುತ್ತಾರೆ. ಅದು ಕೋಳಿಯಾಗಿ ಕಾಣಿಸಿಕೊಳ್ಳಬಹುದು. ಇಲ್ಲವೇ ಹಂದಿ ಬೆಕ್ಕು ನಾಯಿ ಹೀಗೆ ಯಾವುದಾದರೂ ರೂಪದಲ್ಲಿ ಸುಳಿದು ಮಾಯವಾಗಬಹುದು. ಇರುಳಿನಲ್ಲಿ 'ದೆವ್ವ ಅಡ್ಡಗಟ್ಟಿತ್ತು' ಎಂದು ಹೇಳವವರು ಅದು ಶ್ವೇತ ವಸ್ತ್ರಧಾರಿಯಾಗಿ ಹೆಣ್ಣಿನಂತೆ ವೇಷಧರಿಸಿ ಬಂದಿತ್ತು ಎಂದು ವರ್ಣಿಸುವುದುಂಟು. ಮೋಹಿನಿ ಹೀಗೆ ಕಾಣಿಸಿಕೊಳ್ಳುವುದೆಂದು ಪ್ರತೀತಿ. ದೆವ್ವಗಳು ಮಾನವರೂಪಿನಲ್ಲಿ ಹೊರಬಂದರೂ ಅವುಗಳ ಕೈಕಾಲುಗಳು ಹಿಂದುಮುಂದಾಗಿರುತ್ತವೆ. ಮೈಸೂರು ಸಮೀಪದ ಇಲವಾಲದ ದಾರಿಯಲ್ಲಿ ದೆವ್ವ ಕುದುರೆಗಾಡಿ ಓಡಿಸಿಕೊಂಡು ಹೋದುದನ್ನು ಅದರ ಕೈ ಹಿಂದು ಮುಂದಾಗಿದ್ದುದನ್ನು ಕಣ್ಣಾರೆ ಕಂಡಿದ್ದೆನೆಂದು ತಿಳಿಸಿದವರಿದ್ದಾರೆ.

ಪುರಾಣಗಳಲ್ಲಿ ದೇವೇಂದ್ರನಿಗೆ ಮೈಯೆಲ್ಲ ಕಣ್ಣುಗಳಿರುತ್ತವೆಂದು ಚಿತ್ರಿಸಲಾಗಿದೆ. ಇದರ ಪ್ರತಿಧ್ವನಿಯೆಂಬಂತೆ ಹಳೇಬೀಡು ಸಮೀಪ ಪ್ರಚಲಿತವಿರುವ ಒಂದು ಘಟನೆಯ ವಿವರ ಹೀಗಿದೆ : ಕಾರಿರುಳಿನಲ್ಲಿ ಒಬ್ಬರು ಗಾಡಿ ಹೊಡೆದುಕೊಂಡು ಹೋಗುವಾಗ ಒಂದು ಅಜ್ಜಿ ತನ್ನನ್ನು ಸ್ವಲ್ಪದೂರ ಗಾಡಿಯಲ್ಲಿ ಕೂರಿಸಿಕೊಳ್ಳಬೇಕೆಂದು ಕೇಳಿದಳು. ಅವಳ ಕೋರಿಕೆಯನ್ನು ಮನ್ನಿಸಿ ಗಾಡಿಗೆ ಹತ್ತಿಸಿಕೊಂಡರು. ಸ್ವಲ್ಪದೂರ ಹೋದ ಬಳಿಕ ಇಲ್ಲಿ ನಾನು ಇಳಿಯುತ್ತೇನೆ ಎಂದಳಂತೆ. ಆಗ ಹಿಂತಿರುಗಿ ಆಕೆಯನ್ನು ನೋಡಿದಾಗ ಅವಳ ಶರೀರದ ಮೇಲೆಲ್ಲ ಕಣ್ಣುಗಳಿದ್ದುವಂತೆ. ದಾರಿ ಉದ್ದಕ್ಕೂ ರಕ್ತಚೆಲ್ಲಿಕೊಂಡು ಹೋದಳಂತೆ. ಇದನ್ನು ನೋಡಿ ಗಾಡಿಯಾತ ಮೂರ್ಛೆಹೋದರೆಂದೂ ಅವರು ಸುಧಾರಿಸಿ ಕೊಳ್ಳುವುದಕ್ಕೆ ಅನೇಕ ದಿನಗಳು ಬೇಕಾಯಿತೆಂದೂ ಹೇಳುತ್ತಾರೆ.

ದೆವ್ವಗಳು ನಿರಾಕಾರದಲ್ಲಿದ್ದಾಗ ಶಬ್ದದ ಮೂಲಕ ತಮ್ಮ ಇರುವಿಕೆಯನ್ನು ವ್ಯಕ್ತಪಡಿಸುತ್ತವೆಯೆಂಬುದು ಹಿರಿಯರ ಮಾತು. ನಿರ್ಜನ ಮಾರ್ಗದಲ್ಲಿ ಹಾದು

ಹೋಗುವಾಗ ಮರ ಅಲುಗಾಡಿದಂತೆ ಭಾಸವಾದರೆ, ಕೊಂಬೆಗಳು ಮುರಿದು ಬಿದ್ದರೆ, ಕಾಯಿ ನೆಲದ ಮೇಲೆ ಬಿದ್ದರೆ, ದೆವ್ವಭೀರುಗಳಿಗೆ ಅದು ದೆವ್ವದ ಆಟವಾಗಿ ತೋರುತ್ತದೆ. ಮರದಿಂದ ಕಾಯಿ ಉದುರುವ ಸಹಜಕ್ರಿಯೆಯೂ ಇವರ ಗ್ರಹಿಕೆಗೆ ದೆವ್ವದ ಕಾಟವಾಗುತ್ತದೆ. ಇಂಥ ನಂಬಿಕೆಯನ್ನು ಕಳ್ಳಕಾಕರು ದುರುಪಯೊಗಪಡಿಸಿಕೊಳ್ಳುವ ಸಾಧ್ಯತೆಯೂ ಇಲ್ಲದಿಲ್ಲ.

ವಾಸಸ್ಥಾನ :

ದೆವ್ವಗಳು ಮರಗಳಲ್ಲಿ ನೆಲೆಸಿರುತ್ತವೆ ಎಂದು ಹೇಳುವುದು ಸಾಮಾನ್ಯ. ಅದರಲ್ಲಿಯೂ ಹುಣಿಸೆಮರ ದೆವ್ವಗಳ ಆವಾಸಸ್ಥಾನ ಎಂಬುದು ಅನೇಕರ ತಿಳಿವಳಿಕೆಗೆ. ಹುಣಿಸೆಮರದ ಕೆಳಗೆ ನಿಂತು ಬಂದ ಬಳಿಕ ಆಕಸ್ಮಿಕವಾಗಿ ತಲೆಸುತ್ತು ವಾಂತಿ ಏನಾದರೂ ಆಗಿ ಅಸ್ವಸ್ಥತೆ ಉಂಟಾದರಂತು ದೆವ್ವವನ್ನೇ ಆರೋಪಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ. ಆದರೆ ವೈಜ್ಞಾನಿಕ ಸತ್ಯ ಬೇರೆಯೇ ಇದೆ. ಬಹುತೇಕ ಗಿಡಮರಗಳು ವಾತಾವರಣದಲ್ಲಿರುವ ಇಂಗಾಲಾಮ್ಲವನ್ನು ಸೇವಿಸಿ ಆಮ್ಲಜನಕವನ್ನು ಹೊರಗೆ ಕಳಿಸುವುದು ಸಸ್ಯ ಪ್ರಪಂಚದ ನಿರಂತರ ವ್ಯಾಪಾರ. ಈ ಪ್ರಕ್ರಿಯೆಗೆ ತದ್ವಿರುದ್ಧವಾಗಿ ಆಮ್ಲಜನಕವನ್ನು ಸೇವಿಸಿ ಇಂಗಾಲವನ್ನು ಬಿಡುವುದು ಹುಣಿಸೇ ಮರದ ವೈಶಿಷ್ಟ್ಯ. ಈ ಇಂಗಾಲದ ಪರಿಣಾಮದಿಂದ ಅದರ ಸಮೀಪದಲ್ಲಿ ಇದ್ದರೆ ಅಸ್ವಸ್ಥತೆ ಉಂಟಾಗುತ್ತದೆ. ಇದಾವುದರ ತಿಳಿವಳಿಕೆ ಇಲ್ಲದ ಮುಗ್ಧಜನ ದೆವ್ವದ ಕೈವಾಡ ಎಂದು ತಿಳಿಯುವರು. ಸಕಲೇಶಪುರದ ಕಡೆ ದೆವ್ವವು ಬಾಳೆಮರದಲ್ಲಿ, ಜೇನುಗೂಡಿನಲ್ಲಿ ವಾಸಿಸುತ್ತದೆ ಎಂಬ ನಂಬಿಕೆಯಿದೆ.

ದೆವ್ವಗಳು ಶ್ಮಶಾನದಲ್ಲಿ ತಾವು ಪಡೆಯುತ್ತವೆಂಬ ಪ್ರತೀತಿ ಕೂಡ ಇದೆ. ಹಾಗಾಗಿ ಅಲ್ಲಿಗೆ ಒಂಟಿಯಾಗಿ ಹೋಗುವ ಸಾಹಸ ಮಾಡುವವರು ವಿರಳ. ದೆವ್ವ ಎಲ್ಲರ ಕಣ್ಣಿಗೂ ಕಾಣಿಸುವುದಿಲ್ಲ. ದೆವ್ವಗಣ್ಣು ಇದ್ದವರು ಮಾತ್ರ ನೋಡಬಲ್ಲರೆಂಬ ನಂಬಿಕೆಯಿದೆ. ಈ ಕುರಿತ ಆಶಯವಿರುವ ಕಥೆಗಳಲ್ಲಿ ಮಾದರಿಯಾಗಿ ಒಂದು ಘಟನೆಯನ್ನು ಇಲ್ಲಿ ನಿರೂಪಿಸಬಹುದು : ವರದಪ್ಪ ಎಂಬಾತನಿಗೆ ದೆವ್ವಗಣ್ಣಿತ್ತು. ಎಷ್ಟೋ ಸಂದರ್ಭದಲ್ಲಿ ಆತನ ಪಕ್ಕದಲ್ಲಿಯೇ ಇರುತ್ತಿದ್ದ ಸ್ನೇಹಿತರ ದೃಷ್ಟಿಗೆ ಬೀಳದ ಸಂಗತಿಗಳು ಆತನಿಗೆ ದೆವ್ವಗಣ್ಣಿನ ಮೂಲಕ ಗ್ರಾಹ್ಯವಾಗುತ್ತಿದ್ದವು. ರವಿ ಕಾಣದ್ದನ್ನು ಕವಿ ಕಂಡ ಎಂಬಂತೆ. ಒಮ್ಮೆ ವರದಪ್ಪ ಮಂಗಳವಾರದ ಸಂತೆಗೆ ಹೋಗಿ ಹಿಂದಿರುಗುತ್ತಿದ್ದ, ಊರಿನ ಶ್ಮಶಾನ ದಾಟಿ ಬರುತ್ತಿದ್ದಾಗ ಅದೇ ಊರಿನ ಭೋಜಪ್ಪ ಎಂಬ ಸತ್ತ ವ್ಯಕ್ತಿಯ ದೆವ್ವ ಅಡ್ಡಗಟ್ಟಿ ಆತನ ಕಂಕುಳಲ್ಲಿ ಇರುಕಿಕೊಂಡಿದ್ದ ಸೀರೆಯನ್ನು ಸೆಳೆದುಕೊಳ್ಳಲೆತ್ನಿಸಿತಂತೆ. ಬಿಡು ಭೋಜಪ್ಪ ಎಂದು ಬೇಡಿದರೂ ಕೇಳದೆ ಕಣ್ಣಿಗೆ ಮರಳು ಹೊಯ್ದು ಬೀಳಿಸಿತು. ಆತನ ಸಹಚರರಿಗೆ ಇವಾವುವೂ ಅರಿವಿಗೆ ಬರಲಿಲ್ಲ. ವರದಪ್ಪ ಬಿದ್ದನೆಂಬುದಷ್ಟೇ ತಿಳಿದಿದ್ದು. ಕೂಡಲೇ ಆತನನ್ನು ಎಳಿಸಿ ಮನೆಗೆ ಕರೆದುಕೊಂಡು ಹೋದರಂತೆ. ಈ ತೆರನ ಘಟನೆಗಳು ದೆವ್ವದ

ಪರಿಕಲ್ಪನೆ ಸಾಪೇಕ್ಷವಾದುದೆಂಬುದನ್ನು ಸೂಚಿಸುತ್ತವೆ.

ವರ್ಗೀಕರಣ :

ದೆವ್ವವನ್ನು ಒಂದು ಶಕ್ತಿ ಎಂದು ತಿಳಿಯುವುದರಿಂದ ಅಧ್ಯಯನದ ಅನುಕೂಲಕ್ಕಾಗಿ ಅವುಗಳನ್ನು ಎರಡು ಭಾಗವಾಗಿ ವಿಂಗಡಿಸಬಹುದು :

೧. ಸಾತ್ವಿಕ ದೆವ್ವಗಳು

೨. ದುಷ್ಟ ದೆವ್ವಗಳು.

ಸ್ವಾತ್ವಿಕ ದೆವ್ವಗಳು ಸಂಭಾವಿತವಾಗಿ ನಡೆದುಕೊಳ್ಳುತ್ತವೆ. ಇವು ಮನುಷ್ಯನಿಗೆ ನೆರವು ನೀಡಬಲ್ಲವು. ಈ ಗುಂಪಿಗೆ ಮಲೆನಾಡಿನ ತೋಟಗಳಲ್ಲಿರುವ ದೆವ್ವಗಳು, ಚೌಡಿ, ಭೂತ ಮತ್ತು ಕುಟುಂಬ ಸಂಬಂಧಿ ದೆವ್ವಗಳನ್ನು ಸೇರಿಸಬಹುದು. ಮಲೆನಾಡಿನಲ್ಲಿ ಕೆಲವು ಕುಟುಂಬಗಳು ತಲೆತಲಾಂತರದಿಂದ ನಡೆದುಕೊಳ್ಳುವ ದೆವ್ವಗಳಿರುತ್ತವೆ. ಅಂಥ ಕುಟುಂಬಗಳಿಗೆ ಸೇರಿದ ಜಾನುವಾರು ಮತ್ತು ತೋಟದ ಫಸಲನ್ನು ರಕ್ಷಿಸುವ ಕಾಯಕ ಮಾಡುತ್ತವೆ. ತೋಟದಲ್ಲಿ ಬಾಳೆಗೊನೆ 'ಹಲಸಿನ ಹಣ್ಣು, ಏಲಕ್ಕಿ' ಮೊದಲಾದುವನ್ನು ಕಳವು ಮಾಡಿದವರಿಗೆ ವಾಂತಿಭೇದಿಯಂಥ ಸೋಂಕು ರೋಗ ಉಂಟುಮಾಡುವುದಲ್ಲದೆ ಕದ್ದವರು ಪ್ರಾಣಭೀತಿಯಿಂದ ಕದ್ದಮಾಲನ್ನು ಅವರ ಮನೆಯ ಮುಂದೆ ಇಟ್ಟುಹೋಗುವಂತೆ ಮಾಡುತ್ತವೆಂದು ಹೇಳುವರು. ಇಂಥ ಕಥೆಗಳು ಈ ಭಾಗದಲ್ಲಿ ಪ್ರಚಾರದಲ್ಲಿದ್ದುದರಿಂದ ಕದ್ದ ವ್ಯಕ್ತಿಯ ಮೇಲೆ ಪರೋಕ್ಷವಾಗಿ ಪರಿಣಾಮ ಬೀರುತ್ತಿದ್ದವು. ಇತ್ತೀಚೆಗೆ ತೀರ್ಥ ಹಳ್ಳಿಯ ಕಡೆ ಕೆಲವರು ತಮ್ಮ ತೋಟದ ದ್ವಾರದಲ್ಲಿ ಇಲ್ಲಿ ಕದ್ದವರು ಭೂತದ ಅವಕೃಪೆಗೆ ಪಾತ್ರರಾಗುವರೆಂದು ಫಲಕಹಾಕಿ ಭೀತಿಯಬೀಜ ಬಿತ್ತುವುದುಂಟು.

ಕುಟುಂಬದ ದೆವ್ವಗಳು ಎಷ್ಟು ಸ್ವಾರ್ಥಿಗಳೆಂದರೆ ಆ ಕುಟುಂಬದವರು ತಮ್ಮ ಮನೆಯಲ್ಲಿರುವ ಯಾವುದಾದರೂ ಹಳೆಯ ಬಂಗಾರದ ಆಭರಣವನ್ನು ಬಂಧುಗಳ ಮಕ್ಕಳಿಗೆ ಉಡುಗೊರೆಯಾಗಿ ನೀಡಿದರೂ ಸಹಿಸಲಾರವು. ಉಡುಗೊರೆ ಪಡೆದವರಿಗೆ ಮೈಮೇಲೆ ಜ್ಞಾನವಿಲ್ಲದಂತೆ ಮಾಡಿ ಆಭರಣ ಹಿಂದಿರುಗಿ ಸುವವರೆಗೂ ತೊಂದರೆ ನೀಡಲು ಹಿಂಜರಿಯುವುದಿಲ್ಲ. ಬೇಲೂರು ತಾಲ್ಲೂಕಿನ ಕೂಶಾವಾರದಲ್ಲಿ ನಡೆಯಿತೆಂದು ಹೇಳಲಾದ ಘಟನೆ ಸ್ವಾರಸ್ಯವಾಗಿದೆ : ಒಮ್ಮೆ ತೋಟದಲ್ಲಿ ನಿಂಬೆಹಣ್ಣು ಯಥೇಚ್ಛವಾಗಿ ಬಿಟ್ಟಿತ್ತು. ಇದನ್ನು ನೋಡಿ ಅವರ ಮನೆಯ ಹೆಂಗಸರು ಉಪ್ಪಿನಕಾಯಿಗೆ ಬೇಕಾದ ಪರಿಕರಗಳನ್ನೆಲ್ಲ ಸಿದ್ಧಪಡಿಸಿಕೊಂಡು ಮರುದಿನ ಹಣ್ಣುಕೀಳಲು ಹೋದರು. ಅವರಿಗೆ ನಿರಾಶೆ ಕಾದಿತ್ತು. ಏಕೆಂದರೆ ಹಣ್ಣುಗಳನ್ನು ಬೇರೊಬ್ಬರು ಕದ್ದೊಯ್ದಿದ್ದರು. ಮೆಣಸಿನ ಕಾಯಿಪುಡಿ ಮಾಡಿದ ಹೆಣ್ಣುಮಗಳಿಗೆ ಸಿಟ್ಟುಬಂದಿತು. ಆಕೆ ಮಾಡಿಟ್ಟ ಪುಡಿಯನ್ನು ದೆವ್ವದ

ಕಲ್ಲಿಗೆ ಹಾಕಿ ಉಜ್ಜಿದರಂತೆ. ಆಗ ದೆವ್ವ ಕಳವು ಮಾಡಿದವರ ಮನೆಯ ಎಮ್ಮೆಯನ್ನೇ ಬಲಿತೆಗೆದುಕೊಂಡಿತು. ಈ ತೆರನ ಕತೆಗಳು ಮಲೆನಾಡಿನಲ್ಲಿ ಹತ್ತಾರು. ಕೊಳ್ಳಿದೆವ್ವಗಳೂ ಕೂಡ ಸಾತ್ವಿಕ ಸ್ವಭಾವದವು. ಅವು ಕೊಳ್ಳಿ ಹಿಡಿದು ಮುನೇಶ್ವರನೊಡನೆ ಆಟವಾಡುತ್ತಿರುತ್ತವೆಂದು ನಂಬಿಕೆ. ಇದನ್ನು ಕುರಿತು –

ಹಳ್ಳ ಕೊಳ್ಳ ಸೈ ಸೈ
ಗುಡ್ಡ ಏರಿ ಸೈ ಸೈ
ಕೊಳ್ಳಿದೆವ್ವ ಬಂದೈತೆ

ಎಂದು ಮೈಸೂರು ಭಾಗದಲ್ಲಿ ಹೇಳುವುದುಂಟು. ಮಲೆನಾಡಿನಲ್ಲಿಯೂ ಕೊಳ್ಳಿದೆವ್ವಗಳು ಕೊಳ್ಳಿ ಉರಿಸುತ್ತ ಕಾಡಿನಲ್ಲಿ ತಿರುಗುತ್ತಿರುತ್ತವೆ ಎಂದು ಹೇಳುವುದು ಸಾಮನ್ಯ. ಇದೂ ಕೂಡ ವೈಜ್ಞಾನಿಕವಾಗಿ ಆಧಾರವಿಲ್ಲದ್ದು. ಕೆಲವೊಮ್ಮೆ ಕಾಡಿನಲ್ಲಿರುವ ರಂಜಕದ ಅಂಶಕ್ಕೆ ಬೆಂಕಿ ತಗುಲಿ ಉರಿಯತೊಡಗುತ್ತದೆ. ಇದನ್ನು ತಿಳಿಯದವರು ಮನಸ್ಸಿಗೆ ತೋಚಿದಂತೆ ವ್ಯಾಖ್ಯಾನಿಸುತ್ತಾರೆ. ಒಟ್ಟಿನಲ್ಲಿ ಸಾತ್ವಿಕ ದೆವ್ವಗಳು ದೇವರುಗಳಂತೆ ದುಷ್ಟಶಿಕ್ಷಣ ಶಿಷ್ಟರಕ್ಷಣದ ಆಶಯವನ್ನಿಟ್ಟುಕೊಂಡು ವ್ಯವಹರಿಸುತ್ತವೆನ್ನಬಹುದು.

ದುಷ್ಟದೆವ್ವಗಳ ಆಶಯ ಮಾನವನನ್ನು ಪೀಡಿಸುವುದಾಗಿದೆ. ಇವು ದನಕರುಗಳಿಗೆ ರೋಗರುಜಿನ ಉಂಟುಮಾಡುವುದಲ್ಲದೆ, ವ್ಯಕ್ತಿಯನ್ನು ಅಶಾಂತಿಯ ಕೂಪಕ್ಕೆ ತಳ್ಳುತ್ತವೆ. ದೆವ್ವ ವ್ಯಕ್ತಿಯ ಮೇಲೆ ಆವಾಹನೆಗೊಳ್ಳುವ ಮೂಲಕ ನಿಯಂತ್ರಣ ಪಡೆಯುವುದಕ್ಕೆ ದೆವ್ವ ಹಿಡಿಯುವುದು ಎನ್ನುತ್ತಾರೆ. ಹೀಗಾದಾಗ ವ್ಯಕ್ತಿ ಮಂಕಾಗಿ ಕುಳಿತುಬಿಡುತ್ತಾನೆ. ಅಳು, ನಿದ್ರೆ, ಆಲಸ್ಯ, ಸ್ವಗತದಲ್ಲಿ ಮಾತನಾಡಿಕೊಳ್ಳುವುದು , ಊಟಮಾಡದೆ ಇರುವುದು, ಇಲ್ಲವೇ ಅತಿಯಾದ ಆಹಾರ ಸೇವಿಸುವುದು ಈ ರೋಗದ ಲಕ್ಷಣ. ಸ್ತ್ರೀಯರಿಗೆ ಹಿಡಿದ ದೆವ್ವಗಳು ಕುರಿಕೋಳಿಯ ಊಟ ಬೇಕೆಂದು ಆಗ್ರಹ ಪಡಿಸುತ್ತವೆ. ಮಲೆನಾಡಿನಲ್ಲಿ ದೆವ್ವ ಹಿಡಿದ ಪುರುಷರು ಕೆಲವೊಮ್ಮೆ ಕಾಣದ ಸ್ಥಳಕ್ಕೆ ತೆರಳುವುದುಂಟು. ಹೀಗೆ ಪರಸ್ಥಳ ಅಥವಾ ಕಾಡಿಗೆ ಹೋಗಿ ಊಟ ನಿದ್ರೆಯಿಲ್ಲದೆ ಎಷ್ಟೋ ದಿನಗಳ ಬಳಿಕ ಹಿಂದಿರುಗಿ ನಾನು ಎಲ್ಲಿದ್ದೆ, ಹೇಗೆ ಹೋಗಿದ್ದೆ ಎಂಬುದೇ ತಿಳಿಯದೆಂದು ಹೇಳುವುದು ಅಚ್ಚರಿ ಉಂಟುಮಾಡುತ್ತದೆ. ಈ ಅವಧಿಯಲ್ಲಿ ದೆವ್ವ ಹಿಡಿದ ವ್ಯಕ್ತಿ ಶಾರೀರಿಕವಾಗಿ ಕೃಶನಾಗುತ್ತ ಹೋಗುವುದನ್ನು ಗಮನಿಸಬಹುದು ; ಮುಖಚರ್ಮ ಗಾಜಿನಂತಾಗುತ್ತದೆ. ಒಟ್ಟಿನಲ್ಲಿ ಜನಪದರು ಮಾನವಸ್ವಭಾವದಲ್ಲಿ ವೈವಿಧ್ಯತೆಯನ್ನು ಗಮನಿಸಿಯೋ ಏನೋ ದೆವ್ವಗಳ ಸ್ವಭಾವದಲ್ಲಿಯೂ ವೈವಿಧ್ಯತೆಯನ್ನು ಕಲ್ಪಿಸಿಕೊಂಡಿದ್ದಾರೆ.

ಸಂಚಾರಿ ಪ್ರವೃತ್ತಿ :

ದೆವ್ವಗಳು ಸ್ಥಾವರವಾಗಿರಲು ಇಚ್ಛಿಸುವುದಿಲ್ಲ. ಅವು ಸಂಚಾರಿ ಸ್ವಭಾವದವೆಂಬಂತೆ ಜನಪದರು ಕಲ್ಪಿಸಿಕೊಂಡಿದ್ದಾರೆ. ಹಾಗಾಗಿ ಅವುಗಳ ಸಂಚಾರದ ಕಥೆಗಳು ಕುತೂಹಲಕಾರಿಯಾಗಿವೆ. ಅವು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಗಾಳಿಯಲ್ಲಿ ಚಲಿಸುತ್ತವೆ ಎಂಬ ಭಾವನೆಯಿದೆ. ಮಲೆನಾಡಿನಲ್ಲಿ ತವರು ಮನೆಯ ದೆವ್ವಗಳು ಕೆಲವೊಮ್ಮೆ ವಿವಾಹಿತ ಹೆಣ್ಣುಮಕ್ಕಳ ಮನೆಗೂ ಹೋಗಿ ಬರುತ್ತಿದ್ದವೆಂದು ಹಿರಿಯರು ಹೇಳುವುದುಂಟು. ತವರಿನವರು ತಮ್ಮ ಕುಟುಂಬಕ್ಕೆ ಸೇರಿದ ದೆವ್ವಗಳಿಗೆ ಸಂಬಂಧಿಸಿದ ಆಚರಣೆಗಳನ್ನು ಉಪೇಕ್ಷಿಸಿ ಅವಿಧೇಯತೆ ತೋರಿದರೆ ಅವು ಹೆಣ್ಣುಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಆಗ ಅವರು ಯಾರನ್ನೂ ನೇರವಾಗಿ ನೋಡದೆ ಮೇಲು ಮಾತನಾಡುತ್ತ ಹಾಸಿಗೆ ಹಿಡಿದು ಮಲಗುತ್ತಾರೆ. ಒಂದೆರಡು ಘಂಟೆ ಅಥವಾ ಒಂದೆರಡು ದಿನ ಕಳೆದ ಬಳಿಕ ಯಥಾಸ್ಥಿತಿಗೆ ಬರುತ್ತಾರೆ. ಈ ತೆರನ ದೆವ್ವದ ಉಪದ್ರವಕ್ಕೆ ಆಸ್ಪತ್ರೆ ಔಷಧವಿಲ್ಲವೆಂದು ನಂಬುವುದರಿಂದ ಯಾರೂ ಔಷಧೋಪಚಾರಗಳನ್ನು ಮಾಡಿಸುವುದಿಲ್ಲ. ಉಪದ್ರವಕ್ಕೆ ಒಳಗಾದವರಿಗೆ ಬಾಹ್ಯಪ್ರಪಂಚದ ಪರಿವೆ ಇರುವುದಿಲ್ಲ. ಅವರು ಗುಣಮುಖರಾದ ಬಳಿಕ ತಾವು ತವರು ಮನೆಗೆ ಹೋಗಿದ್ದೆವೆಂದು ಹೇಳುವುದು ಮಾತ್ರ ಆಶ್ಚರ್ಯವುಂಟುಮಾಡುತ್ತದೆ. ತವರಿನವರು ದೆವ್ವಕ್ಕೆ ಕೋಳಿ ಬಲಿ ನೀಡುವುದಾಗಿ ಹರಸಿಕೊಳ್ಳುತ್ತಾರೆ. ಮಲೆನಾಡಿನ ದೆವ್ವಗಳಾವುವೂ ಸ್ಥಳೀಯವಲ್ಲವೆಂಬ ಅಭಿಪ್ರಾಯವಿದೆ. ಕುಶಾವಾರದ ದೆವ್ವದ ಬಗ್ಗೆ ಅದು ನಾಗೇನಹಳ್ಳಿಯಿಂದ ಬಂದಿತೆಂದು ಆ ಊರಿನವರು ಹೇಳುತ್ತಾರೆ. ಯಮಸಂಧಿಯಲ್ಲಿ ತಮ್ಮ ದೆವ್ವ ಕೂಶಾವಾರದಿಂದ ಬಂದಿತೆನ್ನುವರು. ಹೆತ್ತೂರಿನಲ್ಲಿ ಅಲ್ಲಿನ ದೆವ್ವಗಳು ಘಟ್ಟದ ಕೆಳಗಿನಿಂದ ಬಂದುದಾಗಿ ತಿಳಿಯುತ್ತಾರೆ. ಇಂಥ ಅಭಿಪ್ರಾಯಗಳ ಆಳದಲ್ಲಿ ಸಂಬಂಧಪಟ್ಟ ಕುಟುಂಬಗಳು ವಲಸೆ ಬಂದ ವಿಚಾರವೇನಾದರೂ ಅಡಗಿದೆಯೆ ಎಂಬುದು ಪರಿಶೀಲನಾರ್ಹ.

ಅಮಾವಾಸ್ಯೆಯ ಕಾಳರಾತ್ರಿ, ಮಟ ಮಟ ಮಧ್ಯಾಹ್ನ, ದೆವ್ವಗಳ ಚಲನವಲನಕ್ಕೆ ಸೂಕ್ತ ಸಮಯವೆಂಬುದು ಸಾಮಾನ್ಯ ನಂಬುಗೆ. ಅವು ಹೀಗೆ ಸಂಚರಿಸುವಾಗ ತಮಗೆ ಬೇಕಾದ ವ್ಯಕ್ತಿಯನ್ನು ಆರಿಸಿಕೊಳ್ಳುತ್ತವೆ. ಒಮ್ಮೆ ಹೆಣ್ಣುಮಗಳೊಬ್ಬಳು ಹಾಸನ ಬಸ್ ನಿಲ್ದಾಣದಲ್ಲಿ ಬಸ್ ಕಾಯುತ್ತಿದ್ದಳಂತೆ. ಊರಿಗೆ ಬಂದ ಕೂಡಲೇ ಅಸ್ವಸ್ಥಳಾದಳು. ದೆವ್ವ ಹಿಡಿದ ಲಕ್ಷಣ. ಮಂತ್ರವಾದಿ ಮಾತನಾಡಿಸಿದಾಗ ಈಕೆ ಹಾಸನದ ಬಸ್ ಸ್ಟ್ಯಾಂಡಿನಲ್ಲಿದ್ದಳು. ಈಕೆಯ ಮೇಲೆ ಆಸೆಯಾಯಿತು ಬಂದೆ ಎಂದು ಅವಳಲ್ಲಿ ಹೊಕ್ಕಿದ್ದ ದೆವ್ವ ಉತ್ತರಿಸಿತೆಂದು ಕ್ಷೇತ್ರಕಾರ್ಯದಲ್ಲಿ ಒಬ್ಬರು ವಿವರಿಸಿದರು. ಮೈಸೂರು ಸಮೀಪದ ಒಂದು ಊರಿನಲ್ಲಿ ಒಬ್ಬ ಮಹಿಳೆಯ ಮೇಲೆ ಏಕಕಾಲಕ್ಕೆ ಮೂರು ದೆವ್ವ ಸೇರಿಕೊಂಡಿದ್ದವಂತೆ. ಅವುಗಳಲ್ಲಿ ಒಂದು ಬ್ರಾಹ್ಮಣ, ಮತ್ತೊಂದು ಒಕ್ಕಲಿಗ, ಮೂರನೆಯದಕ್ಕೆ ನಿರ್ದಿಷ್ಟ ಜಾತಿಯಿಲ್ಲ. ಬ್ರಾಹ್ಮಣದೆವ್ವ ಪ್ರಬಲವಾದಾಗ ಆಕೆ ಮಲ್ಲಿಗೆ ಹೂವು ಮುಡಿದು ಒಳ್ಳೆಯ ಸೀರೆ ಉಟ್ಟು ತಾಂಬೂಲ ಹಾಕಿಕೊಂಡು ಇರುತ್ತಿದ್ದಳಂತೆ. ಒಕ್ಕಲಿಗ ದೆವ್ವ ಎಚ್ಚೆತ್ತಾಗ ಕುರಿ ಕೋಳಿಗಳ

ಊಟಕ್ಕಾಗಿ ಆಗ್ರಹ ಪಡಿಸುತ್ತಿದ್ದಳಂತೆ. ಮೂರನೆಯ ದೆವ್ವ ಮೇಲುಗೈ ಪಡೆದಾಗ ಬೇರೆ ರೀತಿಯ ಬೇಡಿಕೆಗಳಿರುತ್ತಿದ್ದವೆಂದು ಕೇಳಿದಾಗ ಜಾತಿ ವ್ಯವಸ್ಥೆ ಈ ದೇಶದಲ್ಲಿ ಎಷ್ಟು ಆಳವಾಗಿ ಬೇರೂರಿದೆ ಎಂಬ ವಾಸ್ತವತೆ ತಿಳಿಯದಿರದು. ಇಂಥ ಹಲವು ಕಥೆಗಳನ್ನು ಹೇಳುತ್ತ ಹೋಗಬಹುದು.

ದುಷ್ಟದೆವ್ವಗಳು ಬದುಕಿನ ದುಷ್ಟಪಾತ್ರಗಳನ್ನು ಸಂಕೇತಿಸುತ್ತವೆಂಬುದನ್ನು ಈಗಾಗಲೇ ಗಮನಿಸಿದೆ. ಆದರೆ ಸಾತ್ವಿಕ ದೆವ್ವಗಳು ಸಹಕಾರ ಮನೋಭಾವ ಉಳ್ಳವೆಂಬುದಕ್ಕೆ ಅನೇಕ ನಿದರ್ಶನಗಳು ದೊರೆಯುತ್ತವೆ. ಸುಮಾರು ಮೂರುನಾಲ್ಕು ದಶಕಗಳ ಹಿಂದೆ ಮಲೆನಾಡಿನ ಸಾರಿಗೆ ವ್ಯವಸ್ಥೆ ಬಹಳ ದುರ್ಬಲವಾಗಿತ್ತು. ಆದುದರಿಂದ ಬಸ್ ಇಳಿದು ಬಹುದೂರದ ತಮ್ಮ ಮನೆಗಳಿಗೆ ಕಾಲ್ನಡಿಗೆಯಲ್ಲಿಯೇ ಕ್ರಮಿಸಬೇಕಾಗುತ್ತಿತ್ತು. ಸಕಲೇಶಪುರ ಭಾಗದಲ್ಲಿ ಕೋರ್ಟು ಕಛೇರಿ ವ್ಯವಹಾರಗಳಿಗೆ ಪೇಟೆಗೆ ಹೋದವರು ಹಿಂದಿರುಗುವಾಗ ಕತ್ತಲಾದರೆ ಅವರ ಕುಟುಂಬದ ದೆವ್ವಗಳು ಬಸ್ ನಿಲುಗಡೆಯ ತಾಣದಲ್ಲಿ ಕಾದಿದ್ದು ನಾಯಿಯ ರೂಪದಲ್ಲಿ ಯಜಮಾನನನ್ನು ಹಿಂಬಾಲಿಸಿಕೊಂಡು ಬಂದು ಸುರಕ್ಷಿತವಾಗಿ ಮನೆ ತಲುಪಿದ ಮೇಲೆ ಮಾಯವಾಗಿ ಬಿಡುತ್ತಿದ್ದವೆಂದೂ ಈಗ ಈ ಪರಿಪಾಟ ನಿಂತು ಹೋಗಿದೆ ಎಂದೂ ಇದಕ್ಕೆ ಈಗಿನವರ ಔದಾಸೀನ್ಯವೇ ಕಾರಣವೆಂದೂ ವೃದ್ಧರು ವಿವರಿಸುತ್ತಾರೆ. ಹಿಂದೆ ಗೌಡರೊಬ್ಬರು ಒಂದು ದಿನ ರಾತ್ರಿ ಬಸ್ಸಿಳಿದು ಬರುವಾಗ ಹೊರಗಿನ ದೆವ್ವವೊಂದು ಅಡ್ಡಗಟ್ಟಿತಂತೆ. ಆಗ ಕುಟುಂಬದ ದೆವ್ವ ಗೌಡರ ರಕ್ಷಣೆಗೆ ನಿಂತು ಅದನ್ನು ಓಡಿಸಿ ಪಾರುಮಾಡಿತಂತೆ. ಮತ್ತೊಂದು ಪ್ರಸಂಗದಲ್ಲಿ ಹೊಸಹಳ್ಳಿಯ ಮಹಿಳೆಯೊಬ್ಬರು ಪಕ್ಕದ ಊರಿನ ಬಂಧುಗಳ ಮನೆಗೆ ಭೇಟಿಯಿತ್ತು ವಾಪಸ್ಸಾಗುತ್ತಿದ್ದರು. ಕತ್ತಲಾಯಿತು. ದಾರಿ ಕಾಣದೆ ಕಾಡಿನಲ್ಲಿಯೇ ಒಂದೆಡೆ ಮಲಗಿದರು. ಅಂದು ಅವರ ಮನೆಯ ದೆವ್ವ ಹಂದಿಗಳ ರೂಪ ತಳೆದು ಇಡೀರಾತ್ರಿ ಆಕೆಯನ್ನು ಸುತ್ತುಗಟ್ಟಿ ಕುಳಿತಿದ್ದವೆಂದು ಹಿರಿಯರೊಬ್ಬರು ಹಿಂದೆ ನಡೆದ ಘಟನೆಯನ್ನು ಮೆಲುಕುಹಾಕಿದರು. ಹೀಗೆ ಸಾತ್ವಿಕ ಸ್ವಭಾವದ ದೆವ್ವಗಳು ಸ್ವಾಮಿ ನಿಷ್ಠೆಗೆ ಹೆಸರಾಗಿದ್ದವು. ಇವು ಬೇರೆಡೆಗೆ ತೆರಳುವಾಗ ಮನೆಯ ಯಜಮಾನನಿಗೆ ಹೇಳಿ ಹೋಗುತ್ತಿದ್ದವಂತೆ. ಪುರುಷ ಪ್ರಧಾನ ಸಮಾಜದಲ್ಲಿ ಯಜಮಾನನಿಗೆ ವಿಶಿಷ್ಟ ಸ್ಥಾನಮಾನವಿರುವ ಅಂಶ ದೆವ್ವಗಳ ನಡವಳಿಕೆಯಲ್ಲಿಯೂ ಪ್ರತಿಬಿಂಬಿತವಾಗಿರುವುದನ್ನು ಗಮನಿಸಬಹುದು. ಇಲ್ಲೆಲ್ಲ ಜನಪದರು ದೆವ್ವಗಳನ್ನು ಕಾಲ್ಪನಿಕ ವ್ಯಕ್ತಿಯಂತೆ ಊಹಿಸಿ ಕೊಳ್ಳದೆ ವಾಸ್ತವ ಜಗತ್ತಿನ ಪಾಲುದಾರರೆಂಬಂತೆ ಪರಿಗಣಿಸಿರುವುದು ಸುವ್ಯಕ್ತ.

**ದಯ್ಯಕ್ಕೆ ಅನ್ನ ಕೊಡುವುದು :**

ದೆವ್ವ ಮತ್ತು ಮನೆಯ ಯಜಮಾನನ ಸಂಬಂಧ ಸೌಹಾರ್ದಯುತವಾಗಿದ್ದರೆ ಮಾತ್ರ ದೈನಂದಿನ ಕೆಲಸ ಕಾರ್ಯಗಳು ಸುಸೂತ್ರ. ಈ ಸ್ವಾಮಿನಿಷ್ಠ ದೆವ್ವಗಳು ತಮ್ಮ ಯಜಮಾನನಿಂದ ನಿರೀಕ್ಷಿಸುವುದಾದರೂ ಏನನ್ನು? ಮಾಂಸಾಹಾರದ ಊಟ ಮಾತ್ರ.

ಹಾಸನ ಚಿಕ್ಕಮಗಳೂರು ಭಾಗದ ಮಲೆನಾಡ ಒಕ್ಕಲಿಗರಲ್ಲಿ ಪ್ರತಿ ಕುಟುಂಬವೂ ತಮ್ಮ ಮನೆಗೆ ಸೇರಿದ ದೆವ್ವಗಳಿಗೆ ಊಟೋಪಚಾರದಿಂದ ತೃಪ್ತಿಪಡಿಸುವ ಸಂಪ್ರದಾಯವಿದೆ. ಇದಕ್ಕೆ ಬೇಲೂರು ಚಿಕ್ಕಮಗಳೂರು ಭಾಗದಲ್ಲಿ 'ದಯ್ಯಕ್ಕೆ ಇಕ್ಕುವುದು' ಎಂದೂ ಸಕಲೇಸಶಪುರ ಭಾಗದಲ್ಲಿ 'ದಯ್ಯಕೆ ಅನ್ನ ಕೊಡುವುದು' ಎಂದೂ ಕರೆಯುತ್ತಾರೆ. ದೆವ್ವಕ್ಕೆ ನಿಯಮದಂತೆ ಕಾಲಕಾಲಕ್ಕೆ ಅನ್ನ ಕೊಡದಿದ್ದರೆ ಜಾನುವಾರುಗಳಿಗೆ ಅಥವಾ ಮಕ್ಕಳಿಗೆ ತೊಂದರೆ ನೀಡುವ ಮೂಲಕ ಎಚ್ಚರಿಸುತ್ತವೆ. ಅಷ್ಟೇ ಅಲ್ಲ ಮನೆಯ ಬಾಗಿಲು ತೆರೆದು ಹೋಗುವುದು, ಬಾಗಿಲ ಚಿಲಕ ಅಲ್ಲಾಡಿಸುವುದು ಇವೇ ಮೊದಲಾದ ಚೇಷ್ಟೆಗಳಲ್ಲಿ ತೊಡಗಿ ತನ್ನ ಅಸಮಾಧಾನವನ್ನು ಪರೋಕ್ಷವಾಗಿ ಸೂಚಿಸುತ್ತಿದ್ದ ಪ್ರಸಂಗವಿತ್ತಂತೆ. ಮನೆಯ ಯಜಮಾನ ಮಹಡಿಯ ಮೇಲೆ ಮಲಗಿದ್ದರೆ ಆತನನ್ನು ಕೆಳಗೆ ಎಳೆತಂದು ಬಿಡುತ್ತಿದ್ದುದೂ ಉಂಟು. ನಿದ್ರಾವಸ್ಥೆಯಲ್ಲಿದ್ದ ಆತನಿಗೆ ಇದಾವುದರ ಪರಿವೆಯೂ ಇರುತ್ತಿರಲಿಲ್ಲ.

ದಯ್ಯಕ್ಕೆ ಅನ್ನ ನೀಡುವ ಕಾರ್ಯ ಜೂನ್ ತಿಂಗಳಿನಲ್ಲಿ ನಡೆಯುವುದು. ಇದಕ್ಕೆ ನಿರ್ದಿಷ್ಟ ದಿನವಿಲ್ಲ. ಮಳೆಗಾಲದಲ್ಲಿ ತಮ್ಮ ಅನುಕೂಲಕ್ಕೆ ಅನುಗುಣವಾಗಿ ಎಂದಾದರೂ ಏರ್ಪಡಿಸುವರು. ಇದು ಮನೆಯಲ್ಲಿ ನಡೆಯುವುದಿಲ್ಲ. ಹಗಲು ಹೊತ್ತಿನಲ್ಲಿ ತೋಟದೊಳಗೆ ಜರಗುವುದು. ದೆವ್ವಕ್ಕೆ ನಾಲ್ಕು ಕಾಲಿನ ಪ್ರಾಣಿಯಾಗಲೇಬೇಕೆಂಬುದು ನಿಯಮ. ಆದರೆ ಎಲ್ಲರಿಗೂ ಇದನ್ನು ಪೂರೈಸಲಾಗುವುದಿಲ್ಲ. ಹಾಗಾಗಿ ಎರಡು ಕೋಳಿ ಅಥವಾ ಒಂದು ಹಂದಿಯನ್ನು ಅರ್ಪಿಸುತ್ತಾರೆ. ದಯ್ಯಕ್ಕೆ ಇಕ್ಕುವ ಆಚರಣೆಯಲ್ಲಿ ಹೆಂಗಸರು ಪಾಲ್ಗೊಳ್ಳುವಂತಿಲ್ಲ. ಮನೆಯಲ್ಲಿ ಅಡುಗೆ ಮಾಡಿ ತೆಗೆದುಕೊಂಡು ಹೋಗುವುದಕ್ಕೂ ನಿಷೇಧವಿದೆ. ಆದುದರಿಂದ ಗಂಡಸರು ಮಕ್ಕಳು ಇದರಲ್ಲಿ ಪ್ರಧಾನ ಪಾತ್ರ ವಹಿಸಿ ಪಾತ್ರೆ ಪಡಗ ಅಡುಗೆ ಸಾಮಗ್ರಿಯನ್ನು ತೋಟಕ್ಕೆ ಸಾಗಿಸುತ್ತಾರೆ. ಅಲ್ಲಿ ವಿಶಾಲವಾದ ವೃಕ್ಷದ ಕೆಳಗೆ ಕಲ್ಲುಗಳನ್ನು ಇಟ್ಟು ದೆವ್ವವನ್ನು ಆವಾಹಿಸುತ್ತಾರೆ. ಇದು ಪ್ರಕೃತಿಯಾರಾಧನೆಯ ಪಳೆಯುಳಿಕೆಯೂ ಆಗಿರಬಹುದು. ಅನಂತರ ಪ್ರಾಣಿ ಬಲಿ ನೀಡಿ, ಅನ್ನ ಮಾಂಸದ ಸಾರು ತಯಾರಿಸಿ, ಕಲ್ಲಿನ ಮುಂದೆ ಎಡೆಯಿಟ್ಟು ಪೂಜಿಸಿ ತಮ್ಮ ಬೆಳೆಯನ್ನೂ ಪ್ರಾಣಿ ಸಂಕುಲವನ್ನೂ ರಕ್ಷಿಸುವಂತೆ ಬೇಡಿಕೊಳ್ಳುತ್ತಾರೆ. ಕಡೆಯಲ್ಲಿ ಅಲ್ಲಿ ಸೇರಿದ್ದವರೆಲ್ಲ ಊಟ ಮಾಡುತ್ತಾರೆ. ದಯ್ಯಕ್ಕೆ ಮಾಡಿದ ಅಡುಗೆಯನ್ನು ಮನೆಗೆ ತೆಗೆದುಕೊಂಡು ಹೋಗಬಾರದೆಂಬ ನಿಯಮ ಇರುವುದರಿಂದ ಅಡುಗೆ ಮಿಕ್ಕಿದರೂ ಮನೆಗೊಯ್ಯುವ ಸಾಹಸಕ್ಕೆ ಯಾರೂ ಕೈಹಾಕುವುದಿಲ್ಲ.

**ದೆವ್ವ ಬಿಡಿಸುವುದು :**

ದೆವ್ವಗಳಲ್ಲಿ ಈ ಮೊದಲೇ ಉಲ್ಲೇಖಿಸಿದಂತೆ ಸಾತ್ವಿಕ ದೆವ್ವಗಳು ವ್ಯಕ್ತಿಯನ್ನು ಹಿಡಿದಲ್ಲಿ ಕೇಳಿದ ಊಟ ಪೂರೈಸಿದರೆ ಸಾಕು ಬಿಟ್ಟು ಹೋಗುತ್ತವೆ. ಆದರೆ ದುಷ್ಟ ದೆವ್ವಗಳ

ಬಿಡುಗಡೆಯ ವಿಚಾರ ಸುಲಭವಲ್ಲ. ದೆವ್ವಗಳಲ್ಲಿಯೂ ಹೆಣ್ಣುಗಂಡು ಎಂದು ಜನಪದರು ಲಿಂಗಭೇದ ಕಲ್ಪಿಸಿದ್ದಾರೆ. ಹೆಣ್ಣುದೆವ್ವ ಪುರುಷದೆವ್ವವನ್ನೂ ಪುರುಷದೆವ್ವ ಸ್ತ್ರೀಯನ್ನೂ ಹಿಡಿದರೆ ಆಗಲಿಸುವುದು ಮತ್ತಷ್ಟು ಕಠಿಣ. ಹೆಣ್ಣುಮಕ್ಕಳು ಬಯಲುಸೀಮೆಯಲ್ಲಿ ಹೊರಗೆ ನೀರಿಗೆಂದು ಹೋದಾಗ, ಇಲ್ಲವೇ ಬಟ್ಟೆ ಒಗೆಯಲು ತೆರಳಿದಾಗ, ಇದರ ಕೋಟಲೆಗೆ ಒಳಗಾಗುವುದು ಹೆಚ್ಚು. ದೆವ್ವ ಪಾದರಕ್ಷೆಗಳಿಗೆ ಹೆದರುತ್ತವೆಂಬ ನಂಬಿಕೆಯಿದೆ. ಅದು ದಾರಿಗರ ಪಾದ ಮೂಸುವುದೆಂದೂ ಕೆರ ಇದ್ದರೆ ದೂರ ಸರಿಯುವುದೆಂದೂ ನಿರೂಪಿಸುತ್ತಾರೆ. ಪಾದರಕ್ಷೆ ಬಳಕೆಗೆ ಬರುವ ಆರಂಭದಲ್ಲಿ ಇಂಥ ಸಂಗತಿಗಳು ಹುಟ್ಟಿಕೊಂಡಿರಬೇಕೆಂಬ ಶಂಕೆ ಮೂಡುತ್ತದೆ. ಕೆ.ಆರ್.ಪೇಟೆ ಸಮೀಪದ ಒಂದು ಹಳ್ಳಿಯಲ್ಲಿ ಒಬ್ಬಾತ ಕುದುರೆ ಮೇಯುತ್ತಿರುವುದನ್ನು ಕಂಡನಂತೆ. ಸುತ್ತಲಲ್ಲಿ ಯಾರೂ ಕುದುರೆ ಸಾಕಿಲ್ಲವೆಂಬ ಅಂಶ ಆತ ಅರಿತಿದ್ದನಂತೆ. ಹಾಗಾಗಿ ಅದು ದೆವ್ವವೇ ಇರಬೇಕೆಂಬ ಅನುಮಾನದಿಂದ ಎಕ್ಕಡ ತೆಗೆದು ಅದರ ಮೇಲೆ ಎಸದ. ಅದು ಓಡಿಸಿಕೊಂಡು ಬಂದು ಅದೃಶ್ಯವಾಯಿತೆಂಬ ಕಥೆಯಲ್ಲಿಯೂ ದೆವ್ವಕ್ಕೆ ಎಕ್ಕಡ ಅಸ್ತ್ರವಾಗಿರುವುದನ್ನು ತಿಳಿಯಬಹುದು.

ಮಲೆನಾಡಿನಲ್ಲಿ ದೆವ್ವ ಬಿಡಿಸಲು ಚಾಲ್ತಿಯಲ್ಲಿರುವ ಸಾಮಾನ್ಯ ವಿಧಾನಗಳೆಂದರೆ ಕುಲದೇವತೆಯನ್ನು ಪೂಜಿಸಿ ಪ್ರಸಾದ ಇಡಿಸುವುದು. ಧರ್ಮಸ್ಥಳಕ್ಕೆ ಕರೆದೊಯ್ಯುವುದು. ಇದರಲ್ಲಿಯೂ ವಿಫಲವಾದರೆ ವೈದ್ಯಕೀಯ ಚಿಕಿತ್ಸೆಯ ಕಡೆಗೆ ಯೋಚಿಸದೆ ಮಂತ್ರವಾದಿಗೆ ಮೊರೆಹೋಗುವರು. ಬಯಲುಸೀಮೆಯಲ್ಲಿ ಎಕ್ಕಡ ಮತ್ತು ಬೀಡಿಯನ್ನು ಎಣ್ಣೆಯಿಲ್ಲದ ಬರದೀಪದಲ್ಲಿ ಹಚ್ಚಿ ದೆವ್ವ ಹಿಡಿದವರ ಮುಂದೆ ಸುಡುತ್ತಾರೆ. ಬರಲಿನಿಂದ ರೋಗಿಯನ್ನು ಹೊಡೆಯುತ್ತಾರೆ. ಇದನ್ನೆಲ್ಲ ನಿರ್ವಹಿಸುವವರು ಆಯಾ ಊರಿನ ದೆವ್ವ ಬಿಡಿಸುವ ನಿಪುಣರು. ಮೇಲಿನ ಪ್ರಯತ್ನಗಳು ನಿಷ್ಪ್ರಯೋಜಕವೆನಿಸಿದಾಗ ಮಂತ್ರವಾದಿಯನ್ನು ಕರೆಸುತ್ತಾರೆ.

ಮಂತ್ರವಾದಿಗಳು ಚೌಡಿ ಕಾಳಿಯಂಥ ಶಕ್ತಿದೇವತೆಯ ಆರಾಧಕರಾಗಿರುವುದು ಸಾಮಾನ್ಯ. ಅವರು ರಂಗೋಲಿ ಅರಿಶಿನ ಕುಂಕುಮ ಇಟ್ಟಿಗೆ ಪುಡಿಗಳಿಂದ ಮಂಡಲ ಬರೆದು ಅದರ ಮಧ್ಯದಲ್ಲಿ ರೋಗಿಯನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿ ಮಂತ್ರ ಪಠಿಸುತ್ತಾರೆ. "ಓಂ ಸ್ವರ ಚಂಡಿ ಸದಾಕೋಟ ಮೌಳಿ ಸರ್ವಕಲ್ಯಾಣಿ ಸರ್ವದುಷ್ಟದೈವಂಗಳೆ ಮೇದಿ ವಿಡಿ ವಿಡಿ ಅಘೋರತ್ತಂಡನೆ ಅಂಡ ವರುಂಡ ರಾತಾಳಂ ಆಕಾಶಂ ಕೂಡಿ ಮುಟ್ಟಿಕೊಳಂಗು ವಿಳುಗು ವಿರ್ಳದುರ್ರ ವಿಳಂದುರು ಯಮುನೆ ಶರಂ ಜಾರು ಬ್ರಹ್ಮ ಮೈಯಡತ್ತುಯೇರು ಶಿವನೆ ಮುರುಕ್ಕು ದುಷ್ಟದೈವಂಗಳ ಕೊಲ್ಲು ಕೊಡಲೆ ಆರುಯರಣಿಯನೆ ಸಂಗು ಉದರಂಗಳೇ ವಾರಂ ಪೊಣ್ಣ ದೇವೇಂದ್ರನಡಿ ಶತ್ರುಗಳು ಪೆರಟ್ರು ಅಂತ್ರ ಧೂವನೇ ಜಾಟ ಮಂತ್ರವಾರಕ್ಕೆಲ್ಲಾ ಪದನಾರು ಕೋಣಕುತ್ತನ ದೇವಾದಿದೇವರು ವಂದಾಲು ಮಗ ವಿಷ್ಣು ಚಕ್ರತ್ತ ಚಾಲು ಆರು ಆರು ಮುರಿ ಎಂಟು ದಿಕ್ಕಂ ಪದನಾರು ಕೋಣ ಕುತ್ತನ್ ದೇವಾದಿದೇವರು ವಂದಾಲುಂ ವಿಚಾರ ಯಟ್ಟಪೊಳ ಮಹಂಕಾಳಿಯೇ ಜೇರ ಜಾರುಯೆತ್ರಿ

ಪಿಶಾಚಿಯೆ ಯಿತ್ರಿ ಮೇದಿ ಬ್ರಹ್ಮ ರಾಕ್ಷಸಿಯೇ ಕೈರ್ಯಮುರುಪೇಷಿಯೇ ವಗತ್ರಿಯೆ ಮುಳತ್ರೊಯಿ ಕನ್ನತಲ್ಲಡಿ ಕಿವ್ವು ಮುಂಡು ಮುಂಡು ಚಂಡಿ ಪ್ರಚಂಡಿ ವೃಂದಾಡು ವೃಂದಾಡು ಯೇರಿ ಯೇರಿ ಸುಡು ಸುಡು ಆನೆ ಮಗತ್ರಾಣೆ ಹರಿಯಾಣೆ ಪರಮೇಶ್ವರ ಪಾದತ್ರಾಣೆ ಶುಡು ಚುವ್ವಾ ಶುಡ್ರು ಚ್ಯುವಾ'' ಎಂದು ಹೇಳುತ್ತಾರೆ.

ದೆವ್ವ ಬಿಡಿಸುವ ವಿಧಾನದಲ್ಲಿ ಮಂತ್ರವಾದಿ ಗಳಲ್ಲಿಯೇ ಪರಸ್ಪರ ಕ್ವಚಿತ್ತಾದ ಬದಲಾವಣೆ ಗಳಿರುತ್ತವೆ. ಕೆಲವು ಮಂತ್ರವಾದಿಗಳು ತಂಬೂರಿ ನುಡಿಸುತ್ತ ಪಿಶಾಚಿಗಳನ್ನು ಆಹ್ವಾನಿಸುವ ಮಂತ್ರ ಪಠಿಸುತ್ತಾರೆ. ``ಓಂ ನಮೋ ಕ್ಲೀಂ ಡಾಂ ತಡೆಯದೆ ಮಹಮ್ಮಾಯಿ ಆದಿಶಕ್ತಿ ಚೌಡೇಶ್ವರಿ ಬರುವಳು, ನಿರೀಕ್ಷಿಸಿ ನಿನ್ನನ್ನು ಶಿಕ್ಷಿಸುವಳು. ಯಾವ ಜನ್ಮದ ಪ್ರೇತವೋ, ಮತ್ತಾವ ಜನ್ಮದ ಪ್ರೇತವೋ, ನಿನ್ನ ಹೆಸರೇನು ? ನೀನಾವ ಗ್ರಹವೋ ? ದುಷ್ಟನೋ ? ಶಿಷ್ಟನೋ ? ಇಲ್ಲಿರುವ ದೇವೇಂದ್ರರು, ಇಲ್ಲಿರುವ ದುರ್ಗಿಗಳು, ಇಲ್ಲಿರುವ ಮಹಾವೀರಭದ್ರರು, ಭದ್ರ ಕಾಳಿ ಮಹಂಕಾಳಿಯವರು, ಇಲ್ಲಿರುವ ಮಹಾವೀರ ಅಘೋರ ನಾರಸಿಂಹರು, ಮತ್ತೆ ವೀರ ಆಂಜನೇಯನು, ರಣಸಿದ್ದರು, ಕೋಟಿಸಿದ್ದರು, ಮುನಿಮುನ್ಯಾದಿಗಳು, ಎಲ್ಲಿಪ್ಪೆಯೋ ? ಯಾವ ಸ್ಥಳದಲ್ಲಿಪ್ಪೆಯೋ ? ಯಾವ ದಿಕ್ಕಿನಲ್ಲಿಪ್ಪೆಯೋ ? ಯಾವ ಗಿರಿ ಗಹ್ವರದೊಳಿಪ್ಪೆಯೋ ? ಯಾವ ಸ್ಥಳದಲ್ಲಿಪ್ಪೆಯೋ ? ವೃಕ್ಷಜನ ಮೇಲಿಪ್ಪೆಯೋ ? ಮತ್ತಾವ ಸ್ಥಳದಲ್ಲಿಪ್ಪೆಯೋ ? ಹೇ ದೈವವೇ ! ಹೇ ಪೀಡೆಯೇ ! ಹೇ ಪಿಶಾಚಿಯೇ ! ಹೇ ಬ್ರಹ್ಮ ರಾಕ್ಷಸನೇ ! ಹೇ ಕ್ಷುದ್ರಗ್ರಹವೇ ! ಹೇ ಚಂಡಾಲಗ್ರಹವೇ ! ಎಲ್ಲಿರುವೆಯೋ ? ಓಡಿಬಾ, ಇಳಿದುಬಾ, ಶೀಘ್ರಬಾ ಅಲ್ಲಿ ಬಾ ಹಹಹಾ'' ಎಂದು ತಮಿಳು ಮಿಶ್ರಿತ ಭಾಷೆಯಲ್ಲಿ ಕರೆಯುವ ಪರಿ ಭಯಾನಕ. ಅನಂತರ ಕೆಂಪುದಾರದಿಂದ ತಾಯತ ಕಟ್ಟಿ ದೆವ್ವ ಬಿಟ್ಟುದರ ಕುರುಹಾಗಿ ಕೂದಲು ಕಿತ್ತುಕೊಡುವಂತೆ ಕೇಳುತ್ತಾರೆ. ಹಾಗೆಯೇ ಉಗುರು ಕಿತ್ತು ಕೊಡಲೂ ಹೇಳುತ್ತಾರೆ. ಸಂಭಾವನೆಯಾಗಿ ಹಣ ಮತ್ತು ಕೋಳಿ ಕೊಡುವಂತೆ ಒತ್ತಾಯಿಸುತ್ತಾರೆ. ಬಿಜಾಪುರದ ಜೋಡಿ ಗುಮ್ಮಟದಲ್ಲಿ ದೆವ್ವ ಬಿಡಿಸುವುದು ಒಂದು ಉದ್ಯಮವಾಗಿದೆ. ಇಲ್ಲಿ ದೆವ್ವ ಬಿಡಿಸಿದವರಿಗೆ ಒಂದು ಹುಂಜ ಮತ್ತು ನಿಂಬೆಹಣ್ಣನ್ನು ಕೊಡಬೇಕಾಗುತ್ತದೆ. ದೆವ್ವ ಬಿಡಿಸುವುದು ಹಲವು ಸಂದರ್ಭದಲ್ಲಿ ಶೋಷಣೆಗೆ ಮಾರ್ಗ ಮಾಡಿಕೊಟ್ಟಿರುವುದೂ ಉಂಟು.

ಹಾಸನ ಭಾಗದಲ್ಲಿ ಈರಾ ಹಿಡಿದರೆ ಪಶುಗಳಿಗೆ ಮದುವೆ ಮಾಡುವ ಮೂಲಕ ನಿವಾರಿಸಿಕೊಳ್ಳಲೆತ್ನಿಸುವರು. ಮೈಸೂರು ಮಂಡ್ಯ ಭಾಗದಲ್ಲಿ ಒಂದೇ ವ್ಯಕ್ತಿಗೆ ಪದೇ ಪದೇ ದೆವ್ವ ಹಿಡಿಯುತ್ತಿದ್ದರೆ ಒಂದು ಕಲ್ಲಿನ ಮೇಲೆ ದೆವ್ವದ ಹೆಸರು ಬರೆದು ನೆಲದಲ್ಲಿ ಹೂಳುತ್ತಾರೆ. ಇದಕ್ಕೆ, 'ಕಲ್ಲು ನೆಡಿಸುವುದು' ಎಂದು ಕರೆಯಲಾಗುವುದು. ಬ್ರಾಹ್ಮಣರಲ್ಲಿಯೂ ದೆವ್ವದ ಪರಿಕಲ್ಪನೆ ಇದ್ದು ದೆವ್ವ ಬಿಡಿಸುವಾಗ ಅವರೂ ಕೂಡ ಮಂತ್ರ ಉಚ್ಚರಿಸುತ್ತಾರೆ. ಅದು ಸಂಸ್ಕೃತದಲ್ಲಿದೆ :

ಭೂತೋಚ್ಚಾಟನಂ ಅಪಸರ್ಪನ್ತು
ಯೇ ಭೂತಾ ಯೇ ಭೂತಾ ಭೂಮಿ ಸಂಸ್ಥಿತಾಃ
ಯೇ ಭೂತಾ ವಿಘ್ನಕರ್ತಾರಃ
ತೇ ನಶ್ಯನ್ತು ಶಿವಾಜ್ಞಯಾ ೧

ಅಪಕ್ರಾಮನ್ತು ಭೂತಾದ್ಯಾಃ
ಸರ್ವೇಶೇ ಭೂಮಿಭಾರತಾಃ
ಸರ್ವೇಷಾಮವಿರೋಧೇನ
ಬ್ರಹ್ಮಕರ್ಮ ಸಮಾರಭೇ ೨

ಹೀಗೆ ದೆವ್ವ ಬಿಡಿಸುವ ವಿಧಾನದಲ್ಲಿ ಜನಪದ ಮತ್ತು ಶಿಷ್ಟ ಅಂಶಗಳು ಅಂತರ್ಗತವಾಗಿರುವುದನ್ನು ಗಮನಿಸಬಹುದು.

ಹಳ್ಳಿಗಳಲ್ಲಿ ಜ್ವರ ಚಳಿ ಬಂದರೆ ದೆವ್ವ ಕಾಟವೆಂದು ಭಾವಿಸುವವರಿಗೆ ಇಂದಿಗೂ ಕೊರತೆಯಿಲ್ಲ. ಆದುದರಿಂದ ದೇವರಿಗೆ ತೋರುವಷ್ಟೇ ಭಯ ಭಕ್ತಿಯನ್ನು ದೆವ್ವಕ್ಕೂ ವ್ಯಕ್ತಪಡಿಸುತ್ತಾರೆ. ಪಾಂಡವಪುರ ತಾಲ್ಲೂಕಿನ ಸೀತಾಪುರದಲ್ಲಿ ತಿಮ್ಮಿ ಎಂಬ ದೆವ್ವಕ್ಕೆ ಗುಡಿ ಕಟ್ಟಿಸಿರುವ ವಿರಳ ನಿದರ್ಶನವಿದೆ. ಇಲ್ಲೆಲ್ಲ ದೇವರು ದೆವ್ವ ಸಮಾನಾಂತರ ರೇಖೆಯಲ್ಲಿ ಸಾಗುವುದನ್ನು ಗಮನಿಸಬಹುದು.

ದೆವ್ವ ಹಿಡಿಯುವಿಕೆಯ ಹಿಂದೆ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಕಾರಣಗಳಿವೆ. ಅನಕ್ಷರತೆ ಮೂಢನಂಬಿಕೆ ಬಡತನಗಳಿಂದ ಬಸವಳಿದಿರುವ ಸಮುದಾಯಗಳಲ್ಲಿ ದೆವ್ವದ ಪಾತ್ರ ಗಾಢವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪ್ರಾಯಕ್ಕೆ ಬಂದ ಯುವತಿಯರಲ್ಲಿ, ಪತಿಯ ಅನಾದರಕ್ಕೆ ಗುರಿಯಾದ ಮಹಿಳೆಯರಲ್ಲಿ, ಅತ್ತೆ ನಾದಿನಿಯರ ಕಿರುಕುಳಕ್ಕೆ ಬಲಿಯಾದ ವಿವಾಹಿತ ತರುಣಿಯರಲ್ಲಿ ಇನ್ನೂ ಅಧಿಕ. ದೆವ್ವದ ಪರಿಕಲ್ಪನೆಯನ್ನು ಬಾಲ್ಯದಿಂದಲೂ ತಲೆಗೆ ತುಂಬುವುದರಿಂದ, ಜೀವನದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ದುರ್ಬಲ ಮನೋಭಾವದವರು ತಮ್ಮ ಮನಸ್ಸಿಗೆ ಪರಿಹಾರ ಕಂಡುಕೊಳ್ಳಲು ಅಸಮರ್ಥರಾದಾಗ, ಸುಪ್ತಮನದ ಆಸೆ ಆಕಾಂಕ್ಷೆಗಳನ್ನು ದೆವ್ವ ಹಿಡಿಸಿಕೊಳ್ಳುವ ಮೂಲಕ ಪೂರೈಸಿಕೊಳ್ಳಲು ಯತ್ನಿಸಿರುವುದನ್ನು ಸೂಕ್ಷ್ಮಾವಲೋಕನದಿಂದ ಗ್ರಹಿಸಬಹುದು. ದೆವ್ವದ ಹೆಸರಿನಲ್ಲಿ ಶೋಷಣೆಗೂ ಅವಕಾಶವಾಗಿರುವುದನ್ನು ತಳ್ಳಿಹಾಕುವಂತಿಲ್ಲ. ದಯ್ಯಕ್ಕೆ ಇಕ್ಕುವ ಸಂಪ್ರದಾಯದಲ್ಲಿ, ಆದಿಮಾನವ ದೇವರನ್ನು ಸೃಷ್ಟಿಸಿಕೊಳ್ಳುವ ಪೂರ್ವದಲ್ಲಿ ಕಂಡುಕೊಂಡ ವಿಚಾರಗಳನ್ನು, ಮಾಡಿದ ಆಲೋಚನೆಗಳನ್ನು, ಅಭಿವ್ಯಕ್ತಿಸಲು ಯತ್ನಿಸಿದಂತೆ ಭಾಸವಾಗುತ್ತದೆ. ಜನರು ಸುಶಿಕ್ಷಿತರಾದಂತೆಲ್ಲ ದೆವ್ವದ ಭೀತಿ ಕ್ಷೀಣಿಸುತ್ತಿರುವುದು

ಮೆಚ್ಚುಗೆಯ ಅಂಶವಾಗಿದೆ. ಈಗ ಹಿಂದಿನಷ್ಟು ದೆವ್ವದ ಕಾಟವಿಲ್ಲವೆಂಬುದು ಹಳ್ಳಿಗಳಲ್ಲಿಯೂ ಕೇಳಬರುತ್ತಿದೆ. ಜನ ವಿಚಾರ ವಂತರಾದ ಹಾಗೆಲ್ಲ ಸಮಾಜದಲ್ಲಿ ಬೇರೂರಿದ್ದ ಮೌಢ್ಯಗಳು ಅಲುಗಾಡುವುದರ ಸೂಚನೆ ಇದು. ಅದೇನೆ ಇರಲಿ ದೆವ್ವ ಸಂಬಂಧಿ ಆಚರಣೆಗಳಲ್ಲಿ, ಜಗತ್ತಿನ ವೈಚಿತ್ರ್ಯಗಳ ಬಗ್ಗೆ ಆದಿಮಾನವ ತೋರಿದ ವಿಸ್ಮಯಗಳನ್ನು ದೇವರನ್ನು ಕಂಡುಕೊಳ್ಳಲು ನಡೆಸಿದ ಪ್ರಯತ್ನಗಳನ್ನು ಅರ್ಥಮಾಡಿಕೊಳ್ಳಬಹುದು.

# ೭. ದೆವ್ವ: ಜನರು ಕಂಡಂತೆ

ಡಾ || ಎಂ. ಬೈರೇಗೌಡ

*ಸಮುದಾಯದ ನಡುವೆ ಪ್ರಚಲಿತ ವಿರುವ ದೆವ್ವಸಂಬಂಧಿ ಘಟನೆಗಳ ಅನುಭವಗಳ ವಿವರಣೆಯನ್ನು ಪ್ರಸ್ತುತ ಲೇಖನವು ಒದಗಿಸುತ್ತದೆ. - ಸಂಪಾದಕ*

ದೆವ್ವ ಎಂಬುದು ಸಂಕೀರ್ಣ ವಸ್ತುವಾಗಿದ್ದು, ಇದೆಯೋ ಇಲ್ಲವೋ ಎಂದು ಹೇಳಲಾಗದಿದ್ದರೂ ಹಳ್ಳಿಗಳಲ್ಲಿ ದೆವ್ವ ಹಿಡಿದಿದೆಯೆಂದು ಗುಲ್ಲೆಬ್ಬಿಸುವ ಎಲ್ಲಾ ಸನ್ನಿವೇಶಗಳಲ್ಲೂ ಹಾಗಾಗಿದೆಯೆಂದು ಒಪ್ಪಲಾಗುವುದಿಲ್ಲ. ಗ್ರಾಮೀಣರು ಸುಸ್ತು ಸಂಕಟಗಳಿಂದ, ನಿತ್ರಾಣ, ನಿಃಶಕ್ತಿ ಹೊಂದಿ ಕೆಳಗೆ ಬಿದ್ದರೆ, ಯಾವುದೇ ಭ್ರಮೆಯಲ್ಲಿ ಕೈಲಾಗದ್ದನ್ನು ಸಾಧಿಸಿದರೆ, ಆವೇಶದಲ್ಲಿ ಭಾರ ಎತ್ತುವುದು, ಹೆಂಗಸು ಮರಹತ್ತುವುದು, ಎರ್ರಾಬಿರ್ರಿ ಅನ್ನ-ಆಹಾರ-ಮಾಂಸ ಮಡ್ಡಿ ತಿನ್ನುವುದು ಅಥವಾ ಬಯಸುವುದು, ಬಿಂದಿಗೆ ನೀರು ಕುಡಿಯುವಂತಹ ಅಸಹಜ ಪ್ರಕ್ರಿಯೆಗಳನ್ನು ಕಂಡು ವಿಸ್ಮಯಗೊಂಡು ದೆವ್ವ ಪಿಶಾಚಿ, ಗಾಳಿ, ಪೀಡೆ ಮೈಮೇಲೆ ಬಂದಿದೆ ಎಂದು ತೀರ್ಮಾನಿಸುತ್ತಾರೆ. ಸುಂದರ ಯುವಕನಿಗೆ ಮೋಹಿನಿ ಕಾಟವನ್ನು ಆರೋಪಿಸುತ್ತಾರೆ. ಗರ್ಭಿಣಿಗೆ ಗರ್ಭಪಾತವಾದರೆ ದೆವ್ವದ ಕಾಟವೆನ್ನುತ್ತಾರೆ. ನೀರಿಗೆ (ಬಾವಿ, ಕೆರೆ, ನದಿ) ಬಿದ್ದು ಸತ್ತ ಯಾರೋ ಮತ್ಯಾರನ್ನೋ ದೆವ್ವವಾಗಿ ಹಿಡಿದು ಕಾಡಿ ಸಾಯಿಸಿದ್ದಾಗಿ ಆರೋಪಿಸುತ್ತಾರೆ. ಹರಕೆ, ದೇವರು, ಮಂತ್ರ, ಮಾಟಗಾರರ ಮೊರೆಹೋಗುತ್ತಾರೆ. ಹತ್ತು ಹಲವು ದೇವರುಗಳಿಗೆ ಹರಕೆ ಹೊತ್ತು, ದೇವಸ್ಥಾನಗಳಿಗೆ ಅಲೆದಾಡಿ, ಹಣ, ಸಮಯ, ಶಕ್ತಿ ಎಲ್ಲವನ್ನೂ ಅಪವ್ಯಯ ಮಾಡಿಕೊಳ್ಳುತ್ತಾರೆ. ಇದರಿಂದ ಸಿಗಬೇಕಾದ ಚಿಕಿತ್ಸೆ ಆ ರೋಗಿಗೆ ದೊರೆಯದೆ, ನಂಬಿಕೆಯಿಂದ ಕೆಲವೊಮ್ಮೆ ಗುಣವಾದರೂ ಹೆಚ್ಚು ಸಂದರ್ಭಗಳಲ್ಲಿ ಉಲ್ಬಣಗೊಂಡು ಕೊನೆಯುಸಿರೆಳೆಯುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಬೆಂಗಳೂರಿನಂಥ ನಗರ ಪ್ರದೇಶಕ್ಕೆ ದೂರದೂರುಗಳಿಂದ ಬರುವ ವಿವಿಧ ಜನಜಾತಿಯ ಜನರ ಅಭಿಪ್ರಾಯ, ಅನುಭವ, ದೆವ್ವದ ಬಗೆಗಿನ ಕಲ್ಪನೆ, ನಂಬಿಕೆ, ಆಕಾರ ಇತ್ಯಾದಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಡಿಸುವುದೇ ಈ ಲೇಖನದ ಉದ್ದೇಶವಾಗಿದೆ.

ದೆವ್ವದ ಕಲ್ಪನೆ :

ಸಾಯುವ ವಯಸ್ಸಾಗದೆ ಅಕಾಲ ಮರಣಕ್ಕೆ ತುತ್ತಾದ ವ್ಯಕ್ತಿಗಳು ಸ್ವರ್ಗ ಅಥವಾ ನರಕಗಳಿಗೆ ಹೋಗದೆ ಅಗೋಚರ ವಾಗಿ ಭೂಮಿಯಲ್ಲೇ ಇದ್ದುಕೊಂಡು (ಕೆಲವರ ಕಣ್ಣಿಗೆ ಮಾತ್ರ ವಿವಿಧ ರೂಪಗಳಲ್ಲಿ ಕಾಣಿಸಿಕೊಂಡು), ತಮ್ಮ ಅತೃಪ್ತ ಬಯಕೆಗಳನ್ನು ಈಡೇರಿಸಿಕೊಳ್ಳಲು ಬದುಕಿರುವ ವ್ಯಕ್ತಿಗಳನ್ನು ಪೀಡಿಸುತ್ತವೆ ಇಲ್ಲವೇ ಪ್ರೀತಿಸುತ್ತವೆ ಎಂದು ಜನರಲ್ಲಿ ಇರುವ ನಂಬಿಕೆಯೇ ದೆವ್ವಗಳ ಇರುವಿಕೆಯನ್ನು ಸ್ಥಾಪಿಸಿದೆ. ಮೂರು

ವರ್ಷದೊಳಗಿನ ಮಕ್ಕಳು ಸತ್ತರೆ 'ಪೀಡೆ',ಕೊಲೆಯಾದವರು 'ಕಾತ',ಬೆಂಕಿಯಲ್ಲಿ ಸಿಕ್ಕಿ ಸಾವನ್ನಪ್ಪಿದವರು 'ಪ್ರೇತ', ಹಣದ ದುರಾಸೆಯಲ್ಲಿ ಮರಣಿಸಿದವರು 'ರಣಕಾಟ', ಹೋರಾಟದಲ್ಲಿ ಮಡಿದವರು 'ಜಟಿಯಾ', ಗರ್ಭಿಣಿ ಸತ್ತರೆ 'ಗಾಳಿ-ಗರಾವು', ನೇಣು ಹಾಕಿಕೊಂಡು ಸತ್ತರೆ 'ಪಿಶಾಚಿ', ಬಾಣಂತಿ ಸತ್ತರೆ 'ಬಸ್ತಿ', ಪ್ರಾಯದ ಹುಡುಗಿ ಅಕಾಲ ಮರಣಕ್ಕೀಡಾದರೆ 'ಮೋಹಿನಿ', ಕೈಯಲ್ಲಿ ಬೆಂಕಿ ಹಿಡಿದು ಸತ್ತರೆ ಸದಾ ಓಡಾಡುವ 'ಕೊಳ್ಳಿದೆವ್ವ', ಬ್ರಾಹ್ಮಣ ಬ್ರಹ್ಮಚಾರಿ ಸತ್ತರೆ 'ಬ್ರಹ್ಮಪಿಶಾಚಿ', ದೇವತೆಗಳು ಬೇತಾಳಗಳಾಗಿ ಭೂಮಿಯಲ್ಲಿ ಹುಟ್ಟುವುವು ಎಂಬುದು ಜನಪದರ ನಂಬಿಕೆ.

ಈ ಎಲ್ಲ ಬಗೆಯ ಭೂತ, ದೆವ್ವಗಳಿಗೂ ಮುನೀಶ್ವರ ಎಂಬುವವನು ಅಧಿಪತಿ. ಇದು ಈಶ್ವರನ ಒಂದು ಅಂಶ ಎಂದು ಭಾವಿಸಲಾಗಿದೆ. ಬೇತಾಳ, ಭೂತನಾಥ ಎಂಬ ಹೆಸರುಗಳೂ ಇವೆ. ಅತ್ಯಂತ ಭೀಕರವಾದ ಆಕಾರವುಳ್ಳ ಈತನಿಗೆ ಮೂರು ಕಣ್ಣುಗಳಿವೆ. ನೀಳವಾದ ಜಟೆಯಿರುತ್ತದೆ. ಎಡಗಾಲಿಗೆ ಜಂಗು, ಬಲಗಾಲಿಗೆ ಭಾಪುರಿ ಜಂಗುಗಳನ್ನು ಧರಿಸಿರುತ್ತಾನೆ. ಅಮಾವಾಸ್ಯೆಯ ದಿನ ರಾತ್ರಿಯಲ್ಲಿ ಮರದಿಂದ ಮರಕ್ಕೆ ಪ್ರಯಾಣ ಮಾಡುತ್ತಾನೆ. ಎಲ್ಲ ಬಗೆಯ ದೆವ್ವ ಪರಿವಾರಗಳೂ ಸೇರಿ ಮುನೀಶ್ವರನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು, ಕೈಲಿ ಕೊಳ್ಳಿಗಳನ್ನಿಡಿದುಕೊಂಡು ಕುಣಿದು ಸಾಗುತ್ತವೆ. ಈ ಬಗೆಯ ಮೆರವಣಿಗೆಯನ್ನು ಕಣ್ಣಾರೆ ಕಂಡೆವೆಂದು ಕತೆಕಟ್ಟಿ ಹೇಳುತ್ತಾರೆ. ಹಗಲು ಹೊತ್ತಿನಲ್ಲಿ ಮುನೀಶ್ವರ ಸುಂಟರಗಾಳಿಯ ರೂಪದಲ್ಲಿ ಕಾಣಿಸಿಕೊಳ್ಳುವನೆಂಬ ನಂಬಿಕೆ. ಇಂದಿಗೂ ಕೂಡ ಒಕ್ಕಣೆ (ಕಣಗೆಲಸ) ಕಾಲದಲ್ಲಿ ಮುನೀಶ್ವರ ಮತ್ತು ಚೌಡಿಗೆ ಕಣದ ಬಳಿ ಕೋಳಿ, ಕುರಿ ಕೊಯ್ದು ಅಡಿಗೆ ಮಾಡಿ ಎಡೆಯಿಟ್ಟು ಶಾಂತಿ ಮಾಡುತ್ತಾರೆ.

ದೆವ್ವಗಳಿಗೆ ಶರೀರವಿರುವುದಿಲ್ಲ, ಕಾಲು ಹಿಂದು ಮುಂದಾಗಿರುತ್ತವೆ, ಕಾಲುಗಳನ್ನು ನೆಲದ ಮೇಲೆ ಊರುವುದಿಲ್ಲ, ನೆರಳು ಅಥವಾ ತಮಗಿಷ್ಟಬಂದ ರೂಪದಲ್ಲಿ, ಪ್ರಾಣಿಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತವೆಂದು ಜನ ತಮ್ಮದೇ ಕಲ್ಪನೆಗಳಲ್ಲಿ ವರ್ಣಿಸುತ್ತಾರೆ. ದೆವ್ವಗಳನ್ನು ಕರಿಬಣ್ಣದಲ್ಲಿ ಹೆಚ್ಚು ವರ್ಣಿಸುವುದುಂಟು. ತಲೆಕೆದರಿ, ಕಣ್ಣುಗಳನ್ನು ಮೆದರಿಸಿಕೊಂಡಿರುತ್ತವೆ, ಕೋರೆ ಹಲ್ಲುಗಳಿರುತ್ತವೆ ಎಂದು ಕಲ್ಪಿಸಿಕೊಂಡು ವಿವರಿಸುತ್ತಾರೆ. ದೆವ್ವಗಳು ತಮ್ಮ ಕಣ್ಣುಗಳಿಂದ ದೀಪ ಹಚ್ಚುತ್ತವೆ ಇತ್ಯಾದಿ ಅನೇಕ ವಿವರಗಳನ್ನು ಕೊಡುತ್ತಾರೆ. ದೆವ್ವಗಳು ಅಡಿಗೆ ಮಾಡಲು ಒಲೆಗೆ ಸೌದೆ ಬಳಸದೆ ತಮ್ಮ ಕಾಲುಗಳನ್ನೇ ಉಪಯೋಗಿಸುವ ಬಗೆಗೆ ಹಾಸನ ಜಿಲ್ಲೆಯಾದ್ಯಂತ ಒಂದು ದಂತಕತೆಯೇ ಪ್ರಚಲಿತವಿದೆ. ಆ ಕತೆಯ ಸಾರಾಂಶ ಹೀಗಿದೆ :

ಹಾಸನ ಜಿಲ್ಲೆಯ ಒಂದು ಊರಿನಲ್ಲಿ ಗಂಡ ಹೆಂಡತಿಯರಿದ್ದು, ಬೇರೆ ಯಾವುದೇ ಸಂಬಂಧಿಕರು ಇರುವುದಿಲ್ಲ. ಹೆಂಗಸು ಗರ್ಭವತಿಯಾಗಿ ತನಗೆ ಯಾರೂ ಇಲ್ಲವಲ್ಲ; ಹೆರಿಗೆಯಾದ ಮೇಲೆ ಆರೈಕೆ ಮಾಡುವವರ್ಯಾರು? ಎಂದು ತುಂಬಾ ಯೋಚನೆಯಲ್ಲಿ

ಮುಳುಗಿರುತ್ತಾಳೆ. ಕಾಡಿನ ಮಧ್ಯದ ಒಂಟಿ ಮನೆಯಲ್ಲಿ ಹೆಂಗಸು ಒಬ್ಬಳೇ ಇರುವಾಗ ಒಂದು ಮುದುಕಿ ಬಂದು, ಅವ್ವಾ ನಿನ್ನನ್ನು ನೋಡಿದರೆ ನನ್ನ ಮಗಳಂತಿರುವೆ, ನನಗೂ ಯಾರೂ ಇಲ್ಲ, ನೀನು ಬಸುರಿ ಹೆಂಗಸು, ನಿನ್ನ ಆರೈಕೆ ಮಾಡಿಕೊಂಡು ನಿನ್ನೊಡನಿರುತ್ತೇನೆ ಎಂದು ಆ ಮನೆಯಲ್ಲಿ ಸೇರಿಕೊಳ್ಳುತ್ತಾಳೆ. ನಾನು ಅಡಿಗೆ ಮಾಡುವಾಗ, ನೀರು ಕಾಯಿಸುವಾಗ, ಮನೆಗೆ ನೀನು ಬರಕೂಡದು ಎಂದು ಕೆಲವು ನಿಬಂಧನೆಗಳನ್ನು ಹಾಕುತ್ತಾಳೆ. ಹೀಗಿರುವಾಗ ಈ ಹೆಂಗಸಿಗೆ ಹೆರಿಗೆಯಾಗಿ, ಮುದುಕಿಯ ಆರೈಕೆಯಲ್ಲಿ ಸುಖದಿಂದರುವಾಗ ಒಮ್ಮೆ ನೀರು ಬೇಕಾಗಿರುತ್ತದೆ. ಪಾಪ ಮುದುಕಿಯನ್ನು ಕರೆಯುವುದೇಕೆ ನಾನೇ ತೆಗೆದುಕೊಂಡರಾಯ್ತು ಎಂದು ಅಡಿಗೆ ಕೋಣೆಗೆ ಹೋಗುವಾಗ ಮುದುಕಿ ತನ್ನ ಕಾಲುಗಳನ್ನು ಒಲೆಯಲ್ಲಿಟ್ಟು ಉರಿಸುತ್ತಿದ್ದಳು. ಭಯಭೀತಳಾಗಿ ಮೂರ್ಛೆ ಹೋದ ಆ ಹೆಂಗಸನ್ನು ನೋಡಿ ಮುದುಕಿಯ ರೂಪದ ದೆವ್ವ ದೂರ ಹೋಯಿತಂತೆ. ಮುದುಕಿ ಬಂದಳೋ ಇಲ್ಲವೋ. ಆದರೆ ದೆವ್ವಗಳಲ್ಲಿ ಸಹಾಯ ಮಾಡುವ ದೆವ್ವಗಳು ಅರ್ಥಾತ್ ಒಳ್ಳೆಯ ದೆವ್ವಗಳಿರುತ್ತವೆ ಎಂಬುದಕ್ಕೆ ಇಂಥ ಕತೆಗಳು ಹುಟ್ಟಿಕೊಂಡಿರಬಹುದು.

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ದೆವ್ವಗಳು ಹೊಲಸು ಆಹಾರ ಸೇವಿಸುತ್ತವೆಂದು ಹೇಳುತ್ತಾರೆ. ಮಲ, ಮೂತ್ರ, ಕೋಳಿ, ಕುರಿ, ದನ, ಕರು ಇತ್ಯಾದಿ ರಕ್ತ ಮಾಂಸಗಳನ್ನು ತಿನ್ನುತ್ತವೆ. ಹಂದಿ ಮಾಂಸ ತುಂಬಾ ಇಷ್ಟವಂತೆ. ಧರ್ಮ, ದೆವ್ವಸಂಬಂಧಿ ಯಾದ ಯಾವುದೇ ವಸ್ತುಗಳನ್ನು ದೆವ್ವಗಳು ಮುಟ್ಟುವುದಿಲ್ಲವಂತೆ. ಬೆಲ್ಲ ತುಂಬಾ ಇಷ್ಟವೆಂದು ಆಲೆಮನೆಗಳಲ್ಲಿ ದೆವ್ವ ವಾಸಿಸುತ್ತವೆಂದು ಹೇಳುತ್ತಾರೆ. ಆಲೆಮನೆಯಿಂದ ಬಿಸಿ ಬೆಲ್ಲದುಂಡೆಯನ್ನು ತರುತ್ತಿದ್ದ ನಮ್ಮೂರಿನ ದಾಮೋದರ್ ಎಂಬುವವರು ದಾಮೋದರಣ್ಣ ಬೆಲ್ಲ ಕೊಡು, ದಾಮೋದರಣ್ಣ ಬೆಲ್ಲ ಕೊಡು ಎಂದು ಕೆಲವೇ ದಿನಗಳ ಹಿಂದೆ ಸತ್ತಿದ್ದ ಒಬ್ಬಾಕೆಯ ಧ್ವನಿಯನ್ನು ಕೇಳಿ ಬೆಲ್ಲ ಬಿಸುಡಿ ಬಂದ ಬಗೆಗೆ ಇಂದಿಗೂ ನೆನಸಿಕೊಳ್ಳುತ್ತಾರೆ.

ದೆವ್ವಗಳಿಗೆ ಬೆಳಕೆಂದರೆ ಆಗುವುದಿಲ್ಲವೆಂದು ಹೇಳಿದರೂ ನಡು ಮಧ್ಯಹ್ನದ ಸುಡುಬಿಸಿಲಿನಲ್ಲಿ ವಿಶೇಷ ಶಕ್ತಿ ಬರುತ್ತದೆಂದು ನಂಬಿರುತ್ತಾರೆ. ಉರಿಬಿಸಿಲಿನ ತಾಪಕ್ಕೆ ರೋಗ ರುಜಿನಗಳು ಬರುತ್ತವೆ, ದೆವ್ವದ ಭಯದಿಂದ ಹೊರಗೆ ಹೋಗದಿರಲೆಂದು ಈ ಬಗೆಯ ಭಯವನ್ನು ಹುಟ್ಟಿಸಿರಬಹುದು. ದಟ್ಟವಾದ ಮರಗಳ ಗುಂಪು, ಪಾಳು ಬಾವಿಯ ಕಟ್ಟೆ ಹಳೆಯ ಮನೆ, ಬೀಳಲು ಬಿದ್ದ ಆಲದಮರ, ಹುಣಸೆಮರ, ಕೆರೆ, ಕೊಳ, ಬಂಡೆ, ಗುಹೆ ಮುಂತಾದ ಕಗ್ಗತ್ತಲ ಪ್ರದೇಶಗಳಲ್ಲಿ ದೆವ್ವಗಳು ವಾಸಿಸುತ್ತವೆಂದು ವೈವಿಧ್ಯಮಯ ವಾಸಸ್ಥಾನ ಗಳನ್ನು ಆರೋಪಿಸುತ್ತಾರೆ. ಅಮಾವಾಸ್ಯೆಯ ರಾತ್ರಿಯಲ್ಲಿ ಅವುಗಳ ಚಟುವಟಿಕೆಗಳನ್ನು ರೋಚಕವಾಗಿ ಹೇಳುತ್ತಾರೆ. ಇವೆಲ್ಲವೂ ಕತ್ತಲೆಯಿಂದ ಆಗಬಹುದಾದ ಅನಾಹುತಗಳನ್ನು ಗಮನದಲ್ಲಿರಿಸಿಕೊಂಡು ಹುಟ್ಟಿಸಿರಬಹುದಾದ ಭಯಗಳು. ಹಳೇ ಬಾವೀಕಟ್ಟೆಯ ಬಳಿ

ಓಡಾಡುವಾಗ ಕಾಲುಜಾರಿ ಒಳಗೆ ಬೀಳಬಹುದೆಂದು ಅಲ್ಲಿ ದೆವ್ವಗಳ ಭಯವನ್ನು ನಮ್ಮ ಜನಪದರು ಹುಟ್ಟಿಸಿರಬಹುದು.

ಗಾಳಿಕಣ್ಣುಳ್ಳವರಿಗೆ, ನಾಯಿಗಳ ಕಣ್ಣಿಗೆ, ದನಗಳ ಕಣ್ಣಿಗೆ ದೆವ್ವಗಳು ಕಾಣಿಸುತ್ತವೆಯಂತೆ. ದೂರದೂರಿಗೆ ಗಾಡಿ (ಎತ್ತಿನಬಂಡಿ) ಹೊಡೆದುಕೊಂಡು ಹೋಗುವಾಗ ದೂರದಲ್ಲಿನ ದೆವ್ವಗಳನ್ನು ಕಂಡು ಎತ್ತುಗಳು ನಿಂತುಕೊಂಡ ಬಗೆಗೆ ಹಲವಾರು ಘಟನೆಗಳನ್ನು ನೆನಪಿಸಿಕೊಳ್ಳುತ್ತಾರೆ. ಬೈಸಿಕಲ್‌ನಲ್ಲಿ ಹೋಗುವಾಗ ಚಕ್ರ ತಿರುಗದೆ, ಹಿಂದಕ್ಕೂ ಹೋಗಲಾಗದೆ; ಮುಂದಕ್ಕೂ ಹೋಗಲಾಗದೆ ಒದ್ದಾಡಿದ ಬಗೆಗೆ ಹೇಳುತ್ತಾರೆ. ಗಂಡು ದೆವ್ವಗಳು ಹೆಂಗಸರಿಗೂ ಹೆಣ್ಣು ದೆವ್ವಗಳು ಗಂಡಸರಿಗೂ ಮೆಟ್ಟಿಕೊಳ್ಳುತ್ತವೆಂದು ಸಾಮಾನ್ಯವಾಗಿ ನಂಬುವುದುಂಟು. ಇದು ಲೈಂಗಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ನಂಬಿಕೆ ಎನ್ನಲಡ್ಡಿಯಿಲ್ಲ. ದಾರಿಯಲ್ಲಿ ಹೋಗುವಾಗ ಪುಕ್ಕಲನೋ ಧೈರ್ಯಶಾಲಿಯೋ ಎಂದು ಪರೀಕ್ಷಿಸಲು ಹಿಮ್ಮಡಿಯನ್ನು ಮೊದಲು ಮೆಟ್ಟುತ್ತವೆಯಂತೆ. ಹಿಮ್ಮಡಿ ನಡುಗಿದರೆ ಆತನ ಗುದದ್ವಾರದ ಮೂಲಕ ಪ್ರವೇಶಿಸುತ್ತವೆಯಂತೆ. ಮಲಗಿದ್ದಾಗ ಬಾಯಿಯ ಮೂಲಕ ಪ್ರವೇಶಿಸುತ್ತವೆಯಂತೆ. ಪರಿಚಿತ ವ್ಯಕ್ತಿಯಂತೆ ಕರೆದು ಓಗೊಟ್ಟರೆ ಹಿಡಿಯುತ್ತವೆಯಂತೆ. ಒಂಟಿಯಾಗಿ ಹೋಗುತ್ತಿದ್ದ ವ್ಯಕ್ತಿ ಭಯದಿಂದ ಕೂಗಿಸಿಕೊಂಡ ಭ್ರಮೆಗೊಳಗಾಗಿ ಓಗೊಡಬಹುದು. ಯಾರೂ ಇಲ್ಲದ್ದನ್ನು ಕಂಡು ಹೆದರಿಕೆಯಿಂದ ಅಸ್ವಸ್ಥನಾಗಬಹುದು.

ದೆವ್ವ ಹಿಡಿದವರು ಮೂರ್ಛೆ ಹೋಗುವುದು. ಹಲ್ಲುಕಡಿಯುವುದು, ಕಣ್ಣುಗುಡ್ಡೆಗಳನ್ನು ಮಳ್ಳಿಸುವುದು, ತಲೆ ಕೆದರಿಕೊಂಡು ಆ ಕಡೆ, ಈ ಕಡೆ ಓಲಾಡುವುದು, ಭಯಂಕರ ಅರಚಾಟ, ಹೋರಾಟ, ನರಳಾಟ, ವಿಕಾರ ನಗು, ಅಳು ಇತ್ಯಾದಿಗಳ ನಂತರ ಮಾತನಾಡಲು ಪ್ರಾರಂಭಿಸಿ ತಾನು ಯಾರೆಂದು ಹೇಳಲು ಪ್ರಾರಂಭಿಸುತ್ತವೆ. ಅದು ಬೇಕು, ಇದು ಬೇಕೆಂದು ಕಾಡುವ ಮೂಲಕ ಅತೃಪ್ತ ಬಯಕೆಗಳನ್ನು ಈ ರೂಪದಲ್ಲಿ ಈಡೇರಿಸಿಕೊಳ್ಳುವುದನ್ನು ಇಲ್ಲಿ ಗಮನಿಸಬಹುದು. ಕಳುವಾದ ವಸ್ತುಗಳನ್ನು ಪತ್ತೆಹಚ್ಚುವುದೂ ಉಂಟು. ಅನುಮಾನಾಸ್ಪದ ವ್ಯಕ್ತಿಯ ಹೆಸರು ಹೇಳಿ ಕಾಕತಾಳೀಯವೆಂಬಂತೆ ಕೆಲವು ಸಂದರ್ಭಗಳಲ್ಲಿ ಅದು ನಿಜವಾಗಿದ್ದು, ದೆವ್ವವೇ ಕಂಡು ಹಿಡಿಯಿತೆಂದು ಜಾಹಿರಾಗಿರಬಹುದು. ಜ್ಯೋತಿಷ್ಯವನ್ನೂ ಹೇಳುವುದುಂಟು ಎನ್ನುತ್ತಾರೆ. ಮಾತನಾಡುವಾಗ ಆಕಸ್ಮಿಕವಾಗಿ ಮುಂದಾಗಬಹುದಾದ್ದನ್ನು ತಿಳಿಸಿ, ಅದರಂತೆ ನಡೆದ ಘಟನೆಗಳನ್ನೇ ಭವಿಷ್ಯ ನುಡಿದುದರ ಬಗೆಗೆ ಪ್ರಚುರಪಡಿಸಿರಬಹುದು. ಮನೆಗಳ ಮೇಲೆ ಕಲ್ಲು ತೂರುವುದು; ಒಂದೆಡೆ ಮಲಗಿದ್ದವರನ್ನು ಬೇರೆಲ್ಲಿಯೋ ಮಲಗಿಸುವುದು, ಕಾಡಿನಲ್ಲಿ ಇರುವ ಗುಡಿಸಲುಗಳಿಗೆ ಬೆಂಕಿ ಹಚ್ಚುವುದನ್ನೆಲ್ಲಾ ಪೈಶಾಚಿಕ ಕೃತ್ಯವೆನ್ನುತ್ತಾರೆ. ಕಿಡಿಗೇಡಿಗಳು ಅಥವಾ ಕಳ್ಳರು ಕಲ್ಲು ತೂರಿರಬಹುದು. ನಿದ್ರೆಯಲ್ಲಿ ನಡೆದಾಡುವ ರೋಗದಿಂದ ಬಳಲುವವರು ಮಲಗಿದ್ದ ಸ್ಥಳ ಬಿಟ್ಟು ಬೇರೆಡೆಗೆ ನಡೆದುಕೊಂಡು ಹೋಗಿ

ಮಲಗುವುದನ್ನೇ ದೆವ್ವಮಲಗಿಸಿತೆಂದು ಹೇಳಿರಬಹುದು. ಇನ್ನು ಕಾಡ್ಗಿಚ್ಚು ಹತ್ತಿಕೊಂಡು ಗುಡಿಸಿಲಿಗೆ ಬೆಂಕಿ ಬಿದ್ದು ಅದೂ ದೆವ್ವದ ಕೃತ್ಯವೆಂದು ಆರೋಪಿಸಿರಬಹುದು.

ದೆವ್ವಮೆಟ್ಟಿಕೊಂಡು ಸತ್ತವರೂ ದೆವ್ವವಾಗುತ್ತಾರೆಂದು ನಂಬುತ್ತಾರೆ. ದೆವ್ವಬಿಡಿಸುವ ಅನೇಕ ವಿಧಾನಗಳನ್ನು ನಮ್ಮ ಜನಪದರು ವಿವರಿಸುತ್ತಾರೆ. ಶನಿದೇವರ ಕತೆ ಓದಿಸುವುದು, ದುರ್ಗಿ, ಬೀರೇದೇವರು ಹಾಗೂ ಮಂಟೇದ ಸ್ವಾಮಿಯ ಮೊರೆಹೋಗುವುದು, ದಂಡಿನಮ್ಮ, ಮಾರಮ್ಮ, ಕಬ್ಬಾಳಮ್ಮ, ಆದಿಶಕ್ತಿ ಮುಂತಾದ ದೇವತೆಗಳ ಮೊರೆಹೋಗುತ್ತಾರೆ. ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಬೆಂಗಳೂರಿನಂಥ ಮಹಾನಗರದಲ್ಲಿ ಇರುವುದನ್ನು ಗಮನಿಸಬಹುದು. ಗಾಳಿಗೆ ಗಂಡನೆಂದೂ, ಗಾಳಿ ಗೋಪುರದಯ್ಯನೆಂದು ಆಂಜನೇಯನನ್ನು ಕರೆಯುತ್ತಾರೆ. ಮಲೆಯ ಮಹದೇಶ್ವರ, ವೆಂಕಟೇಶ್ವರ ಮುಂತಾದ ದೇವರುಗಳೂ ಕೂಡ ಗಾಳಿಬಿಡಿಸುವ ದೇವರುಗಳೆಂದು ವೈಭವೀಕರಿಸಿ ಹೇಳುತ್ತಾರೆ. ಮಾಟಗಾರರಿಂದ ತಡೆಹೊಡೆಸುವುದು, ತಾಯತ ಕಟ್ಟಿಸುವುದು, ಯಂತ್ರಕಟ್ಟಿಸುವುದು ಇತ್ಯಾದಿ ಅನೇಕ ಬಗೆಯಲ್ಲಿ ದೆವ್ವ ಬಿಡಿಸುವ ಪ್ರಕ್ರಿಯೆಗಳನ್ನು ಗಮನಿಸಬಹುದು.

ದೆವ್ವ ಬಿಡಿಸಲು ವಕ್ರವಕ್ರವಾದ ರಂಗೋಲಿಗಳನ್ನು ಬಿಟ್ಟು ಅದರ ಮೇಲೆ ಕೂಡಿಸಿ ಹುಣಸೆ ಬರ್ಲಿನಿಂದ ರಪರಪ ಬಡಿದು, ಅನೇಕ ವಿಧಿ ಕರ್ಮಗಳನ್ನು ಮಾಟಗಾರ ಮಾಡುವನು. ಮಂತ್ರವಾದಿಯೊಬ್ಬ ಮೂರು ದಾರಿ ಕೂಡುವ ಕಡೆ ಮೂರು ಬಗೆಯಲ್ಲಿ ಮಣ್ಣಿನ ಗೊಂಬೆಗಳನ್ನು ಮಾಡಿ ಅದರ ಮುಂದೆ ಎಡೆಯಿಟ್ಟು ದೆವ್ವಹಿಡಿದವರನ್ನು ಕೂರಿಸಿ ಮಾಡುವ ವಿಧಿಗಳಿಗೆ 'ಸಂಕೇವು ತೆಗೆಯುವುದು' ಎಂದು ಹೇಳುತ್ತಾರೆ. ಬಿಸಿಲಿನಲ್ಲಿ ದೆವ್ವ ಹಿಡಿದ ವ್ಯಕ್ತಿಗೆ ಕಣ್ಣುರಿ, ಮೈಯುರಿ, ಜ್ವರ ಬರುತ್ತದೆ. ಆತನನ್ನು ಬಿಸಿಲಿನಲ್ಲಿ ನಿಲ್ಲಿಸಿ ತಟ್ಟೆಯೊಂದರಲ್ಲಿ ನೀರಿಗೆ ಹೊನೆ ಸೊಪ್ಪು ತೊಂಡೆಸೊಪ್ಪು, ಸುಂಡೆಸೊಪ್ಪು, ಕಿಸ್ಗಾರದ ಸೊಪ್ಪು ಹೊಯ್ಗೆಸೊಪ್ಪು ಇತ್ಯಾದಿಗಳನ್ನು ನೀರಿನಲ್ಲಿ ಕಿವುಚಿ ಅನಂತರ ಆ ಸೊಪ್ಪನ್ನು ವ್ಯಕ್ತಿಯ ಮೈಗೆ ಹಚ್ಚುವರು. ಆಗ ತಟ್ಟೆಯಲ್ಲಿನ ನೀರು ಕೆಂಪಾಗುತ್ತದೆ. ನಂತರ ನೀರನ್ನು ಚೆಲ್ಲಿದರೆ ಮರಳು ಉಳಿಯುತ್ತದೆ. ಆ ಮರಳನ್ನು ವ್ಯಕ್ತಿಗೆ ನಿವಾಳಿಸಿ ಬೆಂಕಿಗೆ ಹಾಕುವರು. ಈ ಕ್ರಮದಿಂದ ದೆವ್ವ ಬಿಡಿಸುವುದನ್ನು "ಹ್ಯೊಗೆ ತೆಗೆಸುವುದು" ಎಂದು ಹೇಳುತ್ತಾರೆ. ಇರುಳಿಗರು ಕಣಿ ಹೇಳುವ ಮೂಲಕ, ಕಾಡುಕುರುಬ ಜೇನು ಕುರುಬರು ಬುರುಡೆ ತಿರುಗಿಸುವುದರ ಮೂಲಕ, ದೆವ್ವ ಬಿಡಿಸುವುದನ್ನು ಗಮನಿಸಬಹುದು. ಕಲ್ಲು ಹುಯ್ಯಿಸುವುದು, ಮೈಲಾರಲಿಂಗನ ಹೆಸರಲ್ಲಿ ದೀಕ್ಷೆ ಪಡೆದ ಗೊರವರು, ಎಲ್ಲಮ್ಮನ ಹೆಸರಲ್ಲಿ ದೀಕ್ಷೆಪಡೆದ ಗೊರವಯ್ಯರು ಮುಂತಾದವರಿಂದ ದೆವ್ವ ಬಿಡಿಸುತ್ತಾರೆ. ಬೆಂಕಿ, ಚಪ್ಪಲಿ, ನಿಂಬೆಹಣ್ಣು, ಉಚ್ಚೆ (ಮೂತ್ರ) ಇತ್ಯಾದಿಗಳಿಗೆ ದೆವ್ವಗಳು ಹೆದರುತ್ತವೆಂದು ನಂಬುತ್ತಾರೆ. ದೆವ್ವವಿದೆಯೆಂದು ಗೊತ್ತಾದಾಗ ವ್ಯಕ್ತಿ ತನ್ನ ಸುತ್ತ ಉಚ್ಚೆ ಉಯ್ದು ಮಧ್ಯದಲ್ಲಿ

ನಿಂತುಕೊಂಡರೆ ದೆವ್ವ ಹತ್ತಿರ ಬರುವುದಿಲ್ಲವೆಂದು ಹೇಳುತ್ತಾರೆ.

ಹಲವಾರು ಬುಡಕಟ್ಟುಗಳಲ್ಲಿ ದೆವ್ವದ ಕಲ್ಪನೆಯೇ ಇಲ್ಲ. ಅದಕ್ಕೆ ಬದಲಾಗಿ ಸತ್ತ ಹಿರಿಯರನ್ನು ಈರರು (ವೀರರು) ಎಂದು ಅವರ ಹಬ್ಬಗಳನ್ನು ಆಚರಿಸುತ್ತಾರೆ. ಬೇರೆಲ್ಲ ದೈವಗಳ ಆರಾಧನೆಗಿಂತ ಈರರ ಆರಾಧನೆಯೇ ಇಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಭೂತಾರಾಧನೆಯನ್ನು ನೆನೆಸಿಕೊಳ್ಳಬಹುದು. ತುಮಕೂರು, ಹಾಸನ, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ದೆವ್ವಗಳನ್ನು ಗ್ರಾಮದೇವತೆಗಳ ಆಳುಗಳಂತೆ ಚಿತ್ರಿಸುತ್ತಾರೆ. ಬಲಿ ನೀಡುವುದು, ಬೇತಾಳೇಶ್ವರನ ಗುಡಿ ಕಟ್ಟಿಸುವುದನ್ನು ಕಾಣಬಹುದು. ಹಲವಾರು ಜನಪದ ಕಥೆಗಳಲ್ಲಿ ದೆವ್ವದ ವಿವರಗಳು ಕಂಡುಬರುತ್ತವೆ.

*ದೆವ್ವದ ಅನುಭವಗಳು :*

ಚೆನ್ನಮ್ಮ ಎಂಬಾಕೆ ನೀರಿನಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡಳು. ಆಕೆ ದೆವ್ವವಾಗಿ ಅವರ ಸ್ವಂತ ಭಾವ ಮೈದುನರ ಹೆಣ್ಣುಮಕ್ಕಳ ಮೇಲೆ ಆಗಾಗ ಬರುತ್ತಿದ್ದಳು. ಒಂದು ದಿನ ಹೊಲದ ಬಳಿಗೆ ಹಸುಗಳನ್ನು ಮೇಯಿಸಲು ಹೋದಾಗ ಚನ್ನಮ್ಮನ ಭಾವಮೈದುನರ ಮಗಳೂ ಬಂದಿದ್ದಳು. ಚನ್ನಮ್ಮನ ಚಿಕ್ಕ ಮಗ ಕೂಡ ಜೊತೆಯಲ್ಲಿದ್ದ. ಮಧ್ಯಾಹ್ನ ಹನ್ನೆರಡು ಗಂಟೆಯ ಸಮಯದಲ್ಲಿ 'ಮಗ್ನೆ ನಿನ್ನ ಚನ್ನಾಗ್' ನೋಡ್ಕೋತಾ ಇಲ್ಲ, ಎಂದು ಆ ಹುಡುಗಿ ಹುಡುಗನನ್ನು ಅಪ್ಪಿಕೊಂಡು ಗೋಳಿಡುತ್ತಿದ್ದಳು. ಕೂಡಲೇ ನಾನು ಹೋಗಿ ನೋಡಲು ಚನ್ನಮ್ಮನೇ ಆ ಹುಡುಗಿಯ ಮೇಲೆ ಬಂದಿದ್ದಾಳೆಂದು ತಿಳಿಯಿತು. ಆ ಹುಡುಗನನ್ನು ಬಿಡಿಸಿ ಏನಮ್ಮ ನಿನುಗ್ ಬುದ್ಧಿ ಬ್ಯಾಡ್ವ? ಸಣ್ಣುಡ್ಗ 'ಹೆದುರ್ ಕೊಳ್ಳಲ್ವೆ'ಅಂತ ರೇಗಿದೆ. ಆಗ ಚೆನ್ನಮ್ಮನ ದೆವ್ವ ಹೇಳಿತು, 'ನೋಡಣ್ಣಾ ನನ್ ಮಗುನ್ನ ಸರಿಯಾಗಿ ನೋಡ್ಕೋತ ಇಲ್ಲ. ಯಂಗಿದ್ದಾನೊ ನೋಡ್ಕೊಂಡೋಗುವ ಅಂತ ಬಂದೆ, ನನ್ ಮೈದ್ದಿರ್ಗೆ 'ನನ್ ಮಗುನ್ನ ಚನ್ನಾಗ್ ನೋಡ್ಕೊಳುಕ್ಕೇಳು. ಒಂದಿನ ಮಾಂಸ ಮಾಡಿದ್ರು ! ಬಾಗ್ಲು ಮುಚ್ಕೊಂಡು ನನ್ ಕಂದುನ್ನ ಆಚುಗ್ ಕಳಿಸ್ಬುಟ್ಟು ಊಟ ಮಾಡ್ತಿದ್ರು. ನನುಗ್ ಗೊತ್ತಾಗಿ ಮನೆ ಮ್ಯಾಲ್ ಕೂತ್ಕೊಂಡು ಒಂದಂಚ್ (ಹೆಂಚು) ತಗುದ್ ಬಿಸಾಕ್ದೆ. ಅದೆ ನನ್ ಚಿಕ್ ಮೈದ ಯಾರ್ಲ ಅದು ಚಪ್ಲಿ ತಕೊಂಡಾಕ್ತಿನಿ ಅಂತ ಬೈದ. ಬೇಕಾದ್ರೆ ಹೋಗ್ ಕೇಳು, ಅಂತು. ಅಷ್ಟರಲ್ಲಿ ಆರಗದ್ದೆಯ ಪೋಸ್ಟ್ ಮಾಸ್ಟರ್ ಸಂಪಂಗಪ್ಪ ದಾರಿಲೊಯ್ತಿದ್ದ. ಈ ಹುಡ್ಗಿ (ಚನ್ನಮ್ಮನ ದೆವ್ವ ಹಿಡಿದ ಹುಡುಗಿ), ಏನೋ ಸಂಪಂಗಪ್ಪ ನೋಡುದ್ರು ನೋಡ್ದೋನಂಗೊಯ್ತಾಯಿದ್ದಿ, ನನ್ನುನ್ ಮಾತಾಡ್ಸುಕ್ಕು ಕಷ್ಟ ಏನೊ, ನಾನ್ ಸತ್ ಮ್ಯಾಲೆ ನನ್ನುನ್ ಮರುತ್ ಬುಟ್ಟೇನೋ, ಎಂದೆಲ್ಲ ಹಿಂದಿನ ನೆನಪುಗಳನ್ನು ಮಾಡಿತು. ತನ್ನ ಮಗನನ್ನು ನೋಡಬೇಕೆಂದು ಅಂಗಲಾಚುವಷ್ಟರಲ್ಲಿ ಹುಡುಗ (ಚನ್ನಮ್ಮನ ಮಗ) ಮನೆಯ ಕಡೆ ಓಡಿ ಹೋಗಿದ್ದ.

ನಂತರ ಅವರ ಮನೆಯಲ್ಲಿ ವಿಚಾರಿಸಲಾಗಿ ಹೆಂಚು ತೆಗೆದು ಬಿಸಾಡಿದ್ದು ನಿಜವಾಗಿ, ಚಪ್ಪಲಿಯಲ್ಲಿ ಹೊಡಿತ್ತೀನಿ ಎಂದು ಬೈದದ್ದು ಸತ್ಯವೆಂದು ಹೇಳಿದರಂತೆ. ಮುಂದೇನಾಯ್ತು ಎಂದೂ ತಿಳಿಯಲಿಲ್ಲವಂತೆ ( ಆರ್. ಶ್ರೀನಿವಾಸ (೪೪) ಆರಗದ್ದೆ, ಆನೇಕಲ್ ತಾ,).

ಮೇಲಿನ ಪ್ರಕರಣದಲ್ಲಿ ತನ್ನ ಮಗುವನ್ನು ನೋಡಲು ಬರುತ್ತಿದ್ದ ಚನ್ನಮ್ಮನ ದೆವ್ವದ ಬಗೆಗೆ ಹೇಳುವಾಗ ತಂದೆ ತಾಯಿಗಳಿಲ್ಲದ ಆ ಮಗುವನ್ನು ನೋಡಿಕೊಳ್ಳುವಲ್ಲಿ ಉಳಿದ ಜನರ ಮನೋದೌರ್ಬಲ್ಯವನ್ನು ಬಿಂಬಿಸುತ್ತದೆ ಅಥವಾ ಅವರಲ್ಲಿ ಸರಿಯಾಗಿ ನೋಡಿ ಕೊಳ್ಳುತ್ತಿಲ್ಲವೆಂಬ ಅಳುಕು ದೆವ್ವದ ರೂಪವನ್ನು ಪಡೆದು ಯಾರ್‍ಯಾರದೋ ಮೇಲೆ ಬಂದಂತೆ ಆಗುತ್ತಿರಬಹುದು. ಅಥವಾ ಆ ಮನೆಯ ಹುಡುಗಿಗೇ ಆ ಭಾವನೆಗಳು ಬಂದಿರಬಹುದು. ಇನ್ನು ಮನೆಯ ಹೆಂಚು ಬಿಸಾಡಿದ ಬಗೆಗೆ ಹೇಳುವುದಾದರೆ ಸಾಮಾನ್ಯವಾಗಿ ಕಾಗೆಗಳು ಹಲ್ಲಿ, ಇಲಿಗಳನ್ನು ಹಿಡಿದುಕೊಳ್ಳಲು ಹೆಂಚುಗಳ ಸಂದಿಯನ್ನು ಹುಡುಕುವುದು ಸಹಜ. ಹಾಗೆ ಹುಡುಕುವಾಗ ಮನೆಮಂದಿ ಊಟ ಮಾಡುತ್ತಿದ್ದು, ಅದೇ ಸಂದರ್ಭದಲ್ಲಿ ಹೆಂಚಿನ ಸಂದನ್ನು ಹುಡುಕುತ್ತಿದ್ದ ಕಾಗೆಯೇ ಶಬ್ದಕ್ಕೆ ಗಾಬರಿಗೊಂಡು ಹಾರಿಹೋಗುವಾಗ ಕೆಳಗಡೆಗೆ ಹೆಂಚು ಬಿದ್ದಿರಬಹುದು.

ಇಷ್ಟೆಲ್ಲಾ ವಿಶ್ಲೇಷಣೆಗಳನ್ನು ಮಾಡಬಹುದಾದರೂ ಹಲವಾರು ವೈಚಿತ್ರ್ಯಗಳಿಗೆ ಸರಿಯಾದ ವಿವರಣೆ ದೊರೆಯುವುದಿಲ್ಲ. ಅಂತಹದ್ದೊಂದು ವಿಚಿತ್ರ ಪ್ರಕರಣವನ್ನು ಇಲ್ಲಿ ನೆನಪಿಸಿಕೊಳ್ಳಬಹುದು: ಹಾಸನದ ಎನ್.ಇ. ಬೇಸಿಕ್ ಸ್ಕೂಲ್‌ನ ಎದುರಿಗೆ ಒಂದು ಮನೆ. ಸಾಮಾನ್ಯವಾಗಿ ಶಾಲಾ ಮಕ್ಕಳೆಲ್ಲ ಮನೆಯ ಮುಂದಿದ್ದ ನೆಲ್ಲಿಮರದ ನೆಲ್ಲಿಕಾಯಿ ತಿಂದು, ನೀರು ಕುಡಿಯಲೆಂದು ಆ ಮನೆಗೆ ಹೋಗುತ್ತಿದ್ದುದು ರೂಢಿ. ಹಿಂದೆ ಅಯ್ಯಂಗಾರರ ಹುಡುಗಿಯೊಬ್ಬಳು ಆ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಳಂತೆ. ಒಬ್ಬ ಹುಡುಗ ಮಾಮೂಲಿನಂತೆ ನೀರು ಕುಡಿಯಲು ಹೋಗಿದ್ದ. ಅಯ್ಯಂಗಾರರ ಹುಡುಗಿ ಸತ್ತಿರುವ ವಿಚಾರ ೬-೭ ನೇ ತರಗತಿ ಹುಡುಗನಿಗೇನು ಗೊತ್ತು? ಅಚ್ಚಕನ್ನಡದ ಹುಡುಗನಾತ. ನೀರು ಕುಡಿದು ಇದ್ದಕ್ಕಿದ್ದಂತೆ ತಮಿಳಿನಲ್ಲಿ ಮಾತನಾಡಲು ಪ್ರಾರಂಭಿಸಿದನಂತೆ. ನಂತರ ಪಕ್ಕದ ದೇಗುಲದ ಬಳಿಗೆ ಕಲ್ಲು ಹೊರಿಸಿ ಯಾರು ನೀನು ಎಂದು ಕೇಳಲಾಗಿ, ಪ್ರತಿದಿನ ನಮ್ಮ ಮನೆಗೆ ನೀರು ಕುಡಿಯಲೆಂದು ಬರುವ ಈ ಹುಡುಗ ತುಂಬಾ ಮುದ್ದಾಗಿದ್ದ. ಆತನ ಮೇಲೆ ಆಸೆಯಾಗಿ ನಾನು ಬಂದೆ. ಹಿಂದೆ ನಾನು ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿಕೊಂಡು ಸತ್ತಿದ್ದೆ, ಎಂದು ಹೇಳಿದಳಂತೆ. ನಂತರ ಬಿಟ್ಟುಹೋಯಿತಂತೆ. ಈಗ ಅಂದು ದೆವ್ವ ಹಿಡಿದಿದ್ದ ಆ ಹುಡುಗ ಡಾಕ್ಟರ್ ಆಗಿದ್ದಾನೆ (ಶ್ರೀಮತಿ ಸೇತುಲಕ್ಷ್ಮಿ, ೩೫. ಖಜಾನೆ ನಿರ್ದೇಶನಾಲಯ). ಇದೊಂದು ಬಗೆಯ ಸವಾಲಾಗಿದೆ. ಯಾವುದೇ ಸಂಬಂಧಗಳಿಲ್ಲ, ಹುಡುಗಿಯ ಗುರುತು ಪರಿಚಯವಿಲ್ಲ. ಆದರೂ ಈ ಹುಡುಗನ ನಡವಳಿಕೆಗಳು ಹೇಗೆ ಹೀಗಾದವು ಎಂಬ ಪ್ರಶ್ನೆ ಕಾಡುತ್ತದೆ.

ಪ್ರೀತಿಪಾತ್ರರಿಗೆ ಕಾಣಿಕೆ ಕೊಡಿರೆಂದು ಹೇಳಿ ಸತ್ತು ಅವರು ಕೊಡದೆ ಆದ ಒಂದು ಘಟನೆ: ಕಾರಣಾಂತರದಿಂದ ಚಿಕ್ಕವಯಸಿನಲ್ಲೇ ಸಾವು ಸಂಭವಿಸಿದ ಒಬ್ಬಾಕೆ ಪಕ್ಕದ ಮನೆಯವರನ್ನು ಕರೆಸಿ, ತನ್ನಲ್ಲಿದ್ದ ಒಡವೆಗಳನ್ನು ಮಗಳು ಇನ್ನು ಚಿಕ್ಕವಳು ಇವುಗಳನ್ನು ಅವಳು ದೊಡ್ಡವಳಾದ ಮೇಲೆ ಕೊಡಿರೆಂದು ಹೇಳಿ ಕೊಟದ್ದಳಂತೆ. ದುರಾಸೆಯಿಂದ ಒಡವೆಗಳನ್ನುಕೊಡಲಿಲ್ಲ. ಸತ್ತಾಕೆ ದೆವ್ವವಾಗಿ ಬಂದು ಕಾಡಿದಳಂತೆ. ಇಲ್ಲಿದುರಾಸೆಯೆಂಬ ಪಿಶಾಚಿ ತನ್ನನ್ನು ತಾನೇ ಕಿತ್ತು ತಿನ್ನುವ ಪ್ರಕ್ರಿಯೆಯನ್ನು ಕಾಣಬುದಾಗಿದೆ. ಒಡವೆಗಳನ್ನು ಕೊಡುತ್ತೇನೆಂದು ತೆಗೆದುಕೊಂಡಾಕೆಯಲ್ಲಿ ಪಾಪಪ್ರಜ್ಞೆ ದೆವ್ವದ ರೂಪದಲ್ಲಿ ಕಾಡಿದೆಯೆಂದು ಹೇಳಬಹುದು. (ಜಯಮ್ಮ ೭೦).

ತಿಪ್ಪಗೊಂಡನಹಳ್ಳಿ ಕೆರೆಗೆ ಬಿದ್ದು ಒಂದು ಹುಡುಗಿ ಸತ್ತುಹೋಗಿತ್ತು. ಮತ್ತಿಕೆರೆಯ ಚರ್ಚ್ ಹುಡುಗಿಯದು. ಒಂದು ದಿನ ಪ್ರಾರ್ಥನೆಗೆ ಬಂದ ಮತ್ತೊಂದು ಹುಡುಗಿಯ ಮೇಲೆ ಬಂದು ಯಾರು ನೀನು ಎಂದು ಕೇಳಿದ್ದಕ್ಕೆ ನಾನು ಇದೇ ಚರ್ಚ್‌ನಲ್ಲಿದ್ದ ಇಂಥ ಹುಡುಗಿ ಎಂದು ಹೇಳಿತು. ಚರ್ಚ್‌ನ ಪಾದ್ರಿ ಪ್ರಾರ್ಥನೆ ಮಾಡಿ ಆ ದೆವ್ವವನ್ನು ಬಿಡಿಸಿದ. ಈಗ ಆ ಹುಡುಗಿ ಸರಿಯಾಗಿದ್ದಾಳೆ.

ಅಕ್ಕಿಹೆಬ್ಬಾಳು ವೆಂಕಟೇಶಮೂರ್ತಿ ಎಂಬುವವನು ಆರನೆಯ ತರಗತಿಯ ಹುಡುಗ. ಆಟ ಆಡುವಾಗ ಮರವೊಂದರ ಕೆಳಗೆ ಬಿದ್ದ ಸಣ್ಣ ಏಟಿಗೆ ಪ್ರಜ್ಞಾಶೂನ್ಯನಾದ. ಎಚ್ಚರವಾದಾಗ ಆತನ ನಡವಳಿಕೆಗಳೇ ಬದಲಾಗಿದ್ದವು . ಹುಡುಗಿಯಂತೆ ಮಾತನಾಡುವುದು, ಕೆಟ್ಟ ಭಾಷೆ, ಒರಟು ಮಾತುಗಳನ್ನು ಬಳಸುವುದು, ಇತ್ಯಾದಿ ಮಾಡುತ್ತಿದ್ದ. ಇದು ದೆವ್ವದ ಕಾಟವೆಂದೂ ತಿಳಿಯಿತು. ಬಹಳ ಬುದ್ಧಿವಂತನಾಗಿದ್ದ ಹುಡುಗ ದೆವ್ವ ಇಳಿದ ನಂತರ ತುಂಬಾ ಮಂಕಾಗಿರುತ್ತಿದ್ದ. ಪ್ರತಿದಿನ ದೆವ್ವ ಬರುತ್ತಿತ್ತು. ಮೊದಲು ಮೈ ನಡುಕ ಬಂದು ನಂತರ ದೆವ್ವ ಬರುತ್ತಿತ್ತು. ಹಾಗೆ ಬಂದಾಗ ಏನೇನೋ ಮಾತನಾಡುತ್ತಿದ್ದ. ಲಂಬಾಣಿ ಭಾಷೆಯಲ್ಲಿ ಮಾತನಾಡುತ್ತಿದ್ದ. ನೀನು ಯಾರು ಎಂದು ಪ್ರಶ್ನಿಸಿದರೆ ಲಚ್ಚಿ ಎಂದು ಹೇಳುತ್ತಿದ್ದ. ಶಾಲೆಯ ಬೀದಿಯಲ್ಲಿ ಮನೆಯೊಂದರ ಜಗುಲಿಯ ಮೇಲೆ ಅಲೆಮಾರಿ ಲಂಬಾಣಿ ಕುಟುಂಬವೊಂದು ವಾಸವಿತ್ತು. ಈ ಹುಡುಗ ಕೂಡ ಹುಡುಗಿಯನ್ನು ನೋಡಿ ಮಾತನಾಡಿಸಿದ್ದ. ಆಕಸ್ಮಿಕವಾಗಿ ಆ ಹುಡುಗಿ ಸತ್ತುಹೋಗಿತ್ತು. ಹಾಗೆ ಸತ್ತ ಹುಡುಗಿಯ ಎಲ್ಲ ನಡವಳಿಕೆಗಳೂ ಹಾಗಯೇ ಇದ್ದವು. ಮಾತುಗಳೂ ಲಚ್ಚಿಯಂತೆಯೇ ಇದ್ದವು. ಏನೆಲ್ಲ ಅಂತ್ರ-ಮಂತ್ರ ಔಷಧಿಗಳನ್ನು ಕೊಡಿಸಿದರೂ ಗುಣವಾಗದೆ ಕಡೆಗೆ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಮೇಲೆ ಗುಣವಾಯ್ತು. ಈಗ ಆತ ವಿಪ್ರೋ ಕಂಪನಿಯಲ್ಲಿ ಕಂಪ್ಯೂಟರ್ ಎಂಜನಿಯರ್ ಆಗಿದ್ದಾನೆ. ಹುಡುಗ ಬಿದ್ದಾಗ ಆಗಿರುವ ನರ ದೌರ್ಬಲ್ಯವಿದು. ಹುಡುಗಿಯನ್ನು ನೋಡಿದ್ದು ಆಕೆಯನ್ನು ಅನುಕರಿಸಿರಬಹುದು. ಯಾವುದೇ ಯಂತ್ರ-ಮಂತ್ರಗಳಿಗೆ ವಾಸಿಯಾಗದ ಖಾಯಿಲೆ

ನರರೋಗ ಚಿಕಿತ್ಸೆ ದೊರೆತ ಮೇಲೆ ತಾನಾಗಿಯೇ ಹೋಗಿರುವುದನ್ನು ಗಮನಿಸಬಹುದು ( ಗೀತ - ೪೫, ಖಜಾನೆ ಇಲಾಖೆ).

ಕೊಳ್ಳಿದೆವ್ವವೊಂದು ಒಂದು ದೇವಸ್ಥಾನದಿಂದ ಮತ್ತೊಂದು ದೇವಸ್ಥಾನಕ್ಕೆ ಓಡಾಡುತ್ತಿರುತ್ತದೆಯಂದು ಹೇಳುವ ಗಂಗಣ್ಣ ದೆವ್ವದ ಬಗೆಗೆ ನನಗೆ ನಂಬಿಕೆಯಿಲ್ಲ. ಆದರೆ ನಮ್ಮೂರಿನ ಚಿಕ್ಕಣ್ಣ ಪಂಡಿತರು ದೆವ್ವ ಬಿಡಿಸುವುದನ್ನು ನೋಡಿದ್ದೇನೆ ಎಂದು ವಿವರ ಕೊಡುತ್ತಾರೆ. ದೆವ್ವ ಬಿಡಿಸುವ ಪಂಡಿತ ಬಂದು ಒಂದು ಕರೇಕೋಳಿ, ನಿಂಬೆಹಣ್ಣು, ಯಳನೀರು, ಅರಿಸಿನ, ಕುಂಕುಮ, ವಿಭೂತಿ ಉಂಡೆ, ಎರಡು ಕೋಳಿಮೊಟ್ಟೆ ತಾಯತಗಳು, ದಾರದುಂಡೆ, ಮೂರು ಚೊಂಬು, ಎರಡು ಕುಡಿಕೆಗಳು ಎಲ್ಲವನ್ನೂ ತರಿಸಿ, ಮೂಗುತ್ತದ ಬಳಿ ಗುಡಿಯೊಂದನ್ನು ಸಿದ್ಧ ಮಾಡಿಸುತ್ತಾನೆ. ಚೊಂಬುಗಳಿಗೆ ದಾರಕಟ್ಟಿ ಕುಡಿಕೆಗಳಿಗೆ ನಾಮ ಬಳಿದು, ಅರಿಸಿಣ - ಕುಂಕುಮ ಹಾಕಿ, ನಾಣ್ಯಗಳನ್ನು ಹಾಕಿಸಿ, ಅರಿಸಿನ ಬಟ್ಟೆಯಿಂದ ಬಾಯಿ ಕಟ್ಟಿಸುತ್ತಾನೆ. ಕರೆಕೋಳಿಯನ್ನು ಕೊಯ್ಯಿಸಿ, ಕಕ್ಕೆಸೊಪ್ಪು, ಬೇವಿನಸೊಪ್ಪು, ಬಿಲ್ವಪತ್ರೆಗಳಿಂದ ಮೂರು ಮೂರು ಬಾರಿ ಮಂತ್ರಹಾಕಿ ದೆವ್ವ ಹಿಡಿದಿರುವವರ ಮುಖದಿಂದ ತಾಯತಗಳನ್ನು ನೀವಳಿಸುತ್ತಾನೆ. ಕೋಳಿಮೊಟ್ಟೆಗಳನ್ನೂ ನೀವಳಿಸುತ್ತಾನೆ. ಮೊಟ್ಟೆಗಳನ್ನು ದೆವ್ವ ಹಿಡಿದವರ ಕೈಯಿಂದ ಹೊಡೆಸಿ ಅದನ್ನು ಮೂರು ಸಾರಿ ದಾಟಿಸುತ್ತಾನೆ. ನಂತರ ಒಬ್ಬರನ್ನು ಜೊತೆ ಮಾಡಿ ಹಿಂದಿರುಗಿ ನೋಡದಂತೆ ಮನೆಗೆ ಕಳುಹಿಸುತ್ತಾನೆ. ಮೂಗುತ್ತದ ಬಳಿಯೇ ಕೋಳಿಸಾರು, ಮುದ್ದೆ, ಅನ್ನದ ಅಡಿಗೆ ಮಾಡಿಸಿ ಊಟ ಮಾಡಿ ಮನೆಗೆ ಯಾವ ವಸ್ತುಗಳನ್ನೂ ತರುವುದಿಲ್ಲ. ಅನಂತರ ಖಾಯಿಲೆ ವಾಸಿಯಾಗಿದೆ ಎನ್ನುತ್ತಾರೆ. (ಗಂಗಣ್ಣ-೪೦, ಕಾವಲ್ ಪಾಳ್ಯ, ಮಾಗಡಿ ತಾಲ್ಲೂಕು).

ಮೈಯಪ್ಪನಹಳ್ಳಿ ಚಿಕ್ಕಣ್ಣಶೆಟ್ರು ಕುರಿ, ಆಡು, ದನ ಮೇಸುಕ್ಕೊಯ್ತಿದ್ರು ಕಾಡ್ಗೆ. ದಿನಾ ಅವುರ್ ಜೊತೆಲಿ ಮಚ್ಚಿರ್ತಾಯಿತ್ತು. ಒಂದಿಸ ಕೈಲಿಡ್ಕೊಂಡೋಗಿದ್ ಮಚ್ ಮರುತ್ ಬುಟ್ ಬಂದ್ಬುಟ್ಟಿದ್ರು. ರಾತ್ರಿ ಯಾತ್ಕೊ ಬೇಕಾಯ್ತು. ಮಚ್ಚು ಉಡ್ಕುದ್ರು, ಸಿಕ್ಕಲ್ಲ. ಓಹೋ ದನ ಮೇಸುಕ್ಕೋಗಿದ್‌ತಾವ ಮರುತ್‌ಬುಟ್ ಬಂದ್ ಬುಟ್ಟದ್ದೀನಿ ಅಂತ ನೆಪ್ ಮಾಡ್ಕೊಂಡುದ್ದೆ ಒಂದೊತ್ ರಾತ್ರಿಲೆ ಕಾಡ್ಗೋದ್ರು.

ಅಲ್ಲೇನಾಗ್ಬುಟ್ಟಿದೆ. ಚಿಕ್ಕಣ್ ಸಟ್ರು ಮಚ್ಚಿಡ್ಕೊಂಡುದ್ದೆ ಏಳೆಂಟು ದೆವ್ವಗಳು ಎಸೆದಾಡ್ತಾ ಆವೆ. ಈ ಸಟ್ರು ನೋಡುದ್ದೇ, ಬಟ್ಟೆನೆಲ್ಲ ಬಿಚ್ಚಾಕ್ ಬುಟ್ಬುದ್ದೇನ ದೆವ್ವಗೋಳ್ ತರಾನೆ ಆಗ್ಬುಟ್ಟು ಕುಡ್ಲೆಸ್ದಾಡ್ತಿದ್ವಲ್ಲ? ಇವ್ರು ಸೇರ್ಕೊಬುಟ್ರು. ಸಟ್ರು ಕೈಗೆ ಕುಡ್ಲು ಬತ್ತು; ಒಂದೊಂದೇ ದೆವ್ವನ ಇಡ್ಕೊಂಡುದ್ದೆ ತಲೆ ಜುಟ್ಟು ಕುಯ್ದು ಕುಯ್ದು ಎಲ್ಲಾವುದ್ರದುನು ತೊಡೆಲಿ ಕೊದುದ್ದೆ ಜಾಗಮಾಡ್ಕೊಬುಟ್ಟು ಜುಟ್ನ (ದೆವ್ವಗಳ) ಮಡಿಕೊಬುಟ್ಟು ಮನುಗ್ ಬಂದ್ ಬುಟ್ರು. ಈ ದೆವ್‌ಗೊಳು ಚಿಕ್ಕಣ್ ಸುಟ್ರುನ ಬೇಡ್ಕೊಳ್ಳೊವಂತೆ ಸಟ್ರೆನಮ್ ಜುಟ್ ಕೊಡ್ರಿ. ನೀವೇಳ್ದಂಗೆ ಕೇಳ್ತಿವಿ, ಅಂತ. ಸರಿ ಸಟ್ರೇನ್ ಮಾಡುದ್ರು, ದಿನಾ ರಾತ್ರಿ ಅನ್ನೆರಡ್

ಗಂಟೆಗೋಗೋದು ತಮ್ಮೊಲ್ದೆ ದೆವ್‌ಗೋಳ್ ಕೈಲಿ ಕೆಲ್ಸ ಮಾಡೋಸ್ದು. ಇಂಗೇ ಮಾಡ್ತಾಯಿದ್ರು, ಎಷ್ಟ್ ದಿನ ಅಂತ ನಿದ್ದೆಗೆಟ್ಟಾರು ಸಟ್ರು. ಒಂದಿನ ದೆವ್ವಗೋಳ್ ಕೆಲ್ಸ ಮಾಡ್ತಾ ಅವೆ; ಇವುರ್ಗೆ ನಿದ್ದೆ ಬಂದು ಮಲಿಕೊಬುಟ್ರು. ಇದೇ ಸಮಯ ಅಂದುದ್ದೆ ಎಲ್ಲ ದೆವ್ವಗೊಳು ಸೇರ್ಕೊಬುಟ್ಟುದೆ, ಸಟ್ರು ತೊಡೆನ್ ಉಗ್ರಿಂದ ಗೀಚುದ್ದೆ, ತಮ್ ಜುಟ್ಟೆತ್ಕೊಂಡು ಈ ಸಟ್ರುನ ಪನ ಮಾಡ್ಬುಟ್ಟುದ್ದೆ ಒಂಟೋಗ್ಬುಟ್ಟೊ. ಈಗ್ಲು ಅದೆ ಆ ದೆವ್ವಗೊಳ್ ಆಟ ಆಡ್ತಿದ್ ಜಾಗ ಸೊಪ್ಪಿನ ಕುಂಟೆ ಅಂತ. (ಮುನಿರಾಜು -೩೮, ಖಜಾನೆ ಗಣಕ ಕೇಂದ್ರ).

*ಕನಸಿನಲ್ಲಿ:* ಚರ್ಚ್‌ನ ಒಳಗಡೆ ಕಾರ್ಯಕ್ರಮ ನಡೆಯುತ್ತಿತ್ತು. ಹುಡುಗಿ ಯೊಂದು ಭಿಕ್ಷುಕಿಯಂತೆ ಬಂದು ನೃತ್ಯ ಮಾಡುತ್ತಿತ್ತು. ಮೊದಲು ಕುಣಿಯಬೇಡವೆಂದು ಗದರಿಸಿದಾಗ ಸುಮ್ಮನಿತ್ತು. ಸ್ವಲ್ಪ ಸಮಯದ ನಂತರ ಮತ್ತೆ ಕುಣಿಯಲು ಪ್ರಾರಂಭಿಸಿತು. ಆಗ ಜೋರಾಗಿ ನಾನು ಗದರಿಸಿದೆ. ಗಹಗಹಿಸಿ ನಕ್ಕು ಕಣ್ಣುಗಳನ್ನು ಮೆಡ್ಡರಿಸಿ ನನ್ನನೇ ದುರುಗುಟ್ಟಿ ನೋಡಲಾರಂಭಿಸಿತು. ನನಗೆ ಭಯವಾಗಿ ಕೋಳಿಮರಿ ಮುದುಡಿ ಕುಳಿತುಕೊಳ್ಳುವಂತೆ ಕುಳಿತುಬಿಟ್ಟೆ(ರೆಬಕ್ಕ ರಂಜನಿ -೪೨, ಖಜಾನೆ ಇಲಾಖೆ).

ನಿದ್ರೆ ಅಥವಾ ಅರೆನಿದ್ರೆಯಲ್ಲಿರುವಾಗ ಮಲಗಿರುವ ಮಂಚದ ಕೆಳಗಿನಿಂದ ಭಯಂಕರ ಕಪ್ಪು ಕೈಗಳೆರಡು ಎರಡೂ ಬದಿಗಳಿಂದ ಮೇಲೆದ್ದು ಕುತ್ತಿಗೆಯನ್ನು ಒತ್ತುತ್ತವೆ. ಮಾತೇ ಹೊರಡುವುದಿಲ್ಲ. ನೀರಲ್ಲಿ ಮುಳುಗಿದಾಗ ಉಸಿರು ಕಟ್ಟಿಕೊಳ್ಳುವ ಅನುಭವವಾಗುತ್ತದೆ. ಸುಮಾರು ಹೊತ್ತು ಹಾಗೆಯೇ ಇರುತ್ತದೆ. ಪಕ್ಕದಲ್ಲಿರುವವರರನ್ನು ಕರೆಯಲೂ ಆಗುವುದಿಲ್ಲ. ಭಯದ ವಾತಾವರಣದಿಂದ ಹೊರ ಬಂದು ಮನಸ್ಸಿಗೆ ಸ್ವಲ್ಪ ಧೈರ್ಯ ತಂದು ಕೊಂಡಾಗ ಅಥವಾ ತಮ್ಮ ಇಷ್ಟದೈವವನ್ನು ನೆನಸಿಕೊಂಡಾಗ ಸರಿಯಾಗುತ್ತದೆ. ಈ ಬಗೆಯ ಪ್ರಕ್ರಿಯೆಗಳು ಅಂಗಾತ ಮಲಗಿರುವಾಗ ಮಾತ್ರ ಆಗುತ್ತದೆ. ಎಡಮುಗ್ಗುಲು ಅಥವಾ ಬಲಮುಗ್ಗುಲಾಗಿ ಮಲಗಿರುವಾಗ ಈ ಬಗೆಯ ಅನುಭವಗಳು ಆಗುವುದೇ ಇಲ್ಲ. ರಾತ್ರಿಯಲ್ಲಿ ಯಾರೋ ಬಂದು ಮೇಲೆ ಅದುಕಿಕೊಂಡಂತಾಗುತ್ತದೆ. ಮಾತನಾಡಲು ಆಗುವುದಿಲ್ಲ ಎಂಬ ಅನುಭವಗಳು ವ್ಯಾಪಕವಾಗಿ ಆಗುತ್ತದೆ. ಒಂದು ಅಂದಾಜಿನ ಪ್ರಕಾರ ನೂರಕ್ಕೆ ಎಂಬತ್ತರಷ್ಟು ಮಂದಿ ಈ ಅನುಭವವನ್ನು ಹೇಳುತ್ತಾರೆ. ಮಾನಸಿಕ ತಜ್ಞರು ಮನಸಿನಲ್ಲಿನ ಅವ್ಯಕ್ತ ಭಯ ರಾತ್ರಿಯ ನಿದ್ದೆಯಲ್ಲಿ ಹೊರಬಂದು ಇಂಥ ಅನುಭವಗಳನ್ನು ಉಂಟುಮಾಡುತ್ತವೆ ಎನ್ನುತ್ತಾರಲ್ಲದೆ ಅಂಗಾತ ಮಲಗಿರುವಾಗ ಕೆಲವು ಕ್ಷಣ ಉಸಿರಾಟವೇ ನಿಂತೂ ಹೀಗಾಗುವ ಸಾಧ್ಯತೆಗಳೂ ಇವೆ ಎನ್ನುತ್ತಾರೆ. ಕನಸಿನಂತೆ ಘಟಿಸುವ ಇಂಥ ಪ್ರಕರಣಗಳಲ್ಲಿ ಕೆಲವರು ಕಿರುಚುತ್ತಿರುತ್ತಾರೆ. ತಾವು ಕಿರುಚುತ್ತಿರುವುದು ತಮಗೇ ತಿಳಿದಿರುವುದಿಲ್ಲ. ಅಕ್ಕಪಕ್ಕ ಮಲಗಿರುವವರು ಅವರನ್ನು ಜಾಗೃತಗೊಳಿಸುವುದು ಉಂಟು.

*ಭ್ರಮೆಯ ನಿದರ್ಶನ:* ಆನೆಕಲ್ ತಾಲ್ಲೂಕಿನ ಜಿಗಣಿಯ ಹತ್ತಿರದ ಸತ್ಯಮ್ಮನಗುಟ್ಟೆ ಎಂಬಲ್ಲಿ ದೊಡ್ಡ ಹಲಸಿನ ಮರವೊಂದಿದ್ದು, ಯಥೇಚ್ಛವಾಗಿ ಹಣ್ಣುಗಳನ್ನು ಬಿಡತ್ತಿತ್ತಂತೆ.

ಸತ್ಯಮ್ಮನ ಗುಟ್ಟೆಯಲ್ಲಿ ದೆವ್ವವಿದೆ ಎಂದು ಊರ ಜನರೆಲ್ಲಾ ಹೆದರಿಸುತ್ತಿದ್ದರಂತೆ. ಹಲಸಿನ ಹಣ್ಣುಗಳನ್ನು ಕದಿಯುವ ಜನ ಅಲ್ಲಿದ್ದರಂತೆ. ಕಳ್ಳರನ್ನು ಕಾಯಲೆಂದು ಪ್ರತಿದಿನ ಹಲಸಿನಮರದ ಹತ್ತಿರ ಹೋಗುತ್ತಿದ್ದರು. ಒಂದು ದಿನ ಎಂದಿನಂತೆ ಹೋದಾಗ ಬಿಳೀ ಬಟ್ಟೆಯೊಂದು ಉದ್ದಕ್ಕೆ ಗಾಳಿಯಲ್ಲಿ ತೂಗಾಡುತ್ತಿದ್ದು ದೆವ್ವವೆಂದು ಭ್ರಮಿಸಿದರು. ಬಂದೂಕು ಕಂಡರೆ ಹೆದರುವುದೆಂಬ ನಂಬಿಕೆಯಿಂದ ಸದ್ದು ಮಾಡದಂತೆ ಹಲಸಿನ ಮರದ ಬಳಿಗೆ ಹೋದರಂತೆ. ಹಲಸಿನ ಹಣ್ಣು ಕದಿಯಲು ಬಂದವನೊಬ್ಬನ ಪಂಚೆ ಕಳಚಿಕೊಂಡು ತೂಗಾಡುತ್ತಿತ್ತಂತೆ. (ವಿ.ಎನ್. ಅಶ್ವಥ್ - ೩೭).

ಇನ್ನೂ ಕೆಲವು ಪ್ರಕರಣಗಳನ್ನು ಹೇಳುವ ಅಶ್ವಥ್ ದೆವ್ವದ ಅಸ್ತಿತ್ವವನ್ನು ಇಲ್ಲವೆನ್ನುತ್ತಾರೆ. ಅವರೇ ಇನ್ನೊಂದು ಪ್ರಕರಣವನ್ನು ಹೇಳುತ್ತಾ ಅವರ ಅತ್ತೆ ಎಲ್ಲರೂ ಮಲಗಿರುವಾಗ ಮನೆಯ ಹೊರಜಗುಲಿಯ ಮೇಲೆ ದೆವ್ವದೊಡನೆ ಸಂಭಾಷಣೆ ನಡೆಸುವ ವಿಚಾರ ಹೇಳುತ್ತಾರೆ. ಅದೂ ಕೂಡ ಒಂದು ಬಗೆಯ ಮಾನಸಿಕ ವ್ಯಾಧಿಯಿರಬಹುದೆಂದು ಹೇಳುವುದನ್ನು ಮರೆಯುವುದಿಲ್ಲ.

ಧನಲಕ್ಷ್ಮಿ ಎಂಬುವವರು ಒಂದು ಅನುಭವವನ್ನು ಹೀಗೆ ಹೇಳುತ್ತಾರೆ: ಗೋಪಾಲಕೃಷ್ಣ ಎಂಬ ಪೋಸ್ಟ್‌ಮ್ಯಾನ್ ಕೋಲಾರದಲ್ಲಿ ಬಾಡಿಗೆ ಮನೆಯೊಂದರಲ್ಲಿದ್ದರು. ಸ್ವಲ್ಪ ದಿನ ಕಳೆಯುವಷ್ಟರಲ್ಲಿ ಅಕ್ಕಪಕ್ಕದ ಮನೆಯವರು ಹೇಳಿದರಂತೆ: "ಈ ಮನೆಗೇಕೆ ಬಂದಿರಿ ? ಗೌರಿ ಎಂಬ ಹುಡುಗಿ ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದಾಳೆ" ಎಂದು. ಹೊಸದಾಗಿ ಮದುವೆ ಯಾಗಿದ್ದ ಈತನ ಹೆಂಡತಿಯ ಮೇಲೆ ಅಂದಿನಿಂದ ದೆವ್ವ ಬರಲು ಪ್ರಾರಂಭಿಸಿತು. ಹಾಗೆ ಬಂದಾಗ ಲೋ ಗೋಪಾಲ ಮಾಂಸ ತಕೊಬಾರೋ ತಿನ್‌ಬೇಕು, ಮೊಟ್ಟೆ ತಂದ್‌ಕೊಡೋ, ಎಂದು ಏಕವಚನದಲ್ಲಿ ಮಾತನಾಡಿಸುವುದು ಎದುರು ಮಾತನಾಡಿದರೆ ಕೆಡವಿಕೊಮಡು ಎದೆಯ ಮೇಲೆ ಗುದ್ದುವುದು ಮುಂತಾಗಿ ಕಾಡುತ್ತಿತ್ತಂತೆ. ಕಡೆಗೆ ಆ ಮನೆ ಬಿಟ್ಟು ಬಂದರೂ ಕೂಡ ಈಕೆಯ ಮೈಮೇಲೆ ಬಂದು ಅತಿಯಾಗಿ ತಿನ್ನುವುದು, ನೀರು ಕುಡಿಯುವುದು, ಮಹಿಳೆ ಅಸಾಧ್ಯವಾದ ಕೆಲಸಗಳನ್ನು ಮಾಡಿಸುವುದು, ಯಾರು ನೀನು ಎಂದರೆ ನಾನು ಗೌರಿ ಎನ್ನುವುದು ಹೀಗೆ ಕಾಟ ಕೊಟ್ಟು ಕೊನೆಗೆ ಮಾಟಮಂತ್ರಗಳಿಂದ ಬಿಡಿಸಿ ಈಗ ಸರಿಯಾಗಿದ್ದಾಳಂತೆ. ಇಲ್ಲಿ ಗೌರಿ ಸತ್ತ ವಿಷಯವನ್ನು ತಿಳಿಸುವವರೆಗೂ ಯಾವುದೇ ಕಾಟವಿಲ್ಲದ್ದು, ತಿಳಿಸಿದ ಮೇಲೆ ದೆವ್ವ ಮೈಮೇಲೆ ಬರುವ ಕ್ರಿಯೆಯನ್ನು ಗಮನಿಸಬಹುದು. ಅಂದರೆ ಮನಸ್ಸಿನ ಮೇಲೆ ಜನರ ಮಾತು ಪರಿಣಾಮವನ್ನು ಬೀರಿ ಭ್ರಮೆಯುಂಟಾಗಿದೆ.

*ಸತ್ತವರು ಬದುಕಬಲ್ಲರೆ ?* ವ್ಯಕ್ತಿ ಸತ್ತಾಗ ನೆಂಟರಿಷ್ಟರು ಅತ್ತು ಕರೆದು, ಚಟ್ಟ (ಸಿದಿಗೆ) ಕಟ್ಟಿ ತಲೆಕೊಳ್ಳಿಯಿಟ್ಟು ಬಿಸಿ ನೀರಿನ ಸ್ನಾನಮಾಡಿಸಿ, ಬಿಳಿವಸ್ತ್ರದಿಂದ ಮುಚ್ಚಿ ಶ್ಮಶಾನಕ್ಕೆ ಹೊತ್ತೊಯ್ಯುತ್ತಾರೆ. ಹೆಣಕ್ಕೆ ಸಿಂಗಾರ ಮಾಡುವಾಗ, ಹೊತ್ತೊಯ್ಯುವಾಗ, ಸ್ನಾನ

ಮಾಡಿಸುವಾಗ ಇಲ್ಲವೇ ಸುಡುಗಾಡಿನಲ್ಲಿ ಶವ ಮಿಸುಗಾಡುತ್ತದೆ. ನರಳುತ್ತದೆ. ಕೆಲವೊಮ್ಮೆ ಎದ್ದು ಕೂತು ತನ್ನನ್ನು ಇಲ್ಲಿಗೇಕೆ ಕರೆತಂದಿರಿ ? ಎಂದು ಪ್ರಶ್ನಿಸಲೂ ಬಹುದು. ಆಗ ಎಲ್ಲರಿಗೂ ಭಯ. ಸತ್ತವನು ಇಷ್ಟು ಬೇಗ ದೆವ್ವವಾಗಿದ್ದಾನೆ ಎಂದು ! ಇನ್ನೂ ಕೆಲವೊಮ್ಮೆ ಆಶ್ಚರ್ಯ ! ಸಂತೋಷ. ಕಳೆದುಹೋಗಿದ್ದ ಜೀವ ಹಿಂದೆ ಬಂದಿದೆಯೆಂದು. ಭೂಮಿಯ ಋಣ ತೀರಿಲ್ಲದ ಕಾರಣ, ಕರ್ಮ ಮುಗಿಯದ ಕಾರಣ ಯಮಧರ್ಮರಾಯ ಹಿಂದಕ್ಕೆ ಕಳಿಸಿದ್ದಾನೆ ಎಂದುಕೊಳ್ಳುತ್ತಾರೆ. ಇನ್ನೂ ಏನೇನು ಅನುಭವಿಸಬೇಕೋ ಎಂಬ ನಂಬಿಕೆ ಕೂಡ ಇಲ್ಲದಿಲ್ಲ.

ಹಾಗೆ ಬದುಕಿದವರನ್ನು ತುಂಬಾ ಉಪಚಾರ ಮಾಡುತ್ತಾ ಪ್ರಶ್ನೆಗಳ ಮಳೆಗರೆಯುತ್ತಾರೆ. ಚೇತರಿಸಿಕೊಂಡ ಆ ವ್ಯಕ್ತಿ ಯಮದೂತರು ಎಳೆದುಕೊಂಡು ಹೋದದ್ದು, ನರಕದಲ್ಲಿ ಪಾಪಿಗಳು ಅನುಭವಿಸುತ್ತಿದ್ದ ಘೋರ ಯಾತನೆಗಳ ರಸವತ್ತಾದ ಬಣ್ಣನೆ, ಚಿತ್ರಗುಪ್ತ ಕಡತಗಳನ್ನು ಪರಿಶೀಲಿಸಿ ಸತ್ತಿರುವವನ ಚರಿತ್ರೆಯನ್ನು ಹೇಳುವುದು. ಯಾರಿಗೋ ಬದಲಾಗಿ ಯಾರನ್ನೋ ಕರೆತಂದಿರುವ ವಿವರಗಳನ್ನು ಯಮನಿಗೆ ತಿಳಿಸಿದ್ದು, ನಂತರ ಯಮಧರ್ಮರಾಯ ಈ ವ್ಯಕ್ತಿಯನ್ನು ಭೂಲೋಕಕ್ಕೆ ಯಮಕಿಂಕರರ ಜೊತೆ ಹಿಂದಿರುಗುವಂತೆ ಆಜ್ಞಾಪಿಸಿದ್ದು, ಎಲ್ಲವನ್ನೂ ವಿಸ್ತಾರವಾಗಿ ಕಥೆಕಟ್ಟಿ ವಿವರಿಸುವುದುಂಟು. ಯಮನ ಆಸ್ಥಾನಕ್ಕೆ ಹೋಗಿದ್ದಕ್ಕೆ ಗುರುತಿಗಾಗಿ ಅಲ್ಲಿ ಹಾಕಿದರೆನ್ನಲಾದ ಯಾವುದಾದರೂ ಗುರುತನ್ನು ತೋರಿಸುವುದುಂಟು. ಈ ಬಗೆಯಲ್ಲಿ ಸತ್ತು ಬದುಕುವುದಕ್ಕೆ ಕಾರಣಗಳು ಹಲವು. ಅಂತಹ ಕಾರಣಗಳ ಹುಡುಕಾಟವನ್ನು ವೈದ್ಯರಿಗೆ ಒಪ್ಪಿಸಿಬಿಡೋಣ. ಆದರೆ ಜನ ಇಂತಹ ಘಟನೆಗಳಿಗೆ ಸಾಮಾನ್ಯವಾಗಿ ದೆವ್ವವನ್ನು ಆರೋಪಿಸುವುದುಂಟು. ದೆವ್ವ ಸತ್ತಿದ್ದನೆಂದು ತಿಳಿದಿದ್ದ ವ್ಯಕ್ತಿಯ ಉಸಿರನ್ನು ಬಿಗಿಯಾಗಿ ಹಿಡಿದಿದ್ದು ಬಿಟ್ಟುಹೋದಾಗ ಬದುಕಿನೆಂದು ನಂಬುವುದುಂಟು.

ವ್ಯಕ್ತಿ ಖಾಯಿಲೆಯಿಂದ ನರಳುವಾಗ ಸಾವಿನ ಭಯ ಆವರಿಸಿರುತ್ತದೆ. ಬಾಲ್ಯದಿಂದ ಕೇಳಿರುವ ಮೇಲೆ ವಿವರಿಸಿದಂತಹ ಕಥೆಗಳಲ್ಲಿ ಯಮದೂತರು, ಚಿತ್ರಗುಪ್ತ, ನರಕ ಸ್ವರ್ಗಗಳ ವರ್ಣನೆ ಇತ್ಯಾದಿ ವಿವರಗಳನ್ನೆಲ್ಲಾ ಕಲ್ಪಿಸಿಕೊಂಡು ಭ್ರಮಾಲೋಕಕ್ಕೆ ತಳ್ಳಲ್ಪಡುತ್ತಾರೆ. ರೋಗ ಉಲ್ಬಣಗೊಂಡು, ನಿತ್ರಾಣರಾದಾಗ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಅವರ ಮನಸ್ಸಿನ ಕಲ್ಪನೆಗಳು ಸಾಕಾರಗೊಂಡು ಎಲ್ಲವೂ ಕಣ್ಣ ಮುಂದಿನಿಂದ ಹಾಯ್ದು ಹೋದಂತಾಗುತ್ತದೆ. ಇದೊಂದು ಬಗೆಯ ಸುಪ್ತಾವಸ್ಥೆ ಅಥವಾ ಸ್ವಪ್ನಾವಸ್ಥೆ. ಎಚ್ಚೆತ್ತಾಗ ವ್ಯಕ್ತಿ ತನಗೆ ಕಂಡದ್ದನ್ನು ವಿವರಿಸುವುದುಂಟು. ಹಾಗೆ ವಿವರಿಸುವಾಗ ಸತ್ತು ಬದುಕಿದ ವ್ಯಕ್ತಿ ಸುಳ್ಳುಗಳನ್ನು ಸೃಷ್ಟಿಸುವುದು ಉಂಟು. ನಿದ್ರಾವಸ್ಥೆಯಲ್ಲಿ ಮಲಗಿರುವಾಗ ದೇಹದ ಯಾವುದೋ ಭಾಗದಲ್ಲಿ ಒತ್ತಿ ಗುರುತೂ ಆಗಿರಬಹುದು. ಹಾಗೆ ಒತ್ತುವಾಗ ಆಗುವ ನೋವನ್ನು

ಅನುಭವಿಸಿದ್ದು, ಅದನ್ನೇ ಯಮಕಿಂಕರರು ಹಿಂಸಿಸಿದ್ದಾಗಿ ಆ ವ್ಯಕ್ತಿಯ ಅನುಭವಕ್ಕೆ ಬಂದಿರಬಹುದು; ಗುರುತೂ ಆಗಿರಬಹುದು. ಇಂಥ ಘಟನೆಗಳು ಅಪರೂಪ. ಹಾಗೆ ಜರುಗಿದರೆ ನೆರೆದ ಜನ ಕುತೂಹಲದಿಂದ ಕೇಳಿ ನಂಬಿಬಿಡುತ್ತಾರೆ. ಇಂತಹ ಕತೆ ಕೇಳುವವರಲ್ಲಿ ಮತ್ತಾರಿಗಾದರೂ ಹೀಗೆ ಆದರೆ, ಇದೇ ಕಥೆಗಳು ಅವರಲ್ಲಿಯೂ ಮೈತಾಳುತ್ತವೆ.

# ೮. ದೆವ್ವದ ಸುತ್ತಮುತ್ತಲಿನ ಕಥೆಗಳು

ಡಾ || ಚೆನ್ನಣ್ಣ ವಾಲೀಕಾರ

*ದೆವ್ವಸಂಬಂಧಿ ನಂಬಿಕೆಗಳು, ಊಳಿಗಮಾನ್ಯ ಸಮಾಜ ಕೆಳವರ್ಗಗಳ ಶೋಷಣೆಗಾಗಿ ಕಟ್ಟಿದ ಕಾಲ್ಪನಿಕ ಕಥೆಗಳೆನ್ನುತ್ತಾರೆ ವಿಚಾರವಾದಿ ಚನ್ನಣ್ಣ -ಸಂಪಾದಕ.*

## ೧. ಬಾಲಕನಾಗಿದ್ದಾಗ :-

ನಾನು ಬಾಲಕನಾಗಿದ್ದಾಗ ಬೇಸಿಗೆಯಲ್ಲಿ ಮನೆಯ ಮಾಳಿಗೆಯ ಮೇಲೆ ಮಲಗುತ್ತಿದ್ದೆ. ಮಧ್ಯರಾತ್ರಿ ಎಚ್ಚರವಾದಾಗ ಅತೀ ಸಮೀಪದಲ್ಲಿಯೇ ಇದ್ದ ಶ್ಮಶಾನದ ಕಡೆಗೆ ನೋಡಿದಾಗ ಹಗಲು ಹೊತ್ತು ಅಜ್ಜ ಹೇಳಿದಂತೆ ದೆವ್ವಗಳು ಕುಣಿಯುತ್ತಿದ್ದದ್ದು ಕಾಣಿಸುತ್ತಿತ್ತು. ನಾನು ಭಯಗೊಂಡು ಗಡಗಡ ನಡುಗುತ್ತ ಕೌದಿ ಹೊಚ್ಚಿಕೊಂಡು ಮಲಗುತ್ತಿದ್ದೆ. ಆಗ ನಾನು ಅವುಗಳನ್ನು ದೆವ್ವಗಳೆಂದು ಭಾವಿಸಿದ್ದೆ. ಹೈಸ್ಕೂಲಿನಲ್ಲಿ ಓದುವಾಗ ವಿಜ್ಞಾನದ ಶಿಕ್ಷಕರು ಹೆಣಗಳ ಎಲುಬುಗಳು ಹೊರಬಿದ್ದಾಗ ಅವುಗಳಲ್ಲಿರುವ ಫಾಸ್ಪರಸ್ಸಿಗೆ ಗಾಳಿ ತಗುಲಿ ಉರಿಹತ್ತಲು, ಅವು ದೆವ್ವಗಳಂತೆ ಕುಣಿಯುವಂತೆ ಭಾಸವಾಗುವುದೆಂದು ತಿಳಿಸಿದ ಬಳಿಕ ಅವುಗಳನ್ನು ದೆವ್ವಗಳೆಂದು ತಿಳಿಯುವುದು ಬಿಟ್ಟುಬಿಟ್ಟೆ.

## ೨. ದನಕಾಯುವಾಗ :

ಐದು ವಯಸಿನವನಾದ ಬಳಿಕ ನಾಲವಾಡದಲ್ಲಿ ದನಕಾಯಲು ಹಚ್ಚಿದರು. ಹೊಲದಲ್ಲಿ ನಡೆದ ರಾಶಿಗಾಗಿ ಕಣಕ್ಕೆ ಹೊರಟಾಗ ನನ್ನ ಹಿಂದೆ ಒಂದು ಕಪ್ಪಾಕೃತಿಯ ಮನುಷ್ಯ ಬೆನ್ನುಹತ್ತಿ ಬರುತ್ತಿರುವುದು ಕಂಡುಬಂದು ಒಂದೇ ಸವನೆ ಹಾಣ್ಗಲ ಬಿದ್ದು ಕಣದ ಕಡೆಗೆ ಓಡಿ ಹೋದೆ. ಓಡಿ ಹೋಗುವಾಗ ನಾನು ಹಿಂದಿರುಗಿ ನೋಡಿದಾಗ ಅದು ಕೂಡ ನನ್ನ ಹಿಂದೆ ಓಡಿ ಬರುತ್ತಿರುವಂತೆ ತೋರುತ್ತಿತ್ತು. ನಾನು ಹೊಲದೊಳಗೆ ಕಾಲಿಟ್ಟ ಕೂಡಲೇ ಅದು ಮಟ್ಟಮಾಯವಾಯಿತು. ಕಾರಣ ಹೊಲದಲ್ಲಿದ್ದ ಅಕ್ಕಂದಿರು ನಾನು ಓಡಿ ಬರುತ್ತಿರುವುದು ಕಂಡು ಹಣರಿ ಹೊಡೆಯುತ್ತಾ ಸಮೀಪ ಬಂದಾಗ ನನಗೆ ಅದು ಮಾಯವಾದಂತೆ ಅನಿಸುತ್ತಿದೆ.

ಅಕ್ಕ ನಾನು ಕಣದಲ್ಲಿ ಇಬ್ಬರೇ ಇದ್ದೆವು. ಮಾವ ಊರಿಗೆ ಹೋಗಿದ್ದ. ಕಣರಾಶಿ ನಡೆದಿತ್ತು. ಊರ ಹತ್ತಿರದಲ್ಲಿರುವ ಹತ್ತಿನಕೇರಿ ಹೊಲದಲ್ಲಿ ಚೀರಾಟ ಹಾರಾಟ ಕೇಳಿ ಬರತೊಡಗಿತು. ಅದೇನೆಂದು ನಾನು ಅಕ್ಕನಿಗೆ ಕೇಳಿದೆ. ಆಗ ಅಕ್ಕ ಹೇಳಿದಳು ಆ ದೆವ್ವಗಳ ಕಥೆ.

ಹತ್ತಿನಕೇರಿಯಲ್ಲಿರುವುದು ಅಕ್ಕನ ದೆವ್ವ ಯಾದಗಿರಿ ಹತ್ತಿರ ಇರುವ ಚಿಂಚನಕೇರಿಯಲ್ಲಿರುವುದು ತಂಗಿ ದೆವ್ವ. ರಾಶಿಮಾಡುವ ಮುಂದೆ ತಂಗಿದೆವ್ವ ಬಂದು ಅಕ್ಕ ದೆವ್ವನನ್ನು ಒಂದು ದಿನದ ಮಟ್ಟಿಗೆ ತನ್ನ ಮಕ್ಕಳನ್ನು ನೋಡಲು ತನ್ನೂರಿಗೆ ಬರಲು ಹೇಳಿದಳು. ಈಗ ಹತ್ತಿನಕೇರಿ ಹೊಲದ ರಾಗಿ ಬಂದಿದೆ. ನಾನು ಹೋಗಿಬಿಟ್ರೆ ರೈತನಿಗೆ ಒಳ್ಳೆ ಬೆಳೆ ಬರುವುದು. ನಾನು ಇಲ್ಲಿ ಇದ್ದರೆ ನನಗೂ ನನ್ನ ಮಕ್ಕಳಿಗೂ ಕುಳಿತುಣ್ಣಲು ರಾಶಿ ಒಯ್ಯಲು ಬರುವುದು. ಈ ಕಾರಣದಿಂದ ಬರಲಾಗದೆಂದಾಗ ತಂಗಿ ಒಂದು ದಿನದ ಮಟ್ಟಿಗೆ ಬಾ ಎಂದು ಒತ್ತಾಯ ಮಾಡಿ ಕರೆದುಕೊಂಡು ಹೋಯಿತು. ಇದನ್ನು ಕೇಳಿದ ಆ ಹೊಲದ ರೈತ ಒಂದೇ ದಿನದೊಳಗಾಗಿ ರಾಶಿ ಮಾಡಿ ತುಂಬಿ ಮನೆಗೆ ತಂದು ಇಟ್ಟುಕಂಡನು. ಅದು ಮರುದಿನ ಹಿಂದಿರುಗಿ ಬಂದಾಗ ಅದರ ಪಾಲಿನ ಕಣ ಉಳಿದಿತ್ತು. ಆ ನೋವಿನಿಂದ ಪ್ರತಿವರುಷ ಹತ್ತಿನಕೇರಿ ಹೊಲದಲ್ಲಿ ಕಣದರಾಶಿ ನಡೆದಾಗ ಹಾರಾಟ ಚೀರಾಟ ಮಾಡುವುದೆಂದು ಅಕ್ಕ ಹೇಳಿದಳು.

## ೩. ಹೈಸ್ಕೂಲಿನಲ್ಲಿದ್ದಾಗ :

ನಮ್ಮೂರಿನಲ್ಲಿ ನಮ್ಮ ಕೇರಿಗೆ ಹತ್ತಿಕೊಂಡ ಕುರುಬರ ಪೂಜಾರಿಗಳ ಮನೆ ಇತ್ತು. ಅವರ ಅಂಗಳದಲ್ಲಿ ಹೂರಣ ರುಬ್ಬುವ ಒಂದು ಒರಳು ಒಂದು ರುಬ್ಬುಗಲ್ಲು ಇತ್ತು. ಪ್ರತಿ ಅಮವಾಸ್ಯೆ ರಾತ್ರಿಗೆ ಏಳು ಮಕ್ಕಳ ತಾಯಿ ಬಂದು ಆ ಒರಳಿನ ಪೂಜೆಮಾಡಿ ಹೋಗುವಳೆಂದು ನಮಗೆ ಅಜ್ಜಿ ಕೂಡಿಸಿಕೊಂಡು ಹೇಳುತ್ತಿದ್ದಳು.

ಆಗ ನಾವೆಲ್ಲ ಗೆಳೆಯರು ಹೈಸ್ಕೂಲಿನಲ್ಲಿ ವಿಜ್ಞಾನ ಓದುತ್ತಿದ್ದುದರಿಂದ ಸತ್ಯಸಂಗತಿ ತಿಳಿಯಲು ಎಲ್ಲರೂ ಒಟ್ಟಾಗಿ ಆ ಪೂಜಾರಿಯವರ ಕುರಿ ಕೊಟ್ಟಿಗೆಯಲ್ಲಿ ಕುಳಿತು ನೋಡಿದಾಗ ಆಕೆ ಏಳುಮಕ್ಕಳ ತಾಯಿಯಾಗಿರಲಿಲ್ಲ. ಮಕ್ಕಳಾಗಲು ಕುರುಬರ ಹಣಮಂತನ ಹೆಂಡತಿ ಪ್ರತಿ ಅಮವಾಸ್ಯೆ ರಾತ್ರಿ ಆ ಬೆಳಕಿನಲ್ಲಿ ಪೂಜೆ ಮಾಡಲು ಬರುತ್ತಿದ್ದಳು. ಈ ಸತ್ಯ ಸಂಗತಿ ನಾನು ಬಹಿರಂಗ ಪಡಿಸಿದಾಗ ಆ ಏಳು ಮಕ್ಕಳ ತಾಯಿ ದೆವ್ವಿನ ಕಥೆ ನಿಂತುಹೋಯಿತು.

## ೫. ಕಾಲೇಜು ಓದುವಾಗ :

ಗುಲಬರ್ಗಾದಲ್ಲಿ ೧೯೬೫ ರಲ್ಲಿ ಕಾಲೇಜೋದುವಾಗ ಶಹಾಬಜಾರದಲ್ಲಿ ಒಬ್ಬ ಗೆಳೆಯನೊಂದಿಗೆ ಒಂದು ರವಿವಾರ ನೀರು ತುಂಬುತ್ತಿರುವಾಗ ನಮ್ಮ ಗೆಳೆಯನಿಗೆ ಎದುರು ಮನೆಯವರು 'ನಿಮಗೆಲ್ಲು ಮನೆ ಸಿಗಲಿಲ್ಲೇನು ? ಇಲ್ಲೊಂದು ವರುಷದ ಹಿಂದೆ ಒಬ್ಬ ಹೈನೋರು ಸತ್ತಾನ', ಎಂದು ಹೇಳಿದ್ದು ಕೇಳಿ ನಾನು ಎಷ್ಟು ಹೇಳಿದರೂ ನನ್ನ ಗೆಳೆಯ ಕೇಳಲಿಲ್ಲ. ಮರುದಿನ ಶಹಾಬಜಾರ ಬಿಟ್ಟು ಬ್ರಹ್ಮಪುರದಲ್ಲಿ ಬಂದು ಮನೆ ಹಿಡಿದೆವು. ಆನಂತರ ಗೋತ್ತಾಯಿತು . ಈ ಕಥೆಯೆಲ್ಲ ಸುಳ್ಳು, ಮನೆಬಾಡಿಗೆ ಹೆಚ್ಚಿಗೆ ಮಾಡಲು ಇಂಥ

ದೆವ್ವಿನ ಕಥೆಗಳನ್ನು ಹುಟ್ಟಿಸಿ ಮನೆ ಬಿಡಿಸುವರೆಂದು. ದೆವ್ವಿನ ಕಥೆಗಳ ಹುಟ್ಟಿಗೆ ಹೀಗೆ ನೂರಾರು ಕಾರಣಗಳಿವೆ.

## ೬. ಉದ್ಯೋಗಕ್ಕೆ ಸೇರಿಕೊಂಡಾಗ :

ಬಿ.ಎ. ಮುಗಿಸಿದ ಬಳಿಕ ರಾಯಚೂರಿನ ಹಬೀದರ್ದ ಹೈಸ್ಕೂಲಿನಲ್ಲಿ ಶಿಕ್ಷಕನಾಗಿ ಸೇರಿಕೊಂಡೆ. ರವಿವಾರ ಬಿಡುವಿದ್ದಾಗ ನನ್ನ ಬಂಧುಗಳಾದ ಕೆ. ಮುದ್ದುರಂಗಪ್ಪನವರ ಮನಗೆ ಹೋಗುತ್ತಿದ್ದೆ. ಒಮ್ಮೆ ಹೋದಾಗ ಮುದ್ದುರಂಗಪ್ಪನವರು ನನಗೆ ಒಬ್ಬ ಡಾಕ್ಟರರ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ದೆವ್ವಗಳನ್ನು ಬಿಡಿಸುವಂಥ ಮಹಾಮಂತ್ರವಾದಿ ಬಂದಿದ್ದರು. ಅವರು ಮಂತ್ರಿಸಿದ ಲಿಂಬಿಕಾಯಿ ಕೊಟ್ಟಾಗ ಅವನ್ನು ತೆಗೆದುಕೊಂಡರು. ನಾನು ಮನೆಗೆ ಹೋದಾಗ ಮುದ್ದುರಂಗಪ್ಪ ವಕೀಲರ ಹೆಂಡತಿ ಆವೇಶಗೊಂಡು 'ನಾನು ಬಾಲಬ್ರಹ್ಮಚಾರಿ ಬ್ರಾಹ್ಮಣ. ನನಗೆ ಹೊಡೆದು ಭೀಮಾನದಿಯಲ್ಲಿ ಹಾಕಿದ್ರು ನಮ್ಮ ವೈರಿಗಳು. ನಿನ್ನ ಹೆಂಡತಿ ತವರಿನಿಂದ ಬರುವಾಗ ಹಿಡಿದೀನಿ. ನನಗೇನಾನ ಇರ್‌ನಿಂದ ನೀನ್ ಬಿಡಿದೇಂದ್ರ ಇಕೀನ ತಗೊಂಡು ಹೋಗುತೀನಿ' ಎಂದದ್ದು ಕೇಳಿ ಮುದ್ದರಂಗಪ್ಪ ವಕೀಲರು ಮಂತ್ರಿಸಿ ತಂದಂಥ ಟೆಂಗು ಲಿಂಬಿಕಾಯಿ ಒಟ್ಟು ತಿಪ್ಪೆಯೊಳಗೆ ಒಗೆದು ಬಂದರು. ಸರಕಾರಿ ವಕೀಲರು ಹೀಗೆ ವರ್ತಿಸಿದ್ದು ನನಗೆ ಗಾಬರಿಯೆನಿಸಿತು.

*ಒಟ್ಟು ಸಾರಾಂಶ :*

ದೆವ್ವಗಳ ಕುರಿತಾದ ಈ ಎಲ್ಲಾ ಕಥೆಗಳಿಂದ ತಿಳಿದು ಬರುವುದಿಷ್ಟು:

(೧) ದೆವ್ವಗಳಲ್ಲಿ ಅಶಕ್ತ ಮನಸ್ಸಿನವರಿಗೆ ದೆವ್ವಿನ ಪೀಡೆ ಹತ್ತುವುದು.

(೨) ಅಶಕ್ತ ಮನಸ್ಸಿನವರು, ಭ್ರಾಮಕರು. ದೆವ್ವಿನ ಕಥೆಗಳು ಕೇಳಿದ ಬಳಿಕ ಅವು ತಮಗೆ ಬಂದು ಹಿಡಿದಿರುವಂಥೆ ಆವೇಶಗೊಂಡು ಹಿರಿಯರು, ಅಜ್ಜಿಯರು ಹೇಳಿದ ಕಥೆಯಂತೆ ವರ್ತಿಸಲು ಆರಂಭಿಸುವರು.

(೩) ಹಳ್ಳಿಜನರಿಗೆ, ನಿರಕ್ಷರಿಗಳಿಗೆ, ಬಡವರಿಗೆ ದೆವ್ವಿನ ಹುಚ್ಚು ಹತ್ತುವುದು.

(೪) ಪಟ್ಟಣದವರಿಗೆ, ಓದು ಬಲ್ಲವರಿಗೆ, ಜಾಣರಾದವರಿಗೆ ದೆವ್ವಗಳು ಹಿಡಿಯುವುದಿಲ್ಲ, ಹಿಡಿದರೂ ಕಡಿಮೆ.

(೫) ಸಶಕ್ತ ಮನಸ್ಸಿನವರ ಕಡೆಗೆ ದೆವ್ವಗಳು ಸುಳಿಯುವುದಿಲ್ಲ.

(೬) ದೇವರಂತೆ ದೆವ್ವೊಂದು ಭ್ರಮೆ. ನಂಬಿದವರಿಗೆ ಹಿಡಿಯುವುದು. ನಂಬದವರ ಸಮೀಪ ಇವೆರಡು ಸುಳಿಯುವುದಿಲ್ಲ.

ಡಾ. ಟಿ.ಕುಮಾರ ಅವರು ಹೇಳಿದಂತೆ ಇದು ಊಳಿಗಮಾನ್ಯ ಸಮಾಜ ಕೆಳವರ್ಗಗಳ ಶೋಷಣೆಗಾಗಿ ಕಟ್ಟಿದ ಕಾಲ್ಪನಿಕ ಕಥೆಗಳು. ಸುಳ್ಳಿಗೆ ಸೂಡನ್ನೆತ್ತಿ ಆಕಾಶಕ್ಕೆ ಬರಿಹಚ್ಚುವ ಹಿಕಮತ್ತುಗಳು.

# ೯. ದೈವ ಜಾನಪದದ ಬಗೆಗೆ

ಪ್ರೊ. ಎಂ.ಎಲ್. ನರಸಿಂಹಮೂರ್ತಿ

*ದೈವದ ಕಲ್ಪನೆ ಪ್ರತಿಸಂಸ್ಕೃತಿಯ ಕೊಡುಗೆ ಎನ್ನುವ ಎಂ.ಎಲ್.ಎನ್ ಜಾನಪದದಲ್ಲಿ ದೈವ ಸಂಬಂಧಿ ಲಭ್ಯ ಮಾಹಿತಿಗಳನ್ನು ಓದುಗರ ಮುಂದಿಟ್ಟಿದ್ದಾರೆ. - ಸಂಪಾದಕ*

ಜಾನಪದ ನಿತ್ಯನೂತನವಾದುದು. ಅದಕ್ಕೆ ವಿಶ್ವವ್ಯಾಪಿ ಮಹತ್ವಪ್ರಾಪ್ತವಾದ ನಂತರ ಮೂಲೆಮುಕ್ಕುಗಳನ್ನು ಹೆಕ್ಕಿ ಅಧ್ಯಯನ ಮಾಡುವ ಆಸಕ್ತಿ ಜಾನಪದ ವಿದ್ವಾಂಸರಲ್ಲಿ ಕಂಡು ಬರುತ್ತಿದೆ. ಮಾನವರ ಬದುಕಿನ ಎಲ್ಲ ಕ್ಷಣಗಳೂ ಜಾನಪದದೊಂದಿಗೆ ಮಿಳಿತಗೊಂಡಿವೆ. ಅದು ಸಮುದಾಯದ ಪ್ರಜ್ಞೆಗೆ ಬದ್ಧವಾಗಿ ಮೌಖಿಕ ಪರಂಪರೆಯಲ್ಲಿ ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತ ಮುಂದುವರಿಯುತ್ತಿದೆ. ಎಲ್ಲರೂ ಸಾಕ್ಷರರಾದಾಗಲೂ ಜಾನಪದವನ್ನು ಆಮೂಲಾಗ್ರವಾಗಿ ಅಕ್ಷರಗಳಲ್ಲಿ ದಾಖಲಿಸಲು ಸಾಧ್ಯವಾಗದು. ಬರಹಕ್ಕೆ ಸಾಮಾಜಿಕ ನಿಷೇಧಗಳ ಮಿತಿಯಿರುವಂತೆಯೆ ಅದರದೇ ಆದ ಪರಿಮಿತಿಯೂ ಇದೆ.

ಈ ನಿಟ್ಟಿನಲ್ಲಿ ದೈವ ಜಾನಪದದ ಅಧ್ಯಯನ ಹೆಚ್ಚು ಕುತೂಹಲ ಹುಟ್ಟಿಸುತ್ತದೆ. ಮಾನವನ ಭೀತಿಯೇ ದೈವಗಳ ಕಲ್ಪನೆಗೆ ತಳಪಾಯವಾಗಿರಬೇಕು. ಅತಿಮಾನುಷ ಶಕ್ತಿಯೊಂದನ್ನು ಕಂಡುಕೊಳ್ಳಲು ನಡೆಸಿದ ಮಾನವರ ಪ್ರಯತ್ನದಲ್ಲಿ ದೈವದ ಸೃಷ್ಟಿ ರಹಸ್ಯವಿದೆ. ಅದನ್ನು ಪುಷ್ಟೀಕರಿಸಲು ಜನಪದ ನಂಬಿಕೆ, ಆಚರಣೆ, ಗಾದೆ, ಒಗಟು, ಬೈಗುಳ, ಜನಪದ ಕಥೆ, ನುಡಿಗಟ್ಟುಗಳು ರೂಪಗೊಂಡಿವೆ. ಅವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯನ್ನು ಪಡೆದುಕೊಂಡಿವೆಯಾದರೂ ಉದ್ದೇಶದಲ್ಲಿ ಏಕತೆಯನ್ನುಳಿಸಿಕೊಂಡಿವೆ.

## ನಂಬಿಕೆಗಳು :

ಜನಪದರಲ್ಲಿ ನಂಬಿಕೆಗಳಿಗೆ ಹೆಚ್ಚು ಪ್ರಾಶಸ್ತ್ಯವಿದೆ. ಅವರ ಮನಸ್ಸಿನ ಗೊಂದಲಗಳು ನಂಬಿಕೆಗಳ ಉಗಮಕ್ಕೆ ಕಾರಣವಾಗಿವೆ. ಅವು ಜನಪದರ ಜನಜೀವನದಲ್ಲಿ ಬೆರೆತು ಅವರ ಬದುಕನ್ನು ನಿಯಂತ್ರಿಸುವ, ನಿರ್ದೇಶಿಸುವ ಶಕ್ತಿಯನ್ನು ಪಡೆದುಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ದೈವದ ಬಗೆಗಿರುವ ನಂಬಿಕೆಗಳನ್ನು ಪರಿಶೀಲಿಸೋಣ :

ಸತ್ತವರೆಲ್ಲರೂ ದೈವಗಳಾಗುವುದಿಲ್ಲ. ಆದರೆ ಆಸೆಯಿಟ್ಟುಕೊಂಡು ಸತ್ತರೆ, ಅಕಾಲ ಮರಣಕ್ಕೆ ತುತ್ತಾದರೆ, ನೀರಿಗೆ ಬಿದ್ದು ಸತ್ತರೆ, ನೇಣು ಹಾಕಿಕೊಂಡು ಸಾವನ್ನಪ್ಪಿದರೆ ದೈವಗಳಾಗುತ್ತಾರೆ.

ಈ ನಂಬಿಕೆಯು ಮನುಷ್ಯನ ಜೀವರಕ್ಷಣೆಯ ಸಲುವಾಗಿ ಹುಟ್ಟಿಕೊಂಡಿರುವಂತಿದೆ. ಇಂಥ ಬಗೆಯಲ್ಲಿ ಸಾವನ್ನಪ್ಪಿದರೆ ದೈವಗಳಾಗುತ್ತಾರೆಂಬ ಭಯವನ್ನು ಹುಟ್ಟಿಸುವುದರ

ಮೂಲಕ ಆತ್ಮಹತ್ಯೆಯನ್ನು ತಡೆಗಟ್ಟುವ ಪ್ರಯತ್ನವಿದೆ.

ದೆವ್ವವಾಗಿ ಬಾರದಿರಲೆಂದು ಸತ್ತವರ ಕಾಲು, ಕೈಗಳನ್ನು ಕಟ್ಟಿ ಹೂಳುತ್ತಾರೆ.

ಈ ನಂಬಿಕೆಯು ಮುಖ್ಯವಾಗಿ ಶೂದ್ರರಿಂದ ರೂಪಿಸಲ್ಪಟ್ಟಿದೆ. ಬ್ರಾಹ್ಮಣರು ಹೆಣವನ್ನು ಸುಡುತ್ತಾರೆ. ವೀರಶೈವರು ಹೆಣವನ್ನು ಗೂಡಿನಾಕಾರದಲ್ಲಿ ಮಾಡಿ ಅದರಲ್ಲಿ ಶವವನ್ನು ಕೂರಿಸುತ್ತಾರೆ. ಸಮಾಜದ ಕೆಲವು ಜಾತಿಯ ಜನ ಮಾತ್ರ ಶವದ ಕೈ, ಕಾಲು ಮಡಿಚಿ ಹೂಳುವ ಪದ್ಧತಿಯಿದೆ. ಆದ್ದರಿಂದ ಈ ದೆವ್ವದ ಕಲ್ಪನೆ ಪ್ರತಿ ಸಂಸ್ಕೃತಿಯ ಕೊಡುಗೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಇದಕ್ಕೆ ಪೂರಕವಾಗಿ ಬ್ರಾಹ್ಮಣರಿಗೆ ಉಪನಯನವಾದ ಮೇಲೆ ಬ್ರಹ್ಮಗಂಟಿರುತ್ತದೆ. ಆದ್ದರಿಂದ ದೆವ್ವಗಳ ಭಯವಿಲ್ಲ ಎಂಬ ನಂಬಿಕೆಯು ಬ್ರಾಹ್ಮಣರಿಂದಲೇ ರೂಪುಗೊಂಡು, ಇತರ ವರ್ಣದವರಿಗಿಂತ ತಾವು ಶ್ರೇಷ್ಠರು ಎಂದು ತೋರಿಸಲು, ಮನವರಿಕೆ ಮಾಡಿಕೊಡಲು ಮಾಡಿದ ಹುನ್ನಾರವಾಗಿ ಕಂಡುಬರುತ್ತದೆ.

ಒಲೆ ಉರಿಯುವಾಗ ಕಾಲುನೀಡಿಕೊಂಡು ಕುಳಿತುಕೊಳ್ಳಬಾರದು - ಏಕೆಂದರೆ ದೆವ್ವಗಳು ಕಾಲನ್ನೊಟ್ಟಿ ಅಡಿಗೆ ಮಾಡುತ್ತವೆ. ಒಲೆ ಉರಿಯುವಾಗ ಕಿಡಿಗಳು ಹಾರುವುದರಿಂದ, ಅದರಿಂದುಂಟಾಗಬಹುದಾದ ಹಾನಿಯಿಂದ ಮುನ್ನೆಚ್ಚರಿಕೆ ವಹಿಸುವುದು ಸೂಕ್ತವೆಂಬ ಕಾರಣಕ್ಕಾಗಿ ಈ ನಂಬಿಕೆ ಬೆಳೆದಿರಬಹುದು.

ಹಿಂದೆ ಗಾಡಿಪ್ರಯಾಣ ಹೆಚ್ಚಾಗಿದ್ದ ದಿನಗಳಲ್ಲಿ ಜನರು ಹೆದರಬಾರದೆಂಬ ಕಾರಣಕ್ಕಾಗಿ ಗಾಡಿಯಲ್ಲಿ ಪ್ರಯಾಣ ಮಾಡುವಾಗ ಗಾಳಿ, ದೆವ್ವಗಳ ಭೀತಿ ಇರೋದಿಲ್ಲ; ಅವುಗಳು ಗಾಡಿಯನ್ನು ಲಕ್ಷ್ಮಿಯೆಂದು ತಿಳಿದು ಹತ್ತಿರ ಬರಲು ಹೆದರುತ್ತವೆಂಬ ನಂಬಿಕೆ ಹುಟ್ಟಿಕೊಂಡಂತಿದೆ.

ಹುಣಿಸೆಮರ, ಆಲದಮರ, ಬೇವಿನಮರದಲ್ಲಿ ದೆವ್ವಗಳಿರುತ್ತವೆ. ಈ ನಂಬಿಕೆಯು ಮರಗಳನ್ನು ಕಡಿಯುವವರಿಗೆ ಎಚ್ಚರಿಕೆ ನೀಡಿ, ಈ ಮರಗಳನ್ನು ಸಂರಕ್ಷಿಸಲು ನೆರವಾಗುತ್ತದೆ.

ಗೋಡುಮಣ್ಣಿನ ಮಾಳಿಗೆ ಇರುವ ಮನೆಗಳೇ ಹೆಚ್ಚಾಗಿದ್ದ ದಿನಗಳಿದ್ದವು. ಈಗಲೂ ಗ್ರಾಮಗಳಲ್ಲಿ ಹೆಂಚಿನ, ಮಣ್ಣು ಮಾಡಗಳೇ ಹೆಚ್ಚಾಗಿ ಕಂಡುಬರುತ್ತವೆ. ಆದ್ದರಿಂದ ಅಂತರಕನಾಗಿ ಮಲಗಬಾರದು - ದೆವ್ವಗಳು ಎದೆಯ ಮೇಲೆ ಕುಳಿತು ಪೀಡಿಸುತ್ತವೆ; ಮುಗ್ಗುಲಾಗಿ ಮಲಗಿದರೆ ಅವುಗಳಿಗೆ ಉರುಳಿಸುವುದಕ್ಕಾಗುವುದಿಲ್ಲವೆಂಬ ನಂಬಿಕೆ ಹುಟ್ಟಿಕೊಂಡು, ಹಾಗೆ ಮಲಗಿದವರ ಮೇಲೆ ಮಣ್ಣು, ಹೆಂಚು ಬಿದ್ದು ಆಗಬಹುದಾದ ಅನಾಹುತವನ್ನು ತಪ್ಪಿಸುವ ಪ್ರಯತ್ನ ಕಂಡುಬರುತ್ತದೆ.

'ಹೆಣ್ಣುದೆವ್ವಗಳು ಗಂಡಿನ ಮೇಲೂ, ಗಂಡುದೆವ್ವಗಳು ಹೆಣ್ಣಿನ ಮೇಲೂ ಬರುತ್ತವೆಂಬ ನಂಬಿಕೆಯಲ್ಲಿ ಲೈಂಗಿಕ' ಪ್ರಜ್ಞೆಯಿರುವುದನ್ನು ಗಮನಿಸಬಹುದಾಗಿದೆ.

## ಬಗೆಗಳು :

ಜಾತಿಗಳಲ್ಲಿ ಒಳಪಂಗಡ (ಬೆಡಗು)ಗಳನ್ನು ಸೃಷ್ಟಿಸಿಕೊಂಡಿರುವ ಮಾನವ, ತನ್ನ ಭಾವನಾತ್ಮಕತೆಯಿಂದ ದೆವ್ವಗಳಲ್ಲೂ ಬಗೆಗಳನ್ನು ಗುರುತಿಸಿ, ಆ ಬಗೆಗಳನ್ನೂ ನಿರ್ದಿಷ್ಟವಾದ ವಾಸದ ಹಿನ್ನೆಲೆಯನ್ನೂ ನೀಡಿದ್ದಾನೆ. ಅದರ ಪ್ರಕಾರ - ಪೀಡೆ, ಕಾತ, ಭೂತ, ಪ್ರೇತ, ರಣ, ಜಟಿಯಾ, ಗಾಳಿ, ಗರಾವು, ಬನ್ನಿ, ಮೋಹಿನಿ, ಕೊಳ್ಳಿದೆವ್ವ, ಪಿಶಾಚಿ, ಬ್ರಹ್ಮಪಿಶಾಚಿಯೆ ಮೊದಲಾದ ಬಗೆಗಳು ಕಂಡುಬರುತ್ತವೆ.

## ವಸತಿ :

ಮಾನವನಿಗೆ ವಸತಿ ವ್ಯವಸ್ಥೆಯಿರುವಂತೆಯೇ ದೆವ್ವಗಳೂ ನಿರ್ದಿಷ್ಟವಾದ ಜಾಗಗಳಲ್ಲಿ ವಾಸಿಸುತ್ತವೆಂದು ತಿಳಿಯಲಾಗಿದೆ. ಸಾಂದ್ರವಾಗಿರುವ ಮರಗಳಿರುವಲ್ಲಿ, ಹಳೆಯ ಹಾಗೂ ಉಪಯೋಗಿಸದ ಬಾವಿಗಳಲ್ಲಿ, ಹಳೆಯ ಮನೆಗಳು ಬಿದ್ದಿರುವ ಪಾಳುಗೋಡೆಗಳ ಹತ್ತಿರ, ಎಕ್ಕದ ಗಿಡದ ಬುಡದಲ್ಲಿ, ಕೆರೆ, ಗವಿ ಮೊದಲಾದ ಸ್ಥಳಗಳಲ್ಲಿ ದೆವ್ವಗಳು ವಾಸ ಮಾಡುತ್ತವೆಂದು ಹೇಳುತ್ತಾರೆ.

## ಆಹಾರ :

ದೆವ್ವಗಳ ಆಹಾರ ಪದ್ಧತಿಯು ಸಮಾಜದ ತಳಪದರದವರ ಆಹಾರ ಪದ್ಧತಿಯಂತೆಯೆ ಕಂಡುಬರುತ್ತದೆ. ಇದನ್ನು ತಳಪದರದವರೆ ರೂಪಿಸಿರಬಹುದು. ಇಲ್ಲವೇ ಮೇಲು ಪದರದವರು ಆರೋಪಿಸಿರಬಹುದು. ಮಾಂಸಹಾರ, ಹೆಂಡ, ರಕ್ತ ಸೇವನೆ ದೆವ್ವಗಳಿಗೆ ಪ್ರಿಯವಾದುವೆಂದು ಹೇಳುತ್ತಾರೆ.

## ದೆವ್ವ ಬಿಡಿಸುವ ವಿಧಾನಗಳು :

ದೆವ್ವ ಹಿಡಿದಿರುವ ವ್ಯಕ್ತಿಗೆ ಚಾವಟಿ, ಕಸಪೊರಕೆ, ಹಳೆಯ ಎಕ್ಕಡದಿಂದ ಹೊಡೆಯುವುದು, ಅವನ ಮುಂದೆ ಮೆಣಸಿನಕಾಯಿ ಹೊಗೆಹಾಕುವುದು ಮೊದಲಾದ ಹಿಂಸಾಪದ್ಧತಿಗಳಲ್ಲದೆ ಕಲ್ಲು ಹುಯ್ಯಿಸುವುದು, ಕೊರಳಿಗೆ, ರೆಟ್ಟೆಗೆ, ಸೊಂಟಕ್ಕೆ ತಾಯತ ಕಟ್ಟುವುದು, ದೆವ್ವದ ರಂಗೋಲಿ ಬಿಡುವುದು ಮೊದಲಾದ ಸೌಮ್ಯಪದ್ಧತಿಗಳೂ ಇವೆ.

**ಗಾದೆಗಳು :**

ಹಲವು ಜನರ ಅನುಭವ ಜಾಣನೊಬ್ಬನ ಮಾತಲ್ಲಿ ಹರಳಾಗಿ ರೂಪುಗೊಳ್ಳುವುದೇ ಗಾದೆ. ಸಾಮಾನ್ಯವಾಗಿ ಗಾದೆಗಳಲ್ಲಿ ರೂಪುಗೊಳ್ಳದ ವಿಷಯಗಳೇ ಇಲ್ಲವೆನ್ನಬಹುದು.

ದೆವ್ವ ಹಿಡಿದವನಿಗೆ ದೈವದ ಯೋಚನೆ ಏನು ? ಅಯ್ಯನಿಗಿಂತ ದೈಯ ವಾಸಿ, ಅಡವಿ ದೆವ್ವ ಬಂದು ಮನೆದೆವ್ವ ಓಡ್ಸಿತಂತೆ. ಊರು ದೂರ್ದ ಗುಡಿಯಾಗೆ ದೆವ್ವನ ದರ್ಬಾರು. ದರ್ವೇಸಿ ಮುಂಡೇದ್ಕೆ ದೆವ್ವನ ಕಾಟ. ಹೆಣ್ಣು ದೆವ್ವ ಹಿಡಿದೋರ್ನ ಮಾತಾಡ್ಸಿದ್ರೆ ಉಟ್ಟ ಪಂಚೇನ ಬಿಚ್ಚಿಸ್ಕಂಡಂಗೆ (ಕನ್ನಡ ಜಾನಪದ ವಿಶ್ವಕೋಶ), ಮೊದಲಾದ ಗಾದೆಗಳಿವೆ.

**ಒಗಟು :**

ಕತ್ಲ ಮನೆಗೆ ಕರಿದೆವ್ವ (ಎಣ್ಣೆಗಡಿಗೆ)

ದೆವ್ವವು ಕಪ್ಪು ಬಣ್ಣದ್ದಾಗಿರುತ್ತದೆ ಎನ್ನುವುದನ್ನು ಗಮನಿಸಬೇಕು. ಹಾಗೆಯೇ ಕೆಲವರು ಮಾತನಾಡುವಾಗ ಬೆಳ್ಳಂ ಬೆಳ್ಳಗೆ ಭೂಮ್ಯಾಕಾಶ ಒಂದಾಗಿ ನಿಂತಕಳ್ತು ಎಂದು ದೆವ್ವವನ್ನು ವರ್ಣಿಸಿ ಅದರ ಎತ್ತರ, ಬಣ್ಣವನ್ನೂ ಹೇಳುವುದುಂಟು.

**ಬೈಗಳು :**

ದೆವ್ವದಂಥೋನೆ. ದೆವ್ವಗಿವ್ವ ಹಿಡ್‌ದೈತೇನೊ. ದೆವ್ವ ಬಿಡಿಸ್ತೀನಿ ನೋಡು.

**ನುಡಿಗಟ್ಟು :**

ಪಿಶಾಚಿ ಗಂಟುಬಿದ್ದಹಾಗೆ. ಮೋಹಿನಿ (ಸುಂದರಿ). ಭೂತ ಇದ್ದ ಹಾಗೆ (ಬಲಿಷ್ಠಕಾಯ). ಇದೊಂದು ಪೀಡೆ.

ದೆವ್ವಗಳ ಬಗ್ಗೆ ಇಂಥ ಹಲವಾರು ವಿಷಯಗಳು ದಿನನಿತ್ಯದ ಮಾತುಕತೆಗಳಲ್ಲಿ ಕಂಡುಬರುತ್ತವೆ. ದೆವ್ವದ ಅಸ್ತಿತ್ವದ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದರೂ ಹೆಚ್ಚು ಮಂದಿ ದೆವ್ವದ ಅಸ್ತಿತ್ವವನ್ನು ಒಪ್ಪಿಕೊಂಡಿರುವಂತೆ ಕಂಡುಬರುತ್ತದೆ.

ದೆವ್ವ ಜಾನಪದ ಬಹು ಹಿಂದಿನಿಂದಲೂ ಬೆಳೆಯುತ್ತಾ ಬಂದಿದ್ದು ದಿನೇದಿನೇ ಹೊಸ ಅಂಶಗಳನ್ನು ಸೇರಿಸಿಕೊಳ್ಳುತ್ತಾ ಹೋಗುತ್ತಿದೆ. ಅನೇಕ ವಿಸ್ಮಯಗಳು ನಿಗೂಢವಾಗಿಯೇ ಉಳಿಯುವ ಪರಿಯಲ್ಲಿ ದೆವ್ವಗಳು ಉಳಿದಿವೆ. ಒಟ್ಟಾರೆ ದೆವ್ವ ಜಾನಪದ ಮಾನವರ ಬದುಕಿನೊಂದಿಗೆ ಬೆರೆತುಕೊಂಡಿದೆ.

# ೧೦. ಚನ್ನಾದೇವಿಯ ದೆವ್ವಗಳು : ಆದಿಮಕಿ ಆಧುನಿಕ ಅಭಿವ್ಯಕ್ತಿ :

ಡಾ ॥ ಟಿ. ಗೋವಿಂದರಾಜು

ದೆವ್ವಸಂಬಂಧಿ, ನಂಬಿಕೆ, ನಡವಳಿಕೆಗಳನ್ನು ಕುರಿತಾದಂತೆ ಸಾಂಸ್ಕೃತಿಕ, ವೈಜ್ಞಾನಿಕ ನೆಲೆಗಳಲ್ಲಷ್ಟೇ ಅಲ್ಲದೆ ವಸ್ತುನಿಷ್ಟವಾಗಿ ಬಹುಮುಖಿ ವಿಶ್ಲೇಷಣೆಗಳಿಗೊಳಪಡಿಸಬೇಕಾದ ಅಗತ್ಯವಿದೆ ಎನ್ನುತ್ತಾರೆ ಟಿಜಿಆರ್. -ಸಂಪಾದಕ

ದೆವ್ವ ಹಿಡಿದಿದೆ ಎಂದು ನಂಬಲಾದ ಒಬ್ಬ ತರುಣಿಯ ವಿಚಾರಣೆ ನಡೆಯುತ್ತಿತ್ತು. ಅದು ಅವರ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿತ್ತು. ಅದರ ಮಾತುಗಳನ್ನು ಸ್ವಯಂ ದೃಢ ಮಾಡಿಕೊಳ್ಳುವ ಉದ್ದೇಶದಿಂದ ನಮ್ಮೂರಿನ ಶಂಕರಣ್ಣ ಮಧ್ಯ ಪ್ರವೇಶಿಸಿದರು :

'ಏನಮ್ಮ... ನೀನೇ ಹೌದೋ ಅಲ್ವೋ ಅನ್ನೋದ್ಕೆ ನನಗೊಂದು ಸರಿಯಾದ ಉತ್ರ ಕೊಡ್ಬೇಕು ನೋಡು.... ಈ ಆರು ತಿಂಗಳ ಹಿಂದೆ ಒಂದ್ ಸಾರಿ ನೀನು ನಿಮ್ ಮನೆ ಹತ್ರ ಸಿಕ್ಕಿದ್ದಾಗ ನಾನು ಏನೋ ಒಂದು ಕೇಳಿದ್ದೆ. ನೀನು ಏನೋ ಹೇಳಿದ್ದೆಯಲ್ಲಾ... ? ಅದೇನೂಂತ ಹೇಳ್ತೀಯಾ ?'

'ಅದ್ಯಾಕ್ ಹಂಗಂತೀ ಸಂಕ್ರಣ್ಣಯ್ಯಾ..... ನೀನು ಹಿಂಗಿಂಗೆ ಅಂತ ಕೇಳಿದ್ಕೆ, ನಾನು ಹಿಂಗಿಂಗೆ ಅಂತ ಮಾತಾಡಿಲ್ಲಿಲ್ವಾ.. ?' ಅಂತ ಆಗ ಅವರವರಿಗೆ ನಡೆದದ್ದು ಹೇಳಿತು. ಅದರಿಂದ ತೃಪ್ತನಾದ ಶಂಕ್ರಣ್ಣ ಇನ್ನಷ್ಟು ಕುತೂಹಲಿಯಾಗಿ -

'ಅದ್ಸರಿಯವ್ವಾ... ನೀನು ಯಾಕೆ ಸಾಯೊಕೆ ಹೋದೆ ? ಅದೆಂಗೆ ಸತ್ತೆ ? ಹೇಳ್ತೀಯಾ.... ?' ಅಂದ. ಅದು ಹೇಳತೊಡಗಿತು -

'ಅಯ್ಯೋ ನನ್ಗೆ ಸಾಯ್ಬೇಕೂ ಅನ್ನೋದೇನು ಇರ್ಲಿಲ್ಲ. ಇವ್ನು - ನನ್ ಗಂಡ ಅವ್ನಲ್ಲ, ಅವ್ನ ಹಿಂಸೆ ತಡಿಯಾಕಾಗ್ದೆ ಕಲ್ಯಾಣ್ ಬಾವೀಗ್ಬಿದ್ದು ಸತ್ತೆ. ಅವತ್ತು ಏನೋ ಮಾತ್ಗೆ ಚೆನ್ನಾಗಿ ಹೊಡ್ದುಬಿಟ್ಟ. ನಾನು ಸೀನೀರು ಬಾವಿದಾರ್ಯಾಗೆ ಓಡೋದೆ. ಅವ್ನೂ ಅಟ್ಟಿಸ್ಗಂಡು ಬಂದ, ನಾನು ಹೋಗಿ ಕಲ್ಯಾಣ ಬಾವೀಗೆ ಬಿದ್ದುಬಿಟ್ಟೆ. ಬಿದ್ದು ಮುಳ್ಗಿ ಎದ್ದು ನೀರ್‌ಕುಡ್ದು ಮೆಟ್ಲುಕಲ್ಲು ಕೆಳಗೆ ನಿಂತ್ಗಂಡೆ. ಇವ್ನು ಮ್ಯಾಲೆ ನಿಂತ್ಗಂಡು ನೋಡ್ತಿದ್ದ. ಅನ್ಯಾಕಾರ... ಅವಾಗಾನ ನನ್ ಜುಟ್ಟು ಹಿಡ್ದು ಮ್ಯಾಲ್ಕೆ ಎಳಕಂಡಿದ್ರೆ ನಾನು ಬದಿಕ್ಕಣೀವೆ ... ಅವ್ನು ಎಳ್ಕಂಳಿಲ್ಲ...'

ನಮ್ಮೂರಿನ ಒಬ್ಬ ಹೆಣ್ಣು ಮಗಳು ಅಕಾಲಿಕವಾಗಿ ಸತ್ತು ಈಗ ಇನ್ನೊಬ್ಬ ತರುಣಿಯ ಮೈ ಹಿಡಿದಿದ್ದಾಳೆಂದು ಜನವದಂತಿ ಇತ್ತು. ದೆವ್ವಬಿಡಿಸಲು ಹೆಸರಾದ ನಮ್ಮೂರ

ಅಟ್ಟಲಕ್ಕಮ್ಮನ ಗುಡಿಬಳಿ ಆಕೆಯನ್ನು ಮನೆಯವರು ಕರೆದ್ಕ್ಯೊಯ್ದಿದ್ದಾಗ ಅಲ್ಲಿ ಹೋಗಿದ್ದ ಶಂಕರಣ್ಣನವರು ಈ ರೀತಿ ಪ್ರಶ್ನೋತ್ತರ ನಡೆಸಿದ್ದಾಗಿ ತಮ್ಮ ಸ್ವಾನುಭವ ವಿವರಿಸುತ್ತಿದ್ದರು. ಬದುಕಬೇಕೆಂಬ ತೀವ್ರ ಆಕಾಂಕ್ಷೆಯ ನಡುವೆಯು ತೇಲಿ ಮುಳುಗುತ್ತಿದ್ದ ಆಕೆಯಿಂದ ಜೀವ ಹೇಗೆ ಹೋಯಿತು ? ತುಂಬ ಕುತೂಹಲದ ಈ ಸಂಗತಿಗಳನ್ನು ಆಕೆಯು ಹೇಗೆ ವಿವರಿಸಿದಳು ಎಂಬುದನ್ನು ಕೇಳುವ ಅವಕಾಶ ನಮಗೂ ದೊರೆತಿತ್ತು. ಆದರೆ, ಅಷ್ಟೊತ್ತಿಗೆ ಸರಿಯಾಗಿ ಅಲ್ಲಿ ಪ್ರತ್ಯಕ್ಷಳಾದ ಶಂಕರಣ್ಣನ ಶ್ರೀಮತಿ 'ಅದೇನ್ ಅಂತ ಹೇಳ್ಕಂಡು ಕೂತೆ..... ಎದ್ದು ಬಾ, ಹೊತ್ತಾಯ್ತು.....' ಅಂತ ಒತ್ತಾಯಿಸಿ ಕರೆದೊಯ್ದುಬಿಟ್ಟಳು. ದೆವ್ವದ ವಿಷಯ ಮಾತಾಡಿ, ಕೊನೆಗೆ ಅದು ನಮಗೇ ಹಿಡಿದುಬಿಟ್ಟೀತೆಂಬ ಭಯ ಆಕೆಗೆ ಇದ್ದಿರಬಹುದು. ಇದಾಗಿ ಬಹಳ ವರ್ಷಗಳೇ ಸಂದವು. ಶಂಕರಣ್ಣನಿಂದ ಸಾವಿನ ನಂತರದ ಆ ಸ್ಥಿತಿ-ಗತಿಯ ಬಗ್ಗೆ ಆಕೆ ಹೇಳಿದ್ದೇನು ? ಎಂಬುದನ್ನು ಪೂರ್ಣ ಕೇಳಲು ಸಂದರ್ಭ ಒದಗಿ ಬರಲೇ ಇಲ್ಲ. ಅದು ಮಹಾ ರಹಸ್ಯವಾಗಿ ಈಗಲೂ ಉಳಿದಂತಾಗಿದೆ.

## ದೆವ್ವದ ಕತೆಗಳ ಬಳಕೆ :

ನನ್ನ ಎಳೆತನದಿಂದಲೂ ಇಂತಹ ಎಷ್ಟೋ ದೆವ್ವದ ಆಖ್ಯಾನಗಳನ್ನು ನಾನು ಕೇಳುತ್ತಲೇ ಬೆಳೆದಿದ್ದೇನೆ. ಅಂತಹ ಕತೆಗಳನ್ನೂ ಅವುಗಳನ್ನು ಹೇಳಿದವರನ್ನೂ ಈಗ ನೆನೆಸಿಕೊಂಡರೆ, ಮೂರು ಉದ್ದೇಶಗಳಿಗಾಗಿ ಈ ದೆವ್ವದ ಕತೆಗಳು ಬಳಕೆಯಾಗುತ್ತಿದ್ದವು ಎನ್ನಿಸುತ್ತದೆ. (೧) ಅನ್ನ ಉಣ್ಣದ, ರಚ್ಚೆಹಿಡಿಯುವ ಎಳೆಯ ಮಕ್ಕಳನ್ನು ಹೆದರಿಸಿ, ಮಣಿಸುವ ದೃಷ್ಟಿಯಿಂದ ತಾಯಂದಿರು ಹೇಳುವ ದೆವ್ವ, ಕೊಳ್ಳಿದೆವ್ವ, ಗುಮ್ಮಾ, ಗೊರವಯ್ಯ - ಇಂಥಾ ಸಂಗತಿಗಳು. ದಟ್ಟ ಕತ್ತಲೆಯಲ್ಲಿ ಮನೆಯಿಂದ ಸ್ವಲ್ಪ ದೂರದ ನಮ್ಮ ಅಶ್ವತ್ಥ ಜಗಲಿ ಬಳಿ ಯಾರೋ ಬೀಡಿ ಸೇದುತ್ತಾ ಕೂತಿರುತ್ತಿದ್ದುದ್ದು ಅಥವಾ ಓಡಾಡುತ್ತಿದ್ದದ್ದನ್ನು ತೋರಿಸಿ (ಬರೀ ಬೆಂಕಿಕಡಿ ಅಷ್ಟೇ ಕಾಣುತ್ತಿತ್ತಲ್ಲಾ) ಅಗೋ ಕೊಳ್ಳಿದೆವ್ವ... ಉಣ್ಣದಿದ್ರೆ ಹಿಡ್ದುಕೊಟ್ ಬಿಡ್ತೀನಿ.... ಅಂತ ನಮ್ಮಮ್ಮ ಹೇಳಿದರೆ, ಉಣ್ಣುವುದನ್ನು ದ್ವೇಷಿಸುತ್ತಿದ್ದ ನನ್ನಂಥ ಹಠಮಾರಿಯೂ ಬಾಯ್ಮುಚ್ಚಿಕೊಂಡು ಒಂದೆರಡು ತುತ್ತು ಉಣ್ಣಲೇಬೇಕಾಗಿತ್ತು.

ನಮ್ಮ ಅಶ್ವತ್ಥ ಜಗುಲಿಯ ಮೂಲೆಯಲ್ಲಿ ಹಿಂದೆ ಕೊಳ್ಳಿದೆವ್ವದ ಸಂಚಾರವಿತ್ತೆಂದೂ, ಅದನ್ನು ತಾವೂ ಆಗೀಗ ಕಂಡದ್ದಾಗಿಯೂ, ಯಾರೋ ಶಾಸ್ತ್ರಕಾರನ ಸೂಚನೆಯಂತೆಯೇ ಆ ಜಗಲಿಯ ಮೂಲೆಯಲ್ಲಿ ಈಗಲೂ ಇರುವ ಬೆಣಚು ಕಲ್ಲು ಬಂಡೆಯ ಒಂದು ಭಾಗ ಸೇರಿಸಿಕೊಂಡೇ ಅಶ್ವತ್ಥ ಜಗಲಿ ಕಟ್ಟಿದ್ದಾಗಿಯೂ ಆದಾದ ಮೇಲೆ ದೆವ್ವದ ಸಂಚಾರ ನಿಂತು ಹೋಯಿತೆಂದೂ ನಮ್ಮ ದೊಡ್ಡೋನಪ್ಪ ಸಹ ಆಗೀಗ ಹೇಳಿದ್ದನ್ನು ನಾನು ಕೇಳಿದ್ದೆ.

ನನಗೆ ಸ್ವಲ್ಪ ಬುದ್ಧಿ ಬಂದ ಮೇಲೆ ನಮ್ಮಪ್ಪನ್ನ ಒಮ್ಮೆ ಕೇಳಿದ್ದೆ : ದೆವ್ವ, ಕೊಳ್ಳಿದೆವ್ವ ಇದ್ದೋ, ಆಕಾಶದಾಗೆ ನಾವು ಬೇಕಾದಷ್ಟು ನೋಡಿದ್ದೋ ಅಂತ ಮೊದಲು

ಹೇಳುತ್ತಿದ್ದಿರಲ್ಲಾ.... ಈಗ್ಯಾಕೆ ನಮ್ಮ ಕಾಲದಾಗೆ ಒಂದೂ ಕಾಣಲ್ಲ............?.

ಅವರು ತಟ್ಟನೆ, ಅಷ್ಟೇ ಮುಗ್ಧವಾಗಿ ಹೇಳಿದರು - ಅದೇನೋ, ಏನ್ನಾದವೋ ಗೊತ್ತಿಲ್ಲ. ಆದ್ರೆ ನಾವು ಚಿಕ್ಕೋರಿದ್ದಾಗ ಮಳವಳ್ಳಿ ದಾರ್‍ಯಾಗೆ ಸಾಲುಹಿಪ್ಪೆ ಮರದ ಹತ್ರ ಕೊಳ್ಳಿದೆವ್ವ ಸಂಚಾರ ಮಾಡ್ತಿದ್ದನ್ನ ಕಂಡಿದ್ದೋ!.

(೨) ತಮ್ಮ ಧೈರ್ಯ, ಸಾಹಸಗಳ ಪ್ರತಿಪಾದನೆ ಅಥವಾ ತಮಗೆ ದೊರೆತ ಅಪರೂಪದ ಸಂದರ್ಭದ ದಾಖಲೆಗಾಗಿ, ಆ ಮೂಲಕ ತಮ್ಮ ಪ್ರತಿಷ್ಠೆಗಾಗಿಯೂ ಕೆಲವರು ತಾವು ದೆವ್ವ ನೋಡಿದ್ದಾಗಿ ಹೆಮ್ಮೆ (ಗರ್ವ) ಯಿಂದ ಸ್ವತಃ ವರ್ಣಿಸುತ್ತಾರೆ ಎನ್ನಿಸುತ್ತದೆ. ನಾನು ಚಿಕ್ಕವನಿದ್ದಾಗ, ಊರಿನ ಪರಿಶಿಷ್ಟ ಹುಡುಗನೊಬ್ಬ ಹೀಗೇ ಮಾತನಾಡುತ್ತಾ - 'ನಾನು ಚಿಗರಂಗಣ್ಣಾರ ಕಟ್ಟೆ ಹತ್ರ ತಿಗತೊಳ್ಕಂಡು, ಮ್ಯಾಲ್ಕೆದ್ದು ತಿರುಗ್ತೀನಿ.... ಏನು ಆಕಾಸುಕ್ಕೂ ಬೂಮೀಗೂ ಒಂದೇ ಆಗಿ ಸಣ್ಣಗೆ, ಕರ್‍ರಗೆ ನಿಂತದಪ್ಪಾ....' ಅಂದ.

ಹಾಗೆ ನಿಂತಿದ್ದರೂ ಅದರಿಂದ ತಪ್ಪಿಸಿಕೊಂಡು ಬಂದನಲ್ಲ, ಇವ್ನು.... ಎಂಥ ಸಾಹಸಿ! ಎಂದು ನನ್ನಂತಹವನಿಗೆ ಅನಿಸಿ, ಆ ದಾರಿಯಲ್ಲಿ ಒಬ್ಬನೇ ಹೋಗುವಾಗ, ಬರುವಾಗ ಸಾಕಷ್ಟು ಭಯವಾದರೂ ಆ ನಿಗದಿತ ಸ್ಥಳದ ಹತ್ತಿರ ನನಗೂ ಒಮ್ಮೆ ಕಂಡರೆ ಅದು ಹೇಗಿರುತ್ತೋ ನೋಡಿ ಬಿಡಬಹುದಲ್ಲಾ - ಎಂದು ವಾರೆಗಣ್ಣಲ್ಲಿ ಎಷ್ಟೋ ಸಲ ಹುಡುಕಿದ್ದುಂಟು.

(೩) ಇನ್ನು ಮೂರನೆಯ ಉದ್ದೇಶ - ಅಂತಹ 'ಶಕ್ತಿ' ಇದೆಯಂತೆ ಎಂದು ಇನ್ನಾರೋ ಕಂಡು ಹೇಳಿದ್ದನ್ನು ಕೇಳಿ ಬೇರೆಯವರಿಗೆ ಸ್ವಾರಸ್ಯವಾಗಿ ಬಣ್ಣಿಸುವುದು. ಇದರಲ್ಲಿ ಭಯ ಉಂಟುಮಾಡುವ, ಗರ್ವ ಪ್ರದರ್ಶನ ಮಾಡುವ ಉದ್ದೇಶವಿರುವುದಿಲ್ಲ. ಬದಲಿಗೆ ಕಾಣದ, ರಹಸ್ಯ ಜಗತ್ತೊಂದನ್ನು ಅದು ನಿಜವಿದ್ದಿರಬೇಕು ಎಂದು ನಂಬಿ, ಅದರ ದೃಢೀಕರಣಕ್ಕೆ ಪ್ರಯತ್ನಿಸುವುದು. ಮಧುರೆ ದಾರ್‍ಯಾಗೆ, ರಂಗಮ್ಮನ ಬಾವಿ ಹತ್ರ ದೆವ್ವ ಅದಂತೆ.... ಅದು ಮೊನ್ನೆ ಯಾರ್‍ನೋ ಹಿಂಗಿಂಗೆ ಮಾಡ್ತಂತೆ.... ಎಂದು ನನ್ನ ಓರಗೆಯವರು ಹೇಳಿದ ಕತೆಗಳನ್ನು ಇಲ್ಲಿ ಉದಾಹರಿಸಬಹುದು -

'ದಾಸಯ್ಯನೋರ ಗಂಗಣ್ಣ ಕುರಿಟಗರು ತಪ್ಪಿಸ್ಕಂಡ್ ಬಿಟ್ಟಿತ್ತಂತೆ. ಚಂಜೇನಾಗ ಮದ್ರೇಲಿ ಯಾರ್‍ದೋ ಮಂದೆವೊಳ್ಗೆ ಇದ್ದದ್ದುನ್ನ ಹಿಡ್ಕಂಡು, ಯಗಲ ಮ್ಯಾಲೆ ವತ್ಗಂಡು ಬತ್ತಿದ್ದನಂತೆ. ಊರೀಚೆ ಬತ್ತಾ ಬತ್ತಾ ಶಾನೇ ತೂಕ ಆಯ್ತಂತೆ. ಇನ್ನ ವರಕ್ಕೆ ಆಗಲ್ಲ ಅಂತ, ರಂಗಮ್ಮನ ಕಟ್ಟೆ ಸರ್ಗಿಗೆ ಬಂದಾಗ, ಕತ್ತು ನೋವು ಬಂದು, ದೊಪ್ಪನ ಎತ್ತಾಕೆಬಿಟ್ಟನಂತೆ. ಅದು, 'ಇವತ್ತು ಬದಿಕ್ಕಂಡೆ, ಹೋಗಲಾ.... ಅಂತ, ಟಣಕ್ ಪಣಕ್ ಅಂತ ಕುಣಕಂಡು, ಬಾವೀಕಡೆ ಓಡಿಬಿಡ್ತಂತೆ.....'

ಇದು ಅಂತಹ ಒಂದು ಕತೆ.

ಮಧುರೆ ಕೆರೆ ಹಿಂದೆ ಕಬ್ಬು ಬೆಳೆದು, ಸಂತೆ ತೋಪ್ನಲ್ಲಿ ಆಲೆಮನೆ ಮಾಡ್ದಾಗ ಬಿಸಿಬಿಸಿ ಬೆಲ್ಲಕ್ಕ ಕಬ್ಬಿನ ಹಾಲಿಗೆ ಆಸೆಪಟ್ಟು ದೆವ್ವಗಳು ಬರುತ್ತಿದ್ದವೆಂದೂ ಒಲೆಯಲ್ಲಿ ಕಬ್ಬು ಚೆನ್ನಾಗಿ ಬಿಸಿಮಾಡಿ, ನೆಲಕ್ಕೆ ಬಡಿದರೆ, ಚಟಚಟಾ ಅನ್ನೋ ಅದರ ಸಿಡಿತದ ಸದ್ದಿಗೆ ದೆವ್ವಗಳು ಓಡಿಬಿಡುತ್ತಿದ್ದವೆಂದೂ ಆಗ ಆಲೆಮನೆಗಳಲ್ಲಿ ಕೆಲಸ ಮಾಡಿದವರು ಈಗಲೂ ಜ್ಞಾಪಿಸಿಕೊಳ್ಳುತ್ತಾರೆ.

ದೆವ್ವಗಳು ಮಟಮಟ ಮಧ್ಯಾಹ್ನ ಹಾಗೂ ಧೂಳು ಸಂಜೇನಾಗೆ ಸಂಚಾರ ಹೊರಡುತ್ತವೆ - ಎಂಬ ನಂಬಿಕೆ ಈ ಜನರಲ್ಲಿದೆ. ಅಂಥಾ ಸಂದರ್ಭದಲ್ಲಿ ಒಂಟಿ - ವರೆ - ಎದಿರಾಗುವವರನ್ನು ಅವು ಹೆದರಿಸುತ್ತವೆ, ಕಾಡುತ್ತವೆ ಅಥವಾ ಅವರ ಹಿಂದೆ ಬೀಳುತ್ತವೆ ಎಂದೂ ಜನ ಗುಂಪಾಗಿದ್ದರೆ ಅಥವಾ ಧೈರ್ಯವಂತರಾದರೆ ಅವರ ತಂಟೆಗೆ ಅವು ಬರುವುದಿಲ್ಲ, ಎಂದೂ ನಂಬುತ್ತಾರೆ. ದಾರಿ ಪಕ್ಕದ ಮರವನ್ನು ಇದ್ದಕ್ಕಿದ್ದಂತೆ ಬಹುಜೋರಾಗಿ ಅಲುಗಾಡಿಸುವುದು, ಸುಂಟರಗಾಳಿಯಾಗಿ ಭೂಮಿಗೂ ಮುಗಿಲಿಗೂ ಒಂದೇ ಆಗಿ ನಿಲ್ಲುವುದು, ದಾರಿ ಪಕ್ಕ ಬಾವಿ, ಕಟ್ಟೆಗೆ ಧುಡುಮ್ಮನೆ ಧುಮುಕಿ ದಂತಾಗುವುದು, ಕರಿನಾಯಿ, ಕುರಿ ಅಂತಹ ಏನಾದರೂ ಪ್ರಾಣಿಯಾಗಿ ದಾರಿಹೋಕನ ಹಿಂದೆ ಹಿಂದೆ ಅಥವಾ ಕಾಲನಡುವೆಯೇ ತೂರಾಡುವುದು.... ಇಂತಹ ಚೇಷ್ಟೆಗಳನ್ನು ಅದು ತೋರಿಸುತ್ತದೆ ಎನ್ನುತ್ತಾರೆ. ಅಂಥ ಸಂದರ್ಭದಲ್ಲಿ ಹೆದರದ ಹೇ, ಥೂ..... ಎಂದು ಉಗಿಯುತ್ತಾ ಹಿಂದಿರುಗಿ ನೋಡದೆ ಹೋಗಬೇಕೆನ್ನುತಾರೆ.

## ದೆವ್ವ ಆಗುವುದು :

ಬಸಿರಿ, ಬಾಣಂತಿಯಾಗಿ ಸತ್ತವರು, ಅರೆಬಾಳಿನಲ್ಲಿ ಸತ್ತವರು.... ಇಂಥವರು ಸಾಮಾನ್ಯವಾಗಿ ದೆವ್ವ ವಾಗುತ್ತಾರಂತೆ. ವ್ಯಕ್ತಿ ತನ್ನ ಆಯಸ್ಸು ಇರುವವರೆಗೆ ಬಾಳುವೆ ನಡೆಸಬೇಕು. ಆದರೆ, ಕೆಲವೊಮ್ಮೆ ಆಕಸ್ಮಿಕವಾಗಿ ಅವಧಿಗೆ ಮೊದಲೇ ಸತ್ತವರನ್ನು ಯಮಲೋಕದಲ್ಲಿ ಒಳಗೆ ಸೇರಿಸಿಕೊಳ್ಳುವುದಿಲ್ಲವಂತೆ. ಅಂಥವರು ಬ್ರಹ್ಮ ತಮಗೆ ನೀಡಿದ್ದಷ್ಟು ಆಯಸ್ಸಿನವರೆಗೆ ಹೀಗೆ ಗಾಳಿಗಂಟ್ಲು ಆಗಿ ಸುತ್ತುತ್ತಾರೆ. ಬೇರೆ ಯಾರಾದರೂ ತಮ್ಮ ಆಸ್ತಿ ಒಡವೆ ತಿಂದಿದ್ದರೆ ಅದರ ವಸೂಲಿಗೂ ಕೆಲವರು ದೆವ್ವ ಆಗಿ ಬಂದು ಕಾಡುತ್ತಾರೆ ಎಂದು ಈ ಜನ ನಂಬುತ್ತಾರೆ.

ವ್ಯಕ್ತಿ ಸತ್ತ ತಕ್ಷಣ ಉಸಿರು ದೇಹದಿಂದ ಹೊರಹೋದರೂ ಆ ಜಾಗದಿಂದ ದೂರ ಹೋಗುವುದಿಲ್ಲ. 'ಅದಕ್ಕೆ ತಿಥಿ ಮಾಡುವವರೆಗೆ (೧೧-೧೨ ದಿನದ ಸೂತಕ ಕಳೆವವರೆಗೆ) ಸಗ್ಗದ ಬಾಗಿಲು ತೆರೆಯುವುದಿಲ್ಲ. ಆದ್ದರಿಂದ ಅದು ಅಲ್ಲೀವರೆಗೂ ಮನೆಯ ಮುಂಬಾಗಿಲ

ದಾರವಂದದ ಮ್ಯಾಲೋ, ಮನೆ ಹತ್ತಿರದ ಹಸಿರುಗಿಡದ ಮ್ಯಾಲೋ' ಕಾದು ಕುಂತಿರುತ್ತದೆ. (ವಿವರಕ್ಕೆ ನೋಡಿ : ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ : ಗೋವಿಂದರಾಜು ಟಿ. ೧೯೯೩, ೧೭೪, ೧೭೫).

ಬ್ರಾಹ್ಮಣರ ನಂಬಿಕೆಯಂತೆ 'ಮನುಷ್ಯನಿಗೆ ಪಂಚಪ್ರಾಣ'ಗಳು. ವ್ಯಕ್ತಿ ಸತ್ತಾಗ, ಅವುಗಳಲ್ಲಿ ಒಂದು ಆತ ಸತ್ತ ಜಾಗದಲ್ಲಿ ೧೧ ದಿನ ಇರುತ್ತದೆ. ಇನ್ನೊಂದು ತಿಥಿ ಮಾಡುವ ಕರ್ತನ ಮೇಲಿರುತ್ತೆ. ಮತ್ತೊಂದು ಕಾಗೆಯಲ್ಲಿ. ನಾಲ್ಕನೆಯದು ಪ್ರಯಾಣ ಹೋಗುತ್ತಿರುತ್ತೆ. ೫ ನೆಯದು ಸುಡುವಾಗ ತೆಗೆದುಕೊಳ್ಳುವ ಕಲ್ಲಿನಲ್ಲಿರುತ್ತೆ. ಇದನ್ನು ೧೧ನೇ ದಿನದವರೆಗೆ ಪೂಜಿಸುತ್ತಾರೆ'. (ಅದೇ ಪು. ೧೭೪).

ಇಂತಹ ನಂಬಿಕೆಗಳಿಂದಾಗಿಯೇ ವ್ಯಕ್ತಿ ಜೀವಂತವಿದ್ದಾಗ ಮನೆಯವರಿಗೆ ಎಷ್ಟೇ ಆತ್ಮೀಯ, ಗೌರವಾನ್ವಿತನಾಗಿರಲಿ, ಇನ್ನೇನು ಸಾಯುತ್ತಾನೆ - ಎಂಬುದು ದೃಢವಾದ ತಕ್ಷಣ 'ಆಚೆಗೆ ಹಿಡಿದುಬಿಡು'ತ್ತಾರೆ. ಒಂದು ವೇಳೆ ಮನೆಯ ಒಳಕೋಣೆಯೊಳಗೇ ವ್ಯಕ್ತಿ 'ಜೀವಿಸಿದರೆ' (ಜೀವ + ಇಸು = ಜೀವ ಬಿಟ್ಟರೆ) ಆ ಉಸಿರು ಮನೆಯಿಂದ ಹೊರ ಹೋಗದೆ ಕೆಲವೊಮ್ಮೆ ಒಳಗೇ ಉಳಿದು ಬಿಡುತ್ತದೆಯಂತೆ. ಹಾಗಾದಾಗ ಅದು ದೆವ್ವವೂ ಆಗಬಹುದು; ಮಕ್ಕಳು ಮರಿ ಇರೋ ಮನೆಯಲ್ಲಿ ಅದು ಕೇಡಿನದೂ ಆಗಬಹುದು. ಕೆಲವೊಮ್ಮೆ ಅಂತಹ ಮನೆಯಲ್ಲಿ ಆರುತಿಂಗಳೋ ವರ್ಷವೋ ವಾಸಮಾಡುವುದನ್ನೇ ಬಿಡಬೇಕೆಂದು 'ಶಾಸ್ತ್ರ' ಕಾರರು ಹೇಳುವುದೂ ಉಂಟು. ಕೆಲವರು ಹಾಗೆ ಅನಿಷ್ಟ ನಿವಾರಣೆಗೆ ಮನೆ ತ್ಯಜಿಸಿದ್ದೂ ಉಂಟು. ಇನ್ನೊಂದು ಅಂಶವೆಂದರೆ, ವ್ಯಕ್ತಿ ಒಳಮನೆಯಲ್ಲಿ ಸತ್ತರೆ, ಆ ಹೆಣವನ್ನು ಆ ಬಾಗಿಲಿನಿಂದ ಹೊರತರುವಂತಿಲ್ಲ. ಗೋಡೆ ಒಡೆದು, ಇನ್ನೊಂದು ಕಂಡಿ ಮಾಡಿ ಹೊರತರಬೇಕು. (ಅನಂತರ ಮತ್ತೆ ಮುಚ್ಚಿ ಬಿಡುತ್ತಾರೆ). ಇಷ್ಟೆಲ್ಲಾ ರಾದ್ಧಾಂತವಾಗುತ್ತದೆ ಎಂದೇ, ಕೆಲವು 'ಬುದ್ಧಿವಂತ'ರು -ತಮ್ಮ ಸಾವು ಸಮೀಪಿಸಿದ್ದನ್ನು ತುಸು ಮುನ್ನವೇ ಅರಿತವರು ತಮ್ಮನ್ನು ಆಚೆಗೆ ಸಾಗಿಸಲು ಬಂಧುಗಳಿಗೆ ಸೂಚಿಸಿ ಆ ನಂತರವೇ ಸತ್ತ ಪ್ರಕರಣಗಳೂ ಕೇಳಿಬಂದಿವೆ.

ಸತ್ತವ್ಯಕ್ತಿ ದೆವ್ವ ಆಗಿದ್ದಾನೋ ಇಲ್ಲ, ತೃಪ್ತಿಯಿಂದ ಕೈಲಾಸ ಸೇರಿದ್ದಾನೋ ಎಂಬುದನ್ನು ಅರಿಯುವುದಕ್ಕೆ ಇಲ್ಲಿನ ಜನ ತಮ್ಮವೇ ಆದ ಕೆಲ 'ಪ್ರಯೋಗ'ಗಳನ್ನು 'ಆಚರಿಸು'ತ್ತಾರೆ. ಇವೆಲ್ಲಾ ಕೇವಲ ಪರೀಕ್ಷೆಯ ಸಾಮಾನ್ಯ ನೆಲೆಯಲ್ಲಿರದೆ ಶವಸಂಸ್ಕಾರ ಪದ್ಧತಿಯ ಆಚರಣಾ ರೂಪದಲ್ಲಿರುತ್ತವೆ ಎಂಬುದೂ ಗಮನಿಸಬೇಕಾದದ್ದು. ಅವುಗಳಲ್ಲಿ ಕೆಲವು -

ವ್ಯಕ್ತಿ ನಿಧನ ಹೊಂದಿದ ಜಾಗದಲ್ಲಿ ಶವಸಂಸ್ಕಾರ ಮಾಡಿದಂದು ರಾತ್ರಿಗೆ, ಸ್ವಲ್ಪ ಸಣ್ಣ ಮರಳು ಹರಡಿ, ಪಕ್ಕದಲ್ಲಿ ನೀರು ಭರ್ತಿಯಾಗಿ ತುಂಬಿದ ಪಾತ್ರೆ ಇಟ್ಟು, ಅವುಗಳ ಮೇಲೆ ಒಂದು ಪುಟ್ಟಿ (ಹೆಡಿಗೆ) ಮುಚ್ಚುತ್ತಾರೆ. ಬೆಳಿಗ್ಗೆ ಎದ್ದು, ಆ ಪುಟ್ಟಿ ತೆಗೆದು ನೋಡಿದಾಗ

ಪಾತ್ರೆಯಲ್ಲಿನ ನೀರು (ತುಸು) ಕಡಿಮೆಯಾಗಿದ್ದರೆ ಸಾಯುವಾಗ ಬಾಯಾರಿದ್ದ ವ್ಯಕ್ತಿಯ ಆತ್ಮ ಈಗ ಬಂದು ನೀರುಕುಡಿದು ಹೋಗಿದೆ ಎಂದು ಭಾವಿಸುತ್ತಾರೆ. ಆ ಮರಳ ಮೇಲೆ ಇಲಿ, ಮೊಲ ಅಥವಾ ಬೆಕ್ಕು ಇಂತಹ ಯಾವುದಾದರೂ ಪ್ರಾಣಿಯ ಹೆಜ್ಜೆ ಗುರುತುಗಳು ಮೂಡಿದರೆ, ಆತ ಆ ರೂಪದಲ್ಲಿ ಬಂದಿದ್ದಾನೆ – ಎಂದು ನಂಬುತ್ತಾರೆ. (ನೋಡಿ : ಚ.ದೇ. ಅಗ್ರಹಾರ ಜಾನಪದೀಯ ಅಧ್ಯಯನ : ೧೯೯೩ : ೧೭೪)

ಚನ್ನಾದೇವಿಯ ಹರಿಜನರಲ್ಲಿ ಕಂಡಂತೆ ತಿಥಿಯಂದು ಮೃತನ ಮಗನ ಮೇಲೆ ಪೂಜಿಸಿದ ಘಟಹೊರಿಸಿ ಬಾವಿತಾವಿಂದ (ಈಗ ಬೋರು 'ಗಳೂ) ಮೆರವಣಿಗೆಯಲ್ಲಿ ಕರೆತುರತ್ತಾರೆ. ಆಸಾದಿಗಳು ಚೌಡಿಕೆ ಬಾರಿಸುತ್ತಾ ಮೃತನ ಗುಣ ವಿಶೇಷಗಳನ್ನು ಕೊಂಡಾಡುತ್ತಾರೆ. ಆಗ ಮೃತನು ಈ ಕರ್ತನ (ಮಗ) 'ಮೈದುಂಬು' ವುದೂ ಉಂಟು. ಮನೆಹತ್ತಿರ ಬಂದು ತಲೆಬಾಗಿಲಲ್ಲಿ ನಿಂತಾಗಲಾದರೂ ಮೃತನು ಮೈಮೇಲೆ ಬಂದು 'ತನ್ನ ಸಾವು, ತನ್ನ ಅಪೇಕ್ಷೆಗಳು, ತನ್ನ ಸಕುಟುಂಬದವರು ಮುಂದೆ ಹೇಗೆ ನಡೆದುಕೊಳ್ಳಬೇಕು...' ಇತ್ಯಾದಿ ನುಡಿಯುತ್ತಾನೆ.

ದೆವ್ವ ಹಿಡಿದವಳೆಂದು ನಂಬಲಾದವಳನ್ನು ಪೀಡಿಸಿ, ಹಿಂಸಿಸಿ 'ಬಾಯಿಬಿಡಿಸಿ' ದಾಗ, ಅದು ತಾನು ಯಾರು – ಎಂಬುದನ್ನು ಹೇಳುತ್ತದೆ ಎನ್ನುತ್ತಾರೆ. 'ಇವಳಿಗೆ ಯಾಕೆ ಹಿಡಿದೆ?' ಎಂದರೆ ಸಾಮಾನ್ಯವಾಗಿ 'ವಸಾ ಸ್ಯಾಲೆ ಉಟ್ಕಂಡು, ತಲೆ ತುಂಬಾ ಹೂವ ಮುಡ್ಗಂಡು ಒಬ್ಬಳೇ ಆ ದಾರ್‍ಯಾಗೆ ಬತ್ತಿದ್ಲು. ಆಸೆ ಆಗಿ ಜತೆ ಬಂದೆ' –ಎಂದೋ, 'ತನ್ನ ವಡವೆ ಹಾಕ್ಕಂಡಿದ್ಲು' (ಸವತಿಯಾಗಿದ್ದರೆ)ಅಥವಾ 'ತನ್ನ ವಡವೆ ತಿಂದಿದ್ದಲು ಅದರ ವಸೂಲಿಗೆ ಬಂದೆ' – ಎಂದೋ ಹೇಳುತ್ತದೆ ಎನ್ನುತ್ತಾರೆ. ಕೆಲವೊಮ್ಮೆ, ತನಗೆ ಇಂಥಿಂಥಾ ಅಡಿಗೂಟ ಮಾಡಿಕ್ಕರೆ ಉಂಡು ಹೋಗಿಬಿಡ್ತೀನಿ' ಎಂದು ಮಾಡಿಸಿಕೊಂಡು ಉಣ್ಣುತ್ತವೆ ಎನ್ನಲಾಗಿದೆ. ಸಾಮಾನ್ಯ ಸ್ಥಿತಿಯಲ್ಲಿ ನಾಲ್ಕಾರು ಜನ ಉಣ್ಣುವಷ್ಟು ಆಹಾರವನ್ನು ದೆವ್ವ ಮೈಹೊಕ್ಕ ಆ ಸ್ತ್ರೀ ಒಬ್ಬಳೇ ಉಂಡುಬಿಡ್ತಾಳೆ – ಎನ್ನುತ್ತಾರೆ. 'ನಾವು ಇಂಥಿಂಥೋರೆಲ್ಲಾ ಇವಳ ಮ್ಯಾಲೆ ಬಂದಿದ್ದೀವಿ; ಇವುಳ್ನ ಮುರ್ಕಂಡೇ ಹೋತೀವಿ'– ಎಂದು ಕೆಲ ದೆವ್ವಗಳು ಹಠ ಮಾಡುತ್ತವೆಯಂತೆ.

ಇಬ್ಬರು ಗಂಡಾಳು ಎತ್ತಬೇಕಾದಂಥ ದೊಡ್ಡ ಸೈಜುಗಲ್ಲನ್ನು ಒಬ್ಬಳೇ ಅಲಕ್‍ನೆ ಎತ್ತಿ ತಲೆಮೇಲೆ ಇಟ್ಟುಕೊಳ್ಳುವುದು, ಹಾಗೇ ಮರ ಹತ್ತುವುದು, ಎಷ್ಟು ಜನ ಹಿಡಿದರೂ ಬಗ್ಗದೇ ಚಿಂಗಿಸಿ ನೆಗೆಯುವುದು.... ಇವೆಲ್ಲಾ ಆಕೆಗೆ ದೆವ್ವ ಮೈ ಹೊಕ್ಕುದರ ಪ್ರಭಾವವೆಂದು ಭಾವಿಸುತ್ತಾರೆ. ಪಕ್ಕದಲ್ಲಿನ ಮರದ ತುದಿ ಝಲ್ಲೆಂದರೆ ದೆವ್ವ ಈ ವ್ಯಕ್ತಿ ಬಿಟ್ಟು ಆ ಮರ ಸೇರಿತು ಎಂಬುದರ ಸೂಚನೆ ಎಂದೂ ಜನ ನಂಬುತ್ತಾರೆ.

ಕೆಲವೊಮ್ಮೆ ದೆವ್ವ ಮೈಮೇಲೆ ಬಂದು ಸುಲಭವಾಗಿ ಬಾಯಿಬಿಡದೆ ಹಿಂಸೆ

ಮಾಡುತ್ತಿರುತ್ತದೆ. ಅಥವಾ ಯಾರಾದರೂ ವೈದ್ಯರಾದವರು, ಗಲಾಟೆ ಮಾಡುವವರು ಬಂದು ಹೊಡೆದು ಬಡಿದು ಹಿಂಸಿಸುತ್ತಾರೆಂಬ ಭಯಕ್ಕೆ ಅಥವಾ ತಾನು ಯಾರೆಂದು ಸುಲಭವಾಗಿ ಆ ಮನೆಯವರಿಗೆ ಗೊತ್ತಾಗದಂತಿರಲಿ – ಎಂಬ ಕಾರಣಕ್ಕಾಗಿ ಕೆಲ ದೆವ್ವಗಳು ಅಂತಹ ಯಾರಾದರೂ ಹತ್ತಿರ ಬರುತ್ತಿದ್ದಂತೆ ಈ ವ್ಯಕ್ತಿಯನ್ನು ಬಿಟ್ಟು ಹೋಗಿ ಬಿಡುತ್ತವೆಯಂತೆ. ಆದ್ದರಿಂದ ಕೆಲ 'ಅನುಭವೀ' ಹೆಂಗಸರು, ದೆವ್ವ ಮೈಮೇಲೆ ಬಂದ ತಕ್ಷಣ ಆಕೆಯ ತಲೆಯಲ್ಲಿ ನಾಲ್ಕೈದು ಕೂದಲನ್ನು ಹಿಡಿದು ಗಂಟುಹಾಕಿಬಿಡುತ್ತಾರೆ. ಆದರಿಂದ ದೆವ್ವ ಅಲ್ಲಿ 'ಬಂಧಿತವಾಯಿತು'. ತಮ್ಮಿಂದ ತಪ್ಪಿಸಿಕೊಂಡು ಹೋಗಲಾರದು ಎಂಬ ದೃಢವಾದ ನಂಬಿಕೆ ಅವರದು ! ಕೆಲವೊಮ್ಮೆ ದೆವ್ವವೇ ತಾನು ಆ ವ್ಯಕ್ತಿಯನ್ನು ಬಿಟ್ಟು ಹೋಗುತ್ತಿದ್ದೇನೆ – ಎಂಬ ಕುರುಹು / ವಾಗ್ದಾನಕ್ಕಾಗಿ ತನ್ನ ತಲೆಯಿಂದ ಕೆಲ ಕೂದಲನ್ನು ಕಿತ್ತುಕೊಡುತ್ತದೆಯಂತೆ. (ಹೊನ್ನಮ್ಮ (೭೫) ; ಚ.ದೇ. ಅಗ್ರಹಾರ).

'ಹೊಲಸು' (ಮಾಂಸ) ಕಂಡರೆ ದೆವ್ವ ಖಂಡಿತಾ ಕಾಡುತ್ತದೆ ಎಂಬ ನಂಬಿಕೆಯಿದೆ. ಅಂತೆಯೇ ಊರಿಂದ ಊರಿಗೆ ಮಾಂಸ, ಮೀನು ತೆಗೆದುಕೊಂಡು ಹೋಗುವುದಿಲ್ಲ. ತೆಗೆದುಕೊಂಡು ಹೋಗಲೇಬೇಕಾದಾಗ ಅದರೊಂದಿಗೆ ಇದ್ದಿಲು, ಮೆಣಸಿನ ಕಾಯಿಗಳನ್ನು ಇಟ್ಟುಕೊಂಡು ಹೋಗುತ್ತಾರೆ. ಅಡುಗೆ ಆದಮೇಲೆ ಒಂದು ಚೂರು ಮಾಂಸ ನೀವಳಿಸಿ ನಾಯಿಗೆ ಎಸೆಯುತ್ತಾರೆ. ಆ ಮಡಕೆಗೆ ಉಪ್ಪು ನೀವಳಿಸಿ ಒಲೆಗೆ ಎಸೆಯುವುದೂ ಉಂಟು. ಇದು 'ದಿಷ್ಟಿ'ಗೆ ಎಂದು ಅವರು ಹೇಳಿದರೂ ಅದು ದೆವ್ವದ ನಿವಾರಣೆಯೂ ಆಗಬಹುದು.

ಮಾಂಸದ ಊಟ ಮಾಡಿ ಪ್ರಯಾಣಿಸುವುದು ಇದೇ ಕಾರಣಕ್ಕೆ ನಿಷಿದ್ಧ. ಒಂದು ವೇಳೆ ಪ್ರಯಾಣ – ಮನೆಯಿಂದ ಹೊರಗೆ ಹೋಗಲೇಬೇಕಿದ್ದರೆ, ಬಾಯಿಗೆ ತಾಂಬೂಲ ಹಾಕಿಕೊಂಡು, ಚಪ್ಪಲಿ ಮೆಟ್ಟಿಕೊಂಡು ಹೋಗುತ್ತಾರೆ.

ಮನೆ ಆಚೆ–ಈಚೆ ಓಡಾಡುವಾಗ ಎಳೆ ಬಾಣಂತಿಯರು ದೆವ್ವಗಳಿಂದ ರಕ್ಷಣೆಗಾಗಿ ಚಪ್ಪಲಿ ಹಾಕಿಕೊಂಡೇ ಇರುತ್ತಾರೆ. ಮನೆಯಲ್ಲಿ ಮಲಗುವ ಜಾಗದಲ್ಲಿ ತಲೆದೆಸೆ ಹಳೇ ಪೊರಕೆಯನ್ನೂ ಕಾಲದೆಸೆ ಚಪ್ಪಲಿಯನ್ನೂ ಇಟ್ಟುಕೊಂಡಿರುತ್ತಾರೆ. ಸಾದುಬಟ್ಟು (ಕರಿಮಸಿ ತಿಲಕ) ಹಣೆಗೆ ಇಟ್ಟುಕೊಳ್ಳುತ್ತಾರೆ. ಸ್ನಾನ ಮಾಡಿಸಿದಾಗ ಮಗುವಿನ ಕೆನ್ನೆ, ಹಣೆ ಮೇಲೂ ಈ ಸಾದಿನಬಟ್ಟು ಇಡುತ್ತಾರೆ. ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ, ಮೇಲೆ ಅಡ್ಡಕ್ಕೆ ಹಿಟ್ಟಿನ ಕೋಲನ್ನು (ಮುದ್ದೆ ತಿರುಗಿಸುವ ಕಡ್ಡಿ) ಮಗುವಿನ "ಕಾವಲಿಗೆ" ಎಂದು ಇಡುತ್ತಾರೆ.

## ದೆವ್ವದ ದೇವರು :

ದೆವ್ವಗಳನ್ನು 'ಗಾಳಿ'– 'ಸೋಕು' ಎಂದೂ ಕರೆಯುತ್ತಾರೆ. ಈ ಪೀಡೆಗೆ ಒಳಗಾದವರನ್ನು ದೆವ್ವ ಬಿಡಸುವುದರಲ್ಲಿ 'ತಜ್ಞ' ಎಂದು ಹೆಸರಾದ ದೇವರುಗಳಿಗೆ ಕರೆದುಕೊಂಡು ಹೋಗುತ್ತಾರೆ. (ಬಹುಮಟ್ಟಿಗೆ ಪ್ರಖ್ಯಾತ ಶಿಷ್ಟದೈವಗಳಿಗೆ ಈ ಶಕ್ತಿ ಇಲ್ಲ!)

ಚನ್ನಾದೇವಿ ಅಗ್ರಹಾರದಲ್ಲಿನ ಅಟ್ಟಲಕ್ಕಮ್ಮ ಮತ್ತು ಜಲಗೆರೆಯಮ್ಮ ಎಂಬ ಇಬ್ಬರು ಅಕ್ಕ-ತಂಗಿ ದೇವತೆಗಳು ಕಳೆದ ಸು.೩೦ ವರ್ಷಗಳಿಂದ ಈ ಕಾರ್ಯಕ್ಕಾಗಿ ಬೇರೆ ಊರಿಂದ ವಲಸೆ ಬಂದು ಇಲ್ಲಿ ನೆಲೆಗೊಂಡಿದ್ದಾರೆ. - ಕಳೆದ ತಲೆಮಾರಿಗೇ ಮರೆತುಹೋಗಿದ್ದ ಮುಳ್ಳುಕಟ್ಟಮ್ಮ ಎಂಬ ಇನ್ನೊಂದು ದೇವತೆ ಸು. ೧೫ ವರ್ಷಗಳಿಂದ ಈಚೆಗೆ ಮತ್ತೆ ಪಕ್ಕದ ಮಲ್ಲೊ 'ಹಳ್ಳಿ ಗ್ರಾಮದ ಸರಹದ್ದಿನಲ್ಲಿ ಹುಟ್ಟಿಕೊಂಡು ಮಾಟ-ಮಂತ್ರ, ದೆವ್ವ- ಸೋಂಕು ಇಂತಹ ಬಾಧೆಗೊಳಗಾದವರನ್ನು 'ಉದ್ಧರಿಸಿ' ಪೂಜಾರಿಯನ್ನು ಯಥಾಶಕ್ತಿ ಅಭಿವೃದ್ಧಿ ಗೊಳಿಸುತ್ತಿದೆ! ಈ ಎರಡೂ ಸ್ಥಳಗಳಲ್ಲಿ ಪರಿಹಾರ ಕಾಣದವರು 'ತಮಗೂ ಈ ದೇವರಿಗೂ ಸಾಲಾವಳಿ ಇಲ್ಲವೆಂದೋ, ತಮ್ಮ ಕಷ್ಟ ಹರಿವ ಘಳಿಗೆ ಇನ್ನೂ ಬರಲಿಲ್ಲವೆಂದೋ' ಸಾಂತ್ವನ ಮಾಡಿಕೊಂಡು' ಮತ್ತೂ ಹೆಚ್ಚಿನ ಶಕ್ತಿಯುಳ್ಳ ಹೊರ ಊರ ಬೈಲಹನುಮಂತರಾಯನಿಗೋ, ಸಿದ್ಧರ ಬೆಟ್ಟಕ್ಕೋ ಇಲ್ಲ ಅಕ್ಕಯ್ಯಮ್ಮನ ಬೆಟ್ಟಕ್ಕೋ ಹೋಗಿ 'ಮರೆಬೀಳು'ತ್ತಾರೆ.

## ಗಾಳಿಹಣ :

ಈ ದೇವರುಗಳಿಗೆ ಮೊರೆಬಿದ್ದವರು ಸಾಮಾನ್ಯವಾಗಿ 'ಗಾಳಿಹಣ' (ದೆವ್ವಗಳ ವಿಚಾರದಲ್ಲಿ), 'ಸೂಲದ ಹಣ' (ಮಾಟಮಂತ್ರದ ಸಂದರ್ಭದಲ್ಲಿ) ಕಟ್ಟಿ 'ವಾರಹಾಕುವುದು' ಮಾಡಬೇಕಾಗುತ್ತದೆ. ಅಂದರೆ ಕನಿಷ್ಟ ಮೂರು ವಾರದವರೆಗೆ ಆ ದೇವಸ್ಥಾನದ ಹತ್ತಿರವೇ ಇದ್ದು, ದಿನದ ಮೂರು ಹೊತ್ತು ದೇವಿಯ ಪೂಜೆ, ಗುಡಿ ಸುತ್ತುವುದು ಇತ್ಯಾದಿ ಮಾಡಬೇಕಾಗುತ್ತದೆ. ಇದರ ಜೊತೆಗೆ ಅಮಾವಾಸ್ಯೆ ಅಥವಾ ಪೂರ್ಣಿಮೆಯ ದಿನಗಳಲ್ಲಿ ಕೆಲ ವಿಶೇಷ ಪೂಜೆ, ಬಲಿ ಇತ್ಯಾದಿ ವಿಧಿಗಳನ್ನು ನಡೆಸಲಾಗುತ್ತದೆ. ಇದು ಯಾವುದಕ್ಕೂ ಬಗ್ಗದಿದ್ದರೆ 'ಕಲ್ಲು ಹುಯ್ಯುವುದು ' ಎಂಬ ಇನ್ನೊಂದು ದೊಡ್ಡ ವಿಧಿ ನಡೆಸುತ್ತಾರೆ. ಅದಕ್ಕೆ ಆ ವ್ಯಕ್ತಿಯ ಎಲ್ಲಾ ಸಂಬಂಧಿಕರೂ ಅಲ್ಲಿ ಸೇರಬೇಕಾಗುತ್ತದೆ. 'ಕಲ್ಲುಹುಯ್ಯುವುದು' ಎಂದರೆ, ಪ್ರೇತಶಕ್ತಿಯನ್ನು ವ್ಯಕ್ತಿಯಿಂದ ಬಿಡಿಸಿ ಒಂದು ಕಲ್ಲಿನಲ್ಲಿ ಬಂಧಿಸುವುದು ಎನ್ನಬಹುದು. ಪೂಜಾರಿಯ ನಿರ್ದೇಶನದಂತೆ ಕಲ್ಲಿನ ಮೇಲೆ ಆ ಪ್ರೇತ ವ್ಯಕ್ತಿಯ ಮನುಷ್ಯ ಆಕಾರವನ್ನು ಕಲ್ಲುಕುಟಿಗ ಕೆಲಕಟ್ಟಳೆಗಳೊಂದಿಗೆ ಮೂಡಿಸುತ್ತಾನೆ.

ದೆವ್ವ ಬಿಡಿಸುವ ಬಗೆಗಿನ ಕೆಲ ವಿಧಿ-ವಿಧಾನಗಳನ್ನು ಇಲ್ಲಿ ಅತಿ ಸರಳಗೊಳಿಸಿ ಹೇಳಲಾಗಿದೆ. ವಾಸ್ತವ ನೆಲೆಯಲ್ಲಿ ಅವು ಬಹು ಉಗ್ರವಾಗಿರುತ್ತವೆ. ದೆವ್ವ ಹಿಡಿದಿದೆ ಎಂದು ನಂಬಲಾದ ವ್ಯಕ್ತಿಗೆ ಹುಣಸೆ ಬರಲಿನಂತಹ ಸಾಧನಗಳಿಂದ ಹೊಡೆದೂ ಬಡಿದೂ ಹಿಂಸೆ ಮಾಡಿದರೆ, ಅದು ಆ ದೆವ್ವಕ್ಕೇ ಮಾಡಿದಂತಾಗಿ, ಆ ಭಯಕ್ಕಾದರೂ ಅದು ಬಿಟ್ಟು ಹೋಗುತ್ತದೆ ಎಂಬ ತಪ್ಪು ಕಲ್ಪನೆ ಈ ಜನರಲ್ಲಿದೆ. ಹಾಗೆ ನೋಡಿದರೆ, ದೆವ್ವಗಳನ್ನು ಕುರಿತ ನಂಬಿಕೆಗಳೇ ಹಲವು ತಪ್ಪು ಕಲ್ಪನೆಗಳ ನೆಲೆಯಲ್ಲಿ ರೂಪುಗೊಂಡವು ಎನಿಸುತ್ತದೆ. ಆದರೂ

ವಸ್ತುನಿಷ್ಠ ಅಧ್ಯಯನದ ದೃಷ್ಟಿಯಿಂದ ದೆವ್ವಗಳನ್ನು ಕುರಿತ ನಂಬಿಕೆ, ನಡವಳಿಕೆಗಳನ್ನು ಎರಡು ನೆಲೆಗಳಲ್ಲಿ ವಿಶ್ಲೇಷಿಸುವ ಅಗತ್ಯವಿದೆ : (೧) ಸಾಂಸ್ಕೃತಿಕ ನೆಲೆ (೨) ವೈಜ್ಞಾನಿಕ ನೆಲೆ.

## ಸಾಂಸ್ಕೃತಿಕ ನೆಲೆ

ಈಗಾಗಲೇ ಪ್ರಸ್ತಾಪಿಸಿರುವಂತೆ ಮಾಂಸ, ಮೀನು ಇತ್ಯಾದಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆ ತೆಗೆದುಕೊಂಡು ಹೋಗಬಾರದೆಂಬ ನಂಬಿಕೆ ಇದೆಯಷ್ಟೆ. ಅದರಲ್ಲೂ 'ಮೀನನ್ನು ಉಜ್ಜಚೊಕ್ಕಟ ಮಾಡಿಕೊಂಡು - ಕೊಂಡೊಯ್ಯಬಾರದು' (ಹೊನ್ನಮ್ಮ, ವೈಯಕ್ತಿಕ ಮಾಹಿತಿ ೨೪-೯-೧೯೯೯, ಬೆಂಗಳೂರು) ಎಂದೂ ಹೇಳುತ್ತಾರೆ. ಹಾಗೆ ಅನಿವಾರ್ಯವಾಗಿ ಒಯ್ಯಬೇಕಾದಾಗ ಅದರೊಂದಿಗೆ ಇದ್ದಿಲು, ಮೆಣಸಿನಕಾಯಿ, ಅರಿಸಿನದ ಕೊನೆ ಹಾಕಿ ಕೊಳ್ಳುತ್ತಾರೆ. ಬಾಣಂತಿಯರು ಚಪ್ಪಲಿ ಮೆಟ್ಟಿಕೊಳ್ಳುವುದು, ತಲೆದೆಸೆ ಹಳೇ ಪೊರಕೆ ಇಟ್ಟುಕೊಳ್ಳುವುದು... ಇಂತಹ ನಂಬಿಕೆ ನಡವಳಿಕೆಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಏಕೆಂದರೆ, ಇವುಗಳಿಗೆ ವೈಜ್ಞಾನಿಕ ನೆಲೆಗಟ್ಟು ಇರುವುದಿಲ್ಲ. ಆದರೆ, ಅವರ ಸಾಂಸ್ಕೃತಿಕ ಮನೋನೆಲೆಯಲ್ಲಿ ಅವು ಸಾಂಕೇತಿಕವಾಗಿ, ದೃಢವಾಗಿ ಬೇರುಬಿಟ್ಟಿರುತ್ತವೆ. ಆದ್ದರಿಂದ, ಅವುಗಳನ್ನು ಅಧ್ಯಯನಕಾರ ಸಾರಾಸಗಟಾಗಿ ನಿರ್ಲಕ್ಷಿಸುವಂತಿಲ್ಲ. ಅಂತೆಯೇ, ಅವುಗಳನ್ನು ಒಡೆಯಲು ಸಾಂಸ್ಕೃತಿಕ ಸಲಕರಣೆಗಳನ್ನೇ ಬಳಸಬೇಕಾಗುತ್ತದೆ. ಹಾಗೆ ಸೂಕ್ಷ್ಮವಾಗಿ ಆ 'ಗೂಢ'ಗಳನ್ನು ಒಡೆದು ನೋಡಿದಾಗ ಸಾಂಸ್ಕೃತಿಕ ನಂಬಿಕೆಯ ಲೋಕದಲ್ಲಿ - ವೈಜ್ಞಾನಿಕವಾಗಿ ಅಸಂಬದ್ಧವಾದುವೆಲ್ಲಾ - 'ತರ್ಕಬದ್ಧ', 'ಅರ್ಥಪೂರ್ಣ' ವೇ ಆಗಿ ಕಂಡುಬಿಡುತ್ತವೆ. ಹೇಗೆಂದರೆ -

ಇದ್ದಿಲು, ಸಾದಿನಬಟ್ಟು(ಕಪ್ಪುಮಸಿ), ಮೆಣಸಿನಕಾಯಿ,ಪೊರಕೆ.... ಇವೆಲ್ಲಾ ದೆವ್ವಗಳ ಹತ್ತಿರ ಬಾರದಂತೆ 'ತಡೆ' ಆಗುತ್ತವೆ (ಹೊನ್ನಮ್ಮ) ಎಂಬ ನಂಬಿಕೆ ಜನಪದರಲ್ಲಿ ಪ್ರಬಲವಾಗಿಯೇ ಇದೆ. ಇವು ತಡೆ ಹೇಗೆ ?' ಎಂದರೆ, ಅವರು ಅದನ್ನು ಅರ್ಥೈಸಲು ಅಸಮರ್ಥರಾಗುತ್ತಾರೆ. ಆದರೆ, ಅವರಲ್ಲಿನ ಇಂತಹ ಬೇರೆ ಬೇರೆ ನಂಬಿಕೆಗಳನ್ನು ಆಧಾರವಾಗಿಟ್ಟುಕೊಡು ಅಭ್ಯಸಿಸಿದಾಗ ಅವುಗಳ ಮೂಲದಲ್ಲಿ ಇದ್ದಿರಬಹುದಾದ ಆಶಯಗಳು-ಸಾಂಕೇತಿಕ ಅರ್ಥಗಳು-ನಮಗೆ ಸ್ಪಷ್ಟವಾಗುತ್ತವೆ. ಇಲ್ಲಿ ಅಂತಹ ಒಂದೆರಡನ್ನು ಅತಿ ಸಂಕ್ಷಿಪ್ತವಾಗಿ ವಿವರಿಸುವುದಾದರೆ - 'ಕಪ್ಪು' (ಇದ್ದಿಲು, ಮಸಿ ಇತ್ಯಾದಿ) ಎಂಬುದು ಹನುಮಂತನ ಪ್ರತೀಕ. ಹನುಮಂತ ಎಂದರೆ ದೆವ್ವ-ಭೂತಗಳನ್ನು ಬಿಡಿಸುವ ದೇವರೆಂಬ ನಂಬಿಕೆ ಜನರಲ್ಲಿ ವಿಶೇಷವಾಗಿದೆ. ಆದ್ದರಿಂದ 'ಕಪ್ಪು' (ಹನುಮಂತರಾಯ) ಇದ್ದಲ್ಲಿ ದುಷ್ಟಶಕ್ತಿಗಳು ಸುಳಿಯುವುದಿಲ್ಲ!.

ಮೆಣಸಿನಕಾಯಿ ನಮಗೆ ವಿದೇಶದಿಂದ ಬಂದದ್ದು. ಮೂಲತಃ ನಮ್ಮ ಸಂಸ್ಕೃತಿಯದ್ದಲ್ಲ. ಹೊರಗಿನಿಂದ ಬಂದದ್ದು ಯಾವುದೇ ಆದರೂ ಅದು ನಮ್ಮವರಿಗೆ 'ಮೈಲಿಗೆ' ಎನಿಸುತ್ತದೆ.

ಅಂತೆಯೇ ಈ 'ಮೈಲಿಗೆ' (ಮೆಣಸಿನಕಾಯಿ) ಇದ್ದಲ್ಲಿ ದೆವ್ವಗಳು (ಮಾಂಸದ ಹತ್ತಿರ) ಬರುವುದಿಲ್ಲ- ಎಂಬ ತರ್ಕಸರಣಿ ಈ ಜನಪದರದ್ದು! ಕಬ್ಬಿಣ, ಹಳೇ ಪೊರಕೆ, ಚಪ್ಪಲಿ... ಇವುಗಳೂ ಹೀಗೇ 'ಮೈಲಿಗೆ' ವಸ್ತುಗಳು.

ಇಲ್ಲಿ ಒಂದನ್ನು ಒಪ್ಪಿಕೊಂಡುಬಿಟ್ಟರೆ, ಅದರೊಂದಿಗೆ ಸಂಬಂಧ ಹೊಂದಿದ ಮಿಕ್ಕೆಲ್ಲವನ್ನು ಆ 'ತರ್ಕ'ದಿಂದಲೇ ನಂಬಬೇಕಾಗುತ್ತದೆ ಅಥವಾ ಜನ ಹಾಗೆ ನಂಬಿಬಿಟ್ಟದ್ದಾರೆ.

'ದೆವ್ವಗಳು ಇವೆಯೋ?' ಎಂಬುದನ್ನು ಹೀಗೆಯೇ ವಿಶ್ಲೇಷಿಸಬೇಕಾಗುತ್ತದೆ. ಹುಟ್ಟಿದ ಪ್ರತಿ ಜೀವಕ್ಕೂ ಬದುಕಿನಲ್ಲಿ ಏನೇನೋ ಸುಖ-ಭೋಗಗಳನ್ನು ಅನುಭವಿಸುವ ಆಸೆ ತೀವ್ರವಾಗಿರುತ್ತದೆ. ತಾನು, ತನ್ನದು ಎಂಬ ಮಮಕಾರ ವಿಶೇಷವಾಗಿ ಆವರಿಸಿ ಕೊಂಡಿರುತ್ತದೆ. ಈ ಎಲ್ಲದರಿಂದ ತೃಪ್ತವಾದ, ಪೂರ್ಣಾಯಸ್ಸು ಜೀವಿಸಿ, ಸಾಯುವಾಗಲೂ ನಿಶ್ಚಿಂತವಾದ 'ಜೀವ' ಮತ್ತೆ ಈ ಲೋಕದ ಆಮಿಷಗಳ ಬಗ್ಗೆ ನಿರ್ಲಿಪ್ತವಾಗಿರುತ್ತದೆ. ಈ ಸೆಳೆತಗಳಿಂದ ದೂರವಾಗುತ್ತದೆ. ಹಾಗಿಲ್ಲದ ಜೀವ ಸಹಜವಾಗಿಯೇ ತನ್ನ ಬಯಕೆಗಳ ಈಡೇರಿಕೆಗಾಗಿ 'ಇಲ್ಲಿ'ಯೇ ಸುತ್ತು ಹೊಡೆಯಬೇಕಾಗುತ್ತದೆ. ಆದರೆ, ಅದಕ್ಕೆ ತನ್ನದೆನ್ನುವ ಕೈ, ಬಾಯಿ ಇರುವುದಿಲ್ಲವಾದ್ದರಿಂದ (ಕಾಮರೂಪಿ ಗಳಾಗಬಹುದಾದರೂ) ಇನ್ನೊಬ್ಬರ ದೇಹವನ್ನು ಆಕ್ರಮಿಸಬೇಕಾಗುತ್ತದೆ....

'ಜೀವ' (ಆತ್ಮ) ಎನ್ನುವುದು ಒಂದು ಇದೆ ಎಂದು ಯಾರಾದರೂ ಒಪ್ಪಿಬಿಟ್ಟರೆ ಆಗ ಈ ಸುಖ - ದುಃಖ, ಆಶಾ - ಪಾಶ, ಲೌಕಿಕ - ಅಲೌಕಿಕ, ಪುನರ್‌ಜನ್ಮ, ದೆವ್ವ- ಭೂತ ಎಲ್ಲವನ್ನೂ, ಆ ಭೂತ ಬಿಡಿಸುವ ದೇವತೆ, ಪೂಜಾರಿ ವೈದ್ಯಗಾರರ ತಂತ್ರ - ಮಂತ್ರವನ್ನೂ ತೆಪ್ಪಗೆ ಒಪ್ಪಿಕೊಳ್ಳಲೇಬೇಕಾಗುತ್ತದೆ.

## ವೈಜ್ಞಾನಿಕ ನೆಲೆ :

ವೈದ್ಯಕೀಯ ವಿಜ್ಞಾನ ಇವನ್ನೆಲ್ಲಾ ಒಪ್ಪುವುದಿಲ್ಲ. 'ಜೀವ' ಎಂಬುದು ಹೇಗಿದೆ ? ಎಲ್ಲಿದೆ ? ಎಂಬುದೇ ಇನ್ನೂ ಖಚಿತ ವಿಶ್ಲೇಷಣೆಗೆ ನಿಲುಕದಿರುವುದರಿಂದ ಅದು ಮತ್ತೆ ಕಾಮರೂಪಿಯಾಗಿ ಇತರರನ್ನು ಕಾಡುತ್ತದೆ ಎಂದು ನಂಬುವುದುದಾದರೂ ಹೇಗೆ ?

ಹಾಗಾದರೆ, ಕೆಲವರ ಈ ವಿಚಿತ್ರ ವರ್ತನೆಗಳಿಗೆ (ದೆವ್ವ ಬಂದಿದೆ ಎಂಬ) ಕಾರಣಗಳೇನು ? - ಇದನ್ನು ಮನೋವೈದ್ಯರು ವಿಶ್ಲೇಷಿಸುವ ಪ್ರಯತ್ನಗಳನ್ನು ಮಾಡಿದ್ದಾರೆ ಮತ್ತು ಆ ಮೂಲಕ ಬಹುಮಟ್ಟಿಗೆ ದೃಢಪಟ್ಟಿರುವಂತೆ ಅದೊಂದು 'ಮನೋರೋಗ'. ವ್ಯಕ್ತಿಯ ಅತೃಪ್ತಿ, ಆಕ್ರೋಶ, ಸೇಡು.... ಇತ್ಯಾದಿಗಳನ್ನೆಲ್ಲಾ ತನಗೆ ಆಗದವರ ಮೇಲೆ ನೇರವಾಗಿ ತೀರಿಸಿಕೊಳ್ಳಲು ಸಾಧ್ಯವಾಗದಾಗ ಈ ರೀತಿ ಇನ್ನೊಂದು ಸಾರ್ವತ್ರಿಕ ಪ್ರಬಲ

ನಂಬಿಕೆಯ ನೆರವು ಪಡೆಯುತ್ತಾನೆ. ಕೆಲ ಸಂದರ್ಭಗಳಲ್ಲಿ ಅದು (ದೆವ್ವ ಬಂದಂತೆ ವರ್ತಿಸುವುದು) ಕೇವಲ ನಟನೆಯಾಗಿರಬಹುದು. ಇಲ್ಲವೇ ಅಪ್ರಜ್ಞಾಪೂರ್ವಕವಾಗಿ ಸ್ವಯಂವಶೀಕರಣಕ್ಕೆ ಒಳಗಾಗಿಯೂ ವಿಶೇಷವಾಗಿ ವರ್ತಿಸಬಹುದು. ಭಾನಾಮತಿಯಾಗಲೀ, ದೇವರು ಮೈಮೇಲೆ ಬರುವುದಾಗಲೀ ಎಲ್ಲವೂ ಈ ತರಹದ 'ಖಾಯಿಲೆ'ಗಳೇ ಆಗಿರುತ್ತವೆ. ಇದಕ್ಕೆ ಚನ್ನಾದೇವಿ ಅಗ್ರಹಾರದ್ದೇ ಒಂದು ಸ್ವಾನುಭಾವವನ್ನು ನಿದರ್ಶನವಾಗಿ ಪ್ರಸ್ತಾಪಿಸಬಹುದು :

ಒಂದು ದಿನ ಊರ ಹುಡುಗರು "ನೀವು ದೆವ್ವ, ದೇವರು ಏನೂ ಇಲ್ಲ; ಮೈಮೇಲೆ ಬರೋದು ಸುಳ್ಳು ಅನ್ತೀರಲ್ಲಾ. ಈಗ 'ನೋಡಿ ಆಕೆ'ಗೆ ದೆವ್ವ ಅಮರಿಕೊಂಡವೆ...." ಎಂದರು

ನಾನು ಸಾವಧಾನದಿಂದ, 'ಏನೇನಾಯ್ತು ಹೇಳಿ', ಎಂದೆ. ಅವರ ಮನೆ ಹೆಂಗಸರು, ಮಕ್ಕಳೆಲ್ಲಾ ಕೆರೆಹೊಲದಾಗೆ ಕಳೆ ಕೀಳುತ್ತಿದ್ದರಂತೆ. ಮಧ್ಯಾಹ್ನದ ಹೊತ್ತು. ಮುಂಬಿನಲ್ಲಿ (ಸಾಲು) ಎಲ್ಲರಿಗಿಂತ ಮುಂದುವರೆದಿದ್ದ ಈಕೆ ಒಬ್ಬಳೇ ಏನೇನೋ ಮಾತಾಡಿಕೊಳ್ಳುತ್ತಿದ್ದಳಂತೆ.

'....ಯಾವೋಳೂ ನಂಗೇನೂ ಮಾಡಿಕ್ಕಲ್ಲ. ನಾನೂ ಎಲ್ಲಾರಂಗೆ ದುಡೀತೀನಿ, ತಿನ್ತೀನಿ...' ಇತ್ಯಾದಿ. ಮಾತು ಜಾಸ್ತಿ ಆದಮೇಲೆ ಹಿಂದೆ ಇದ್ದೋರು ಹೋಗಿ ಕೇಳಿದರೆ, ಮಾತಿಲ್ಲ, ಕತೆ ಇಲ್ಲ. ಅವತ್ತಿಂದ ಮನೇಗ್ ಬಂದ್ರೂ ಮೂಗ್‌ಮುನಿಥರ ಕೂತುಬಿಡೋಳಂತೆ. ಉಣ್ಣಾಕೆ ಇಕ್ಕಿದ್ರೆ ನಾಲ್ಕೈದು ಮುದ್ದೆ ಗಬಗಬ ಅಂತ ತಿಂದುಬಿಡೋಳಂತೆ.... ಅದ್ಕೇ ಮುಳ್ಕಟ್ಟಮ್ಮುನ್ಗೆ ಮರೆಹಾಕ್ಸವರೆ...'

ಈ ವಿವರಗಳನ್ನು ಕೇಳಿ ನನಗೆ ಆಶ್ಚರ್ಯವೇನೂ ಆಗಲಿಲ್ಲ. ಆಕೆ ನನ್ನ ಓರಗೆಯವಳು. ಮೂರ್ನಾಲ್ಕನೇ ತರಗತಿವರೆಗೆ ಮಾತ್ರ ಓದಿ, ಮನೆಯಲ್ಲುಳಿದವಳು. ಮನೆ ತುಂಬಾ ಹೆಚ್ಚಾಗಿ ಹೆಣ್ಣು ಮಕ್ಕಳು. ಬಡತನ ಬೇರೆ. ಕೆಲ ಅಕ್ಕಂದಿರಿಗೆ ಮದುವೆಯಾಗಿತ್ತು. ಬೇರೆಲ್ಲೂ ನಂಟಸ್ತನ ಕೂಡಿಬರದೆ, ಹೆಂಡತಿಯೇ ಬಿಟ್ಟಿದ್ದ ಒಬ್ಬ (ಬಡವ) ನಿಗೆ ಎರಡನೇ ಮದುವೆ ಮಾಡಿ ಸಾಗಹಾಕಿದ್ದರು. ಒಂದೆರಡು ವರ್ಷಗಳಲ್ಲೇ ಆ ಮೊದಲ ಹೆಂಡತಿ ಗಂಡನನ್ನು ಹುಡುಕಿಕೊಂಡು ಬಂದು, ಮನೆ ಸೇರಿಕೊಂಡಳು. ಸರಿ, ಸವತಿ ಸಮರ ಪ್ರಾರಂಭವಾಯಿತು. ಅಲ್ಲಿ ಇನ್ನು ಇರಲಾರದೆ ಈಕೆ ಅಗ್ರಹಾರದ ಅಪ್ಪನ ಮನೆಗೆ ಬಂದುಬಿಟ್ಟಳು. ಆದರೆ, ಇಲ್ಲಿ ಈಗಾಗಲೇ ಒಬ್ಬ ಅಕ್ಕ ಗಂಡನನ್ನೇ ಕಳೆದುಕೊಂಡು ಬಂದು ತವರು ಸೇರಿದ್ದಳು. ಇಲ್ಲಿ ಮತ್ತೆ ಅಕ್ಕ, ಅತ್ತಿಗೆಯರೊಡನೆ ಏಗಿ ಬಾಳಬೇಕಾದ ಪರಿಸ್ಥಿತಿ. ಈ ಹಂತದಲ್ಲಿ ಯಾರ್‍ಯಾರಿಗೆ, ಏನೇನು ಮಾತುಕತೆ ನಡೆದವೋ ? ಆಕೆಯ ಮನಸ್ಸಂತೂ ಘಾಸಿಯಾಗಿರಲು ಸಾಧ್ಯ. ತನಗೆ ಎಲ್ಲೂ 'ನೆಲೆ'ಇಲ್ಲ. ಗೌರವವಿಲ್ಲ. ಪ್ರೀತಿ

ತೋರುವವರಿಲ್ಲ; ಎಲ್ಲರ ಸಮ ದುಡಿದರೂ ಆದರದ ಅನ್ನವಿಲ್ಲ.....

ಇವೆಲ್ಲಾ ಆಕೆಯನ್ನು ಕಾಡಿರಬೇಕು. ಇದು ಆಕೆಯ ಸುಪ್ತ ಮನಸ್ಸಿಗೂ ನೋವುಂಟು ಮಾಡಿರಬೇಕು. ಅದನ್ನೆಲ್ಲಾ ಇನ್ನು ತಡೆಯಲಾರದೆ ಹೀಗೆ ವರ್ತಿಸಿರಬಹುದು. ಆದರೆ, ಈ ರೀತಿ ವರ್ತನೆಗಳಿಗೆಲ್ಲಾ ದೆವ್ವಗಳೇ ಕಾರಣ ಎಂದು ಪ್ರಬಲವಾಗಿ ನಂಬಿದ್ದ ಜನ ಈಕೆಗೂ ಅದೇ ಪಟ್ಟ ಕಟ್ಟಿಬಿಟ್ಟರು !.

ಕೂತು ಕೇಳಿದಲ್ಲಿ ಚನ್ನಾದೇವಿಯಲ್ಲಿ ಇಂತಹ ಹತ್ತಾರು ಕತೆಗಳನ್ನು ಆಬಾಲ ವೃದ್ಧರೂ ಬಹು ಸ್ವಾರಸ್ಯವಾಗಿ ವರ್ಣಿಸುತ್ತಾರೆ. ಬಹಳ ಸಾರಿ ಅವು ಅವರ ನೇರ ಅನುಭವಗಳಾಗಿರದಿದ್ದರೂ ಅಂತೆ-ಕಂತೆಗಳನ್ನು ತಮ್ಮ ಕಣ್ಣ ಮುಂದೆಯೇ ನಡೆದಂತೆ ಹೇಳುತ್ತಿರುತ್ತಾರೆ. ಸಾಮೂಹಿಕ ನಂಬಿಕೆಯ ಪರಿಣಾಮ ಇದು. ಮನೋರೋಗಿಗಳ (ಹುಚ್ಚರ) ವರ್ತನೆಗೂ ದೆವ್ವ ದೇವರು ಹಿಡಿದಿದೆ ಎಂದು ನಂಬಿದವರ ನಡೆವಳಿಗೂ ಬಹಳ ವೇಳೆ ಅಂತಹ ವ್ಯತ್ಯಾಸಗಳಿರುವುದಿಲ್ಲ. ಪ್ರಖ್ಯಾತ ಬೆಂಗಳೂರು ನಿಮ್ಹಾನ್ಸ್ ತಮ್ಮ ಊರ ತಲೆದೆಸೆಯೇ ಇದ್ದರೂ, ತಲೆಮಾರುಗಳಿಂದ ತಮ್ಮಲ್ಲಿ ರಕ್ತಗತವಾಗಿರುವ ಈ ಮೌಢ್ಯಗಳಿಗೆ ಬಲಿಯಾಗಿ ತಮ್ಮ ಕಾಲದೆಸೆಯೇ ಇರುವ ದೆವ್ವ ಬಿಡಿಸೋ ದೇವರು / ಮಂತ್ರವಾದಿ ಹತ್ತಿರ ಓಡುತ್ತಾರೆ. ವಿಶೇಷವೆಂದರೆ, ಅಂತಹ 'ದೇವರು'ಗಳು ಸುತ್ತಮುತ್ತ ಹೆಚ್ಚಾದಷ್ಟೂ ಊರಲ್ಲಿ 'ದೆವ್ವ ಹಿಡಿಯುವ'ವರೂ ಹೆಚ್ಚಾಗುವುದುಂಟು ! ಇವರ ಮೌಢ್ಯವನ್ನು 'ನಾಣ್ಯ' ಮಾಡಿಕೊಳ್ಳುವವರಿಗೂ ಕಡಿಮೆ ಇಲ್ಲ. ಮೊದಲು ಭಕ್ತರ ಕಾಣಿಕೆಯನ್ನು ತಾವು ಕೈಲೇ ಮುಟ್ಟುವುದಿಲ್ಲ ಎನ್ನುತ್ತಿದ್ದ 'ದೇವರು'ಗಳು ಈಚೆಗೆ, 'ಇಷ್ಟು' ದಕ್ಷಿಣೆ ಇಡದಿದ್ದರೆ ತಾವು 'ಕಣಿ' ಯೇ ಹೇಳುವುದಿಲ್ಲ. ಕೇಸನ್ನು ಕೈಗೇ ತೆಗೆದು ಕೊಳ್ಳುವುದಿಲ್ಲ - ಎಂದು ತಾವೂ ಬೆಲೆ ಏರಿಸಿವೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಚನ್ನಾದೇವಿ ಅಗ್ರಹಾರ ದೆವ್ವ ದೇವರುಗಳಿಗೆ ಸಂಬಂಧಿಸಿದ ಎಷ್ಟೋ 'ಅನುಭವ' ಗಳನ್ನು ತನ್ನ ಮಡಿಲಲ್ಲಿ ಚೆಲ್ಲಿಕೊಂಡಿದೆ. ಒಂದೊಂದೂ ಅವರ ಈವತ್ತಿನ ಅನಿಸಿಕೆಗಳಷ್ಟೇ ಆಗದೆ ತಲೆಮಾರುಗಳಿಂದ ತಲೆಮಾರಿಗೆ ವರ್ಗಾವಣೆಗೊಂಡ ಆದಿಮ ಮನಸ್ಥಿತಿಯ ಆಧುನಿಕ ಅಭಿವ್ಯಕ್ತಿಗಳೇ ಆಗಿವೆ. ಆ ಮೂಲಕ ಜನಪದರನ್ನು ಆಳುತ್ತಿರುವ ನಂಬಿಕೆಗಳ ಸಾಮ್ರಾಜ್ಯದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮನೋವೈಜ್ಞಾನಿಕ ನೆಲೆಗಳ ಅಧ್ಯಯನಕ್ಕೆ ಅಗತ್ಯವಾದ ಮೂಲಾಂಶಗಳನ್ನು ಅವು ಒದಗಿಸುತ್ತವೆ.

ಜನಪದರ ಇಂತಹ ನಡವಳಿಗಳನ್ನು ಕುರಿತ ವಸ್ತುನಿಷ್ಠ ಬಹುಮುಖೀ ವಿಶ್ಲೇಷಣೆಗಳು ಆಗಿ ಅದರ ಫಲಿತಗಳನ್ನು ಮತ್ತೆ ಅವರಿಗೆ ಮನದಟ್ಟಾಗುವಂತೆ ತಿಳಿಹೇಳಿ ಈ ಮೌಢ್ಯದ ಜಾಲಗಳಿಂದ ಅವರನ್ನು ಮುಕ್ತರನ್ನಾಗಿ ಮಾಡುವ ಕಾರ್ಯವೂ ತುರ್ತಾಗಿ ಆಗಬೇಕಾಗಿದೆ.

# ೧೧. ಮುಸ್ಲಿಂ ಜನಾಂಗದಲ್ಲಿ ದೆವ್ವ(ಸೈತಾನ)ದ ಕಲ್ಪನೆ

ಡಾ|| ದಸ್ತಗೀರ ಅಲ್ಲೀಭಾಯಿ

ಮುಸ್ಲೀಮ ಜನಾಂಗದಲ್ಲಿ ದೆವ್ವಗಳನ್ನು ನಂಬುವುದಿಲ್ಲ. ಸೂಫಿ ಸಂತರ ದರಗಾಗಳ ಸುತ್ತ ಹೆಣೆದುಕೊಂಡಿರುವ ದೆವ್ವ ಸಂಬಂಧಿ ಕಲ್ಪನೆಗಳು ಮುಸ್ಲಿಮೇತರ ಧರ್ಮದ ಪ್ರಭಾವದಿಂದ ರೂಢಿಗೆ ಬಂದವುಗಳಾಗಿವೆ. -ಸಂಪಾದಕ

ಅರಬ್ಬಿ ಭಾಷೆಯಲ್ಲಿ ಇಸ್ಲಾಂ ಶಬ್ದಕ್ಕೆ ಅನುಸರಣೆ, ಆತ್ಮಸಮರ್ಪಣೆ ಅಥವಾ ಅಲ್ಲಾಹನ ಆಜ್ಞೆಯ ಮುಂದೆ ತಲೆಬಾಗಿಸುವುದು ಎಂದು ಅರ್ಥಗಳುಂಟು. ಅಲ್ಲಾಹನ ಆದೇಶದ ಮೇರೆಗೆ ಮನುಷ್ಯ ತನ್ನ ಜೀವನವನ್ನು ಸಾಗಿಸಬೇಕು. ಇದೇ ಇಸ್ಲಾಂ ಧರ್ಮದ ಗುರಿ. ಮಾನವನನ್ನು ಸೃಷ್ಟಿಸಿದ ಅಲ್ಲಾಹನು ಜಗತ್ತಿನಲ್ಲಿ ಶಾಂತಿ ಮತ್ತು ಸುಖಜೀವನ ನಡೆಯಿಸಲು ತನ್ನ ಪ್ರವಾದಿಗಳ ಮುಖಾಂತರ ಆದೇಶಗಳನ್ನು ಕಳುಹಿಸಿದನು. ಈ ಆದೇಶಗಳಂತೆ ಜೀವನ ಮಾಡುವುದರಲ್ಲಿಯೇ ಮಾನವ ಕಲ್ಯಾಣ ಅಡಗಿದೆ. ಮಾನವರಲ್ಲಿಯೇ ಸತ್ಯವಂತ ಪುಣ್ಯಶೀಲರಾದ ವ್ಯಕ್ತಿಗಳನ್ನು ಆರಿಸಿ ಅವರನ್ನು ಪ್ರವಾದಿಗಳನ್ನಾಗಿ ಮಾಡಿ ತನ್ನ ಆದೇಶಗಳನ್ನು ಮಾನವ ಜನಾಂಗಕ್ಕೆ ಬೋಧಿಸಲು ಹೇಳಿದನು. ಆದರೆ ಅಲ್ಲಾಹನು ಎಂದಿಗೂ ಮಾನವ ರೂಪದಲ್ಲಿ ಅವತರಿಸಿಲ್ಲ ಹಾಗೂ ಅವತರಿಸುವುದಿಲ್ಲವೆಂದು ಇಸ್ಲಾಂ ನಂಬಿಕೆ. [೧]

ಇಸ್ಲಾಂ ಧರ್ಮ ನಿಂತಿರುವುದು ನಂಬಿಕೆಯ ಮೇಲೆ. ಇದನ್ನೇ 'ಇಮಾನ್' ಎಂದು ಕರೆಯಲಾಗಿದೆ. (೧) ಅಲ್ಲಾಹ (೨) ಅಲ್ಲಾಹನ ಧೂತರು (೩) ದೈವೀ ಗ್ರಂಥಗಳು (೪) ಅಲ್ಲಾಹನು ಕಳಿಸಿದ ಪೈಗಂಬರರು (೫) ಕಯಾಮತ್ (ಪ್ರಳಯ) (೬) ಅಲ್ಲಾಹನ ನಿರ್ಣಯ ಮತ್ತು ಸಾವಿನ ಅನಂತರದ ಕಲ್ಪನೆ ಇವುಗಳಲ್ಲಿ ಪ್ರತಿಯೊಬ್ಬನೂ ನಂಬಿಕೆಯಿಡಬೇಕೆಂದು 'ಕುರ್ ಆನ್' ದಲ್ಲಿ ಸ್ಪಷ್ಟಪಡಿಸಲಾಗಿದೆ. ಇವುಗಳ ಹೊರತಾಗಿ ಉಳಿದ ಯಾವುದೇ ಶಕ್ತಿ, ಅತೀಂದ್ರಿಯ ಶಕ್ತಿಗಳನ್ನು ನಂಬಲು ಇಸ್ಲಾಂ ಧರ್ಮದಲ್ಲಿ ಅವಕಾಶವಿಲ್ಲ. ಮಾನವ ನಿರ್ಮಿತ ಕರಾವತ್ (ಚಾಕಚಕ್ಯತೆ) ಗಳು ಮತ್ತು ಪವಾಡಗಳು (ಅಸಾಮಾನ್ಯ ಘಟನೆಗಳು) ನಂಬಿಕೆಗೆ ದೂರವಾದವುಗಳೆಂದು ಪವಾಡಗಳನ್ನು ಮಾಡುವುದು ಅಲ್ಲಾಹನಿಂದ ಮಾತ್ರ ಸಾಧ್ಯವೆಂದು ಮುಸ್ಲೀಮರ ನಂಬಿಕೆ.

ಮುಸ್ಲೀಮರಲ್ಲಿ ದೆವ್ವ(ಸೈತಾನ)ದ ಕಲ್ಪನೆ :

ಮನಸ್ಸನ್ನು ತಪ್ಪು ದಾರಿಗೆಳಸಿ ಕೆಟ್ಟ ಕೆಲಸಗಳಿಗೆ ಪ್ರೇರೇಪಿಸುವುದೇ ದೆವ್ವ (ಸೈತಾನ) ವೆಂದು ಮುಸ್ಲೀಮರ ತಿಳುವಳಿಕೆ. ಇದರ ಬಗ್ಗೆ 'ಕುರ್ ಆನ್'ದಲ್ಲಿ ಉಲ್ಲೇಖವಾಗಿದೆ. (ಕುರ್ ಆನ್ ೩೮:೭೫-೭೯) ಯಾವುದೇ 'ಸೂರಾ'ವನ್ನು ಪಠಿಸುವಾಗ ಪ್ರಾರಂಭದಲ್ಲಿ 'ಅ ಊದು ಬಿಲ್ಲಾಹಿ ಮಿನ್ ಶೈತಾನಿರ್ರಹಿಜೀಮ್' (ಶೈತಾನನ ಪಾಶದಿಂದ ರಕ್ಷಿಸು) ಎಂದು

ಮುಸ್ಲೀಮರು ಹೇಳುವರು.

ಕುರ್‌ಆನ್‌ದ ಅನುಸಾರ ಈ ಜಗತ್ತಿನ ಸೃಷ್ಟಿಕರ್ತ 'ಅಲ್ಲಾಹ'ನು ಭೂಮಿಯ ಮೇಲೆ ಮೊಟ್ಟ ಮೊದಲು ಬೆಂಕಿಯಿಂದ ಮಾಡಿದ 'ಜಿನ್' ಎಂಬ ವಿಶೇಷ ಮಾನವನನ್ನು ಸೃಷ್ಟಿಸಿದ. ಭೂಲೋಕದಲ್ಲಿ ಆ ವಿಶೇಷ ಮಾನವರು ಸೃಷ್ಟಿಕರ್ತ ಅಲ್ಲಾಹನನ್ನು ಮರೆತು ಸುಖದಲ್ಲಿ ತಲ್ಲೀನರಾಗಿದ್ದರು. ಅವರಲ್ಲಿ ಒಬ್ಬ ಅಲ್ಲಾಹನ ಆಜ್ಞೆಯಂತೆ ನಡೆಯುತ್ತಿದ್ದನು. ಕೆಲವು ವರ್ಷಗಳ ಅನಂತರ 'ಜಿನ್' ರನ್ನೆಲ್ಲಾ ನಾಶಗೊಳಿಸಿದ ಅಲ್ಲಾಹನು ಸತ್ಯಸಂಧನಾದ ಒಬ್ಬ 'ಜಿನ್'ನನ್ನು ಸ್ವರ್ಗಕ್ಕೆ ಕಳುಹಿಸಿದನು. 'ಜಿನ್' ರ ನಾಶದ ನಂತರ ಭೂಲೋಕವು ಹಲವಾರು ವರ್ಷಗಳವರೆಗೆ ನಿರ್ಜನ ಪ್ರದೇಶವಾಗುಳಿಯಿತು. ಒಂದು ದಿನ ಅಲ್ಲಾಹನು ಜೇಡಿಮಣ್ಣಿನಿಂದ ಮಾನವರೀರ್ವರನ್ನು ಸೃಷ್ಟಿಸಿ ಅವರಲ್ಲೊಬ್ಬ ಪುರುಷನಿಗೆ ಆದಂ ಎಂದು ಹೆಸರಿಟ್ಟು 'ಜಿನ್'ಗೆ ಕರೆದು ಆತನಿಗೆ ಸಿಜ್ದಾ (ತಲೆಬಾಗಿ ನಮಸ್ಕರಿಸು) ಮಾಡುವಂತೆ ಹೇಳಿದ. ಆ ಸತ್ಯವಂತ ಜಿನ್ ನಾನು ಬೆಂಕಿಯಿಂದ ಸೃಷ್ಟಿಸಲ್ಪಟ್ಟವನಾದ್ದರಿಂದ ಮಣ್ಣಿನಿಂದಾದ ಮಾನವರಿಗಿಂತ ಮೇಲ್ಪಟ್ಟದವನೆಂದು ಹೇಳಿದನು. ಅಂದಿನಿಂದ ಸತ್ಯವಂತ ಜಿನ್ ಅಲ್ಲಾಹನ ಆಜ್ಞಾವಿರೋಧಿ (ಇಬ್‌ಲೀಸ್) ಎಂಬ ಹೆಸರು ಪಡೆದನು. ಮಾನವರನ್ನು ಅಲ್ಲಾಹನ ಆಜ್ಞಾನುಸಾರ ನಡೆಯದಂತೆ ಪ್ರೇರೇಪಿಸುವ ಕಾರ್ಯದಲ್ಲಿ ತೊಡಗುವದಾಗಿ ಪ್ರತಿಜ್ಞೆಮಾಡಿ ಹೋದನು. ಅಂದಿನಿಂದ ಇಬ್‌ಲೀಸ್ ಮಾನವನ ಶತ್ರುವಾದನು. ಮಾನವರನ್ನು ಕೆಟ್ಟಕೆಲಸಗಳಿಗೆ ಪ್ರೇರೇಪಿಸುವುದು, ದೇವರ ಪ್ರಾರ್ಥನೆ ಮಾಡದಂತೆ ಅಡ್ಡಿ ಆತಂಕಗಳನ್ನೊಡ್ಡುವದು ಇವನ ಕೆಲಸವಾಯಿತಂತೆ. [೨]

ಅಲ್ಲಾಹನ ಆಜ್ಞೆ ಹೊತ್ತ ಆದಂ ಮತ್ತು ಹವ್ವಾ ಸ್ವರ್ಗವಾಸಿಗಳಾಗಿ ಹಲವು ವರ್ಷ ಕಳೆದರು. ಒಂದು ದಿನ ಅಲ್ಲಾಹನ ಆಜ್ಞಾ ವಿರೋಧಿಯಾದ ಇಬಲೀಸ್ ಇವರನ್ನು ನಿರ್ಬಂಧಿಸಿದ ಗಿಡದ ಹಣ್ಣನ್ನು ತಿನ್ನಲು ಪ್ರೇರೇಪಿಸಿ ಸಫಲನಾಗುತ್ತಾನೆ. ಆದಂ ಹವ್ವಾರು ಅಲ್ಲಾಹನ ಆಜ್ಞೆ ಮೀರಿದ ತಪ್ಪಿಗೆ ಭೂಲೋಕದಲ್ಲಿ ಹುಟ್ಟುವ ಶಿಕ್ಷೆಗೆ ಒಳಗಾಗುತ್ತಾರೆ. ತಮ್ಮ ತಪ್ಪನ್ನು ಕ್ಷಮಿಸಲು ಆದಂ ಹವ್ವಾರು ಕೇಳಿಕೊಳ್ಳಲು ಅಲ್ಲಾಹನು ಅವರಿಬ್ಬರ ತಪ್ಪನ್ನು ಕ್ಷಮಿಸಿ ಭೂಲೋಕದಲ್ಲಿ ಹುಟ್ಟಿ ಮನುಕುಲದ ಬೆಳವಣಿಗೆಗೆ ಕಾರಣರಾಗಿ ನನ್ನ ಆಜ್ಞೆಯನ್ನು ಎಲ್ಲರಿಗೂ ಬೋಧಿಸಿ ಎಂದು ಹೇಳಿಕಳುಹಿಸುತ್ತಾನೆ.

ಅಲ್ಲಾಹನ ಆಜ್ಞೆ ಹೊತ್ತು ಭೂಲೋಕದಲ್ಲಿ ಹುಟ್ಟಿದ ಆದಂ ಹವ್ವಾರು ಅಲ್ಲಾಹನ ಆಜ್ಞೆ - ಆದೇಶ ಬೋಧನೆಗಳನ್ನು ತಿಳಿಸಿದರು. ಹೀಗೆ ಇಸ್ಲಾಂ ಧರ್ಮದ ಉಗಮ ಆದಂ ಹವ್ವಾರಿಂದ ಆಯಿತು. ಆದರೆ ಈ ದಂಪತಿಗಳು ಇಸ್ಲಾಂ ಧರ್ಮದ ಸ್ಥಾಪಕರಲ್ಲ. ಕೇವಲ ಪ್ರಚಾರಕರು. ಆದಂ ಪೈಗಂಬರರ ನಂತರ ಒಂದು ಲಕ್ಷ ಇಪ್ಪತ್ನಾಲ್ಕು ಸಾವಿರ ಪ್ರವಾದಿಗಳು ಭೂಲೋಕದಲ್ಲಿ ಹುಟ್ಟಿ ಇಸ್ಲಾಂ ಧರ್ಮ ಪ್ರಸಾರ ಮಾಡಿದರೆಂದು ಕುರ್ ಆನ್ ತಿಳಿಸುತ್ತದೆ. [೩]

ಹೀಗೆ ಅಲ್ಲಾಹನ ಆಜ್ಞೆ ಮೀರುವ ಮಾನವರನ್ನು ತಪ್ಪು ದಾರಿಗೆ ಎಳೆಯುವ ಇಬ್‌ಲೀಸ್‌ನಿಗೆ ಸೈತಾನ (ದೆವ್ವ) ಎಂದು ಕರೆಯುವರು. ಆದರೆ ಮುಸ್ಲೀಮೇತರ ಧರ್ಮದಲ್ಲಿರುವಂತೆ ದೆವ್ವ-ಭೂತ-ಪಿಶಾಚಿಗಳ ಕಲ್ಪನೆ ಅಥವಾ ನಂಬಿಕೆ ಮುಸ್ಲಿಂ ಜನಾಂಗದಲ್ಲಿ ಇಲ್ಲ.

ಸೈತಾನನು ಹಜ್ (ಮಕ್ಕಾಯಾತ್ರೆ) ಮಾಡುವವರ ಏಕಾಗ್ರತೆಗೆ ಭಂಗ ತಂದು ಅವರ ಧ್ಯಾನವನ್ನು ತಿರುಗಿಸಲು ಸಾಮಾನ್ಯ ಮನುಷ್ಯನಂತೆ ರೂಪ ಧರಿಸಿ ಹಜ್ ಯಾತ್ರಿಕರಲ್ಲಿ ಸೇರಿಹೋಗಿದ್ದನಂತೆ. ಹ || ಇಬ್ರಾಹಿಂ ಪೈಗಂಬರರು ಯಾತ್ರಿಕರ ಮಧ್ಯೆ ಸೇರಿ ಹೋದ ಸೈತಾನನ್ನು ಗುರುತಿಸಿ 'ಕುರ್‌ಆನ್' ದ ಆಯತಗಳನ್ನು ಪಠಿಸಿ ಕಲ್ಲುಗಳನ್ನು ಎಸೆದು ಅವನನ್ನು ದೂರ ಮಾಡಿದ್ದರಂತೆ ಎಂದು ತಿಳಿಯುವ ಮುಸ್ಲೀಮರು ಹಜ್ ಯಾತ್ರೆಯ ಸಮಯದಲ್ಲಿ ಮುಜ್ದಲಿಫ್‌ದಲ್ಲಿ ಮಗ್ರೀಬ್ ಮತ್ತು ಇಷಾ ಸಮಾಜಗಳನ್ನು ಮಾಡಿ ೪೯ ಸಣ್ಣ ಕಲ್ಲುಗಳನ್ನು ಆರಿಸಿ ಏಹ್ರಾಮ್ ಬಟ್ಟೆ (ಹಜ್ ಯಾತ್ರಿಕರು ತೊಡುವ ವಿಶಿಷ್ಟ ಉಡುಗೆ) ಯ ತುದಿಯಲ್ಲಿ ಕಟ್ಟಿಕೊಂಡು 'ಮಿನಾ' ಕಡೆ ಪ್ರಯಾಣ ಬೆಳಸಿ ಬೆಳಗಿನ ನಮಾಜು ಮಾಡುವರು. ಅನಂತರ ಏಹ್ರಾಮ್ ಬಟ್ಟೆಯಲ್ಲಿ ಕಟ್ಟಿಕೊಂಡ ಕಲ್ಲುಗಳನ್ನು ಸೈತಾನನ ಕಲ್ಲಿಗೆ ಎಸೆಯುವರು. [೪]

ಇಲ್ಲಿಯೂ ಸಹ ಸೈತಾನ (ದೆವ್ವ) ಎಂದರೆ ಅಲ್ಲಾಹನ - ಆರಾಧನೆ ಮಾಡುವವರನ್ನು ಕೆಟ್ಟ ಕೆಲಸಗಳಿಗೆ ಪ್ರೇರೇಪಿಸುವವನು ಎಂದರ್ಥ.

ಮುಸ್ಲೀಮರು ದೆವ್ವ ಭೂತ ಪಿಶಾಚಿಗಳನ್ನು ನಂಬುವುದಿಲ್ಲ. ಕೆಲವೊಂದು ನಗರ - ಗ್ರಾಮಗಳಲ್ಲಿರುವ ದರಗಾಗಳ ಸುತ್ತ - ಮುತ್ತ ಹೆಣೆದುಕೊಂಡ ದೆವ್ವ (ಸೈತಾನ) ದ ಕಲ್ಪನೆಗಳು ಮುಸ್ಲೀಮೇತರ ಧರ್ಮದ ಪ್ರಭಾವದಿಂದ ಆಚರಣೆಯಲ್ಲಿರುವಂಥವುಳಾಗಿವೆ. ದೆವ್ವ ಹಿಡಿದಿರುವುದು, ದೆವ್ವ ಬಿಡಿಸುವುದು, ವ್ಯಕ್ತಿ ದೆವ್ವವಾಗಿರುವುದು - ಎಂಬ ವದಂತಿಗಳಿಗೆ ಇಸ್ಲಾಂ ಧರ್ಮದಲ್ಲಿ ಆಧಾರಗಳು ಇಲ್ಲ. ಸೂಫಿ ಸಂತರ ದರಗಾಗಳು ದೆವ್ವ ಬಿಡಿಸುತ್ತವೆ ಎಂಬ ನಂಬಿಕೆ ಹುರುಳಿಲ್ಲದ್ದು. ಆದರೆ ಬುದ್ಧಿ ಭ್ರಮಣೆಯಾದ, ದೈಹಿಕ ಸ್ವಾಸ್ಥ್ಯ ಕಳೆದುಕೊಂಡ, ಸಂಸಾರದ ಜಂಜಡದಿಂದ ಜರ್ಝರಿತವಾದ ವ್ಯಕ್ತಿಗಳಿಗೆ ಸಂತರ ಗೋರಿಗಳ ದರ್ಶನ, ದರಗಾಗಳ ಜಿಯಾರತ್ ನೊಂದು ಬೆಂದ ಮನಸ್ಸುಗಳಿಗೆ ಶಾಂತಿ - ನೆಮ್ಮದಿ ಕೊಡಬಲ್ಲವು ಎಂಬುದು ಮಾತ್ರ ಸತ್ಯ.

## ಗ್ರಂಥ ಋಣ :

೧. ಎಚ್.ಜೆ. ಲಕ್ಕಪ್ಪಗೌಡ (ಸಂ) - ವಿಶಿಷ್ಟ ಜಾನಪದ (ಮೈ.ವಿ.ವಿ.ಮೈಸೂರು - ೧೯೮೪)

೨. ಹಾ.ಮಾ.ನಾಯಕ (ಸಂ) - ಕನ್ನಡ ವಿಶ್ವಕೋಶ, ಸಂ : ೩ (ಮೈ.ವಿ.ವಿ.

ಮೈಸೂರು - ೧೯೭೦)

೩. ದಸ್ತಗೀರ ಅಲ್ಲೀಭಾಯಿ - ಮುಸ್ಲೀಮರ ಹಬ್ಬಮತ್ತು ಉರುಸುಗಳು (ಕ.ವಿ.ವಿ. ಧಾ - ೧೯೯೬)

೪. ಕುರ್‌ಆನ್ ಕನ್ನಡಾನುವಾದ - ಮಂಗಳೂರು ಪ್ರಕಟನೆ.

೫. ನೆಹರು ಕಾಲೇಜ ಮಿಸಲನಿ - ೧೯೮೩ - ೮೪.

೬. ತರಂಗ ವಾರಪತ್ರಿಕೆ ೧೬ ಸೆಪ್ಟೆಂಬರ್ - ೧೯೮೪.

## ಅಡಿಟಿಪ್ಪಣಿ

೧. ಪ್ರೊ. ಎ.ಎ. ಖತೀಬ - ಇಸ್ಲಾಂ ಧರ್ಮ (ನೆಹರು ಕಾಲೇಜು ಮಿಸಲನಿ - ೧೯೮೩ - ೮೪) ಪುಟ : ೨೩.

೨. ಹಾ.ಮಾ. ನಾಯಕ (ಸಂ) - ಕನ್ನಡ ವಿಶ್ವಕೋಶ ಸಂ.೩ (ಮೈ.ವಿ.ವಿ. ಮೈಸೂರು - ೧೯೭೦) ಪುಟ : ೩೮೬.

೩. ಸೈ.ಜ. ಷರೀಫ - ಮುಸ್ಲಿಂ ಜಾನಪದ (ವಿಶಿಷ್ಟ ಜಾನಪದ - ಮೈ.ವಿ.ವಿ. ಮೈಸೂರು - ೧೯೮೪) ಪು. ೩೫.

೪. ಮುಮ್ತಾಜ - ಹಜ್ ಯಾತ್ರೆ ( ತರಂಗ, ಸಾಪ್ತಾಹಿಕ ೧೬-೯-೧೯೮೪) ಪುಟ : ೧೪.

# ೧೨. ದೆವ್ವ ನಮ್ಮದೆ ಒಂದು ವ್ಯಕ್ತಿತ್ವ

ಡಾ ॥ ಹಿ.ಶಿ. ರಾಮಚಂದ್ರೇಗೌಡ

ವಿಘಟನೆ ಹೊಂದಿರದ ಸಮಾಜದಲ್ಲಿ ದೆವ್ವ, ದೈವ, ಮನುಷ್ಯ ಎಲ್ಲವೂ ಒಂದೇ. ಅಂದರೆ ದೆವ್ವ ನಮ್ಮದೇ ಒಂದು ಗುಣ, ನಮ್ಮದೇ ಒಂದು ವ್ಯಕ್ತಿತ್ವ ಎಂದು ಪ್ರತಿಪಾದಿಸುತ್ತಾರೆ ಹಿಶಿರಾ. – ಸಂಪಾದಕ

---

ನಮ್ಮವ್ವ ಜನಪದ ವೈದ್ಯೆ. ನಮ್ಮಪ್ಪ ಮಂತ್ರವಾದಿ. ನಾನು ಕಿರಿಯ ಮಗ. ಅವ್ವ ತನ್ನ ವಿದ್ಯೆಯನ್ನು ನನಗೆ ವರ್ಗಾಯಿಸಿದಳು. ಅಪ್ಪ ನಮ್ಮಣ್ಣನಿಗೆ ಮಂತ್ರ ವಿದ್ಯೆ ಕಲಿಸಿಕೊಟ್ಟ ನಮ್ಮಪ್ಪನ ಅನೇಕ ಸಾಹಸಗಳನ್ನು ಅವ್ವ ಹೇಳುತ್ತಿದ್ದಳು. ಕೋಳಿ ಹುಂಜಗಳ ಸಾಲು ಮನೆಯ ಮುಂದೆ, ನೊಂದವರ ಸಾಲು ಮನೆಯ ಹಿಂದೆ. ಅಡಿಗೆ ಬೇಸಿ ಬೇಸಿ ಸಾಕಾಯಿತು. ಯಾರೊ ಒಬ್ಬ ಅಪ್ಪನ ಫಲಾನುಭವಿ ಎರಡು ಮೊಟ್ಟೆ ಕೊಬ್ಬರಿಯನ್ನು ಮನಗೆ ತಂದು ಹಾಕಿದನಂತೆ. ಅದೆ ಸಮಯಕ್ಕೆ ನಮ್ಮ ಹಿರಿ ಅಕ್ಕ ಹೆಣ್ಣಾಗಿದ್ದಳು. ಕೊಬರಿ ಬೆಲ್ಲ ಅವಳ ಸೊಂಟವನ್ನು ಗಟ್ಟಿಮಾಡಿತಂತೆ. ಆದರೂ ಅವ್ವನಿಗೆ ಹೊರಗೆ ಹೋಗಬೇಕಾದ ದೆವ್ವಗಳು ಎಲ್ಲಿ ಮನೆ ಒಳಕ್ಕೆ ಸೇರಿಕೊಳ್ಳುತ್ತವೊ ಎಂಬ ಭಯ.

ಒಂದು ಸಾರಿ ಶನಿ ನಮ್ಮಪ್ಪನ ಹೆಗಲೇರಿದನಂತೆ. ಎಲ್ಲಾ ಮಂತ್ರ ವಿದ್ಯೆ ಧೂಳು ಧೂಳಾಗಿ ಹೋಯಿತು. ಮನೆಗೆ ಹದಿನಾಲ್ಕು ವರ್ಷ ವನವಾಸ ಬೇರೆಯಂತೆ. ಇಡೀ ನಮ್ಮ ಕುಟುಂಬ ದಿಕ್ಕಾಪಾಲಾಯಿತು. ಅಕ್ಕಂದಿರು ಯಾರ ತಾಬೆಯಲ್ಲೊ. ಅಣ್ಣ ಮನೆ ಬಿಟ್ಟು ಹೋದವನು ಬರಲಿಲ್ಲ. ಅಪ್ಪ ಯಾವಳನ್ನೊ ಬೆನ್ನತ್ತಿ ಹೋದ. ಅವ್ವ ಮತ್ತು ನಾನು. ಪರರ ಮನೆಯ ಕೂಲಿನಾಲಿ. ಅವರು ಕೊಟ್ಟ ಉಳಿದ ರೊಟ್ಟಿ, ಹುಳಿ ಮಜ್ಜಿಗೆ. ಮನೆ ಇಲ್ಲ, ಮಠ ಇಲ್ಲ; ಯಾರದೊ ಮನೆಯಲ್ಲಿ ಆಶ್ರಯ. ನಾನು ಬೀದಿಯ ಹುಡುಗ, ಹಾದಿಯ ಕಸ. ಮಾಟ ಮಂತ್ರ ಮಾಡಿದರೆ, ಮನೆ ಮೂರು ದಿನದ ಬಾಳು – ಅಂತೆ.

ನಮ್ಮಪ್ಪ ದೆವ್ವವನ್ನು ಹಿಡಿದು ಕುಣಿಸುತ್ತಿದ್ದ ಕಂಕುಳಿಗೆ ಚಕ್ಕಳಗುಳಿ ಕೊಟ್ಟು ನಗಿಸುತ್ತಿದ್ದ. ಸುಮ್ಮಾನ ಅಡಿ ಸತ್ತವಳ ಜೊತೆ ಜೋಕು ಹೊಡೆಯುತ್ತಿದ್ದ. ಅವಳೇನು! ನಿಜ ಹೆಣ್ಣುಗಳನ್ನು ಸೆಳೆದು ಸುಳಿ ನೋಡುತ್ತಿದ್ದ. ಅವರ ಜೊತೆ ಅನ್ನ ಹಾಲು ಉಣ್ಣುತ್ತಿದ್ದ. ನಾನಾಗ ತಂಗಳ ರೊಟ್ಟಿ ಗೊಡ್ಡುಗಾರ ಹುಡುಕಿ ಮನೆ ಮನೆ ಅಲೆಯುತ್ತಿದ್ದೆ. ಹೆಂಗಸರಿಗೆ ತಿಕ್ಕೆ ನೀರು ಕೊಟ್ಟು ಅವರು ಕೊಟ್ಟ ಬಹುಮಾನ ಕಡಲೆಕಾಯಿ ಐಭೋಗ ಅನುಭವಿಸುತ್ತಿದ್ದೆ!

ಮಾಟ ಮಾಡಿದವರ ಮನೆ, ಕೂಟ (ಸೈನ್ಯ) ಸೇರಿದವರ ಮನೆ ನೆಲೆ ಇಲ್ಲವಂತೆ. ಇವಕ್ಕೂ ಅದೆ ಗತಿ ಬಂತು ನೋಡು. ಯಾವ ದೆವ್ವವೋ, ಯಾವ ಗಾಳಿಯೋ ಮಂತ್ರದಿಂದ ನುಗುಚಿಕೊಂಡು ಬೆನ್ನು ಹತ್ತಿದೆ. ಅದು ಬಿಟ್ಟಾಗ, ಇವರು ಬದುಕಿದಾಗ ಸೈ ಅನ್ನು, ಹನ್ನೆರಡು

ಜನ ಬಸುರುಮಾಡಿ ಕೆರೆಗೆ ಎಸೆದರು. ಎರಡು ಕೂಸುಗಳ ವಿಧವೆ ಮೋಜು ಮಾಡಿ ಹೊಳೆಗೆಸೆದರು. ಅಂಥವರ ಬಚಾವು ಮಾಡಿದರೆ ದೇವರು ಸುಮ್ಮನಿರುತ್ತಾನಾ... ಅಸಲಿ ಶಾಪಗಳು.

ಊರೂರು ತಿರುಗಿ ನಾಟಕ ನೋಡುವಂಗಾದೆ. ನೆಂಟರ ಮನೆಯ ಅಮವಾಸೆ ಪೂರ್ನಮಿ ಊಟಕ್ಕೆ ಹೋಗುತ್ತಿದ್ದೆ. ದಾರಿಯಲ್ಲಿ ಕೊರಮರ ಹೆಂಗಸು ಬಾವಿಗಿಳಿದು ಹಂಗೇ ಹೂತುಕೊಂಡಿದ್ದಳು – ಹಂಗೆ ದೆವ್ವವಾಗಿದ್ದಾಳೆ. ಅಲ್ಲೆ ಒಂದು ಹುಣಸೆಮರ, ಯಾರೂ ಜೊತೆಯವರು ಮುಂದೆ ಹೋಗಲಾರರು. ನನಗೆ ಸಾಲಿನಲ್ಲಿ ಹಿಂದೆ ಹೋಗಲು ಭಯ. ಹಿಮ್ಮಡಿ ಮೂಸಿ ದೆವ್ವಗುದದ್ವಾರದ ಮೂಲಕ ನೆತ್ತಿಗೆ ಏರಿದರೆ. ನೆನಸಿಕೊಂಡರೆ ಗುದದ್ವಾರ ತಣ್ಣಗಾಗುತ್ತಿತ್ತು. ತಲೆಯೊಳಗೆ ಅಪ್ಪನ ಅನುಭವದ ಹೇರು ಬೇರೆ. ಅದನ್ನು ಗೆಲ್ಲಲ್ಲೇಬೇಕು. ನನ್ನ ಅರಿವಿನ ಒಳಗಿನ ಒತ್ತಡ. ಅದಕ್ಕೆ ಸಾಲಿನಲ್ಲಿ ನಡೆಯುವವರ ಮುಂದಾಳು ನಾನು. ಹೀಗೆ ನಾನು ಮದುವೆ, ತಿಥಿ, ಹಬ್ಬ, ನಾಟಕ, ಹೊಡೆದಾಟ, ಕಳ್ಳರನ್ನು ಅಟ್ಟಿಸಿಕೊಂಡು, ಬೇಟೆಗೆಂದು ಮುಂದೆ ಮುಂದೆ –

ಅರವತ್ತು ವರ್ಷದ ಆರು ಬೆಳ್ಳ ಮಾರಣ್ಣ, ಕಂಡವರ ಹಂಡತಿ ಇಟ್ಟುಕೊಳ್ಳುವ ದಡಿಯ ಪ್ಯಾಸಪ್ಪ, ಬಾವಿನೀರಿಗೆ ಬರುವ ಹೆಂಗಸರನ್ನು ಪೂಸಿ ಮಾಡುವ ಚತುರ ಹೊಲಯರ ಚಿಕ್ಕ ನನ್ನ ಗೆಣೆಕಾರರು. ಹುಡುಗ ಕಡಕ್ ಅವ್ನೆ ಅಂತ್ಲೋ ಏನೊ, ಇವರ ಅಸಲಿ ಕಸುಬೆಲ್ಲ ಸಂಜೆಯಾದ ಮೇಲೆಯೆ. ಆರು ಬೆಳ್ಳ ಮಾರಣ್ಣ ಕೊನೆ ಬೆಳ್ಳಿಗೆ ಬೀಡಿ ಸಿಕ್ಕಿಸಿಕೊಂಡು ಊದುತ್ತಾ ಹೊರಟರೆ ನೇರ ಸಿದ್ದರ ತೋಪಿಗೆ ಹೋಗುತ್ತಿದ್ದ. ಬೆಳಗಾದ ಮೇಲೆಯೆ ಅವನ ಆಗಮನ. ಅವನು ಬಿಚ್ಚುತ್ತಿದ್ದ ದೆವ್ವಗಳ ಪುರಾಣ; ಅವುಗಳ ಪಾದ ಹಿಂದು ಮುಂದು, ಮುಖ ಹಿಂದು ಮುಂದು, ಬೆನ್ನು ಮುಂದೆ ಹೊಟ್ಟೆ ಹಿಂದೆ, ಡೊಳ್ಳು ಹೊಟ್ಟೆ, ಮೈತುಂಬಾ ಕೂದಲು, ಮುಖ ಗೀರುಬಾರು. ನಾನು ಕೇಳಿದ್ದು ಅವಕ್ಕೆ ಉಚ್ಚೆ ಮಾಡುವುದು ಐತಾ ? ಬೆಳಕಾಳು. ತಲಹರ್ಟೆ ನನ್ ಮಗ್ನೆ, ನಾನು ಬೀಡಿ ತಗೊಂಡ್ರೆ ಅವು ಹಚ್ ಕೊಡ್ತವೆ. ಅವೂ ಒಂದೊಂದ್ ದಂ ಸೇದ್ತವೆ. ಮಾತಾಡ್ತವೆ, ಒಂದೊಂದ್ ಸಲ ಗೊಳೋ ಅಂತ ಅಳ್ತವೆ. ನಿಂಗೇನಾದ್ರೂ ಬೇಕೇನಣ್ಣ ಅಂತ ಕೇಳ್ತವೆ. ಯಾವುರೊ ಎತ್ಲೊ ಸಿದ್ದರ ತೋಪಲ್ಲಿ ಅವೆ. ಆ ಸಿದ್ದರ ಕಡೇವೆ ಇರ್ಬೇಕು. ಅವು ಭಾರಿ ತಿಂದುಂಡು ಹೋದ್ರು. ಬಡ್ಡಿ ಮಕ್ಳು, ಎದ್ರೂಬಿದ್ರೂ ಅದೆ ಹೆಂಡ ಭಂಗಿ ಹೆಣ್ಣು. ಹಾಳ್ ಮಂಟಪ ಬಿಟ್ರೆ ಏನೂ ಇಲ್ಲ ನೋಡು. ಇವು ದೆವ್ವಗಳು ಅಲ್ಲ ವಾಸ. ಅಮಾಸೆ ಪೋರ್ಣಮಿ ಅಂದ್ರೆ ಅವ್ಕೆ ಭಾರಿ ಖುಷಿ. ಬಡ್ಡೆತ್ತವು ಕೊಸ್ರಾಡ್ತವೆ.

ಮಾರಣ್ಣ ಅಮಾಸೆ ಪೋರ್ಣಮಿ ದಿನ ಯಾಕೆ ಸಿದ್ಧರ ತೋಪಿಗೆ ಹೋಗ್ತನೆ ಅಂತ ಹುಡುಗರ್ಗೆ ಗೊತ್ತಿಲ್ಲ. ದೊಡ್ಡವರು ಅವುನ್ದು ದೆವ್ವಗಣ, ದೆವ್ವಗಣ್ಣು, ಅವನಿಗೆ ದೆವ್ವ ಕಾಣಸ್ಕತವೆ. ದೇವಗಣ, ರಾಕ್ಷಸ ಗಣದವರಿಗೆ ಕಾಣಸ್ಕಳಲ್ಲ. ಮಾರಣ್ಣನ ಹೆಂಡತಿ

ಬೋರಕ್ಕ, ಎರಡನೇ ಹೆಂಡತಿ. ಇವನು ಧ್ಯಾನವಂತ, ಧರ್ಮವಂತ ಅನ್ನುತ್ತಿದ್ದರು. ಅವನಿಗೆ ದೆವ್ವದ ವಿದ್ಯೆ ಚೆನ್ನಾಗಿ ಗೊತ್ತು. ದೆವ್ವ ಯಾವತ್ತೂ ಒಳ್ಳೆರ್ಗೆ ತೊಂದ್ರ ಕೊಡೊಲ್ವಂತೆ.

ಪ್ಯಾಸಪ್ಪ ಸಡ್ಡೆಗಂಡಸ್ರು ಇರೊ ಮನೆಗೆ ಹೋಗಿ ಮಾತಿಗೆ ಕುಂತ್ರೆ ಯಾವಾಗ ಮನಿಗೆ ಬರ್ತನೆ ಅಂತ ಹೇಳಕಾಗಲ್ಲ. ಅವನಿಗೆ ಒಂಥರ ಮೈಕಡ್ತ. ಸಂಜೆ ಮ್ಯಾಲೆ ಕೆರೆ ಕೋಡಿ, ಹಳೇಬಾವಿ, ಏರಿ ಹಿಂದೆ, ಹಳ್ಳದ ದಂಡೆ, ಎರೆಬಾರೆ ಹತ್ರ ಕಾಲ ಕಳಿತಾನೆ. ಅವನಿಗೆ ಗೊತ್ತಿಲ್ಲದ ದೇವ್ರುರು ದೆವ್ವ ಯಾವ್ದು ಇಲ್ಲ. ಅವುನಿಗೇನು ದೆವ್ವ ದೇವ್ರು ಬೇರೆ ಬೇರೆ ಅಲ್ಲ. ರಾತ್ರೆ ಹೊತ್ತು ಗಂಜಲ ದೋಡಕ್ಕೆ ಅವ್ನು ಎರೆಬಾರೆಗೆ ಹೋಗ್ತನೆ. ಅಲ್ಲಿ ದೊಡ್ಡಾಲದ ಮರ ಐತೆ. ಅದರ ಮೇಲೆ ನೂರಾರು ದೈಯಗಳು ಅವೆ. ಕೆಳಗೆ ಇವ್ರು ಬೆಂಕಿ ಹಾಕ್ಕಂಡು ಬಿಸಿ ಮಾಡ್ಕತಾ ಕೂತ್ಗತರೆ. ದೆವ್ವಗಳು ಬತ್ತವಂತೆ. ಚಳಿ ಕಾಯಿಸ್ಗತವಂತೆ. ಆಮೇಲೆ ಸ್ವಲ್ಪ ಬೆನ್ ಕೆರಿಯಣ್ಣ, ಕೆರಿಯಕ್ಕ ಅಂತ ಗೋಗರಿತವಂತೆ. ಮೈಮುಟ್ಟಿದ್ರೆ ಟಗರ ಕೂದ್ಲಿಗೆ ಕೈಹಾಕ್ದಂಗೆ ಆಗುತ್ತಂತೆ. ಏನು ಮಾಡಕಿಲ್ವಂತೆ. ಕಷ್ಟಸುಖ ಹೇಳ್ಕಂಡು ಅಂಗೆ ಬಡ್ಕತವಂತೆ. ಅಯ್ಯೋ ಪಾಪ ಅವ್ಕು ಕಷ್ಟ ತಪ್ಪಿದಲ್ಲ!

ಚಿಕ್ಕನಿಗೊಂದು ಕತೆ ಇದೆ. ಅವನ ಅಣ್ಣ ನರಸ ಇವನ ಗೌಡರ ಮನೆಗೆ ತಂದು ಜೀತಕ್ಕೆ ಇಟ್ಟವನೆ. ಅವುನಿಗೆ ಆಗ್ಲೆ ಮೂವತ್ ವರುಷ. ಮದುವೆ ಮಾಡಿಲ್ಲ. ತುಂಬ ಜಾಣ. ಗೌಡ್ರ ಹೆಂಗಸರ ಹತ್ರ ಚಕ್ಕಂದ ಆಡ್ತನೆ. ಎಗ್ಗಿಲ್ದೆ ತುಂಬ್ದ ಹಟ್ಟಿಲಿ... ಅಪರೂಪವೇ ಅಂತನೆ. ಅವ್ನು ರಾತ್ರಿ ಊರು ಕೇರಿ ತೋಟ ತುಡ್ಕೆ ಎಲ್ಲ ಸುತ್ತನೆ. ದೆವ್ವಗಳಿಗೆ ಅವನು ಮೈಟ್ ಮಾಡಲ್ಲ. ಒಂದ್ ರಾತ್ರಿ ಊರೆಲ್ಲ ಗಪ್ ಅಂತ ಮಲಗಿದ್ದಾಗ ದಡ ದಡ ಬಡಿದು ನನ್ನ ಎಳಿಸಿದ. ನೋಡು ಅಲ್ಲೆ ಬಾವಿ ಪಕ್ಕದಲೆ ಗಾಡಿ ಚಕ್ರ ಕೀಳ್ತಾ ಇದೆ ದೆವ್ವ. ಅವುಳು ತಿಮ್ಮಕ್ಕ. ಗಂಡ ಸತ್ತ ಮೇಲೆ ಒಂದ್ ಹೆಣ್‌ಮಗ ಸಾಕ್ಯಂಡಿದ್ಲು. ತಿಮ್ಮಪ್ಪ ಅನ್ನನು ಅವ್ಳ ಬಸುರುಮಾಡ್ದ. ತೆಗ್ಸಕ್ಕೆ ಆಗ್ಲಿಲ್ಲ. ಕೆರೆಗೆ ಬಿದ್ ಸತ್ಲಲೊ. ನಂಗೆ ಗೊತ್ತು ಒಂದ್ ನಾಕ್ ತಿಂಗಳ ಕೆಳಗೆ ದೆವ್ವಾಗಿದಳೆ. ಈಗ ನೋಡು ಕೂಗ್ತಳೆ. ಕೂಗಿದ್ದು ನಿಜವಾಗಿ ನನಗೆ ಕೇಳಿಸ್ತು. ಓಡ್ಹೋಗಿ ತೂತುಗಂಬಳಿ ಒಳಗೆ ರಕ್ಷಣೆಗೆ ಅಂತ ಸೇರಿಕೊಂಡೆ. ಅವ್ನೆಂತನು ಅಂದ್ರೆ ರಾತ್ರಿ ಹೊತ್ತೆ ಆ ಬಾವಿತಕೆ ನನ್ನ ಕರ್ಕಂಡೋಗನು. ದೆವ್ವೇನು ನನ್ದ ಹರ್ಕಳುತ್ತ ಅನ್ನನು. ಇವತ್ತುಗ ಅವನ ಮುಂದೆ ದೊಡ್ಡದಾದ ಯಾ ಹೀರೋನೂ ನನಗೆ ಕಾಣುಸ್ತಾ ಇಲ್ಲ.

ನಾನು ಓದಕೆ ಅಂತ ಗೌಡ್ರ ಮನೆಗೆ ಸೇರ್ಕಂಡೆ, ಗೌಡ್ರ ಮನೆ ಕೆಲ್ಸ, ಆಳ್ಗಳ ಜೊತೆ ನಿದ್ದೆ ಆದಷ್ಟು ಓದು. ನಾನು ಆಗ ಪಡ್ಡೆ ಹುಡ್ಗ. ಅರ್ಧ ಮಕ್ಕಳ ಕಡೆಗೆ, ಈಕಡೆ ಅರ್ಧ ಹುಡುಗರ ಕಡಿಕೆ. ಇವನಿಗೆ ಇನ್ನೂ ಎಳನೀರು ಬುಟ್ಕಂಡಿಲ್ಲ ಅಂತ ಚಿಕ್ಕ ನನ್ನ ತಮಾಷೆ ಮಾಡ್ತಿದ್ದ. ಗೌಡ್ರ ಮನಿಗೆ ಏನೊ ಕಷ್ಟ ಬಂದಂಗೆ ಕಾಣ್ತಾ ಇತ್ತು. ಏನು ಕಷ್ಟ ಅಂತ ಕೇಳಕೆ ಅಂಜನ ಹಾಕುಸ್ತರಂತೆ ಅಂತ ಗೊತ್ತಾತು. ಅಂಜನ ಅಂದ್ರೆ ಇಪ್ಪತ್ನಾಕ್ ಥರ ಕಾಳಿನಿಂದ ಮಾಡಿದ್ದಂತೆ. ಎಂಥದೊ ಎಣ್ಣೆ ಹಾಕಿ ತೆಯ್ತರಂತೆ. ಅದ ಮಾಡನು ಮಂತ್ರವಾದಿ. ಆತ ಬಂದ. ಮಂಡಲ

ಬರೆದ. ಮಧ್ಯೆ ಏನೇನೋ ಪೂಜಿಸಿದ. ಒಂದು ಕಡೆ ದೊಡ್ಡ ಹಣತೆ. ನನ್ನಕರ್ದ! ಬಾರ್ಲ ಹುಡ್ಗ ಅಂತ. ನಿನಗೆ ಬುದ್ದಿ ಜಾಸ್ತಿನೊ ಕಡ್ಮೆನೊ ಅಂತ ಕೇಳ್ದ. ಅವ್ನು ತಲ್ವಾಕ ಬಡ್ಡಿಮಗ. ಅದೇನ್ ಮಾಡ್ತಿರೊ ಮಾಡಿ ಅಂದ್ರು ಅಲ್ಲಿದ್ದ ಗಂಡಸ್ರು. ತಲೆ ಎತ್ತಿ ಅವನ ಮುಖ ನೋಡ್ತಿನಿ! ಅವ್ನು ನಮ್ಮಪ್ಪನ ಫ್ರೆಂಡ್ ಆಗಿದ್ದ. ನುಗ್ಗೆಹಳ್ಳಿ ಕಡೆ ಧಿಡಗ, ಪಡಗ ಕಡೆವ್ನು ಅಂತ ತಿಳಕೊಂಡ ಜ್ಞಾಪ್ಕ.

ಲೇ ಹುಡ್ಗ ನಿನ್ನ ಎಡಗೈ ಅಂಗೈಗೆ ಅಂಜನ ಹಾಕ್ತಿನಿ. ದೀಪದ ಬೆಳಕಿಗೆ ಕೈ ಹಿಡ್ಕಂಡು ಕೂತ್ಗೊ ನಾನು ಏನೇನೊ ಕೇಳ್ತಿನಿ. ನಿನ್ಗೆ ಏನೇನು ಆ ಅಂಜನದೊಳ್ಗೆ ಕಾಣುತ್ತೊ ಹೇಳ್ಬೇಕು ತಿಳಿತಾ ? ತಂಟೆ ತರಲೆ ಮಾಡಬಾರ್ದು. ಅಂಗೆ ತಂಟೆ ಮಾಡಿದ್ರೆ ನೆತ್ತ್ಲ ಕಕ್ಕಂಡು ಬಿದ್ ಬಿಡ್ತಿಯಾ. ಜೋಪಾನ, ಹೆದ್ರಿಕೆ ಬ್ಯಾಡಕಣ್‌ಲ್ಲಾ. ಏನೇನೊ ಹೇಳಿದ. ನಿಂಬೆ ಹಣ್ಣುಗಳ ಮಂತ್ರಿಸಿದ. ಕೂದು ಕೂದು ಸಿಕ್ಕಾಬಟ್ಟೆ ಮಂಡಲದ ಮ್ಯಾಲೆ ಬಿಸಾಕಿದ. ಹಿಡ್ಕೊ ಕೈ ದೀಪದ ಬೆಳಕಿಗೆ ಎದುರಾಗಿ. ದೀಪದ ದಪ್ಪ ಬೆಳಕು ಹಿಂಗೈಗೂ ತೆಳು ಮಿಣಿ ಬೆಳಕು. ಅಂಗೈ ಒಳಕ್ಕೂ ತೂರಿ ಬರುತ್ತಿತ್ತು.

ಈಗ ಏನ್ ಕಾಣುತ್ತೊ? ನಾನು ಅಂಜನದ ಮೇಲೆಯೆ ದಪ್ಪ ಕಣ್ಣು ಬಿಟ್ಟುಕೊಂಡು ನೋಡ್ತಾ ಇದ್ದಿನಿ. ಹೆದರಿಕೆಯಾಯಿತು. ಅಂಜನದ ಒಳಗೆ ದೊಡ್ಡ ದೊಡ್ಡ ಕಂಡಿ ಕಂಡಿ ಹಲ್ಲುಗಳನ್ನು ಬಿಟ್ಟುಕೊಂಡ ಹಳೆ ಹೆಂಗಸು. ಈಗ ಏನ್ ಮಾಡ್ತಾ ಅವ್ಳೆ? ಯಪ್ಪ, ಆಕಳಿಸ್ತಾ ಅವ್ಳೆ. ಹೆಂಗವ್ಳೊ ? ತೀರಾ ಮುದ್ಕಿನೂ ಅಲ್ಲ ಹುಡುಗೀನೂ ಅಲ್ಲ. ಯಡಪ್ರಾಯ್ವಾ? ಹೂಂ. ತಲೆ ಮೇಲೆ ಏನೈತೆ ? ಕಂಕ್ಳಲಿ ಹಳೆ ಶಾಲೆ ಗಂಟು ಐತೆ. ಯಾವ ಕಂಕ್ಳಲಿ ? ಎಡದ ಕಡೆ. ಬಲ್ದಕಡೆ ? ಬಲಗೈಲಿ ನೊಣ ಹೊಡ್ಕತಾ ಅವ್ಳೆ. ಥೂ ನಿನ್ನ ಲೌಡಿ ಮಗ್ನೆ, ಸರ್ರ್ಯಾಗಿ ಹೇಳು. ಗೌಡರಿಗೆ ಅದು ಆಕಸ್ಮಿಕವಾಗಿ ಸತ್ತ ತನ್ನ ಚಿಕ್ಕವ್ವನ ದೆವ್ವ ಎಂದು ಗೊತ್ತಾಗಿತ್ತು. ಅವಳ ಆಸ್ತಿ ಪಾಲು ಇವರಿಗೆ ಸೇರಿತ್ತು. ಗೌಡರು ತುಂಬಾ ಹೆದರಿಕೊಂಡಂತಿದ್ದರು. ಈಗೇನ್ ಮಾಡ್ತಾ ಐತ್ಲಾ ಎಂದ ಆ ನಮ್ಮಪ್ಪನ ಫ್ರೆಂಡು ಮಂತ್ರವಾದಿ. ಅಯ್ಯೋ ಥಕಥೈ ಅಂತ ಕುಣಿತಾ, ನೆಗಿತಾ ಬಾಯಿಕಿಸ್ಗಂಡು ಬತ್ತಾ ಇದೆ... ಸುತ್ತ ಕುಳಿತಿದ್ದ ಹೆಂಗಸರು ದಡಬಡ ಎದ್ದರು. ಕುಕ್ಕರಗಾಲಲ್ಲಿ ಕೂತಿದ್ದ ಗಂಡಸರು ಎದ್ದರು. ಉಳಿದವರು ಬೆಚ್ಚಿದಂತಿದ್ದರು.

ಎಲಾ ಇದ್ರ್ರಾವುನ್ನ... ನನ್ನ ಮಗಂದು ಅದೆಂಗ್ ನನ್ ಕೈ ಮೀರಿ ಹೋಗುತ್ತೆ ನೋಡ್ಕತಿನಿ. ಮಂತ್ರವಾದಿ ತನ್ನ ಚೀಲವೊಂದರಿಂದ ಮಂತ್ರದ ಕೈ (ಬಸರಿ ಕೈ) ತೆಗೆದು ಹೊರಕ್ಕೆ ಮಡಗಿದ. ನಿಂಬೆ ಹಣ್ಣು ಕೂದ. ಮಂತ್ರಿಸಿದ. ಇಡೀ ಮಂಡಲದ ಸುತ್ತ ದಾರ ಕಟ್ಟಿದ. ಲೌಡಿಯನ್ನು ಕುಡಾಕಿದ್ದಿನಿ ಗೌಡ್ರೆ, ನೀವೇನು ಹೆದ್ರಿಕಬ್ಯಾಡಿ ಅಂದ. ಈಗೇನು ಕಾಣುತ್ತಾ ಅಂದ ನನ್ನ ಕಡೆ ನೋಡಿ. ಏ ಹಿಂದ್ಕೆ ಹೊಂಟ್ಲು ಕನಣ್ಣ ಅಂದೆ. ಎಲ್ಗೆ ಹೋತಳಂತೆ ಅಂತಹೇಳಿ ಇನ್ನೇನೋ ಮಂತ್ರಿಸಿದ. ಅವಳು ಕೈಕಾಲು ಮುರಕೊಂಡವಳಂತೆ ಗಂಟನ್ನೂ ಕೆಳಕ್ಕೆ ಎಸೆದು ಮುದಿರಿಕೊಂಡು ಕೂತಳು. ಮುಂದೆ ಏನ್ಮಾಡಿದ್ರು ಅಂತ ನನಗೂ ಗೊತ್ತಿಲ್ಲ.

ನಾನು ಎಚ್ಚರವಾದಾಗ ಚಾಪೆ ಮೇಲೆ ತಂದು ಮಲಗಿಸಿದ್ದರು ಅಂತ ಗೊತ್ತಾಯ್ತು.

ತೋಟದ ಹತ್ತಿರ ಆಡು ಮೇಸುವ ಕೂನಯ್ಯ ಸಿಕ್ಕಿದ. ಅವನು ಭಾರಿ ಘಾಟಿ ಮುದುಕ. ಏನಾಯ್ತು ಆವೊತ್ತು ನಿಮ್ ಗೌಡ್ರ ಮನೆಲಿ ಅಂತ ಕೇಳಿದ. ಏನೂ ಗೊತ್ತಿಲ್ಲ ನಂಗೆ ಅಂದೆ. ಮಾಡಿದ್ದ ಅನುಬೌಸ್ತನೆ ಬುಡು ಅಂದ. ಮಗಾ ದೆವ್ವಗಳ ಸವಾಸ ಸುಮ್ನೆ ಅಲ್ಲಪ್ಪ, ಅವುಗಳ ಕೈಗೆ ಸಿಕ್ರೆ ಹೆತ್ತೊಗ್ಬೇಕು ಅಂದ. ನಿಂಗೆಂಗ್ ಗೊತ್ತಜ್ಜ ಅಂದೆ. ಅವ್ನು ಹೇಳ್ತಹೋದ. ನಮ್ ದೊಡ್ಡ ಬಾರೆ ಗೋಪಾಲಸ್ವಾಮಿ ಗುಡ್ಡ ನೋಡಿದ್ದಿಯಲ್ವ ಅಲ್ಲೊಗ ಮುನಿಯಪ್ಪ ದೇವಸ್ಥಾನ ಐತಲ ಅಲ್ಲೊಗ ಹೆಚ್ಚು ಕಡ್ಮೆ ಹಳ್ಳ ಇಳ್ದು ಹಳ್ಳ ಹತ್ತಿ ಹೋದ್ರೆ ಎಂಟ್‌ಹತ್ ಮೈಲಿ ಬರಬಹುದು. ಹೂಂ. ಅಮಾಸೆ ದಿವ್ಸ ಜಡೆಮುನಿ ಮುನಿಯಪ್ಪ ದೇವಸ್ಥಾನದಿಂದ ಗೋಪಾಲಸ್ವಾಮಿ ದೇವಸ್ಥಾನಕ್ಕೆ ಪೂಜೆಗೆ ಹೋಗ್ತಾನೆ. ಅವನನ್ನ ದೆವ್ವಗಳು ಅಡ್ಡೆ ಮ್ಯಾಲೆ ಹೊತ್ಕಂಡ್ ಹೋತವೆ. ಕೊಳ್ಳಿ ದೆವ್ವಗಳು ಅದ್ಕೆ ಬೆಳ್ಕಹಿಡಿತವೆ. ಒಳ್ಳೆ ದೆವ್ವಗಳು ಅಂತ ಅವೆ. ಅವು ನಾದಸ್ವರ ಊದ್ತವೆ. ಆ ದಾರಿಲಿ ಮನುಷ್ರು ಸಿಕ್ಕಂಗಿಲ್ಲ. ಸಿಕ್ಕಿದ್ರೆ ಪಡಚ. ಅದ್ಯಾಕಂಗೆ ಅಜ್ಜ. ಅದ್ಹಂಗೆಯ ಕಣೊ.

ಇಂಗೆ ಒಂದ್ಸರಿ ಇಬ್ರು ಅದೇನಾಗುತ್ತೆ ನೋಡೇಬುಡನ ಅಂತ ಹೋದ್ರಂತೆ. ಆ ಜಡೆ ಮುನಿಯ ಬೆಳಕ ನೋಡ್ಲಾರ್ದೆ ಒಬ್ಬ ಭಯ ಆಗಿ ಕಣ್ ಮುಚ್ಗಂಡು ಸ್ವಾಮಿ ಕಾಪಾಡಪ್ಪ ಅಂತ ಮುಖವ ನೆಲ್ಕೆ ಅಮಿಕಂಡು ಭದ್ರಗೆ ಮಲ್ಲಿಕಬುಟ್ನಂಕೆ ಕೈ ಮುಕ್ಕಂಡು. ಇನ್ನೊಬ್ಬ ಅದೇಸ್ ಕಡಿತನೆ ಈ ಜಡೆ ಮುನಿ ಅಂತ ಎದ್ದ ನಿಂತ್ಗಂಡು ನೋಡಿದ್ನಂತೆ. ಜಡೆ ಮುನಿ ಆಕಡೆ ಹೋಗಿ ಈ ಕಡೆ ನೋಡಿದ್ರೆ, ಕೈ ಮುಕ್ಕಂಡು ಮಲಿಕಂಡಿದ್ನಲ ಅವ್ನು ಹೆವ್ರಿ ಹೇತ್ಗಬುಟ್ಟುದ್ನಂತೆ ತೆಳ್ಗೆ. ಆದ್ರೆ ಕೈ ಮುಗುದುದ್ನಲ ಆ ಕೈ ತುಂಬ ಹೊನ್ನಿತ್ತಂತೆ. ಇವ್ನಿದ್ನಲ ಮೆಡ್ರಗಣ್ ಬುಟ್ಕಂಡು ನೋಡಕೆ ಹೋಗಿದ್ದನು ಅವ್ನು ರಕ್ತ ಕಕ್ಕ್ಯಂಡು ಸತ್ ಬಿದ್ದಿದ್ನಂತೆ.

ಬಿ. ಎ. ಓದ್ವಾಗ ವಿಜ್ಞಾನ ಅಂತ ಒಂದ್ ಬುದ್ದಿ ಬಂತಲ್ಲ. ಯಾವುದ್ನೂ ವಿಜ್ಞಾನ ಅನ್ನದೆ ಮೊದಲಾಯ್ತು. ಈ ಹಳ್ಳಿ, ಹಳ್ಳಿಜನ, ಹಳ್ಳಿ ಬದ್ಕು ಎಂಬುದೆಲ್ಲ ಮೂಢ ಅನ್ನಕೆ ಶುರು ಮಾಡಿದರು. ನನಗೂ ಯಾಕೊ ಅನುಮಾನ ಶುರುವಾಯ್ತು ನರಿಕತೆಯ ಮೊಸಳೆ ಥರ : ಒಂದ್ ಕಾಡ್ನಲ್ಲಿ ಒಂದ್ ನರಿ, ಒಂದ್ ಮೊಸ್ಳೆ ಇದ್ವಂತೆ. ನರಿ ಗುಹೆನಲ್ಲಿ ಇತ್ತು. ಮೊಸಳೆ ಹೊಂಡದಲ್ಲಿ ಇತ್ತು. ಒಂದ್ ದಿವ್ಸ ನರಿಗೆ ಬಾಯಾರ್ಕೆ ಆಗಿ ಹೊಂಡ್ಕೆ ನೀರ್ ಕುಡಿಯನ ಅಂತ ಬಂತು. ನೀರ್ಗೆ ಇಳಿದು ನೀರ ಕುಡಿತು. ಇನ್ನೇನು ಹೊರಿಕೆ ಬರಬೇಕು ಯಾವುದೋ ಪ್ರಾಣಿ ತನ್ನ ಒಂದು ಕಾಲನ್ನು ಹಿಡಿದುಕೊಂಡಿರೋದು ಗೊತ್ತಾಯ್ತು. ನರಿಗೆ ಗೊತ್ತಾಗಿ ಹೋಯಿತು. ಎಲಾ ಮಂಗ ಮೊಸಳೆ ನನ್ನ ಕಾಲು ಹಿಡಿಯೋದು ಬಿಟ್ಟು ಹೊಂಗೆ ಬೇರು ಹಿಡಿದೆಯಲ್ಲಾ ಎಂದು ಅಣಕ ಮಾಡಿತು. ಮೊಸಳೆಗೆ ಅನುಮಾನ ಶುರುವಾಯ್ತು. ನರಿ ಹೇಳಿದ್ದೆ ಸರಿ ಅಂದುಕೊಂಡಿತ್ತು. ನರಿಯ ಕಾಲನ್ನು ಬಿಟ್ಟು ಪಕ್ಕದಲ್ಲೆ ಇದ್ದ ಹೊಂಗೆಯ ಬೇರನ್ನು ಹಿಡಿಯಿತು. ನರಿ ಭೇಷ್, ಅಂತ ಹೇಳಿ ತಪ್ಪಿಸಿಕೊಂಡು ಹೋಯಿತು.

ಮೊಸಳೆಗೆ ಭಾರಿ ಅವಮಾನ ಆಯಿತು. ಈ ನರಿಯನ್ನು ಹೇಗಾದರೂ ಮಾಡಿ ತಿನ್ನಬೇಕೆಂದು ಯೋಚಿಸಿತು. ಒಂದು ದಿನ ನರಿ ಇಲ್ಲದಿದ್ದಾಗ ಅದರ ಬಿಲಕ್ಕೆ ಹೋಗಿ ಸೇರಿಕೊಂಡಿತು. ಸಂಜೆ ಆಗಿ ನರಿ ತನ್ನ ಬಿಲದ ಕಡೆಗೆ ಬಂತು. ನೋಡುತ್ತೆ ಯಾವುದೋ ಪ್ರಾಣಿಯ ಹೆಜ್ಜೆ ತನ್ನ ಬಿಲದ ಕಡೆಗೆ ಹೋಗಿವೆ. ಸರಿ, ಉಪಾಯ ಹೊಳೆಯಿತು. ಏ ಬಿಲವೆ, ಏ ಬಿಲವೆ ಎಂದು ಮೂರು ಸಾರಿ ಕೂಗಿತು. ಬಿಲ ಮಾತಾಡುತ್ತದಾ ? ಜೋರಾಗಿ ನರಿ ಅಂದುಕೊಂಡಿತು. ಪ್ರತಿದಿನ ಬಂದು ನಾನು ಕರೆದಾಗ ಈ ಬಿಲ ಓ ಅನ್ನುತ್ತಿತ್ತು. ಒಳಕ್ಕೆ ಬಾ ಅಣ್ಣಾ ಎಂದು ಕರಿತಾ ಇತ್ತು. ಇವತ್ತು ಕರೆಯಲ್ಲಿಲ್ಲ. ಇನ್ನ ಈ ಬಿಲದ ಸಾವಾಸ ಸಾಕು, ಹೊರಡುತ್ತೇನೆ ಅಂತು.

ಮಂಗ ಮೊಸಳೆ ಬಾ ಅಣ್ಣಾ ಅಂತ ಕರೆಯಿತು. ನೀನು ಇರುವುದು ನಿಜ ಆಯ್ತಾ ಅಂತ ನರಿ ಒಣಗಿದ ಹುಲ್ಲು ತಂದು ಆ ಬಿಲಕ್ಕೆ ಹಾಕಿ ಬೆಂಕಿ ಹಚ್ಚಿತು.

ವಿಜ್ಞಾನದ ಮಾತುಕೇಳಿ ನಾನು ಅಮ್ಮ ಕಲಿಸಿಕೊಟ್ಟ ವೈದ್ಯ ವಿದ್ಯೆ ಮತ್ತು ನಾನು ಅನುಭವಿಸಿದ ಜೀವನ ವಿದ್ಯೆನೆಲ್ಲ ಒಲೆಗೆ ಹಾಕಿ ಉರಿಸಿ ಬೀದಿಗೆ ಚಲ್ಲಂತೆ ಮಾಡಿಬಿಟ್ಟೆ ಅದು ಮೊಸಳೇನೆ ಆಗಿರಬಹುದು ! ಹುಲಿ, ಸಿಂಹ, ಚಿರತೆ, ಕರಡಿಗಳನ್ನು ನಮ್ಮ ಬದುಕುವ ಭಯಕ್ಕಾಗಿ ಕೊಂದುಬಿಟ್ಟೆವಲ್ಲ. ಅವು ಪರಿಸರ ಸೃಷ್ಟಿಸಿದ ಶಕ್ತಿಜೀವಿಗಳು. ಪರಿಸರ ನಿರಂತರತೆಯ ಸರಪಳಿಯ ಕೊಂಡಿಗಳು. ಹಾಗಂದರೆ ನಮ್ಮ ಕೊಂಡಿಯೂ ಕಳಚಿ ಕೊಂಡಿದೆ ಅಂತ ತಾನೆ ? ಪ್ರಬಲ ಜೀನ್ಸ್‌ಗಳ ನಾಶಮಾಡುತ್ತ ನಾವು ಅಮೆರಿಕದವರ ಥರ, ದುರ್ಬಲ ಜೀನ್ಸ್ ಪ್ರಾಣಿಗಳು ಮಾತ್ರ ಬದುಕುವ ಉಪಾಯ ಮಾಡಿದ್ದೇವಾ ? ಹಾಗಲ್ಲದಿರಲಿ.

ವಿಜ್ಞಾನದ ಯದ್ವಾತದ್ವಾ ಬುದ್ಧಿ ಪರೀಕ್ಷೆಗೆ ಒಳಗಾದಂತೆಲ್ಲ ವಿಚಾರ ಅನ್ನೋದೊಂದು ಬುದ್ಧಿ ಮೂಡಿತು. ಬುದ್ಧ, ಬಸವ, ಗಾಂಧಿ, ಲೋಹಿಯಾ, ಅಂಬೇಡ್ಕರ ಮತ್ತು ಕುಪ್ಪಜ್ಜ (ಕುವೆಂಪು) ತಮ್ಮ ತಲೆಗೆ ಬಂದರಲ್ಲ. ನಾನೂ ಎಂ.ಎ. ಸಾಹಿತ್ಯ ಕನ್ನಡ, ಜಾನಪದ ಅಂತ ಸಾಮಾನ್ಯ ಮನುಷ್ಯನ ಸಾಂಸ್ಕೃತಿಕ ಬುದ್ಧಿಯ ಕಲಿಯುತ್ತಾ ಹೋದೆನಲ್ಲ. ಆಗ ದೆವ್ವಗಳು ಬಂದು ನನ್ನ ಮೆಟ್ಟಿಕೊಂಡವು. ಒಂದು ದಿನ ದೆವ್ವ ಮಶಾಣದಲ್ಲಿವೆ ಅಂತ ನಾನು ನನ್ನ ಸ್ನೇಹಿತ ಶ್ರೀರಂಗಪುರ ಹುಡುಕಿಕೊಂಡು ಹೋದೊ. ಅಂದು ಪೂರ್ಣಿಮೆ ಮಂಗಳವಾರ . ನಮ್ಮ ಶ್ರೀರಂಗಪುರ ಅವರ ಮನೆಯಲ್ಲಿ ಬಾಡಿನ ಊಟ, ಚನ್ನಾಗಿ ಉಂಡೆವು. ಹೊರಗಡೆ ತಿಂಗಳ ಬೆಳಕು ತಿಳಿಯಾಗಿ ಹರಡಿಕೊಂಡಿತ್ತು. ತಿಂದದ್ದು ಇಳಿಸಲು ಬಾರೆ ಕಡೆ ನಡೆದು ಹೋದೊ. ಮಸಾಣ ಸಿಕ್ಕಿತು. ಯಾಕೊ ತುಂಬ ಖುಷಿ ಆಯಿತು. ರಾತ್ರಿ ಹತ್ತು ಗಂಟೆ ಇರಬಹುದು. ಅಲ್ಲೆಲ್ಲಾ ಸಮಾಧಿಗಳು. ಒಂದೊಂದು ಸಮಾಧಿ ಹತ್ತಿರವೂ ಹೋಗಿ ದೆವ್ವಗಳ ಮಾತನಾಡಿಸಿದೆವು. ಅಲ್ಲಿಯ ಗಿಡಗಳ ಅಲ್ಲಾಡಿಸಿದೆವು. ಬಿದ್ದಿದ್ದ ಕಲ್ಲುಗಳ ಝಾಡಿಸಿದೆವು. ದೊಡ್ಡ ಮೌನ. ಸಮಾಧಿಗಳ ಪರವಾಗಿ ಒಂದು ಸಣ್ಣ ಹಕ್ಕಿ, ಜೀರುಂಡೆ ಅಥವ

ಇನ್ನೇನಾದರೂ ಕ್ರಿಮಿ ಕೀಟವಾದರೂ ಮಾತಾಡಬಾರದ! ಛೆ! ಸಮಾಧಿಗಳ ಪರ ಯಾರೂ ಇಲ್ಲ ಎಂದು ವ್ಯಥೆಯಾಯಿತು. ಇನ್ನೊಂದು ಗಳಿಗೆಯಲ್ಲಿ ನಾವೇ ಇದ್ದರೆ ಹೇಗೆ ಅನಿಸಿತು. ಅದನ್ನು ತೋರಿಸಿಕೊಳ್ಳೋದು ಹೇಗೆ ?

ಆ ಮಸಾಣದ ಪಕ್ಕದಲ್ಲಿ ಒಂದು ಹಲಸಿನ ಮರ ಇತ್ತು. ಅದರ ಕೆಳಗಡೆ ಕಾಲುದಾರಿ. ತುಂಬ ಮೇಲೆ ನಾಲ್ಕು ಮೈಲಿ ಆಚೆ ಬಸ್ಸಿಳಿದವರು ಆ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ನಾವು ತೀರ್ಮಾನಿಸಿದೆವು. ಇವತ್ತು ಯಾರಾದರೂ ಬರಲಿ ಅಂತ. ಜನ ಬಂದರು. ನಾವಿಬ್ಬರೂ ಬಂಡೆ ಮರೆಯಲ್ಲಿ ಕೈಕಲ್ಲುಗಳ ಗುಡ್ಡೆ ಹಾಕಿಕೊಂಡು ಕೂತೆವು. ಇನ್ನೇನು ಅವರು ಹಲಸಿನ ಮರ ಸಮೀಪಿಸಬೇಕು ನಿರಂತರ ಆ ಮರಕ್ಕೆ ಕಲ್ಲು ಹೊಡೆದೆವು. ನನ್ನ ಸ್ನೇಹಿತ ವಾಲಿ ಬಾಲ್ ಪ್ಲೇಯರ್ ಬೇರೆ !

ತಿರುಗಿ ಬಳಸಿ ರಾತ್ರಿ ಹನ್ನೆರಡರ ಸುಮಾರಿಗೆ ಊರ ಒಳಕ್ಕೆ ಹೋದೆವು. ಊರ ಜನ ಎಲ್ಲ ಅಲ್ಲಿ ಸೇರಿದ್ದರು. ನಮ್ಮ ದಾರಿಹಾದು ಬಂದವರು ಹೇಳುತ್ತಿದ್ದರು. ದೆವ್ವ ಅಲ್ಲದೆ ಅಷ್ಟು ಜೋರಾಗಿ ಕಲ್ಲು ಹೊಡೆಯಲು ಸಾಧ್ಯ ಇಲ್ಲ. ತಿಂಗಳ ಬೆಳಕಿದೆ ದೆವ್ವಗಳು ಕೆರಳಿವೆ. ಇನ್ನು ಯಾವಾಗ ಊರ ಕಡೆಗೆ ಬರುತ್ತವೊ ! ಎಚ್ಚರದಿಂದ ಇರಬೇಕು.

ಎಂ.ಎ. ಓದುವಾಗ ಕುವೆಂಪು ಹತ್ತಿರಕ್ಕೆ ಬಂದರು. ಬುದ್ಧ, ಬಸವ, ಲೋಹಿಯಾ, ಅಂಬೇಡ್ಕರ್ ಅಷ್ಟಿಷ್ಟು ಪರಿಚಿತರಾದರು. ಎಂ.ಎ. ಯೂ ಮುಗಿಯಿತು. ಪಾಸುಮಾಡುವ ವಿದ್ಯಾರ್ಥಿಯಿಂದ ಪರೀಕ್ಷೆಗೆ ಒಳಗಾಗುವ ಮೇಷ್ಟ್ರು ಆದೆ. ಫೋಕ್‌ಲೋರು ಪಾಠ ಹೇಳಬೇಕಾಯ್ತು. ಜರ್ಮನಿಯ ತತ್ವಜ್ಞಾನಿ ಜೆ.ಜಿ.ಹೆರ್ದರ್ ಅವನ ಕರೆಯ ಕುರುಗಳು , ಗ್ರಿಮ್ ಸಹೋದರರನ್ನು ಓದುತ್ತಾ ಹೋದೆ.

ನಮ್ಮದು ಅಂತ ಒಂದು ಸಂಸ್ಕೃತಿ ಇತ್ತು. ಅದರೊಳಗೆ ನಮ್ಮದೆಂಬ ಧರ್ಮ. ಅದು ಕುರಿಗಾಹಿಗಳಿಂದ ಆರಂಭಗೊಂಡಿರಬಹುದು. ಅಲ್ಲಿ ನಮ್ಮ ನಂಬಿಕೆಗಳು, ನಡವಳಿಕೆಗಳು, ವಿಚಾರಗಳು ಮತ್ತು ಅವನ್ನು ಪ್ರತಿನಿಧಿಸೊ ದೇವರುಗಳಿದ್ದವು. ಕ್ರಿಶ್ಚಿಯನ್ ಧರ್ಮ ಬಂತು ನೋಡಿ ! ಕ್ರಿಸ್ತ ಶುದ್ಧ, ಶ್ರೇಷ್ಠ ದೈವವಾದ. ನಮ್ಮ ದೈವಗಳು ಅಪ ಮೌಲ್ಯಗೊಂಡೊ, ಕ್ಷುದ್ರ ದೇವರುಗಳು ಅನ್ನಿಸಿಕೊಂಡೊ. ಕೊನೆಗೆ ಅವು ದೇವತ್ವದಿಂದ ದೆವ್ವತ್ವದ ಸ್ಥಿತಿಗೆ ಬಂದೊ - ಹೀಗೆ ಅವರು ಒಂದೇ ಸಮನೆ ಒಳಗೊಳಗೇ ಅತ್ತು.

ಬುದ್ಧ ಲೋಹಿಯಾ, ಅಂಬೇಡ್ಕರ್, ಕುವೆಂಪು ಓದಿದಾಗ ಕೂಡ ನಮ್ಮ ಜೀವ ತಣ್ಣಗಾಗಿ ಬಿಸಿಯಾಗುತ್ತಿತ್ತು. ನಮ್ಮ ದೇವತೆಗಳು ಕಾಳಿ, ಕೂಳಿ, ಬೋಳಿ, ಬೋರ, ಬೀರ, ಮಂಕ, ಮಡಿಯ ಸ್ಥಿತಿಗೆ ಬಂದಿದ್ದೊ. ಮೇಲು ಜಾತಿಯ ದೇವರ ಕಾಲು ಕೆಳಗೆ ಕೂತು ಬಾಲ ಅಲ್ಲಾಡಿಸುತ್ತಿದ್ದೊ. ನಮ್ಮ ಹೆಣ್ಣು ದೇವತೆಗಳು ಕದ್ದುಮುಚ್ಚಿ ವೈದಿಕ ದೇವನನ್ನು ಇಟ್ಟುಕೊಂಡಿದ್ದೊ. ನಮ್ಮ ಜನರಿಂದಲೆ ಥು, ಛೀ ಅನ್ನಿಸಿಕೊಂಡಿದ್ದೊ. ಇದು ದೇವರುಗಳು

ದೆವ್ವವಾಗುವ ಪ್ರಕ್ರಿಯೆ.

ಬಸವಣ್ಣನನ್ನು ಅವನ ಕಡೆಯ ಧಾರ್ಮಿಕ ಚಳುವಳಿಯನ್ನು ನಾವು ಕೊಂಡಾಡಿದೆವು. ವಚನಕಾರರೇನು ಮಾಡಿದರು ? ನಮ್ಮ ಗ್ರಾಮ ದೇವತೆಗಳನ್ನು 'ಗ್ರಾಮ್ಯ' ದೇವತೆಗಳ ಮಾಡಿದರು. ಮಾರಿ ಮಸಣಿ, ಬೋರ ಕಾಳಿಯನ್ನು ಹರಾಜಿಗೆ ಹಾಕಿದರು. ಏಕದೈವಾರಾಧನೆಯಲ್ಲಿ ಬಹು ದೈವಾರಾಧನೆಯನ್ನು ಅಲ್ಲಗಳೆದರು. ದೇವತೆಗಳಾಗಿದ್ದವರು ಉದುರಿದರೆ ಎಲ್ಲಿಗೆ ಬೀಳಬೇಕು, ಏನಾಗಬೇಕು, ನಮ್ಮ ಮಾತೆ ಮಾರಿ ಏನಾದಳು ?

ಹಳ್ಳಿಯ ಮನೆಗಳ ಕದಗಳ ಮೇಲೆ ಒಂದು ಮೂರುನಾಮದ ಚಿತ್ರ ಇರುತ್ತದೆ. ಅದು ಏನು ? ಏಕೆ ಅಂತ ಕೇಳಿ.

ಮಾರಿಯಲ್ಲಿ ಕೂಗಿನ ಮಾರಿ ಅಂತ ಇದಾಳೆ. ಅವಳು ರಾತ್ರಿ ಜನ ಎಲ್ಲ ಮಲಗಿ ನಿದ್ರಿಸುವಾಗ ಊರಿಗೆ ಬರುತ್ತಾಳೆ. ಮನೆಮನೆ ಕದ ಎಣಿಸುತ್ತಾಳೆ. ಯಾವ ಕದದ ಮೇಲೆ ಮೂರು ನಾಮವಿಲ್ಲವೊ ಅದನ್ನು ಬಡಿಯುತ್ತಾಳೆ. ಒಳಗೆ ಮಲಗಿರುವ ವ್ಯಕ್ತಿಯೊಬ್ಬನ/ಳ ಹೆಸರಿಡಿದು ಮೂರುಸಾರಿ ಕೂಗುತ್ತಾಳೆ. ಆತ/ಅವಳು ಓ' ಅಂದರೆ ಸಾಕು. ಬೆಳಿಗ್ಗೆ ಸತ್ತು ಬೀಳುತ್ತಾರೆ. ಈ ಮಾರಿ ವಿಷ್ಣುವಿನ ಹತ್ತಿರವೂ ಹೋಗಿದ್ದಳಂತೆ. ಆತ ಸ್ನಾನ ಮಾಡುತ್ತಿದ್ದೇನೆ. ನಾಳೆ ಬಾ ಎಂದನಂತೆ. ನಾಳೆ ಬಾ ಎಂದು ತನ್ನ ಕದದ ಮೇಲೆ ಬರೆದನಂತೆ. ದಿನಾ ಬಂದರೂ 'ನಾಳೆ ಬಾ' ಅಂತಲೆ ಇರುವುದನ್ನು ಕಂಡು ಮತ್ತೆ ಮತ್ತೆ ಬರಲು ಸಾಕಾಗಿ ಬರಲೇ ಇಲ್ಲವಂತೆ. ಮಾರಿಗೆ ಹೇಳುವ ಈ ಕಥೆಯನ್ನು ವಿಷ್ಣು - ಶನಿ ಕುರಿತು ಹೇಳುತ್ತಾರೆ. ಆದ್ದರಿಂದ ವಿಷ್ಣುವಿನ ದಾರಿ ಹಿಡಿದು ಹಳ್ಳಿಗರು ಕೂಗಿನ ಮಾರಿ ಮತ್ತು ಶನಿಯಿಂದ ತಪ್ಪಿಸಿಕೊಳ್ಳಲು ಮನೆ ಬಾಗಿಲ ಕದದ ಮೇಲೆ ಮೂರು ನಾಮದ ಚಿತ್ರ ಬರೆದು ಅದರ ಕೆಳಗೆ 'ನಾಳೆ ಬಾ ' ಎಂದು ಬರೆಯುತ್ತಾರೆ.

ಇಲ್ಲಿ ಎರಡು ಅಂಶಗಳು ಇವೆ. ಒಂದು ಧರ್ಮಕ್ಕೆ ಮತ್ತೊಂದು ಧರ್ಮ ಪರ್ಯಾಯ ಮತ್ತು ಉತ್ತಮ ಆಯ್ಕೆ ಎಂದು ಹೇಳುವುದು. ಎರಡನೆಯ ಕಾರಣ ಆಕ್ರಮಣಶೀಲ ಧರ್ಮ ನೆಲಧರ್ಮವನ್ನು ಭ್ರಷ್ಟಗೊಳಿಸುವುದು. ಈ ಭ್ರಷ್ಟಗೊಂಡ ಧರ್ಮದೊಳಗಿನ ದೇವರುಗಳೆಲ್ಲ ಮುಂದೆ ಕ್ರೂರ ಶಕ್ತಿಗಳು ಎನಿಸಿಕೊಳ್ಳುತ್ತವೆ. ಇವು ಮತ್ತೂ ಅಧಃ ಪತನ ಹೊಂದಿದರೆ ದೆವ್ವಗಳ ಸಾಲಿಗೆ ಸೇರುತ್ತವೆ. ಕರಾವಳಿಯ ಭೂತಾರಾಧನೆ ಎಂದರೆ ಮೂಲತಃ ದೈವಾರಾಧನೆ. ಇಲ್ಲಿಯ ಭೂತಗಳಿಗೆ ಕೆಟ್ಟ ಅರ್ಥ ಇಲ್ಲ. ವೈದಿಕ ಧರ್ಮದ ಆಗಮನದಿಂದ ಅವು ಎರಡನೆಯ ಸಾಲಿನ ದೈವಗಳು ಅಥವಾ ಭೂತಗಳಾಗಿವೆ. ಈ ಪ್ರದೇಶದ ಧರ್ಮಸ್ಥಳ, ಉಡುಪಿ, ಕೊಲ್ಲೂರು, ಮುರುಡೇಶ್ವರ, ಈ ಮುಂತಾದ ಕಡೆ ನೆಲಸಿರುವ ದೈವಗಳು ಆನಂತರದ ಕಾಲದಲ್ಲಿ ಬಂದವು. ಇವುಗಳ ಆಗಮನಕ್ಕೂ ಭೂ ಒಡೆತನದ ನೆಲೆ ನಿಲ್ಲುವಿಕೆಗೂ ಸಂಬಂಧ ಇದೆ.

ಧರ್ಮಸ್ಥಳದ ಅಣ್ಣಪ್ಪಸ್ವಾಮಿ ಮೂಲತಃ ಭೂತ. ಅಣ್ಣಪ್ಪ ಭೂತ ಎಂತಲೆ ಅದನ್ನು ಕರೆಯುತ್ತಾರೆ. ಮಂಜುನಾಥಸ್ವಾಮಿ ಅನಂತರ ಬಂದು ಸೇರಿಕೊಂಡ ನಾಥ ಮತ್ತು ಸ್ವಾಮಿ. ಇವನ ಹೆಸರಿನ ಹೋಲಿಕೆಯಿಂದಷ್ಟೆ ಅಣ್ಣಪ್ಪ ಭೂತವನ್ನು ಅಣ್ಣಪ್ಪಸ್ವಾಮಿ ಎಂದು ಕರೆಯುವುದು. ಅಲ್ಲಿಯ ಜನ ಮತ್ತು ಭಕ್ತರು ಮಾತಾಡುವಂತೆ ಎಲ್ಲ ಕೆಲಸ ಮಾಡುವವನು, ಜನಗಳ ಭೂತ, ಪ್ರೇತ, ಪೀಡೆ, ಪಿಶಾಚಿಗಳನ್ನು ಓಡಿಸುವವನು ಅಣ್ಣಪ್ಪ ಭೂತನೆ. ನೀವು ಮಂಜುನಾಥನ ಹತ್ತಿರ ಹೋದರೂ ಆ ಕೆಲಸ ಅಣ್ಣಪ್ಪನಿಗೆ ವಹಿಸಲ್ಪಡುತ್ತದೆಯಂತೆ. ಜನಪದ ದೈವಗಳು ಭೂತಗಳಾಗುವ - ಆದ ಪ್ರಧಾನ ಪ್ರಕ್ರಿಯೆಗೆ ಇದು ಸಾಕ್ಷಿ.

ಒಂದು ಜನಪದ ಸಮಾಜದಲ್ಲಿ ದೈವ, ಮನುಷ್ಯ ಮತ್ತು ಭೂತ ಒಟ್ಟೊಟ್ಟಿಗೆ ಹುಟುತ್ತವೆ. ಇವುಗಳ ಮಧ್ಯೆ ದೊಡ್ಡ ಅಂತರ ಇರುವುದಿಲ್ಲ. ಮನುಷ್ಯನಿಂದ ಪ್ರಮೋಷನ್ ಸಿಕ್ಕರೆ ದೈವವೂ ಡಿಮೋಷನ್ ಆದರೆ ಭೂತವೂ ಆಗುತ್ತಾರೆ. ಮನುಷ್ಯನಿಗೆ ಧರ್ಮ, ಆಯಸ್ಸು ಹೆಚ್ಚದರೆ ದೇವರು, ಆಯಸ್ಸು ಕಡಿಮೆಯಾದರೆ, ಆಸೆ ತೀರದೆ ಹೋದರೆ ಆಗ ದೆವ್ವ. ಇದರಲ್ಲಿ ಎರಡು ವಿಧ ಉಂಟು. ಸಾಮಾಜಿಕ ತ್ಯಾಗಕ್ಕೆ ಆಯಸ್ಸು, ಆಸೆ ತೀರದೆ ಸತ್ತವರು ಒಳ್ಳೆಯ ದೆವ್ವಗಳು. ವೈಯಕ್ತಿಕ ಕಾರಣಕ್ಕೆ ಆಯಸ್ಸು, ಆಸೆ ತೀರದೆ ಸತ್ತವರು ಕೆಟ್ಟ ದೆವ್ವಗಳು.

ಒಂದು ಒಡಕೊಳ್ಳದ ಒಟ್ಟು ಸಮಾಜದಲ್ಲಿ ದೈವ ಮತ್ತು ದೆವ್ವ ದೂರದೂರದ ಪರಿಕಲ್ಪನೆಗಳಲ್ಲ. ವಿಭಜಿತ ಸಮಾಜ ಪರಿಕಲ್ಪನೆಯಲ್ಲಿ ದೈವ ಒಂದು ಗುಣ, ದೆವ್ವ ಅದರ ವಿರದ್ಧ ಗುಣ. ಅಂದರೆ ದೈವವೊಂದು ಸಿದ್ಧ ಮಾದರಿ, ದೆವ್ವ ಮತ್ತೊಂದು ಸಿದ್ಧಿ ಮಾದರಿ. ಇಲ್ಲಿ ದೈವಗಳು ಅಮೃತ ಆಕಾಂಕ್ಷಿಗಳು...... ದೆವ್ವಗಳು ರಕ್ತ ಪಿಪಾಸುಗಳು. ದೈವಗಳದು ಬೆಳಕಿನ ರಾಜ್ಯ. ದೆವ್ವಗಳದು ಕತ್ತಲ ರಾಜ್ಯ. ಅವು ಕತ್ತಲ ರಾಜ್ಯದ ಪ್ರಜೆಗಳು. ಮನುಷ್ಯ ತನ್ನ ಕೊರತೆಗಳನ್ನು ಗೆಲ್ಲಲು, ತಪ್ಪುಗಳನ್ನು ಸರಿಪಡಿಸಿಕೊಳ್ಳಲು, ಒಂದು ದೆವ್ವ ಜಗತ್ತನ್ನು ಸೃಷ್ಟಿಸಿಕೊಂಡಿದ್ದಾನೆ. ಅಂದರೆ ದೆವ್ವ ನಮ್ಮದೇ ಒಂದು ಗುಣ, ನಮ್ಮದೇ ಒಂದು ವ್ಯಕ್ತಿತ್ವ ಬ್ಲಾಕ್ ಅಂಡ್ ವೈಟ್ ಜಗತ್ತನ್ನು ಕಲ್ಪಿಸಿಕೊಳ್ಳಲು ಹಾಗೂ ಕಟ್ಟಿಕೊಳ್ಳಲು ದೆವ್ವಗಳಿವೆ, ಇರುತ್ತವೆ.

# ೧೩. ಕುಲೆಯ ಆರಾಧನೆ ಅಥವಾ ಪಿತೃಪೂಜೆ

ಪಾಲ್ತಾಡಿ ರಾಮಕೃಷ್ಣ ಆಚಾರ್, ಮಾಡಾವು

---

ಭೂತಾರಾಧನೆಯ ಅಂಗವಾಗಿ ಬೆಳೆದು ಬಂದಿರುವ 'ಕುಲೆ'ಯ ಆರಾಧನೆಯು ತುಳುನಾಡಿನ ಸಂಸ್ಕೃತಿ ವಿಶೇಷ. ಸತ್ತವರ ಆತ್ಮವಾದ 'ಕುಲೆ'ಯ ಬಗ್ಗೆ ವೈವಿಧ್ಯಮಯ ಆಚರಣೆ, ನಂಬಿಕೆ, ನಿಷೇಧಗಳು ತುಳುನಾಡಿನಲ್ಲಿ ರೂಢಿಯಲ್ಲಿರುವುದನ್ನು ಲೇಖಕರು ಕಂಡಿರಿಸಿದ್ದಾರೆ. -ಸಂಪಾದಕ

---

ಸತ್ತವರ ಆತ್ಮವನ್ನು ಪೂಜಿಸುವ ಪದ್ದತಿ ಪುರಾತನ ಕಾಲದಿಂದಲೂ ಮಾನವ ಜನಾಂಗದಲ್ಲಿ ರೂಢಿಯಾಗಿ ಬಂದಿದೆ. ಪುರಾತನ ನಾಗರಿಕ ಕೇಂದ್ರಗಳೆಂದು ಪರಿಗಣಿಸಲ್ಪಟ್ಟ ಸ್ಥಳಗಳಲ್ಲಿ ನಡೆಸಿದ ಸಂಶೋಧನೆಗಳಿಂದ ಇದು ವ್ಯಕ್ತವಾಗಿದೆ. ತುಳು ನಾಡಿನಲ್ಲಿ ಸತ್ತವರನ್ನು ಆರಾಧಿಸುವ ಪಿತೃಪೂಜಾ ಪದ್ದತಿ ಈಗಲೂ ಇದೆ. ಮನುಷ್ಯ ಸಾವಿನೊಂದಿಗೆ ತನ್ನ ದೇಹವನ್ನು ಕಳೆದುಕೊಂಡರೂ ಕೂಡಾ ಅದೃಶ್ಯರೂಪದಲ್ಲಿ ಆತನ ಅಸ್ತಿತ್ವವಿರುತ್ತದೆ. ಆತ ನಿರಾಕಾರನಾಗಿ ಜೀವಂತವಿರುವ ತನ್ನ ಕಿರಿಯರ ಇಷ್ಟವನ್ನು ಈಡೇರಿಸುತ್ತಾನೆ. ಹಾಗೆ ಆತನಿಗೆ ಕಾಲಕಾಲಕ್ಕೆ ಅನ್ನಪಾನಾದಿಗಳನ್ನು ನೀಡದೆ ಹೋದರೆ ಅನಿಷ್ಟವನ್ನು ತಂದೊಡ್ಡುತ್ತಾನೆ ಎಂದು ಇಲ್ಲಿನ ಜನ ನಂಬುತ್ತಾರೆ.

ತುಳುನಾಡಿನಲ್ಲಿ ಸತ್ತವನ "ಆತ್ಮಕ್ಕೆ ಕುಲೆ" ಎಂದು ಕರೆಯುತ್ತಾರೆ. ಶವ ಸಂಸ್ಕಾರದ ಹನ್ನೆರಡು ದಿನಗಳ ಮೇಲೆ ಸತ್ತವರ ಆತ್ಮ ಕುಲೆಯ ಅಸ್ತಿತ್ವಕ್ಕೆ ಬರುತ್ತದೆ. ಬಹಳ ಹಿಂದಿನ ಕಾಲದಲ್ಲಿ ತುಳುನಾಡಿನಲ್ಲಿ ಶವ ಸಂಸ್ಕಾರ ಮಾಡಿ ಗೋರಿ ಕಟ್ಟಿದ ಸ್ಥಳದಲ್ಲಿ ಸತ್ತ ಹನ್ನೆರಡನೆಯ ದಿನ ಕುಲೆಯ ವೇಷ ಹಾಕಿಸಿ ಹರಿಜನರಿಂದ ಕುಣಿತ ಏರ್ಪಾಡು ನಡೆಸುವ ಪದ್ಧತಿ ಇತ್ತು. ಡೋಲು ಬಡಿದುಕೊಂಡು ಸುಣ್ಣ ಮಸಿಯಿಂದ ವೇಷ ಹಾಕಿ ಕುಣಿಯುವ ಈ ಕುಣಿತಕ್ಕ "ಕುಲೆ ನಲಿಕೆ" ಎನ್ನುತ್ತಿದ್ದರು.

ಸತ್ತ ಹದಿನಾರನೆಯ ದಿನ ಕುಲೆಯನ್ನು ಮನೆಯೊಳಗೆ ಕರೆಯುವ ಒಂದು ಕ್ರಮವಿದೆ. ಇದಕ್ಕೆ ಹದಿನಾರು ಕುಲೆಗಳೊಂದಿಗೆ ಸೇರಿಸುವ ಕ್ರಮ ಎನ್ನುತ್ತಾರೆ. ಮನೆಯೊಳಗೆ ಹದಿನಾರು ಎಲೆಗಳಲ್ಲಿ ಅನ್ನ, ಕೋಳಿಪಲ್ಯ ಬಡಿಸಬೇಕು. ಹದಿನೈದನ್ನು ಒಂದೇ ಸಾಲಿನಲ್ಲಿ ಬಡಿಸಿ ಒಂದನ್ನು ಬೇರೆಯೇ ಬಡಿಸಬೇಕು. ಮನೆಯ ಹಿರಿಯವ ಅಂಗಳದಿಂದ ಸತ್ತವನನ್ನು ಕರೆದು ಮನೆಯೊಳಗಡೆ ಹಿಂದೆ ಹಿಂದೆ ಬಂದು "ಹಿರಿಯರೊಂದಿಗೆ ಕೂಡಿಕೋ" ಎಂದು ಪ್ರಾರ್ಥನೆ ಮಾಡಿಕೊಂಡು ಹದಿನೈದು ಎಡೆಗೆ ಒಂದನ್ನು ಸೇರಿಸಿ ಹದಿನಾರು ಮಾಡುತ್ತಾನೆ. ಸತ್ತ ಹದಿನಾರನೆ ದಿನದಂದು ಕುಲೆ ಮನೆಗೆ ಪ್ರವೇಶಿಸಿ ಮನೆಯೊಳಗೆ ವಾಸ ಮಾಡುತ್ತದೆಂದು ನಂಬಿಕೆ.

ಮನೆಯಲ್ಲಿ ಯಾವುದೇ ವಿಶೇಷ ಪಲ್ಯ, ಪಾಯಸ, ಭಕ್ಷ್ಯ ಮಾಡಿದರೂ ಒಂದು ಎಲೆಯಲ್ಲಿ ಊಟಕ್ಕೆ ಮೊದಲು ಕತ್ತಲೆ ಕೋಣೆಯಲ್ಲಿ ಬಡಿಸಿಟ್ಟು ಆಮೇಲೆಯೇ ಮನೆಯವರು ಊಟ ಮಾಡುವುದು ರೂಢಿ. ಒಂದು ವೇಳೆ ಹಾಗೆ ಬಡಿಸದೆ ಊಟ ಮಾಡಿದರೆ ಹೊಟ್ಟೆನೋವು ಪ್ರಾರಂಭವಾಗುತ್ತದೆ. ಇದಕ್ಕೆ ಕುಲೆಗಳ ಕೊದಿ ಬಿದ್ದಿದೆ ಎನ್ನುತ್ತಾರೆ. ಕೊದಿ ಎಂದರೆ ತುಳುವಿನಲ್ಲಿ ಆಸೆ ಎಂದರ್ಥ. ಈ ರೀತಿ ಹೊಟ್ಟೆನೋವುಂಟಾಗಿ ಹೊಟ್ಟೆಯುಬ್ಬರಿಸಿಕೊಂಡು ಬಂದಲ್ಲಿ ಅದಕ್ಕೆ ಕೊದಿ ತೆಗೆಯುವ ಒಂದು ಕ್ರಮವಿದೆ. ಹೊಟ್ಟೆಯುಬ್ಬರಿಸಿಕೊಂಡು ಬಂದವನಿಗೆ ಊಟ ಮಾಡಿಸಿ ಊಟ ಮಾಡಿದ ಎಂಜಲು ಬಟ್ಟಲಲ್ಲಿ ಒಂದು ಬತ್ತಿ ಹಚ್ಚಿಟ್ಟು ಬಟ್ಟಲಿಗೆ ನೀರು ಹಾಕಿ ಆ ಬತ್ತಿಯ ಮೇಲೆ ಒಂದು ಮಣ್ಣಿನ ಕೊಡಪಾನ ಮುಚ್ಚಿಡುತ್ತಾರೆ. ಬತ್ತಿ ನಂದಿದ ಕೂಡಲೇ ಗೊರ ಗೊರ ಶಬ್ದದೊಂದಿಗೆ ನೀರು ಕೊಡಪಾನದೊಳಗೆ ಹೋಗುತ್ತದೆ. ಆಗ ಕೊದಿ ಹೋಯಿತೆಂದು ನಂಬುತ್ತಾರೆ.

ಕುಲೆಗಳನ್ನು ನಂಬುವವರು ವರ್ಷಕ್ಕೆ ಒಂದೆರಡು ಸಲ ಕೋಳಿಪಲ್ಯ ಮಾಡಿ ಅನ್ನ ಬಡಿಸುವ ಎಡೆ ಇಡುವ ಕ್ರಮವಿರುತ್ತದೆ. ಅಲ್ಲದೆ ಭೂತಗಳಿಗೆ ಅಗೆಲು ಹಾಕುವ ಸಂದರ್ಭದಲ್ಲಿ ಅಂದರೆ ಎಡೆ ಹಾಕುವ ಸಂದರ್ಭದಲ್ಲಿ ಅಡ್ಡ ಸಾಲಿನಲ್ಲಿ ಮೂರು ಎಲೆಗಳಲ್ಲಿ ಬಡಿಸಿ ಪ್ರಾರ್ಥನೆ ಮಾಡಿಕೊಳ್ಳುವಾಗ "ಗುರುಕಾರ್ನವ" ರೆಂದು ಗೌರವ ಸೂಚಿತವಾಗಿ ಕರೆಯುವುದು ಪದ್ಧತಿ.

ಕುಲೆಗೆ ಆಕಾರವಿಲ್ಲದಿದ್ದರೂ ಅದು ಬೇಕಾದ ಆಕಾರದಲ್ಲಿ ಕಾಣಿಸಿಕೊಳ್ಳಬಹುದು. ಹೆಚ್ಚಾಗಿ ಅದು ಕಪ್ಪು ನಾಯಿಯಂತೆ, ಬಿಳಿ ಮುಸುಕು ಹಾಕಿದ ವ್ಯಕ್ತಿಯಂತೆ ಕಾಣಿಸಿಕೊಳ್ಳುತ್ತದಂತೆ. ರಾತ್ರಿ ಹೊತ್ತಿನಲ್ಲಿ ಒಬ್ಬಂಟಿಗನಾಗಿ ಕಾಡುದಾರಿಯಲ್ಲಿ ಹೋಗುವಾಗ ಕಲ್ಲೆಸೆತದ ಸದ್ದು ಮಾಡಿ, ಮರಗಳನ್ನು ಅಲುಗಾಡಿಸಿ ಅಥವಾ ಬೇರೆ ಬೇರೆ ರೂಪದಲ್ಲಿ ಕಾಣಿಸಿಕೊಂಡು ಹೆದರಿಸುವುದಿದೆ. ಇದನ್ನು ಕಂಡು, ಕೇಳಿ ಹೆದರಿದ ವ್ಯಕ್ತಿಗಳಿಗೆ ಜ್ವರ ಬರುತ್ತದೆ. ಕೆಲವೊಮ್ಮೆ ಮನೆಯ ಒಳಗಡೆ ಕೂಡಾ ಕುಲೆ ಸದ್ದು ಮಾಡುವುದೆಂದಿದೆ. ಕುಲೆ ಕೂಗುವುದೂ ಇದೆ. ಇದರ ಕೂಗು ಸಿಳ್ಳುಹಾಕುವ ಶಬ್ದದಂತೆ ಕೇಳುತ್ತದೆ. ಅದಕ್ಕಾಗಿಯೇ ರಾತ್ರಿ ಹೊತ್ತು ಸಿಳ್ಳುಹಾಕಬಾರದೆಂದು ಹಿರಿಯರಾಡಿಕೊಳ್ಳುತ್ತಾರೆ.

ನಡು ಮಧ್ಯಾಹ್ನದ ಬಿಸಿಲಿಗೆ ಅಥವಾ ಮುಸ್ಸಂಜೆಯ ಹೊತ್ತಿಗೆ ಸ್ಮಶಾನದ ಬದಿಯಿಂದ ಇಲ್ಲವೇ ನಿರ್ಜನ ಪ್ರದೇಶದಿಂದ ಒಬ್ಬಂಟಿಗನಾಗಿ ಹಾದು ಹೋದಂತಹ ವ್ಯಕ್ತಿಗೆ ಕಣ್ಣು ಉರಿಯುತ್ತದೆ. ತಲೆ ಸಿಡಿಯುತ್ತದೆ. ಜ್ವರ ಬರುತ್ತದೆ. ಇದಕ್ಕೆ ಹ್ಯೊಗೆ ಬಿಸಾಡಿದ್ದು ಎನ್ನುತ್ತಾರೆ. ಇದನ್ನು ಹೋಗಲಾಡಿಸಲು ಹ್ಯೊಗೆ ತೆಗೆಯುವ ಒಂದು ಕ್ರಮವಿದೆ. ಒಂದು ಬಟ್ಟಲಲ್ಲಿ ಸುಣ್ಣಮಿಶ್ರಿತ ಅರಿಶಿನ ನೀರನ್ನು (ಕುರ್ದಿ) ಇಟ್ಟುಕೊಳ್ಳುವುದು. ಹ್ಯೊಗೆ ತಾಗಿದ ವ್ಯಕ್ತಿಯನ್ನು ಅಂಗಳದಲ್ಲಿ ನಿಲ್ಲಿಸಿ ಹ್ಯೊಗೆ ಸೊಪ್ಪು ಎಂಬ ಒಂದು ಜಾತಿಯ ಸೊಪ್ಪನ್ನು ಅರಶಿನ ನೀರಿನಲ್ಲಿ

ಅದ್ದಿ ವ್ಯಕ್ತಿಯ ತಲೆಯಿಂದ ಕಾಲಿನವರೆಗೆ ಪೂಸಿ ಸೊಪ್ಪನ್ನು ಆ ನೀರಿಗೇ ಹಾಕಬೇಕು. ನಂತರ ನೀರನ್ನ ಚೆಲ್ಲಿದಾಗ ಬಟ್ಟಲ ಅಡಿಯಲ್ಲಿ ಹ್ಯೊಗೆ ಇರುತ್ತದೆ. ಇದನ್ನು ಒಲೆಗೆ ಹಾಕಬೇಕು. ಹ್ಯೊಗೆ ತಾಗಿದ ವ್ಯಕ್ತಿಗೆ ಗುಣವಾಗುತ್ತದೆ ಎಂದು ನಂಬುತ್ತಾರೆ.

ಕೆಲವೊಮ್ಮೆ ಮಕ್ಕಳು ನಿದ್ರೆಯಲ್ಲಿ ಬೆಚ್ಚಿಬೀಳುತ್ತಾರೆ. ಹೆದರಿಕೊಂಡಾಗ ಜ್ವರ ಬರುತ್ತದೆ. ಹಾಗೆ ಆದಲ್ಲಿ ಇದಕ್ಕೆ ಬತ್ತಿನಂದಿಸುವ ಒಂದು ಕ್ರಮವಿದೆ. ಬತ್ತಿನಂದಿಸಲು ಒಂದು ಬಟ್ಟಲು ಕುರ್ದಿ, ಬಟ್ಟೆಯ ಬತ್ತಿಗಳು, ಗಾಳ್ಯರ್ವೆ (ತೆಂಗಿನ ಗರಿಗೆ ಬಟ್ಟೆ ಸುತ್ತಿ ಅರ್ಧ ನೇತಾಡಿಸಿ ಎಣ್ಣೆಯಲ್ಲಿ ಅದ್ದಿ ತೆಗೆಯುವುದು) ಸ್ವಲ್ಪ ಹೊದ್ಲು ಇವಿಷ್ಟು ಬೇಕು. ಬೆಚ್ಚಿ ಬೀಳುವ ಅಥವಾ ಜ್ವರ ಬರುವ ವ್ಯಕ್ತಿಯನ್ನು ಮೆಟ್ಟಲಲ್ಲಿ ಕುಳ್ಳಿರಿಸಿ ಹೊದ್ಲನ್ನು ಆತನಿಗೆ ನಿವಾಳಿಸಿ ಕುರ್ದಿಗೆ ಹಾಕುತ್ತಾರೆ. ನಂತರ ಬತ್ತಿಯನ್ನು ಹಚ್ಚಿ ವ್ಯಕ್ತಿಯ ಎದುರು ಹಿಡಿದು ಕುರ್ದಿಯನ್ನು ಆ ಉರಿಗೆ ಸಿಂಪಡಿಸಿ ಕುರ್ದಿಗೆ ಹಾಕುತ್ತಾರೆ. ನಂತರ ಗಾಳ್ಯರ್ವೆಗೆ ಬೆಂಕಿಕೊಟ್ಟು ಅದನ್ನು ವ್ಯಕ್ತಿಯ ಎದುರು ಹಿಡಿದು ಕುರ್ದಿಯನ್ನು ಜೋರಾಗಿ ಸಿಂಪಡಿಸುವುದು. ಹೀಗೆ ಸಿಂಪಡಿಸಿದಾಗ ಭರ್ರೆಂಬ ಶಬ್ದ ಉಂಟಾಗುತ್ತದೆ. ನಂತರ ಆ ಗಾಳ್ಯರ್ವೆ (ಗಾಳಿ+ಅರಿವೆ) ಯನ್ನು ಕುರ್ದಿಗೆ ಹಾಕಿ ದೂರಕ್ಕೆ ಚೆಲ್ಲುವುದು. ಬರೇ ಸಣ್ಣ ಮಕ್ಕಳಾದರೆ ಕುರ್ದಿಗೆ ಉರಿಯುತ್ತಿರುವ ಗೆರೆಡೆಯನ್ನು ಹಾಕಿದರೂ ಆಗುತ್ತದೆ. ಈ ರೀತಿ ಮಾಡುವುದರಿಂದ ಹೆದರಿಕೊಂಡು ಜ್ವರ ಬರುತ್ತಿರುವ ವ್ಯಕ್ತಿಗಳಿಗೆ ಗುಣವಾಗುತ್ತದೆ.

ಕುಲೆಗಳು ಇದ್ದಲ್ಲಿಯೇ ಇರಬೇಕೆಂದಿಲ್ಲ. ಅವು ಒಂದು ಮನೆಯಿಂದ ಇನ್ನೊಂದು ಮನೆಗೆ ಸಂಚಾರ ಮಾಡುತ್ತವೆ. ಹೆಚ್ಚಾಗಿ ಹೆಣ್ಣು ಕೊಟ್ಟ ಮನೆಗೆ ಹೋಗುತ್ತವೆ. ಮನುಷ್ಯರಿಗೆ ಕುಲೆ ಹಿಡಿಯುವ ಕ್ರಮವೂ ಇದೆ. ಕುಲೆ ಹೆಚ್ಚಾಗಿ ಹೆಂಗಸರಿಗೆ ಹಿಡಿಯುತ್ತದೆ. ಕುಲೆ ಹಿಡಿಯಿತೆಂದರೆ ಜೋರಾಗಿ ಆಕಳಿಕೆ ಬರುತ್ತದೆ. ನಂತರ ತಲೆ ಸುತ್ತುತ್ತದೆ, ಕಣ್ಣು ಕತ್ತಲೆ ಹೋಗುತ್ತದೆ. ಸ್ಮೃತಿ ಇಲ್ಲದಂತಾಗುತ್ತದೆ. ಕುಲೆ ಹಿಡಿದು ಮಾತನಾಡುವುದೂ ಇದೆ. ಹೀಗೆ ಮಾತ ನಾಡಿದರೆ ತಾನು ಯಾರು, ಯಾಕೆ ಬಂದುದೆಂಬ ಎಲ್ಲಾ ವಿಚಾರವನ್ನೂ ತಿಳಿಸುತ್ತದೆ. ಕೆಲವು ಮಾತನಾಡುವುದಿಲ್ಲ. ಬರೇ ಅಳುವುದು ಇಲ್ಲವೇ ನಗುವುದು ಮಾತ್ರ. ಹೆಚ್ಚಾಗಿ ಎಲ್ಲಾ ಕುಲೆಗಳೂ ನೀರು ಅಥವಾ ಎಳನೀರು ಕುಡಿದು ಬಿಟ್ಟು ಹೋಗುತ್ತವೆ. ಕುಲೆ ಬಿಟ್ಟುಹೋದ ಮೇಲೆ ಕುಲೆ ಹಿಡಿದ ವ್ಯಕ್ತಿ ನಿದ್ದೆಯಿಂದ ಎಚ್ಚೆತ್ತವನಂತೆ ವರ್ತಿಸುತ್ತಾನೆ. ನಮಗೆ ಅರಿವಿಲ್ಲದೇನೋ ಕೆಲವೊಮ್ಮೆ ಕುಲೆಗಳು ನಮ್ಮನ್ನು ಪೂಸಿ ಹೋಗುವುದೂ ಇದೆ. ಹೀಗೆ ಮಾಡಿದರೆ ನಮ್ಮ ಮೈಮೇಲೆ ಮುಳ್ಳಿನಿಂದ ಗೆರೆ ಎಳೆದಂತೆ ಗಾಯಗಳು ಕಂಡು ಬರುತ್ತವೆ. ಅದು ಉರಿಯಲು ಪ್ರಾರಂಭಿಸಿದಾಗಲೇ ನಮಗೆ ಗೋಚರವಾಗುವುದು. ಕುಲೆಗಳು ತೊಂದರೆ ಕೊಡಲೆಂದೇ ಬರುವುದಿಲ್ಲ. ಪ್ರೀತಿಯಿಂದ ಬಂದು ಸೋಕಿ ಹೋಗುವುದೂ ಇದೆ. ಕುಲೆ ಹಿಡಿದಾಗ ಬಯ್ಯುವುದರಿಂದ, ಕಸಬರಿಕೆ, ಚಪ್ಪಲಿಯಿಂದ ಹೊಡೆಯುವುದರಿಂದ ಕೂಡಲೇ ಬಿಟ್ಟುಹೋಗುತ್ತದೆಂದು ಕೂಡ ನಂಬುತ್ತಾರೆ.

ಸಣ್ಣ ಪ್ರಾಯದಲ್ಲಿ ಸತ್ತವರ ಕುಲೆಗಳು ಮದುವೆಯ ಪ್ರಾಯಕ್ಕೆ ಮುಟ್ಟಿದಾಗ ತನಗೆ ಮದುವೆ ಮಾಡಿಸಬೇಕೆಂದು ಕೇಳುವುದೂ ಇದೆ. ಹೀಗೆ ಕೇಳಿದಲ್ಲಿ ಜೋಡಿಯಾಗುವ ಸಂಪ್ರದಾಯದ ಕುಲೆಗಳು ಯಾವ ಮನೆಯಲ್ಲಿವೆ ಎಂದು ಹುಡುಕಬೇಕಾಗುತ್ತದೆ. ಆ ನಂತರ ಆ ಮನೆಯವರೊಡನೆ ಸಂಬಂಧ ಯಾಚಿಸಿ ಮದುವೆಯ ದಿನ ನಿಶ್ಚೈಸುತ್ತಾರೆ. ಗಂಡಿನ ಮನೆಯಿಂದ ದಿಬ್ಬಣ ಹೋಗಬೇಕು. ಹೋಗುವಾಗ ಅಡಿಕೆ ಹೂವಿನ ಹಾಳೆಯಲ್ಲಿ ಸೀರೆ, ರವಿಕೆ, ಕರಿಮಣಿ, ತಾಳಿ, ಕಾಲುಂಗುರ, ಹೂ, ಬಳೆ, ಇತ್ಯಾದಿಗಳನ್ನು ಕೊಂಡೊಯ್ಯಬೇಕು. ಹೆಣ್ಣಿನ ಕಡೆಯವರು ಅಂಗಿ, ಧೋತಿ ಸಿದ್ಧಪಡಿಸಬೇಕು. ಎರಡು ನಾಗಸಂಪಿಗೆಯ ಕೋಲುಗಳನ್ನು ಹೆಣ್ಣು ಗಂಡುಗಳಾಗಿ ಸಿಂಗರಿಸಿ ಧಾರೆ ಎರೆಯುತ್ತಾರೆ. ನಂತರ ಆ ಕೋಲುಗಳನ್ನು ಗಂಡಿನ ಮನೆಗೆ ತಂದು ಜೊತೆಯಾಗಿ ನೆಡುತ್ತಾರೆ. ಈ ಕ್ರಮಕ್ಕೆ ಕುಲೆಗಳ ಮದುವೆ ಎನ್ನುತ್ತಾರೆ.

ಸಣ್ಣ ಮಕ್ಕಳು ಸತ್ತುಹೋದರೆ ಅವರ ಕುಲೆಗಳಿಗೆ "ಕನ್ಯಾವು" ಎನ್ನುತ್ತಾರೆ. ಕನ್ಯಾವುಗಳಿಗೆ ವರ್ಷಕ್ಕೊಮ್ಮೆ ಬಡಿಸುವ ಕ್ರಮವಿದೆ. ಇದಕ್ಕೆ ಸಣ್ಣ ಎಲೆಗಳಲ್ಲಿ ಅನ್ನ ಮತ್ತು ನುಗ್ಗೆಸೊಪ್ಪಿನ ಪಲ್ಯ ಬಡಿಸುತ್ತಾರೆ. ಮರದ ಕುಡ್ತೆ (ಅಕ್ಕಿ ಅಳೆಯುವ ಸಾಧನ) ಗೆ ಕಲ್ಲು ಹಾಕಿ ಕಟಕಟ ಶಬ್ದ ಮಾಡಿ ಎಲೆಗೆ ಸುತ್ತು ತರುತ್ತಾರೆ. ನಂತರ ಕೋಣೆಯ ಬಾಗಿಲು ಹಾಕಿ ಹೊರಗೆ ಬಂದು ಸ್ವಲ್ಪ ಹೊತ್ತು ಕಳೆದ ಮೇಲೆ ಬಾಗಿಲು ತೆರೆದು ಮನೆಯ ಮಕ್ಕಳಿಗೆ ಅದನ್ನು ಉಣ್ಣಿಸುತಾರೆ. ಮನೆಯಲ್ಲಿ ಮಗುವಿಗೆ ಊಟ ಕೊಡುವ ಮೊದಲು ಒಂದು ತುತ್ತು ಅನ್ನವನ್ನು ಮಗುವಿನ ತಾಯಂದಿರು ಮಗುವಿನ ತಲೆ ನಿವಾಳಿಸಿ ಹೊರಗೆ ಚೆಲ್ಲಿ ಮತ್ತೆ ಊಟ ಕೊಡುತ್ತಾರೆ.

ಕುಲೆಗಳು ಕೆಲವೊಮ್ಮೆ ಭೂತಗಳ ಕೈಯಲ್ಲಿ ಸಿಲುಕಿಕೊಂಡು ಪಾಡುಪಡಬೇಕಾದ ಪ್ರಸಂಗ ಬರುತ್ತದೆ. ಭೂತಗಳು ಇತರರಿಗೆ ಉಪದ್ರ ಕೊಡಲು ಹೋದಾಗ ಈ ಕುಲೆಗಳು ಕೂಡಾ ಅದರೊಂದಿಗೆ ಹೋಗಿ ಉಪದ್ರ ಕೊಡುತ್ತವೆ. ರಾಹು, ಗುಳಿಗ, ಕಲ್ಲುರ್ಟಿ ಮುಂತಾದ ಶಕ್ತಿಗಳ ಕೈಯಲ್ಲಿ ಸದಾ ಹಲವಾರು ಕುಲೆಗಳಿರುತ್ತವೆ. ತಮ್ಮ ಪಿತೃಗಳು ಭೂತದ ಕೈಯಲ್ಲಿ ಸಿಲುಕಿ ಕೊಂಡಿದ್ದಾವೆ ಎಂದು ತಿಳಿದಾಗ ಮನೆಯವರು ಮಂತ್ರವಾದಿಯನ್ನು ಕರೆದು ಅವನ್ನು ಬೇರ್ಪಡಿಸುತ್ತಾರೆ.

ಕೆಲವೊಮ್ಮೆ ಕುಲೆಗಳು ಕನಸಿನಲ್ಲಿ ಬಂದು ನಡೆಯುವಂತಹ ಸಂಗತಿಗಳನ್ನು ಹೇಳಿ ಹೋಗುತ್ತವೆಯಂತೆ.

ಕುಲೆಗಳು ಉಪದ್ರ ಕೊಡಲು ಬಂದುದು ಗೊತ್ತಾದೊಡನೆ ಮನೆಯ ಹಿರಿಯರು "ಈಡು" ಕಟ್ಟುತ್ತಾರೆ. ಭೂತದ ಕೋಣೆಯಲ್ಲಿ ನಿಂತು "ಯಾವ ಉಪದ್ರ ? ಅದಕ್ಕೆ ಏನು ಪರಿಹಾರವಾಗಬೇಕೆಂಬುದನ್ನು ಜೋಯಿಸರಲ್ಲಿ ಕೇಳಿ ಪರಿಹಾರ ಮಾಡುತ್ತವೆ"

ಎಂದು ಹೇಳಿ ಒಂದಿಷ್ಟು" ಹಣವನ್ನು ಮುಡಿಪಾಗಿ ಇಡುತ್ತಾರೆ. ಇದಕ್ಕೆ ಈಡು ಕಟ್ಟುವುದು ಎನ್ನುತ್ತಾರೆ.

ಹರಿಜನರ ಕುಲೆಗಳು ತುಂಬಾ ಪ್ರಭಾವಶಾಲಿಗಳು. ಹೆಚ್ಚು ಉಪದ್ರ ಕೊಡುವಂಥವುಗಳು. ಹಾಗಾಗಿಯೇ "ಹೋದಲ್ಲಿ ಬಿಡದು ಹೊಲೆಯರ ದೆವ್ವ" ಎಂಬ ನಾಣ್ನುಡಿ ಉಂಟಾಗಿದೆ. ವ್ಯಕ್ತಿ ಜೀವಂತ ಇರುವಾಗ ಯಾವ ವೃತ್ತಿ, ಪ್ರವೃತ್ತಿ, ಗುಣ, ನಡತೆಗಳನ್ನು ಹೊಂದಿರುತ್ತಾನೋ ಅದನ್ನೇ ಸತ್ತಮೇಲೆಯೂ ಹೊಂದಿರುತ್ತಾನೆಂದು ನಂಬುತ್ತಾರೆ.

ಅದೃಶ್ಯ ಶಕ್ತಿಗಳಲ್ಲಿ ಅತ್ಯಂತ ಕಿರಿದಾದುದು ಕುಲೆ. ಕುಲೆಗಿಂತ ಹೆಚ್ಚು ಉಪದ್ರಕಾರಿ ಯಾದುದು ಪೀಡೆ. ಅಪಮೃತ್ಯುವಿನಲ್ಲಿ ಬಾಯಿಗೆ ನೀರಿಲ್ಲದೆ ದಾರಿಯಲ್ಲಿ ಬಿದ್ದು ಸತ್ತವರು ಪೀಡೆಯಾಗುತ್ತಾರೆ. ಪೆಟ್ಟು ಲಡಾಯಿಯಲ್ಲಿ ಸತ್ತವರು "ರಣ"ಗಳಾಗುತ್ತಾರೆ. ಬ್ರಾಹ್ಮಣ ಬಾಯಿಗೆ ನೀರಿಲ್ಲದೆ ಸತ್ತರೆ "ಬ್ರಹ್ಮರಕ್ಕಸ" ರಾಗುತ್ತಾರೆ. ಪ್ರಾಯಕ್ಕೆ ಬಂದು ಹುಡುಗಿಯರು ಸತ್ತರೆ "ಯಕ್ಷಿಣಿ"ಯರಾಗುತ್ತಾರೆ. ಇವೆಲ್ಲ ಮಧ್ಯಮ ವರ್ಗದ ಶಕ್ತಿಗಳು.

ಇನ್ನು ಅತ್ಯಂತ ಶಕ್ತಿ ಹೊಂದಿದವುಗಳು ಭೂತಗಳು ಮತ್ತು ದೇವತೆಗಳು. ಯಾವುದೋ ಕಾರ್ಯನಿಮಿತ್ತ ಭೂಲೋಕಕ್ಕೆ ಬಂದು ಇಲ್ಲಿಯೇ ಕಾರಣಿಕ ತೋರಿಸಿ ಶಾಶ್ವತ ನೆಲೆನಿಂತವರು ದೇವತೆಗಳು. ಗಂಧರ್ವ, ಗಂಧರ್ವ ಕನ್ಯೆ, ಯಕ್ಷ, ಯಕ್ಷಕನ್ಯೆ, ನೀರಕನ್ಯೆ, ಸತ್ಯದೇವತೆ ಮುಂತಾದವುಗಳು. ಭೂತಗಳಲ್ಲಿ ಸಾಮಾನ್ಯವಾಗಿ ಮೂರು ವಿಧದವುಗಳಿವೆ. ಅತ್ಯಂತ ಪರಾಕ್ರಮ ತೋರಿಸಿ ನಾಡಿಗಾಗಿ ಸೇವೆ ಸಲ್ಲಿಸಿ ವೀರಮರಣವನ್ನಪ್ಪಿದವರು, ಇಲ್ಲವೇ ಮಾಯವಾದವರು ಭೂತಗಳೆಂದು ಆರಾಧಿಸಲ್ಪಡುತ್ತಾರೆ. ಬೊಬ್ಬರ್ಯ, ಕಲ್ಕುಡ, ಕಲ್ಲುರ್ಟಿ, ಕೋಟಿ ಚೆನ್ನಯ್ಯ, ಕಜುಂಬಕಾಂಜ, ಕಾಂತಬಾರೆ-ಬೂದಾಬಾರೆ, ಕೊಡದಬ್ಬು, ತನ್ನಿಮಾನಿಗ, ಅಕ್ಕೆರಸು ಪೂಂಜೆದಿ, ಸೊನ್ನೆ, ಗಿಂಡೆ, ಅಬ್ಬಗೆದಾರಗೆ, ಕೋಟಿ ಪೂಂಜ, ಬಿಕ್ಕುಬಲ್ಲಾಳ, ನಾಡು, ಜೋಗಿ ಪುರುಷ, ಕೊರಗ ತನಿಯ, ಬಸ್ತಿ ನಾಯಕ, ಅಣ್ಣಪ್ಪ, ತೋಮಜ್ಜ ಗುರ್ಕಾರ ಭೂತ, ಮದ್ಮಾಳ್, ಬಿಕ್ರ ಮೇಲಾಂಟ, ಮಾಯಂದಾಳ್, ಕಂಬೆರ್ಲು ಇವರೆಲ್ಲ ಇಂಥವರು. ಲೋಕೋದ್ಧಾರಕ್ಕಾಗಿ ಶಿವ, ವಿಷ್ಣು, ದೇವಿಯರಿಂದ ಭೂಮಿಗೆ ಕಳುಹಿಸಲ್ಪಟ್ಟ ಗಣಗಳು ಕೆಲವು. ಚಾಮುಂಡಿ, ರಕ್ತೇಶ್ವರಿ, ಜೂಮಾವತಿ, ಪಂಜುರ್ಲಿ, ಉಳ್ಳಾಗುಲು ಮುಂತಾದವರು. ಇವುಗಳಲ್ಲಿ ಕೆಲವು ಶಿವ ದೇವಿಯರ ಅಂಶವನ್ನೇ ಹೊಂದಿದವರು ಇದ್ದಾರೆ. ಇನ್ನು ಕೆಲವು ಹೊರನಾಡಿನಿಂದ ಬಂದವುಗಳು. ವಿಷ್ಣುಮೂರ್ತಿ, ಶಿರಾಡಿ ಭೂತ, ಜಾರಂದಾಯ ಮುಂತಾದವುಗಳು.

ಭೂತಗಳ ವಾಸಸ್ಥಾನಕ್ಕೆ ಭೂತದ ಗುಡಿಗಳು, ಮಾಡಗಳು, ಬನಗಳು, ಕಲ್ಲುಗಳು, ಇರುತ್ತವೆ. ಅವುಗಳಿಗೆ ಕೋಲ, ನೇಮ, ಕೊಡುವ ಪದ್ಧತಿ ಇರುತ್ತದೆ. ಅವುಗಳ ಕತೆ,

ಕಾರಣಿಕ, ಪವಾಡಗಳನ್ನು ಸಾರುವ ಸಂಧಿ, ಪಾಡ್ದನಗಳಿರುತ್ತದೆ. ಆದರೆ ಕುಲೆಗಳಿಗೆ ಇವಾವುದೂ ಇರುವುದಿಲ್ಲ.

ಕುಲೆಗಳು ತಮ್ಮ ಶಕ್ತಿಯಿಂದ ಮನುಷ್ಯರನ್ನು ಕೊಲ್ಲಲು ಶಕ್ತವಲ್ಲ. ಕೇವಲ ರೋಗ ತರಲು, ಕ್ಷೀಣೈಸಲು, ಕೆಲಸಕ್ಕೆ ತೊಂದರೆಪಡಿಸಲು ಮಾತ್ರ ಶಕ್ತಿಹೊಂದಿರುತ್ತದೆ.

ಕುಲೆಗಳನ್ನು ನಂಬುವ ಪ್ರತಿ ಮನೆಯವರೂ ದೀಪಾವಳಿಗೆ ಕುಲೆಗೆ ಅವಲಕ್ಕಿ ಬೆಲ್ಲ ಬಡಿಸುತ್ತಾರೆ. ಬೇಷ (ಮೇಷ) ತಿಂಗಳ ೧೦ ರಂದು (ಪತ್ತನಾಜೆ) ಹಲಸಿನ ಕೊಟ್ಟಿಗೆ ತಿಂಡಿ ಮಾಡಿ ಬಡಿಸುತ್ತಾರೆ. ದೀಪಾವಳಿ ಅಮಾವಾಸ್ಯೆಯ ಮುಂದಿನ ಅಮಾವಾಸ್ಯೆಯ ದಿನ ಅಕ್ಕಿ ಕಡೆದು ತೆಗೆದಾದ ಬಳಿಕ ಒಂದು ಗೆರಡೆ ಹಿಟ್ಟನ್ನು ಕಲ್ಲಿನಲ್ಲಿಯೇ ಕನ್ಯಾವುಗಳಿಗಾಗಿ ಇಡುತ್ತಾರೆ. ಇಡದೆ ಹೋದರೆ ದೇವರು ಆ ಕನ್ಯಾವುಗಳನ್ನು ಸುಡುವ ಕಾವಲಿ ಮೇಲೆ ಕುಳ್ಳಿರಿಸಿ ಕಷ್ಟಕೊಡುತ್ತಾರೆಂದು ನಂಬುತ್ತಾರೆ.

ಕುಲೆಯ ಉಪದ್ರ ಕಂಡುಬಂದೊಡನೆ ಅದನ್ನು ನಿವಾರಿಸಲು ಮಂತ್ರವಾದಿಗಳು ಭಸ್ಮ ಮಂತ್ರಿಸಿ ಕೊಡುತ್ತಾರೆ. ಆ ಭಸ್ಮವನ್ನು ಪೀಡಿತರಿಗೆ ಹಾಕಿದರೆ ನಿವಾರಣೆಯಾಗುತ್ತದೆ. ಕುಲೆಯ ಉಚ್ಚಾಟನೆಗಾಗಿ ಮಂತ್ರವಾದಿಗಳು ತಾಯಿತ (ಉರ್ಕು) ಮಂತ್ರಿಸಿ ಕೊಡುತ್ತಾರೆ. ಇದರಿಂದ ಪರಿಹಾರವಾಗುತ್ತದೆ.

ಚಾಪೆಯ ಅಡಿಯಲ್ಲಿ ಕಸಬರಿಗೆ ಇಡುವುದರಿಂದ ಕುಲೆಗಳ ಉಪದ್ರವಿರುವುದಿಲ್ಲ. ಎರಡು ಚಾಪೆ ಹಾಕುವಾಗ ಮಧ್ಯೆ ಎಡೆಬಿಟ್ಟರೆ ಅದರಲ್ಲಿ ಕುಲೆಗಳು ಬಂದು ಮಲಗುತ್ತವೆ ಎಂದು ನಂಬುತ್ತಾರೆ. ತೊಟ್ಟಿಲಿಗೆ ಚೆನ್ನಾಯಿರ ಬಳ್ಳಿ (ಒಂದು ಜಾತಿಯ ಮುಳ್ಳಿರುವ ಅಗಲೆಲೆಯ ಬಳ್ಳಿ)ಯನ್ನು ಕಟ್ಟುತ್ತಾರೆ. ಇದರಿಂದಾಗಿ ಮಕ್ಕಳಿಗೆ ಕುಲೆಗಳ ಉಪದ್ರವಿರುವುದಿಲ್ಲ.

ಕಾಸರಕನ ಮರ (STRYCHNINE TREE) ಕುಲೆಗಳಿಗೆ ಬಹಳ ವಿರೋಧವಾದ ಮರ. ಇದು ತುಳು ನಾಡಿನಲ್ಲಿ ಹಾಗೂ ಎಲ್ಲಾ ಮಾನ್ಸೂನು ಪ್ರದೇಶದಲ್ಲಿ ಬೆಳೆಯುವ ಅಗಲೆಲೆಯ ಎಲೆ ಉದುರಿಸುವ ಜಾತಿ. ಮಧ್ಯಮ ಗಾತ್ರಕ್ಕೆ ಬೆಳೆಯುವ, ಕಾಯಿಯಾಗಿರುವಾಗ ಹಸಿರಾಗಿಯೂ, ಹಣ್ಣಾದಾಗ ಹಳದಿ ಬಣ್ಣವುಳ್ಳ ಕಹಿಫಲವನ್ನು ಕೊಡುವ ಮರ. ಇದರ ಎಲ್ಲಾ ಭಾಗಗಳೂ ಕಹಿ. ಕುಲೆಗಳದ್ದು ತುಂಬಾ ಉಪದ್ರವಾದರೆ ಸತ್ತವರ ದೂಪೆ (ಗೋರಿ) ಯ ಮೇಲೆ ಕಾಸರಕನ ಕೋಲು ಊರಿದರೆ ಸಾಕು ಉಪದ್ರ ನಿಲ್ಲುತ್ತದಂತೆ. ಚಿತೆಗೆ ಕಾಸರಕನ ಮರ ಹಾಕುವುದಿಲ್ಲ. ಒಂದು ತುಂಡು ಹಾಕಿದರೆ ಕುಲೆಯ ಅಸ್ತಿತ್ವವೇ ಉಂಟಾಗುವುದಿಲ್ಲ. ಕಾಸರಕನ ಮರದ ತೊಟ್ಟಿಲಲ್ಲಿ ಮಕ್ಕಳು ಮಲಗಿದರೆ ಕುಲೆಗಳ ಉಪದ್ರವಿರುವುದಿಲ್ಲ. ಕಾಸರಕನ ಮರದ ಬೆಂಚಿನ ಮೇಲೆ ಮಲಗಿದರೆ ಕನಸು ಬೀಳುವುದಿಲ್ಲ. ಹೆಂಗಸರು, ಮಕ್ಕಳು ಪ್ರಯಾಣಿಸುವಾಗ ಕಾಸರಕನ ಮರದ ಚಿಗುರು

ಧರಿಸಿದರೆ ಕುಲೆಯ ಸೋಂಕು ತಗಲುವುದಿಲ್ಲ. ಕಾಸರಕನ ಕಟ್ಟಿಗೆಯಿಂದ ಒಲೆ ಉರಿಸಿದರೆ ಮನೆಯಲ್ಲಿ ಕುಲೆಗಳು ನಿಲ್ಲುವುದಿಲ್ಲ. ಕುಲೆಗಳ ಉಪದ್ರಕ್ಕೆ ಮಂತ್ರವಾದಿಗಳು ಅವನ್ನು ತಗಡಿನಲ್ಲಿ ಆವಾಹಿಸಿ, ಕಾಸರಕನ ಮರಕ್ಕೆ ಬಡಿಯುತ್ತಾರೆ. ಕುಲೆಗಳ ಉಪದ್ರಕ್ಕೆ ಗೋರಿಯ ಸುತ್ತ ತೂತುಗೆರಟೆಯಲ್ಲಿ ಸಾಸುವೆ ಹಾಕಿ ಚೆಲ್ಲಿದರೂ ಆಗುತ್ತದೆ ಎಂದೆಲ್ಲ ನಂಬಿಕೆಗಲಿವೆ.

ಕೆಲವು ಕುಲೆಗಳನ್ನು ದೇವಿ ದರ್ಶನದ ಪಾತ್ರಿಗಳು ಬಿಡಿಸುತ್ತಾರೆ. ಧರ್ಮಸ್ಥಳದ, ಕಟೀಲು, ಕೊಲ್ಲೂರು ಮುಂತಾದ ಕಡೆ ಹೋಗಿ ದೇವರ ದರ್ಶನ ಮಾಡುವುದರಿಂದ ಕುಲೆಗಳು ಬಿಟ್ಟು ಹೋಗುತ್ತವೆ.

ಮನುಷ್ಯ ಮೃತಿ ಹೊಂದಿದ ಬಳಿಕ ಕುಲೆಯಾಗಿ ಮಾರ್ಪಟ್ಟು ತನ್ನ ಕುಟುಂಬದ ಕಿರಿಯರಿಂದ ಆರಾಧನೆಯನ್ನು ಪಡೆಯುತ್ತಾನೆ. ಭೂತಗಳನ್ನು ಒಂದು ಸಮಾಜದವರೆಲ್ಲರೂ ಆರಾಧಿಸುತ್ತಾರೆ. ಆದರೆ ಕುಲೆಗಲನ್ನು ಒಂದು ಕುಟುಂಬದವರು ಮಾತ್ರ ನಂಬುತ್ತಾರೆ.

ಕುಲೆಗಳಿಗೆ ಭೂತ ಸಮಾಜದಲ್ಲಿ ಒಳ್ಳೆಯ ಸ್ಥಾನವಿಲ್ಲ. ತೀರಾ ಕ್ಷೀಣಗೊಂಡ, ಇನ್ನೊಬ್ಬರ ಕೆಲಸವನ್ನು ಪದೇ ಪದೇ ಇಣಿಕಿ ನೋಡುವ ವ್ಯಕ್ತಿಯನ್ನು ಕುಲೆ ಎಂದು ಹೀಯಾಳಿಸುತ್ತಾರೆ. ಕುಲೆಯ ಆರಾಧನೆ ಅಥವಾ ಪಿತೃಪೂಜೆ ಭೂತಾರಾಧನೆಯ ಒಂದು ಅಂಗಭಾಗ. ಭೂತಾರಾಧನೆ ತುಳು ನಾಡಿನ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ತನ್ನ ಪಿತೃಗಳು ಕೋಪಗೊಳ್ಳುತ್ತಾರೆ ಎಂಬ ಕಾರಣದಿಂದ ಎಷ್ಟೋ ವ್ಯಕ್ತಿಗಳು ಕೆಟ್ಟ ಕೆಲಸಕ್ಕೆ ಕೈ ಹಾಕಲು ಹೆದರುತ್ತಾರೆ. ಕಿರಿಯರು ಹಿರಿಯರಲ್ಲಿ ಭಕ್ತಿ ತೋರಿಸುತ್ತಾರೆ. ನಾಗರಿಕತೆಯ ಪ್ರಭಾವ ಹೆಚ್ಚಾದಂತೆ ಪಿತೃಪೂಜೆ ಕಡಿಮೆಯಾಗುತ್ತಾ ಬರುತ್ತಿದೆ. ಇದರಿಂದಾಗಿ ಕುಟುಂಬ ಕುಟುಂಬಗಳೊಳಗೆ, ವ್ಯಕ್ತಿ - ವ್ಯಕ್ತಿಗಳ ನಡುವೆ ಪ್ರೀತಿ, ಭಕ್ತಿ, ಸೌಹಾರ್ದತೆ ಕೂಡ ಕಡಿಮೆಯಾಗುತ್ತಿದೆ ಎಂಬುದಕ್ಕೆ ಸಂಶಯವಿಲ್ಲ.

# ೧೪. ದೆವ್ವದ ಪುರಾಣ

ಪ್ರೊ. ಡಿ. ಲಿಂಗಯ್ಯ

ಭೂಮಿಯ ಮೇಲೆ ದೆವ್ವಗಳು ಇವೆಯೇ ಇಲ್ಲವೋ ಗೊತ್ತಿಲ್ಲ. ಆದರೆ ದೆವ್ವದ ಕಥೆಗಳು ಇವೆ. ವೈಜ್ಞಾನಿಕವಾಗಿ ದೆವ್ವದ ಅಸ್ತಿತ್ವವನ್ನು ಸ್ಥಾಪಿಸುವುದಕ್ಕಾಗುವುದಿಲ್ಲ. ವಿಜ್ಞಾನವನ್ನು ಅಧ್ಯಯನ ಮಾಡಿದವರೂ ಕೂಡ ಒಮ್ಮೊಮ್ಮೆ ದೆವ್ವ ಇದ್ದರೂ ಇರಬಹುದು ಎನ್ನುತ್ತಾರೆ ! ದೆವ್ವವನ್ನು ಹಳ್ಳಿಗರು ಮಾತ್ರ ನಂಬುತ್ತಾರೆಂದಿಲ್ಲ, ಪಟ್ಟಣಿಗರೂ ನಂಬುತ್ತಾರೆ. ದೆವ್ವದ ಸೋಂಕು ಕಾಣಿಸಿಕೊಂಡಾಗ ಶಿಷ್ಟರು ಅಶಿಷ್ಟರು ಎಲ್ಲರೂ ನಿವಾರಣೆಗಾಗಿ ಪೂಜೆ ಪುರಸ್ಕಾರ ಮಾಡುತ್ತಾರೆ, ಮಾಡಿಸುತ್ತಾರೆ. ಅವರಿವರು ಹೇಳುವಂತೆಲ್ಲ ಕೇಳುತ್ತಾರೆ, ಅದರಂತೆ ನಡೆದು ಕೊಳ್ಳುತ್ತಾರೆ. ದೆವ್ವ ಬಿಡಿಸುವ ಧಾರ್ಮಿಕ ಕ್ಷೇತ್ರಗಳೂ ಉಂಟು. ದೆವ್ವ ಬಿಡಿಸುವ ದೇವರೂ ಉಂಟು ! ಗಂಡಸರು ಮತ್ತು ಗಂಡು ದೇವರುಗಳು ಮಾತ್ರ ದೆವ್ವ ಬಿಡಿಸುವ ಕಾರ್ಯದಲ್ಲಿ ಅಥವಾ ಧಾರ್ಮಿಕ ವಿಧಿಯಲ್ಲಿ ಪಾಲ್ಗೊಳ್ಳುವುದು ಆಶ್ಚರ್ಯ ಹುಟ್ಟಿಸುತ್ತದೆ.

ಸಮಾಜದಲ್ಲಿ ಕಂಡುಬರುವಂತೆ ಸ್ತ್ರೀಯರಿಗೆ ದೆವ್ವ ಮೆಟ್ಟಿಕೊಳ್ಳುವುದು ಹೆಚ್ಚು. ಪುರುಷರಿಗೆ ದೆವ್ವ ಮೆಟ್ಟಿಕೊಳ್ಳುವುದು ಕಡಮೆ. ಎಲ್ಲಾ ವಯಸ್ಸಿನವರಿಗೂ ದೆವ್ವ ಮೆಟ್ಟಿ ಕೊಳ್ಳುವುದಾದರೂ ವಿವಾಹಿತ ಮಹಿಳೆಯರಿಗೆ ದೆವ್ವದ ಕಾಟ ಅಧಿಕ. ಅದರಲ್ಲೂ ಅವಿಭಕ್ತ ಕುಟುಂಬಗಳಲ್ಲಿ ಇದರ ಉಪಟಳ ಜಾಸ್ತಿ. ಕೂಡು ಕುಟುಂಬಗಳ ವ್ಯವಸ್ಥೆಯಲ್ಲಿ ಕಾಡುವ ಸಮಸ್ಯೆಗಳನ್ನು ಎದುರಿಸಲಾಗದೆ, ಕನಿಷ್ಠ ಸೌಲಭ್ಯಗಳನ್ನು ಪಡೆಯಲಾಗ ದೆ, ನಿರೀಕ್ಷಿಸಿದಷ್ಟು ಸ್ವಾತಂತ್ರ್ಯ ಸಿಗದೆ, ಅಸಹಾಯಕತೆಗೆ ತುತ್ತಾಗಿ, ದೈಹಿಕವಾಗಿ, ಮಾನಸಿಕವಾಗಿ ಜರ್ಝರಿತರಾದವರು, ನರದೌರ್ಬಲ್ಯದಿಂದಲೋ ಮಾನಸಿಕ ಏರುಪೇರಿನಿಂದಲೋ ಸಹಜ ಸ್ಥಿತಿಯನ್ನು ಕಳೆದುಕೊಂಡು ಅಸಹಜ ರೀತಿಯ ವರ್ತನೆಯನ್ನು ತೋರಿಸಿದಾಗ ದೆವ್ವ ಆವಾಹನೆಯಾಗಿರುವ ಹಣೆಪಟ್ಟಿಗೆ ಗುರಿಯಾಗಬೇಕಾಗುತ್ತದೆ. ಇದೊಂದು ರೀತಿಯ ಮನೋರೋಗಿಯ ಸ್ಥಿತಿ. ಇಂಥ ಸಂದರ್ಭದಲ್ಲಿ ವೈಜ್ಞಾನಿಕವಾಗಿ ವಿಶ್ಲೇಷಿಸಬಹುದಾದ ಮನೋವೈದ್ಯರ ಪರಿಶೀಲನೆಗೆ ಒಳಗಾಗದೆ ಮಾಟ ಮಂತ್ರ ಯಂತ್ರ ತಂತ್ರ ಪೂಜೆ ಪುರಸ್ಕಾರ ಮೊದಲಾದವುಗಳ ಮೊರೆಹೋಗುವವರೇ ಹೆಚ್ಚು. ವಾಸಿಯಾದರೆ ಯಾಂತ್ರಿಕ ವಿಧಿಯ ಪ್ರಭಾವ, ವಾಸಿಯಾಗದಿದ್ದರೆ ಹಣೆಬರಹವೆಂದು ತೆಪ್ಪಗಾಗುತ್ತಾರೆ. ಸಾಮಾನ್ಯವಾಗಿ ಹೆಂಗಸರಿಗೆ ಹೆಣ್ಣು ದೆವ್ವವೂ ಗಂಡು ದೆವ್ವವೂ ಮೆಟ್ಟಿಕೊಳ್ಳುತ್ತದೆ. ಅಪರೂಪಕ್ಕೆ ಹೆಂಗಸರಿಗೆ ಗಂಡು ದೆವ್ವವೂ ಗಂಡಸರಿಗೆ ಹೆಣ್ಣು ದೆವ್ವವೂ ಹಿಡಿದುಕೊಳ್ಳುತ್ತದೆ.

ಜಡೆಮುನಿ ದೆವ್ವದ ಯಜಮಾನ ಎನ್ನುವುದುಂಟು. ಜಡೆಮುನಿಯ ವರ್ಣನೆ ಭಯಂಕರ. ಅವನ ಆಕಾರ, ಅವನ ಸಂಚಾರ ಎಲ್ಲವೂ ಭಯ ಹುಟಿಸುವಂಥವೇ. ಜಡೆಮುನಿ ಕುಳ್ಳ ವ್ಯಕ್ತಿ. ಕಪ್ಪುದೇಹ. ಅವನ ಕಣ್ಣುಗಳು ಬೆಂಕಿಯ ಉಂಡೆಗಳು. ಅವನ

ಜಡೆ ಒಂದೆರಡು ಫಲಾಂಗುಗಳಷ್ಟು ಉದ್ದ. ಅಮಾವಾಸ್ಯೆಯ ಮಧ್ಯರಾತ್ರಿಯಲ್ಲಿ ಜಡೆಮುನಿ ಕೆಂಗಣ್ಣು ತೆರದು ಬಯಲಿನಲ್ಲಿ ಓಡಾಡುವಾಗ ಅವನ ಜಡೆಯನ್ನು ನೂರಾರು ದೆವ್ವಗಳು ಎತ್ತಿ ಹಿಡಿದು ಹಿಂಬಾಲಿಸುತ್ತವಂತೆ. ಹಲವು ದೆವ್ವಗಳು ಜಡೆಮುನಿಯ ಸೇವೆ ಮಾಡುತ್ತವಂತೆ. ಇಂಥ ಪರಿವಾರದಲ್ಲಿ ಜಡೆಮುನಿ ತಿರುಗಾಡಿದರೆ ಅಂಥ ಕಡೆ ಉತ್ತಮ ಬೆಳೆಯಾಗುವುದಂತೆ. ಈ ಸಂಚಾರ ದೃಶ್ಯವನ್ನು ಯಾರಾದರೂ ನೋಡಿ ಹೆದರಿಕೊಳ್ಳದಿದ್ದರೆ, ಮುಖ ಅಡಿಯಾಗಿ ಮಲಗಿದರೆ, ಜಡೆಮುನಿ ಅವನನ್ನು ದಾಟಿದರೆ, ಆ ವ್ಯಕ್ತಿ ನೂರ್ಕಾಲ ಬಾಳುತ್ತಾನಂತೆ. ಇಂಥ ಅನೇಕ ಅಂತೆ ಕಂತೆಯ ಐತಿಹ್ಯಗಳು ಜನಪದರಲ್ಲಿವೆ.

ಅಮಾವಾಸ್ಯೆಯ ಮಧ್ಯರಾತ್ರಿಯಲ್ಲಿ ಸಾಮಾನ್ಯವಾಗಿ ದೆವ್ವ ಕಾಣಿಸುತ್ತದಂತೆ. ಒಮ್ಮೊಮ್ಮೆ ಬೆಳದಿಂಗಳ ರಾತ್ರಿಯಲ್ಲೂ ಮಟಮಟ ಮಧ್ಯಹ್ನದಲ್ಲೂ ನಿರ್ಜನ ಪ್ರದೇಶದಲ್ಲಿ ದೆವ್ವ ಕಾಣುವುದುಂಟಂತೆ. ದೆವ್ವ ಬೇಕಾದ ಆಕಾರ ತಾಳುತ್ತದೆ. ಭೂಮಿಯಿಂದ ಆಕಾಶದ ವರೆಗೆ ಬೆಳೆಯುತ್ತದೆ. ಅದರ ಮೈ ಮುಟ್ಟಿದರೆ ಬೆಕ್ಕಿನ ಬಾಲ ಮುಟ್ಟಿದಂತಾಗುತ್ತದೆ. ಅದರ ಪಾದಗಳು ಹಿಂದು ಮುಂದಾಗಿರುತ್ತವೆ.

ಶಿವ ಸುಡುಗಾಡು ವಾಸಿ. ದೆವ್ವಗಳ ಜೊತೆಯಲ್ಲೇ ಅವನ ವಾಸ. ಸ್ಮಶಾನದಲ್ಲಿ ಶಿವನಿದ್ದ ಕಡೆ ಲೆಕ್ಕವಿಲ್ಲದಷ್ಟು ದೆವ್ವಗಳಿರುತ್ತವೆ. ಜಡೆಮುನಿಯಂತೆ ಶಿವನೂ ದೆವ್ವಗಳ ಯಜಮಾನನಂತೆ. ದೆವ್ವಗಳಿಗೆ ಉಡುಪಿಲ್ಲ, ಬೆತ್ತಲೆಯಾಗಿರುತ್ತವೆ. ಸ್ಮಶಾನ ವಾಸಿಗಳಿಗೆ, ಅದೃಶ್ಯ ನೆರಳುಗಳಿಗೆ ಉಡುಪೇಕೆ ?

ದೆವ್ವಗಳನ್ನು ವಶಪಡಿಸಿಕೊಂಡು, ಅವುಗಳಿಂದ ಬೇಕಾದ ಕೆಲಸಮಾಡಿಸಿಕೊಳ್ಳುವ ಧೈರ್ಯಸ್ಥರೂ ಭೂಪರೂ ಉಂಟು ! ಅಂಥವರ ಬಗ್ಗೆ ವರ್ಣರಂಜಿತವಾದ ಜನಪದ ಕಥೆಗಳು ಹುಟ್ಟಿಕೊಂಡಿವೆ. ದೆವ್ವವನ್ನು ವಶಪಡಿಸಿಕೊಂಡು ದುಡಿಸಿಕೊಂಡವರು ದೆವ್ವದಿಂದಲೇ ಸಾಯುವುದು ಕಾಕತಾಳೀಯ ! ಚೆಲ್ಲಾಟವಾಡಿ ಹೋಗುವ ದೆವ್ವಗಳಿರುವಂತೆ, ಕೊಂದು ತೃಪ್ತಿಪಡುವ ದೆವ್ವಗಳೂ ಉಂಟು.

ರಾತ್ರಿಯ ಹೊತ್ತು ದೆವ್ವದ ಕಥೆ ಹೇಳಲು, ಕೇಳಲು ಜನರು ಭಯಪಡುತ್ತಾರೆ. ಮಕ್ಕಳ ಮುಂದೆ ದೆವ್ವದ ಕಥೆ ಹೇಳಲು ಹಿರಿಯರು ಒಪ್ಪವುದಿಲ್ಲ. ಸತ್ತವರ ಅತೃಪ್ತ ಆತ್ಮಗಳು ದೆವ್ವವಾಗುವುದೆಂಬ ನಂಬಿಕೆ ಬಲವಾಗಿದೆ. ದೆವ್ವವಾಗುವ ರೀತಿಯ ಪಟ್ಟಿಯೇ ಜನಪದರಲ್ಲಿ ಸಿದ್ಧವಾಗಿದೆ. ಉದಾಹರಣೆಗೆ :

ನೇಣುಹಾಕಿಕೊಂಡು ಸತ್ತವರು, ಅಕಾಲಮರಣಕ್ಕೆ ತುತ್ತಾದವರು, ಬಯಕೆ ತೀರದೆ ಸತ್ತವರು, ಹೆರಿಗೆಯಲ್ಲಿ ಸತ್ತವರು, ನೀರಿಗೆ ಬಿದ್ದು ಸತ್ತವರು, ಮೂರು ವರ್ಷ ತುಂಬುವ

ಮೊದಲೇ ಸತ್ತ ಮಕ್ಕಳು, ಕೊಲೆಯಾದವರು, ಬೆಂಕಿಯಲ್ಲಿ ಸುಟ್ಟುಹೋದವರು, ಹಣದ ದುರಾಸೆಯಿಂದ ಸತ್ತವರು, ಗರ್ಭಿಣಿಯಾಗಿದ್ದಾಗ ಸತ್ತವರು, ಮದುವೆಯಾಗುವ ಮೊದಲೇ ಸಾಯುವ ಪ್ರಾಯದ ಹುಡುಗಿಯರು, ವಿಚಿತ್ರ ರೀತಿಯಲ್ಲಿ ಸಾವೀಗೀಡಾದ ಬ್ರಾಹ್ಮಣರು, ಭೂಲೋಕಕ್ಕೆ ಬರುವ ಶಾಪಗ್ರಸ್ತ ದೇವತೆಗಳು, ಆಯಸ್ಸು ತುಂಬದೆ ಸತ್ತವರು, ದೆವ್ವವಾಗುವ ರೆಂದು ಹೇಳುವರು. ಅಂಥ ದೆವ್ವಗಳು ತಮ್ಮ ಆಸೆಯನ್ನು ಪೂರೈಸಿಕೊಳ್ಳಲು, ಸೇಡು ತೀರಿಸಿ ಕೊಳ್ಳಲು, ಬಲಿತೆಗೆದು ಕೊಳ್ಳಲು, ತೊಂದರೆ ಕೊಡಲು, ಸ್ತ್ರೀ ಪುರುಷರ ಮೇಲೆ ದೆವ್ವವಾಗಿ ಬರುತ್ತವೆ. ದೆವ್ವ ಬಡಿದವರು ಅಥವಾ ದೆವ್ವ ಮೈಮೇಲೆ ಬಂದವರು ತಮ್ಮ ಸಹಜ ಸ್ಥಿತಿ ಮರೆತು ವಿಚಿತ್ರವಾಗಿ ದೆವ್ವದಂತಾಡುವರು.

ದೆವ್ವ ಮೈಮೇಲೆ ಬಂದವರು ಚಂಡಿ ಚಾಮುಂಡಿರಾಗುವರು. ಅವರಿಗೆ ಮೈಮೇಲಿನ ಬಟ್ಟೆಬರೆಯ ಬಗ್ಗೆ ನಿಗಾ ಇರುವುದಿಲ್ಲ. ಚಿತ್ತವಿಕಾರ, ಉನ್ಮಾದ, ಮಾನಸಿಕ ಅಸ್ಥಿರತೆಯಿಂದ ನರಳುವರು. ಕ್ಷುದ್ರ ಶಕ್ತಿಯೊಂದು ಅವರನ್ನು ಪೀಡಿಸುತ್ತಿರುವಂತೆ ಆಡುವರು.

ದೆವ್ವಗಳಲ್ಲಿ ಎರಡು ವಿಧ :

೧. ಸಾಮಾನ್ಯ ದೆವ್ವಗಳು

೨. ಭಯಂಕರ ದೆವ್ವಗಳು.

ಅಲ್ಪ ತೃಪ್ತಿಯ ದೆವ್ವಗಳು ಸಾಮಾನ್ಯ ದೆವ್ವಗಳು. ಸಣ್ಣ ಪುಟ್ಟ ಬೇಡಿಕೆಗಳನ್ನು ಮುಂದಿಡುತ್ತವೆ. ಅವುಗಳನ್ನು ಪೂರೈಸಿದರೆ ಅವು ತೃಪ್ತಿಯಾಗುತ್ತವೆ. ಹಿಡಿದುಕೊಂಡಿದ್ದ ವ್ಯಕ್ತಿಯನ್ನು ಬಿಟ್ಟುಹೋಗುತ್ತವೆ. ಅವಿಭಕ್ತ ಕುಟುಂಬದ ಸೊಸೆಯರಲ್ಲಿ ಇಂಥ ದೆವ್ವಗಳು ಜಾಸ್ತಿ!. ಕೆಲವು ದೆವ್ವಗಳು ಬಡಪೆಟ್ಟಿಗೆ ಬಿಟ್ಟು ಹೋಗುವುದಿಲ್ಲ. ಬಹಳ ಕಾಡಿಸುತ್ತವೆ. ಸಿಟ್ಟು, ದ್ವೇಷ, ಮುಯ್ಯಿ, ಕ್ರೌರ್ಯ, ಕೊಲೆ, ಹಿಂಸೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಇವು ಭಯಂಕರ ದೆವ್ವಗಳು. ಇಂಥ ಉಗ್ರ ದೆವ್ವಗಳಿಗೆ ಉಗ್ರ ಶಾಂತಿಯನ್ನೇ ಮಾಡಬೇಕಾಗುತ್ತದೆ. ಇವುಗಳ ಅವಾಂತರ ಒಂದೆರಡು ದಿನಗಳಲ್ಲಿ ಪರಿಹಾರ ವಾಗುವುದೂ ಇಲ್ಲ. ಈ ಬಗೆಗೆ ಸ್ವಂತ ಅನುಭವವನ್ನು ಹೇಳುವವರೂ ಇದ್ದಾರೆ.

ದೆವ್ವ, ದೈಯ್ಯ, ಪೀಡೆ, ಪಿಶಾಚಿ, ಪ್ರೇತ, ಭೂತ, ಜಕ್ಕಣಿ, ಬೇತಾಳ, ಗುಮ್ಮ, ಈರಾ, ಕಾತ, ರಣ, ಗಣ, ಬನ್ನಿ, ಮೋಹಿನಿ, ಬ್ರಹ್ಮ ಪಿಶಾಚಿ, ಗಾಳಿ, ಶಂಕೆ, ಗ್ರಹ ಮೊದಲಾದ ಹೆಸರುಗಳಿಂದ ರೂಢಿಯಲ್ಲಿರುವ ದೆವ್ವ ಕಲ್ಲುಹುಯ್ಯಿಸಿಕೊಳ್ಳುವುದು; ಕಲ್ಲು ಹೊರಿಸಿಕೊಳ್ಳುವುದು ಮುಂತಾದ ಉಗ್ರ ಆಚರಣೆಗೆ ಒಳಗಾಗುವುದುಂಟು. ನಾಗಮಂಗಲ ತಾಲ್ಲೂಕಿನಲ್ಲಿರುವ ಹದ್ದಿನಕಲ್ಲು ಹನುಮಂತರಾಯ, ಬೆಂಗಳೂರಿನ ಗಾಳಿ ಆಂಜನೇಯ, ಧರ್ಮಸ್ಥಳದ ಅಣ್ಣಪ್ಪ, ಮಂಡ್ಯ ಜಿಲ್ಲೆ ಪೀಹಳ್ಳಿಯ ಹಾಳುಕೋಟೆ ಮಾರಮ್ಮ

ಮೊದಲಾದ ಸ್ತ್ರೀ ಪುರುಷ ದೇವರು ಗಾಳಿಬಿಡಿಸುವುದಕ್ಕೆ ಹೆಸರಾಗಿವೆ. ವಾಯುಪುತ್ರ ಎನ್ನುವುದರಿಂದಲೋ ಏನೋ ಪ್ರಾಣದೇವರು ಹನುಮಂತ ದೆವ್ವದ ಪ್ರಸಂಗಕ್ಕೆ ಸಿಕ್ಕಿಹಾಕಿಕೊಂಡಿದ್ದಾನೆ !

ಬದುಕಿದ್ದ ಮನುಷ್ಯ ಸತ್ತಾಗ, ಸತ್ತಮೇಲೆ ಏನಾಗುತ್ತಾನೆ ಎಂಬ ಯೋಚನೆ ಬಂದಾಗ, ದೆವ್ವದ ಜಿಜ್ಞಾಸೆ, ನಂಬಿಕೆ ಮೊದಲಾದವು ಹುಟ್ಟಿಕೊಂಡಿರುವಂತೆ ಕಾಣುತ್ತದೆ. ಸಾವಿಗೂ ದೆವ್ವಕ್ಕೂ ನಂಟು. ದೆವ್ವ ಮನುಷ್ಯನ ಸೃಷ್ಟಿ. ದೆವ್ವವನ್ನು ಸೃಷ್ಟಿಸಿದವನೂ ಮನುಷ್ಯನೇ, ದೆವ್ವವನ್ನು ಬಿಡಿಸುವವನೂ ಮನುಷ್ಯನೇ. ಆದರೆ ಎಲ್ಲವೂ ಅತಿಮಾನುಷ ನೆಲೆಯಲ್ಲಿ ನಡೆಯುತ್ತದೆ. ಸತ್ಯ ಮಿಥ್ಯೆಯ ನಡುವೆ ದೆವ್ವದ ಮಾಯೆ ಆಟವಾಡುತ್ತದೆ. ಚರ್ಚೆಗೆ ಇಳಿದಷ್ಟು ಕುತುಹಲಕರವಾದ ಅಂಶಗಳು ಹೊರಬೀಳುತ್ತಲೇ ಇವೆ. ದೆವ್ವದ ಅಸ್ತಿತ್ವದ ಬಗೆಗೆ ಕೊನೆಯ ಮಾತು ಇಲ್ಲ. ಮನುಷ್ಯನಲ್ಲಿ ಭಯ ಇರುವ ವರೆಗೆ ದೆವ್ವವೂ ಇರುತ್ತದೆ !

ಭೂತದ ದೇವರುಗಳೂ ಉಂಟು. ಅವುಗಳಿಗೆ ರಕ್ತವೆಂದರೆ ಪ್ರೀತಿ. ಅವುಗಳನ್ನು ಸಂತೋಷಗೊಳಿಸಲು ಕುರಿ, ಕೋಳಿ ಮೊದಲಾದ ಪ್ರಾಣಿಗಳ ರಕ್ತವನ್ನು ಭೂತದೇವರ ತಲೆಯ ಮೇಲೆ ಸುರಿಯುತ್ತಾರೆ. ದೇವರಿಗೆ ಆರಾಧನೆ ಇರುವಂತೆ ಭೂತಕ್ಕೂ ಆರಾಧನೆ ಇದೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಭೂತಾರಾಧನೆ ಜಾಸ್ತಿ. ಅಲ್ಲಿ ಜಟ್ಟಿಗ, ಬೊಬ್ಬರ್ಯ, ಕಲ್ಕುಡ, ಮಲೆರಾಯ, ಪಂಜುರ್ಲಿ, ದುಗ್ಗಲಾಯ, ಕೀಳು, ಧೂಮಾವತಿ, ಲಕ್ಕೇರಿ, ಕೋಟಿಚನ್ನಯ, ಅಣ್ಣಪ್ಪ ಮೊದಲಾದ ಭೂತಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂತದ ಕೋಲ ಅಥವಾ ಭೂತ ನೇಮದ ಆಚರಣೆಯಿದೆ. ಭೂತಾರಾಧನೆಯ ಮುಕ್ತಾಯವನ್ನು 'ಭೂತಬಿರಿಯುವುದು' ಎಂದು ಆಚರಿಸುವರು. ಹಿಂದೂ ಧರ್ಮದ ದಶಾವತಾರದಲ್ಲಿ ಬರುವ ವರಹಾವತಾರವೇ ಪಂಜುರ್ಲಿ ಭೂತ ಎಂದೂ ನಂಬಿಕೆಯಿದೆ. ಭೂತ ಬೇತಾಳಗಳನ್ನು ಊರದೇವತೆಯ ಗಣಂಗಳು ಎಂದು ಕರೆಯುತ್ತಾರೆ.

ಕರಾವಳಿಯ ಕುಲೆ ಅಥವಾ ಆತ್ಮದ ಪೂಜೆಯಲ್ಲಿ ದೆವ್ವದ ಛಾಯೆ ಇದೆ. ಕೆಲವು ಕಡೆ ದೆವ್ವದ ಕುಣಿತವೂ ಇದೆ. ಇದು ಜನಪದ ಕಲೆಯಾಗಿ ರೂಢಿಯಲ್ಲಿದೆ. ಭೂತ ಬಿಡಿಸುವುದನ್ನು ನೋಡುವುದು ಹಿಂಸೆಯಾದರೂ ಭೂತದ ಕುಣಿತವನ್ನು ಸ್ವಲ್ಪ ಹೊತ್ತು ನೋಡಬಹುದು ! ಜನಪದ ಕಲೆಗೆ ಭೂತವೂ ಹೊರತಲ್ಲ. ದೆವ್ವಕ್ಕೂ ಸಾಂಸ್ಕೃತಿಕತೆ ಪ್ರಾಪ್ತವಾಗುವುದು ಇಂಥ ಕಡೆಯಲ್ಲೇ.

ಮನೆಯ ಮುಂದೆ ರಂಗೋಲಿ ಬಿಟ್ಟರೆ, ಹಸುಗೂಸು ತೊಟ್ಟಿಲ ಹಗ್ಗಕ್ಕೆ ಚಪ್ಪಲಿ ಅಟ್ಟೆಯ ಚೂರು ಕಟ್ಟಿದರೆ, ದೆವ್ವ ಸುಳಿಯುವುದಿಲ್ಲವಂತೆ. ಮನೆಯ ಬಾಗಿಲಲ್ಲಿ ಚಪ್ಪಲಿ ನೇತುಹಾಕಿದರೆ ದೆವ್ವ ಮನೆಗೆ ನುಗ್ಗುವುದಿಲ್ಲ. ದನದ ಕೊಟ್ಟಿಗೆಯಲ್ಲಿ ಚಪ್ಪಲಿ ನೇತು ಹಾಕಿದರೆ ದನ ಎಮ್ಮೆ ಮೊದಲಾದ ಸಾಕು ಪ್ರಾಣಿಗಳಿಗೆ ದೆವ್ವದ ಕಾಟ ಇರುವುದಿಲ್ಲ ಎಂಬ

ನಂಬಿಕೆಯಿದೆ. ಯಾಕೋ ಚಪ್ಪಲಿ ಕಂಡರೆ ದೆವ್ವಕ್ಕೂ ಭಯ!. ಮಕ್ಕಳು ಮಲಗದೆ ಚಂಡಿ ಹಿಡಿದರೆ ಗುಮ್ಮ ನನ್ನು ಕರೆಯುತ್ತೇನೆಂದು ತಾಯಂದಿರು ಹೆದರಿಸುವುದುಂಟು. ಮನೆಯಲ್ಲಿ ಮಲಗಿದ್ದವನನ್ನು ಗೊತ್ತಾಗದ ಹಾಗೆ ಎತ್ತಿಕೊಂಡು ಹೋಗಿ ಬಾವಿಕಲ್ಲಿನ ಮೇಲೆ ಮಲಗಿಸುವುದು, ಆಗಾಗ ಮನೆಯ ಮೇಲೆ ಕಲ್ಲು ಬೀಳುವುದು, ಜನದನ ಇದ್ದಕ್ಕಿದ್ದಂತೆ ಸತ್ತುಹೋಗುವುದು ,ಭೂತ ಚೇಷ್ಟೆಯೊಂದೇ ನಂಬುವವರಿಗೆ ಕೊರತೆಯಿಲ್ಲ.

ಹುಣಸೆ ಮರದಲ್ಲಿ, ಹಾಳು ಭಾವಿ (ದಾಮಿನಿಕ್ ಬಾವಿ), ಪಾಳು ಮನೆ , ಪಾಳು ಗುಡಿಯಲ್ಲಿ, ದೆವ್ವ ಇರುವುದೆಂದೂ ಅಂಥ ಕಡೆಗೆ ಹೋಗಬಾರದೆಂದೂ ಹೇಳುವರು. ಅಮಾವಾಸ್ಯೆ ರಾತ್ರಿಯಲ್ಲಿ ದೆವ್ವಗಳ ಚಟುವಟಿಕೆ ಜಾಸ್ತಿಯಂತೆ. ಮೋಹಿನಿ ರೂಪದ ದೆವ್ವ ಹಿಡಿದರೆ, ಕೊರಗಿ ಕೊರಗಿ, ಕೃಶರಾಗಿ ಸತ್ತೇಹೋಗುವರಂತೆ. ಮೋಹಿನಿ ದೆವ್ವಕ್ಕೆ ಗಂಡಸರೆಂದರೆ ಪ್ರೀತಿ. ಅದು ಹೆಂಗಸರ ತಂಟೆಗೆ ಹೋಗುವುದಿಲ್ಲವಂತೆ. ಇಲ್ಲದ ದೆವ್ವಕ್ಕೆ ಇರುವ ಪುರಾಣ ಕಡಮೆಯೇನಲ್ಲ.

ದೆಯ್ಯ, ದೆವ್ವ ಎಂಬ ಪದ ಜನಪದದಲ್ಲೂ ಶಿಷ್ಟಪದಲ್ಲೂ ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ. ಕಣ್ಣಿಗೆ ಕಾಣದಿದ್ದರೂ ಮನುಷ್ಯರಿಗೆ ಕೆಡಕುಂಟು ಮಾಡುವುದೆಂಬ ಪಿಶಾಚಿ ಪದವನ್ನು ಪ್ರಸಿದ್ಧ ಕಾವ್ಯಗಳಲ್ಲೂ ಬಳಸಿದೆ. ದೆವ್ವವನ್ನು ಮೈಮೇಲೆ ಆವಾಹನೆ ಮಾಡಿಕೊಳ್ಳುವ ನಿರ್ದಿಷ್ಟ ಸ್ಥಳವೂ ಉಂಟು. ಧಾರ್ಮಿಕ ಹಿನ್ನೆಲೆಯಲ್ಲಿ ಇಂಥದ್ದಕ್ಕೆಲ್ಲ ಮಹತ್ವವಿದೆ. ದೆವ್ವಗಳನ್ನು ಕುರಿತು ಪ್ರಾಚೀನ ಕಥೆಗಳಿರಲಿ, ಆಧುನಿಕ ಕಥೆ ಕಾದಂಬರಿಗಳೂ ಸೃಷ್ಟಿಯಾಗಿವೆ. ದೆವ್ವದ ಕಥೆಗಳನ್ನು ಇಷ್ಟಪಡುವ ಓದುಗ ಸಮೂಹವೂ ಇದೆ. ದೆವ್ವದ ಹೆಸರಿನಲ್ಲಿ ಹೊಟ್ಟೆ ಹೊರೆದುಕೊಳ್ಳುವವರಿಗೂ ಕೊರತೆಯಿಲ್ಲ.

ನಾನು ಚಿಕ್ಕವನಾಗಿದ್ದಾಗ ನಮ್ಮ ಹಳ್ಳಿಯಲ್ಲಿ ಬಹಳ ದೆವ್ವದ ಕಥೆಗಳನ್ನು ಕೇಳಿದ್ದೇನೆ. ನನಗಿಂತ ದೊಡ್ಡವರು ನನ್ನನ್ನೂ ನನ್ನಂಥವರನ್ನೂ ರಾತ್ರಿಯ ಹೊತ್ತು ಬಲವಂತವಾಗಿ ಕೂರಿಸಿಕೊಂಡು ಹಾವಭಾವದಲ್ಲಿ ಧ್ವನಿಯ ಏರಿಳಿತದಲ್ಲಿ ದೆವ್ವದ ಕಥೆಯನ್ನು ಹೇಳಿ ಹೆದರಿಸುತ್ತಿದ್ದರು. ಅವರ ಕಥೆಯನ್ನು ಕೇಳಿದ ಮೇಲೆ ರಾತ್ರಿ ಕನಸಿನಲ್ಲಿ ದೆವ್ವ ಬಂದು ಕಾಡುತ್ತಿದ್ದವು. ಒಂದೆರಡು ಸಾರಿ ಬಟ್ಟೆ ಒದ್ದೆ ಮಾಡಿಕೊಂಡಿದ್ದೂ ಉಂಟು. ರಾತ್ರಿಯ ಹೊತ್ತಿನಲ್ಲಿ ಹುಣಸೆ ಮರ, ಪಾಳು ಬಾವಿ ಕಂಡರೆ ಈಗಲೂ ಬಾಲ್ಯದಲ್ಲಿ ಕೇಳಿದ ದೆವ್ವದ ಕಥೆಗಳು ಜ್ಞಾಪಕಕ್ಕೆ ಬರುತ್ತವೆ.

ಜನಪದ ಸಾಹಿತ್ಯದ ಕ್ಷೇತ್ರ ಕಾರ್ಯದಲ್ಲಿದ್ದಾಗ ಒಂದೆರಡು ದೆವ್ವದ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದೇನೆ. ಮೊದ ಮೊದಲು ದೆವ್ವದ ಕಥೆ ಓದಲು ಭಯವಾಗುತ್ತಿತ್ತು. ಈಗ ಆ ಭಯವಿಲ್ಲ. ಒಮ್ಮೊಮ್ಮೆ ನಮ್ಮ ನೆರಳೇ ನಮಗೆ ದೆವ್ವವಾಗಿ ಕಾಡುತ್ತದೆ. ಇನ್ನು ದೆವ್ವ ಕಾಡದೆ ಇರುತ್ತದೆಯೇ !

ಜನಪದರು ಹೇಳುವಂತೆ ಹರಿಶಿಣ ಕುಂಕುಮ, ನಿಂಬೆಹಣ್ಣು, ತಾಯಿತ, ಪೊರಕೆ, ಬೇವಿನ ಸೊಪ್ಪು, ಚಪ್ಪಲಿ, ತೋರಣ, ರಂಗೋಲಿ, ಗಜ್ಜರಿ, ಬೆಳ್ಳುಳ್ಳಿ, ಕಬ್ಬಿಣ, ಆಲೂಗೆಡ್ಡೆ ಇದ್ದ ಕಡೆಗೆ ದೆವ್ವ ಸುಳಿಯುವುದಿಲ್ಲ. ಮದುವೆ ಮುಂಜಿಗಳಲ್ಲಿ ಹಸುರು ತೋರಣ ಕಟ್ಟುವುದು, ಮನೆಯ ವಾಸಗಾಲಿನ ಮೇಲೆ ತೋರಣದ ಚಿತ್ರ ಕೆತ್ತಿಸುವುದು, ಭೂತಪ್ರೇತಗಳು ಪ್ರವೇಶಿಸದಿರಲು ಎಂದು ಹೇಳುತ್ತಾರೆ. ದೆವ್ವ ಶಂಕೆಯಿರುವ ಸ್ಥಳದಲ್ಲಿ ಥೂ ಎಂದು ಉಗಿದರೆ ದೆವ್ವ ಹತ್ತಿರಕ್ಕೆ ಬರುವುದಿಲ್ಲ ಎನ್ನುವರು. ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿ ದೆವ್ವದ ಕಲ್ಪನೆ, ಆರಾಧನೆ, ಚಿಕಿತ್ಸೆ ಇದೆ.

ದೆವ್ವ ಬಿಡಿಸುವ ಕ್ರಿಯೆ ನಾನಾರೀತಿಯಲ್ಲಿರುತ್ತದೆ. ಬೇವಿನ ಸೊಪ್ಪಿನ ಬರಲಿನಿಂದ ಹೊಡೆಯುವುದು, ದೇವರ ಬೆತ್ತದಿಂದ ಬಾಸುಂಡೆ ಬರುವಂತೆ ಬಾರಿಸುವುದು, ದೆವ್ವ ಮೆಟ್ಟಿದವರ ತಲೆಗೂದಲು ಕಿತ್ತು ದೇವರ ಬೆತ್ತಕ್ಕೆ ಕಟ್ಟುವುದು, ಒಂಟಿ ತೆಂಗಿನ ಕಾಯಿಯ ಮೇಲೆ ಬಹಳ ಹೊತ್ತು ಕೂರುವಂತೆ ಮಾಡುವುದು, ನಾನಾ ರೀತಿಯಲ್ಲಿ ಪ್ರಶ್ನಿಸಿ ಉತ್ತರ ಹೇಳುವಂತೆ ಬಾಯಿ ಬಿಡಿಸುವುದು, ಮಂತ್ರಹಾಕುವುದು, ದೇವರ ಮೊರೆಹೋಗುವುದು, ದೇವರಿಗೆ ಹರಕೆ ಕಟ್ಟಿಕೊಳ್ಳುವುದು, ದೊಡ್ಡ ಕಲ್ಲನ್ನು ತಲೆಯ ಮೇಲೆ ಹೊರಿಸಿ ಸಾಕಷ್ಟು ದೂರ ನಡೆಯಿಸಿ ನೀರಿನ ಸ್ಥಳಕ್ಕೆ ಕರೆದುಕೊಂಡು ಹೋಗಿ ಎತ್ತಿಹಾಕಿಸುವುದು, ಹೋಯ್ತು ಬುಡ್ತು ಎಂದು ಜೋರಾಗಿ ಹೇಳಿಸುವುದು, ಕೇಳಿದ ಪದಾರ್ಥಗಳನ್ನು ಕೊಟ್ಟು ತಿನ್ನಿಸುವುದು, ಮೊದಲಾದ ಚಿತ್ರವಿಚಿತ್ರವಾದ ಆಚರಣೆಗಳಿಂದ ದೆವ್ವವನ್ನು ಬಿಡಿಸಲು ಪ್ರಯತ್ತಿಸುವರು. ಕೆಲವು ದೆವ್ವಗಳು ಬೇಗ ಹೋಗುತ್ತವೆ, ಹಠಮಾರಿ ದೆವ್ವಗಳು ಹೋಗುವುದು ನಿಧಾನ.

ದೆವ್ವ ಭೂತದ ಬಾಧೆ ಬಂದಾಗ ಮಂತ್ರ ಬರೆಯಿಸುವುದು, ಚೀಟಿ ಬರೆಯಿಸುವುದು ಕಂಡುಬರುತ್ತದೆ. ತಾಮ್ರದ ತಗಡಿನ ಮೇಲೆ ಚೌಕ ಕತ್ತರಿ ವಿನ್ಯಾಸದಲ್ಲಿ ಮಂತ್ರಾಕ್ಷರ ಬರೆಯುತ್ತಾರೆ. ಬರೆದುದನ್ನು ಮಂತ್ರಿಸಿ ಮಡಿಚಿ ತಾಮ್ರದ ತಾಯಿತದಲ್ಲಿ ಹಾಕಿಕೊಡುವರು. ತಾಯಿತದ ಮೇಲೆ ಆದಿಶಕ್ತಿ, ಶನಿದೇವ, ಸೂರ್ಯ ಚಂದ್ರರ ಚಿತ್ರಗಳಿರುತ್ತವೆ. ಅಂಥ ತಾಯಿತವನ್ನು ಕುತ್ತಿಗೆಗೋ ತೋಳಿಗೋ ಸದಾ ಕಟ್ಟಿಕ್ಕೊಂಡಿದ್ದರೆ ಅಂಥವರಿಗೆ ದೆವ್ವದ ಬಾಧೆ ನಿವಾರಣೆ ಯಾಗುವುದೆಂದು ನಂಬಿಕೆಯಿದೆ. ದೆವ್ವದ ಬಿಡುಗಡೆಗೆ ನಾನಾ ರೀತಿಯ ಹರಕೆ ಕಟ್ಟಿಕೊಳ್ಳುವರು. ಭುಕ್ತಿ ಪರ ಮಾಡಿಸುವುದು, ಜಡೆಮನಿ ಹಬ್ಬ, ಭೂಮಿ ಸಿದ್ಧಪ್ಪನ ಹಬ್ಬ, ದುರುಗಮ್ಮ, ಹಾಳುಕೋಟಿ ಮಾರಮ್ಮನ ಹಬ್ಬ ಮಾಡಿಸುವುದು ಕಂಡುಬರುತ್ತದೆ.

ಆರೋಗ್ಯವಂತರಿಗೆ ಕಸಪೊರಕೆಯಿಂದ ಹೊಡೆದರೆ ಸೊರಗುತ್ತಾರೆ. ಆದರೆ ದೆವ್ವ ಬಂದವರಿಗೆ ಕಸಪೊರಕೆಯಿಂದ ಹೊಡೆದರೆ ದೆವ್ವ ಬಿಟ್ಟೋಡುತ್ತದೆ ! ದೆವ್ವದಿಂದ ಸೊಗಿರುವವರು ಸುಧಾರಿಸುತ್ತಾರೆ.

ಅಮಾವಾಸ್ಯೆಗೂ ದೆವ್ವಕ್ಕೂ ನಂಟು. ದೆವ್ವದ ಸೋಂಕು ತಗಲಿದವರು, ಅಮಾವಾಸ್ಯೆಯ ನಡುರಾತ್ರಿ ಮಣ್ಣಿನ ಪರಿವಾಣದಲ್ಲಿ ಎಲೆ ಅಡಿಕೆ ತಂಬಾಕು ಬಾಳೆಹಣ್ಣು ಲಿಂಬೆಹಣ್ಣು ಸಹಿತ ಮೂರು ದಾರಿ ಕೂಡುವಲ್ಲಿ ಆಹಾರವಾಗಿ ಇಡಬೇಕು. ಅದಕ್ಕೆ ತೃಪ್ತಿಪಟ್ಟು ಹಿಡಿದ ದೆವ್ವ ಬಿಡುವುದೆಂದು ಉತ್ತರ ಕರ್ನಾಟಕದ ಧಾರವಾಡ, ಗದಗ, ಹಾವೇರಿ ಪ್ರದೇಶದಲ್ಲಿ ಜನರು ನಂಬುವುದಾಗಿ ದಾಖಲಾಗಿದೆ.

ಜನಪದರಲ್ಲಿ 'ಗಾಳಿ' ದೇವಸ್ಥಾನ ಪಡೆದು ಕೊಂಡಿರುವುದುಂಟು. ಕಾಲರ, ಸಿಡಬು ಮೊದಲಾದ ಕಾಯಿಲೆಗಳಿಗೆ ದೇವತೆಗಳನ್ನು ಕಲ್ಪಿಸಿಕೊಂಡಿರುವಂತೆ ಗಾಳಿಗೂ ಕಲ್ಪಿಸಿದೆ. ಅದಕ್ಕೆ ಸಾಕ್ಷಿ ಗಾಳಮ್ಮ, ಭೂತಮ್ಮ, ಪೀಡೆಯಮ್ಮ, ದೇವತೆಗಳು. ಆ ದೇವತೆಗಳಿಗೆ ನಡೆದುಕೊಂಡರೆ ಗಾಳಿ ಸೋಂಕು ನಿವಾರಣೆಯಾಗುವುದೆಂಬ ನಂಬಿಕೆಯಿದೆ. ಗಾಳಿಕಲ್ಲು ಕೂಡ ದೇವತೆ ಸ್ಥಾನ ಪಡೆದಿದೆ. ಅದಕ್ಕಂದೇ ಗಾಳಿ ಕಲ್ಲಿಗೆ ನಡೆದುಕೊಳ್ಳುತ್ತಾರೆ.

ದೆವ್ವದ ಕಲ್ಪನೆ ಪ್ರಚೀನ ವಾದದ್ದು. ದೆವ್ವಮೆಟ್ಟಿಕೊಳ್ಳುವುದೂ ಪ್ರಾಚೀನ ಕ್ರಿಯೆಯೇ. ಮನುಷ್ಯನಲ್ಲಿ ಭಯ ಕಾಣಿಸಿಕೊಂಡಾಗ ದೆವ್ವವೂ ಕಾಣಿಸಿಕೊಂಡಿತು. ಮದ್ದಿನಿಂದ ವಾಸಿಯಾಗದ ಕಾಯಿಲೆಗೆ ದೆವ್ವದ ಕಾಟವೆಂದು ಹೆಸರಿಸಲಾಯಿತು. ದೆವ್ವ ಭೂತ ಪಿಶಾಚಿಗಳು ಕಾಯಿಲೆಗಳಿಗೆ ಕಾರಣವೆಂಬ ಭ್ರಮೆ ಬೆಳೆಯಿತು. ಸತ್ತವನ ಆತ್ಮ ದೆವ್ವ ಪೀಡೆಯಾಗಿ ಕಾಡುತ್ತದೆ, ರೋಗ ರುಜಿನಗಳನ್ನು ಹರಡುತ್ತದೆಯೆಂದು ಪ್ರತೀತಿಯಾಯಿತು. ಭೂತ ತೃಪ್ತಿಯಾದರೆ ರೋಗನಿವಾರಣೆಯಾಗುವುದೆಂಬ ತಪ್ಪು ಕಲ್ಪನೆ ಹುಟ್ಟಿಕೊಂಡಿತು. ಮಾನಸಿಕ ನೆಮ್ಮದಿಗಾಗಿ ಯಂತ್ರ ತಂತ್ರ ಮಾಟ ಮಂತ್ರ ಬದುಕಿನ ಅವಿಭಾಜ್ಯ ಅಂಗವಾದವು. ದೆವ್ವ ಬಿಡಿಸುವವರು ಹೆಚ್ಚಾದಂತೆ, ದೆವ್ವ ಬರುವವರೂ ಹೆಚ್ಚಾದರು!. ಮಂತ್ರ ವಾದಿಯಿಂದ ಭೂತಹಿಡಿಸುವವರು, ಮಾಟ ಮಂತ್ರದಿಂದ ಭೂತ ಬಿಡಿಸುವವರು ಹುಟ್ಟಿಕೊಂಡರು. ಇದೆಲ್ಲಾ ವಾಮಾಚಾರದ ಅಂಗವಾಯಿತು.

ಹೊಸದಾಗಿ ಕಟ್ಟಿದ ಮನೆಯಲ್ಲಿ 'ಗಾಳಿ ಸಂಚಾರ' ವಿರುತ್ತದೆ. ಅದಕ್ಕಾಗಿ ಗೃಹಪ್ರವೇಶ ಪೂಜೆ ಮಾಡಿಸಬೇಕು. ಎಮ್ಮೆ ದನ ಕರು ಕರೆಯುವ ಹಸುವನ್ನು ಮೊದಲು ಪ್ರವೇಶಿಸಬೇಕು. ಅನಂತರ ಜನರು ವಾಸಕ್ಕೆ ತೊಡಗಬೇಕು. ಇಂಥ ನಂಬಿಕೆಯೂ ಉಂಟು.

ಧೂಳುಗಾಲಿನಲ್ಲಿ ಮನೆಯ ಒಳಗೆ ಪ್ರವೇಶಿಸಬಾರದು. ಧೂಳಿನಿಂದ ಗಾಳಿ ಬರುತ್ತದೆ. ಆದ್ದರಿಂದ ಹೊರಗಿನಿಂದ ಬಂದವರು ಹಿಮ್ಮಡಿ ಸಹಿತ ಶುಭ್ರವಾಗಿ ಕಾಲು ತೊಳೆದು ಮನೆಗೆ ಪ್ರವೇಶಿಸಬೇಕು. ಶನಿ ಹಿಡಿಯುವುದೂ ದೆವ್ವ ಹಿಡಿಯುವ ಮತ್ತೊಂದು ರೂಪವೆಂಬ ಅಭಿಪ್ರಾಯವಿದೆ.

ಶೃಂಗಾರ ಮಾಡಿದ ಮಕ್ಕಳು, ಸಂಜೆಯ ಹೊತ್ತು ಹೊರಗಡೆ ತಿರುಗಾಡಿದರೆ

ಗಾಳಿಸೋಂಕು ತಗಲುವುದೆಂದೂ ಅಭಿಪ್ರಾಯ ಪಡಲಾಗಿದೆ. ಮಕ್ಕಳಲ್ಲಿ ಕಾಣಿಸಿಕೊಳ್ಳುವ ಬಾಲಗ್ರಹ ತೊಂದರೆಯನ್ನು ಪೀಡೆಯಾಗಿ ಪರಿಗಣಿಸುವುದಿದೆ.

ಅಲೆಮಾರಿಯಾಗಿದ್ದ ಆದಿ ಮಾನವ ಕೃಷಿಕನಾಗಿ, ಗ್ರಾಮ ನಿರ್ಮಾಣ ಮಾಡಿ ನೆಲೆನಿಂತ ಮೇಲೆ ತನಗೆ ಸಹಾಯಕ ವಾಗಲು ಕೆಲವು ಪ್ರಣಿಗಳನ್ನು ಸಾಕಿದ. ಇಂಥ ಸಾಕುಪ್ರಾಣಿಗಳಿಗೆ ಬರಹುದಾದ ಕಾಯಿಲೆಗಳಿಗೂ ದೆವ್ವದ ಕಾಟವೇ ಕಾರಣವೆಂದು, ಅದರ ನಿವಾರಣೆಗಾಗಿ ಕೆಲವು ಆಚರಣೆಗಳನ್ನು ಕಲ್ಪಿಸಿದ.

ತಾವು ಬಿತ್ತಿ ನೆಟ್ಟು ಬೆಳೆಸಿದ ಸಸ್ಯ ಗಿಡ ಮರ ಫಸಲಿಗೆ ತೊಂದರೆಯಾದಾಗ, ಅದು ದೆವ್ವದ ಕಾಟವೆಂದು ಭಾವಿಸಿ ನಿವಾರಣೆಗಾಗಿ ಜಡೆಮುನಿ ಅಥವಾ ಮುನಿಯಪ್ಪನ ಪೂಜೆ ಮಾಡುವರು. ಪ್ರಾಣ ಬಲಿಕೊಟ್ಟು ಅದರ 'ಈರಿ' ಹೊಗೆ ಹರಡಿಸಿ, ರಕ್ತದಿಂದ ಕಲೆಸಿದ ಅನ್ನವನ್ನು ಚರಗು ಚೆಲ್ಲುವರು. 'ಬಲಿಯೋ ಬಲಿ' ಎಂದು ಸಾರುವರು.

ಹುಣಿಸೆ ಮರ, ಆಲದ ಮರ, ಬೇವಿನ ಮರ, ಗೊಬ್ಬಳಿಮರ, ಕಳ್ಳಿಗಿಡದಲ್ಲಿ ದೆವ್ವ ನೆಲಸವುದೆಂಬುದು ಸಾಮಾನ್ಯ ತಿಳವಳಿಕೆ. ಇತರ ಕೆಲವು ಮರಗಳಿಗೂ ಹೀಗೇ ಹೇಳುವವರು.

ಜನರು ವಾಸಿಸುವ ಊರಿಗೆ ಬರಬಾರದ್ದು ಬಂದರೆ, ಅದು ದೆವ್ವದ ಕಾಟವೆಂದು ಬಗೆದು, ಅದಕ್ಕೂ ರಕ್ತ ಬಲಿ, ಚರಗು ಚೆಲ್ಲುವರು, ಮಧ್ಯರಾತ್ರಿಯಲ್ಲಿ ಊರು ಸುತ್ತ ಹರೊಕ್ಕುವರು. ಹರೊಕ್ಕುವಾಗ ಬೆತ್ತಲೆಯಿರುತ್ತಾರಂತೆ, ಅವರನ್ನು ಯಾರೂ ನೋಡಬಾರದಂತೆ, ಒಂದು ವೇಳೆ ನೋಡಿದರೆ ಅಂಥವರು ರಕ್ತಕಾರಿ ಸಾಯುವರಂತೆ. ಇಂಥ ವಿಧಿಯನ್ನು ಪರಂಪರೆಯಿಂದ ನೇಮಕವಾಗಿರುವ ನಿರ್ದಿಷ್ಟ ಜಾತಿಯವರು, ನಿರ್ದಿಷ್ಟ ಮನೆತನ ದವರು ನೆರವೇರಿಸುತ್ತಾರೆ. ಊರಿನ ಯೋಗಕ್ಷೇಮದ ಈ ಆಚರಣೆಗೆ ಎಲ್ಲರೂ ಸಹಕರಿಸುತ್ತಾರೆ. ಊರಿಗೇ ದೆವ್ವ ಮೆಟ್ಟಿಕೊಳ್ಳುವ ಕಲ್ಪನೆ ವಿಚಿತ್ರವಾದುದು.

ಹಿಂದೆ ಮುಸಲ್ಮಾನರು ದೆವ್ವ ಆಗುವುದಿಲ್ಲವೆಂದು ಹೇಳುತ್ತಿದ್ದರು. ಈಗ ಅವರಲ್ಲೂ ದೆವ್ವ ಆಗುವ ನಂಬಿಕೆ ಇದ್ದಂತೆ ಕಾಣುತ್ತದೆ. ಇದು ಮತಾಂತರ ಹೊಂದಿದ ಮುಸಲ್ಮಾನರ ಭಾವನೆಯಿರಬಹುದು. ಮುಸಲ್ಮಾನರಿಗೂ ದೆವ್ವ ಬರುತ್ತದೆ. ಅವರಲ್ಲೂ ದೆವ್ವ ಬಿಡಿಸುವವರಿದ್ದಾರೆ. ಸೂಫಿಸಂತರ ದರ್ಗಗಳಲ್ಲಿ ಈ ಕ್ರಿಯೆ ಉಂಟು. ದೆವ್ವ ಬಂದಾಗ ಬಿಡಿಸಿಕೊಳ್ಳಲು ಮುಸಲ್ಮಾನರು ಹಿಂದೂ ಸ್ಥಳಗಳಿಗೂ ಹಿಂದೂಗಳು ಮುಸಲ್ಮಾನರ ಸ್ಥಳಗಳಿಗೂ ಹೋಗುವುದನ್ನು ಅಲ್ಲಲ್ಲಿ ಕಾಣಬಹುದು. ದೆವ್ವಗಳಿಗೆ ಜಾತಿ ಧರ್ಮಗಳು ಇದ್ದಂತಿಲ್ಲ ! ಎಲ್ಲಾ ದೆವ್ವಗಳೂ ಒಂದೇ ತರಹ ಆಡುತ್ತವೆ. ಒಂದೇ ತರಹ; ಬಿಡಿಸಿಕೊಳ್ಳುತ್ತವೆ, ಒಂದೇ ತರಹ ದಂಡ ತೆರುತ್ತವೆ.

ಮುಸಲ್ಮಾನರು ಆಚರಿಸುವ ಮೊಹರಂ ಹಬ್ಬದ ಕವಡಿ ಲೋಬಾನ ದೆವ್ವದ ಶತ್ರುವಂತೆ. ಲೋಬಾನದ ಗಾಳಿಯಿಂದ ಆವಾಹನೆಯಾಗಿರುವ ದೆವ್ವ ಓಡಿ ಹೋಗುತ್ತದಂತೆ. ಶಿರಹಟ್ಟಿ ತಾಲ್ಲೂಕು ಲಕ್ಷ್ಮೇಶ್ವರದ ದೂಧಫೀರಾ ದರ್ಗ, ನವಲಗುಂದ ತಾಲ್ಲೂಕು ಅಡ್ನೂರಿನ ಹುಸೇನ ಶ್ಯಾವಲ ದರ್ಗ, ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕು ಕರೇಶಿಯ ದರ್ಗ, ಬಿಜಾಪುರದ ಜೋಡಿ ಗುಂಬಜ್ ಕ್ಷೇತ್ರಗಳು ದೆವ್ವದ ಮಾರಿ ನಿವಾರಣೆಗೆ ಹೆಸರಾಗಿವೆ. ದೆವ್ವ ಬಂದವರು ಅಲ್ಲಿ ಉಪಶಮನ ಪಡೆಯುವರು.

ಕ್ರಿಶ್ಚಿಯನ್ನರಲ್ಲೂ ದೆವ್ವದ ನಂಬಿಕೆಗಳಿವೆ. ಅವರಲ್ಲೂ ದೆವ್ವ ಬಡಿದುಕೊಳ್ಳುವ, ನಿವಾರಿಸುವ ಧಾರ್ಮಿಕ ಕ್ರಿಯೆಗಳಿವೆ. ಒಟ್ಟಿನಲ್ಲಿ ದೆವ್ವಗಳು ಯಾವ ಧರ್ಮದವರನ್ನೂ ಬಿಟ್ಟಂತಿಲ್ಲ. ಯೂರೋಪ್ ದೇಶಗಳಲ್ಲಿ ಮಾನಸಿಕ ಕಾಯಿಲೆಯವರನ್ನು ದೆವ್ವಗಳೆನ್ನುತ್ತಿದ್ದರು. ಅಂಥವರನ್ನು ಜೀವ ಸಹಿತ ಸುಡುತ್ತಿದ್ದರು.

ಭಾಷಿಕ ಜಾನಪದದಲ್ಲೂ 'ದೆವ್ವದ ಬಳಕೆಯಿದೆ'. 'ಕತ್ತಲು ಮನೆಗೆ ಕರಿದೆವ್ವ' ಎಂಬ ಒಗಟು 'ಎಣ್ಣೆಗಡಿಗೆ' ಯನ್ನು ಸೂಚಿಸುತ್ತದೆ.

ದೆವ್ವದ ಬಗೆಗೆ ಗಾದೆಗಳೂ ರೂಢಿಯಲ್ಲಿವೆ. ಉದಾಹರಣೆಗೆ :

೧. ಹೋದೆಯಾ ಪಿಶಾಚಿ ಅಂದ್ರೆ. ಬಂದೆ ಗವಾಕ್ಷೀಲಿ ಅಂತು.
೨. ದೇವರು ಸುಮ್ಮನಿದ್ದರೂ ದೆವ್ವ ಸುಮ್ಮನಿರದು.
೩. ದೆವ್ವದ ಕೈಗೆ ದಡಿಕೊಟ್ಟಂಗೆ.
೪. ದೆವ್ವ ಹೊಕ್ಕ ಮನೆಯಂಗೆ.
೫. ದೆವ್ವಕ್ಕೆ ಧೂಪ ತೋರಿಸಿದಂಗೆ.
೬. ದೆವ್ವ ಬಿಡಿಸ್ತೀನಿ ಅಂತ ಹೋದವನ ದೆವ್ವ ಹಿಡ್ಕಂತು.
೭. ಹಾದೀಲಿ ಹೋಗುವ ದೆವ್ವವನ್ನು ಮನೆಗೆ ಕರೆದಂಗೆ.
೮. ದೆವ್ವಕ್ಕೆ ಸಿಂಗಾರ ಮಾಡಿದಂಗೆ.
೯. ಮಂತ್ರ ಹಾಕಿದರೆ ಮಾವಿನಕಾಯಿ ಬೀಳಲ್ಲ, ಯಂತ್ರ ಕಟ್ಟಿದರೆ ದೆವ್ವ ಬಿಡಲ್ಲ.
೧೦. ಹೆಂಡ್ತಿ ಕಟ್ಕಂಡು ಬರ್ತೀನಿ ಅಂತ ಹೋಗಿ ದೆವ್ವ ಕಟ್ಕಂಡು ಬಂದ.
೧೧. ದೆವ್ವಕ್ಕೆ ಹೆದರ್ತೀಯಾ ಗುಂಡ ಅಂದರೆ, ಹೆಂಡತಿಗೆ ಹೆದರ್ತೀನಿ ಅಂದ.
೧೨. ಹೆದುರುವವರ ಮೇಲೆ ದೆವ್ವ ಬಿದ್ದಂಗೆ.
೧೩. ಥೈಯ ಥೈಯ ಅಂತ ಕುಣಿದರೆ ದೆವ್ವ ಬರದೇ ಇದ್ದದಾ ?
೧೪. ದೇವಾಂಗದವರ ಮನೇಲಿ ದೆವ್ವಕ್ಕೂ ಕೆಲಸ.
೧೫. ದೇವರು ವರಕೊಟ್ಟರೂ ದೆವ್ವ ವರ ಕೊಡಲ್ಲ.
೧೬. ದೇವರು ಮಾಡುಕೋಗಿ ದೆವ್ವ ಕೂಡ್ಕಂಡ.

೧೭. ದೆವ್ವ ತಿನ್ನೋನಿಗೆ ದನವೊಂದು ಈಡೇ ?

೧೮. ದೆವ್ವದ ಸಂಗವು ಒಂದೇ, ದರವೇಸಿ ಸಂಗವೂ ಒಂದೇ.

೧೯. ದೇವರು ಹೆರು ಅಂದ್ರೆ ದೆವ್ವ ಹೆತ್ತಳು.

೨೦. ದೇವರು ಕೊಡೇ ದಮಯಂತಿ ಅಂದರೆ, ದೆವ್ವ ಕೊಡ್ತೀನಿ ತಕ್ಕೋ ಅಂದಳು.

೨೧. ದೇವರಂಥ ಜನರಿಗೆ ದೆವ್ವದಂಥ ನಾಯಕ.

೨೨. ಹಾಲು ಕುಡಿದ ದೇವರೇ ಬದುಕಲ್ಲ, ವಿಷ ಕುಡಿದ ದೆವ್ವ ಬದುಕುತ್ತಾ?

೨೩. ದೆವ್ವದೊಂದಿಗೆ ಸರಸ ಆಡೋಳು ದೇವರು ಬಿಡ್ತಾಳಾ ?

೨೪. ದೇವರೊಂದಿಗೆ ಮದುವೆ, ದೆವ್ವದೊಂದಿಗೆ ಸಂಸಾರ.

೨೫. ದೆವ್ವದ ಹೊಟ್ಟೇಲಿ ದೇವರು ಹುಟ್ಟುತ್ತಾ?

೨೬. ದೆವ್ವ ನಂಬಿಕೊಂಡು ದೇವರು ಬಿಟ್ಟಂಗೆ.

೨೭. ದೆವ್ವದ ಸಂಗ ಅಭಿಮಾನ ಭಂಗ.

೨೮. ಬ್ರಾಹ್ಮಣನ ಸಹವಾಸ ಬ್ರಹ್ಮಪಿಶಾಚಿ ಸಹವಾಸ.

೨೯. ಬೇಡಿದ್ದು ಭಾಗ್ಯ ಬಂದಿದ್ದು ಬೇತಾಳ.

೩೦. ಋಣ ತೀರಿಸ್ದೆ ಸತ್ತರೆ ರಣ ಆಯ್ತಾರೆ.

೩೧. ದೇವರು ಮಾಡುಕ್ಕೋಗಿ ದೆವ್ವ ಮಾಡಿದ.

೩೨. ದೆವ್ವ ಬೀದಿಗಿಳಿದರೆ ದೇವರು ಬೇಲಿ ಹಾರ್ತು.

೩೩. ದೆವ್ವದೊಂದಿಗೆ ಸಂಸಾರ, ಬಾಳೋ ಮನೇಲಿ ನಗಸಾರ.

೩೪. ಒಲೆಯಿಲ್ಲದ ಮನೆಯಿಲ್ಲ, ದೆವ್ವಯಿಲ್ಲದ ಊರಿಲ್ಲ.

೩೫. ಅಯ್ಯನಿಗಿಂತ ದೈಯ ವಾಸಿ.

೩೬. ಕಾಡಿನ ದೆವ್ವ ಬಂದು ಮನೆ ದೆವ್ವ ಓಡಿಸಿತು.

೩೭. ದೇವರಿಗಿಂತ ದೆವ್ವ ವಾಸಿ.

೩೮. ಹೆಣ್ಣು ದೆವ್ವ ಮಾತಾಡಿಸಿದರೆ ಉಟ್ಟಪಂಚೆ ಬಿಚ್ಚಿಸ್ಕಂಡಂಗೆ

೩೯. ದೆವ್ವ ಹಿಡಿದವನಿಗೆ ದೆವ್ವದ ಯೋಚನೆ ಏನು ?

೪೦. ಅರಮನೇಲಿ ದೈವ, ಪಾಳು ಮನೇಲಿ ದೆವ್ವ

೪೧. ಊರು ದೂರದ ಗುಡಿಯಾಗೆ ದೆವ್ವದ ದರ್ಬಾರು.

೪೨. ಜಾತಿ ಬಿಟ್ಟರೂ ದೆವ್ವದ ಬಿಡುಕ್ಕಾಗಲ್ಲ.

೪೩. ಭಯದಿಂದ ಭಕ್ತಿ ದೆವ್ವದಿಂದ ದೈವ.

೪೪. ದೆವ್ವ ಬೀದಿಗೆ ಬಂದರೆ ದೇವರು ಮೂಲೆಗುಂಪು.

೪೫. ದೆವ್ವದ ದರ್ಬಾರಿನಲ್ಲಿ ದೇವರಿಗೇನು ಕೆಲಸ ?

೪೬. ದೆವ್ವಕ್ಕೆ ಮಂತ್ರ ಹಾಕಿಸಿದಂಗೆ.

೪೭. ಪಿಶಾಚಿ ಗಂಟುಬಿದ್ದಂಗೆ.

ದೆವ್ವವನ್ನು ಆಧಾರವಾಗಿಟ್ಟುಕೊಂಡು ಹುಟ್ಟಿರುವ ನುಡಿಗಟ್ಟುಗಳಿಗೆ ಲೆಕ್ಕವಿಲ್ಲ. ಉದಾಹರಣೆಗೆ : ದೆವ್ವ ಮೆಟ್ಟು, ದೆವ್ವ ಬಡಿ, ದೆವ್ವ ಹಿಡಿ, ಕರಿದೆವ್ವ, ಕೊಳ್ಳಿದೆವ್ವ, ಗಾಳಿಸೋಂಕು, ಗಾಳಿಕಲ್ಲು, ಗಾಳಿಬಡಕೋ, ಗಾಳಿ ಹೊಕ್ಕು, ಗಾಳಿ ಚೇಷ್ಟೆ ಗಾಳಿ ಪೂಜೆ, ಬ್ರಹ್ಮ ಪಿಶಾಚಿ, ಭೂತಪಿಶಾಚಿ, ಭೂತ ತೃಪ್ತಿ ಶಂಕ ಕಲ್ಲು ಪಿಶಾಚಿ ಮಳೆ, ಗಾಳಿ ಪಾಲಾಗು, ಗಾಳಿ ಹಿಡಿ, ರಣ ಪಿಶಾಚಿ, ಮೋಹಿನಿ ಕಾಟ, ಸೆಳವು ದೆವ್ವ, ದೆವ್ವ ದುಡಿತ, ದೆವ್ವ ಬಾಳೆ, ಬಾಣಂತಿ ದೆವ್ವ, ಪೈಶಾಚಿಕ ಭಾಷೆ, ಬಿಳಿಮೋಹಿನಿ, ಅಮಾವಾಸ್ಯೆ ಮೋಹಿನಿ, ತಿಂಗಳು ಮೋಹಿನಿ, ರಣಮುನಿ, ದೆವ್ವಗಾಳಿ, ದೆವ್ವಕಡಿ, ದೆವ್ವಗಣ್ಣು, ಗಾಳಿ ಕಣ್ಣು, ದೆವ್ವತಿರುಗೋ ಹೊತ್ತು.

ದೆವ್ವಕ್ಕೆ ಸಂಬಂಧಿಸಿದಂತೆ ಹಲವು ಬೈಗುಳಗಳು ಹುಟ್ಟಿಕೊಂಡಿವೆ. ಉದಾಹರಣೆಗೆ :

೧. ನಿನಗೆ ದೆವ್ವ ಬಡಿಯಾ.

೨. ನಿನಗೆ ದೆವ್ವ ಮೆಟ್ಟಿಕೊಳ್ಳ.

೩. ನಿನಗೆ ದೆವ್ವ ಮೆಟ್ಟಿಕೊಂಡು ಹೊತ್ಕೊಂಡೋಗ.

೪. ನಿನಗೆ ದೆವ್ವ ಬಂದು ಮುರಿಕಂಡೋಗ.

೫. ನಿನಗೆ ದೆವ್ವ ಬಡಿದು ರಕ್ತ ಕಾರಿ ಸಾಯ.

೬. ನಿನ್ನ ಹಟ್ಟಿ ದೆವ್ವದ ಹಟ್ಟಿಯಾಗ.

೭. ನಿನಗೆ ದೆವ್ವ ಬಡಿದು ಅತಂತ್ರದಲ್ಲಿ ಕರ್ಕೊಂಡೋಗ.

೮. ಹತ್ತಿರಕ್ಕೆ ಬಾ ದೆವ್ವ ಬಿಡಿಸ್ತೀನಿ.

೯. ದೆವ್ವದಂತೋನೆ.

ಮಾತಿನ ನಡುವೆ ಲೀಲಾಜಾಲವಾಗಿ ದೆವ್ವವನ್ನು ಬಳಸುವುದುಂಟು. ಉದಾಹರಣೆಗೆ : ನಿನಗೇನು ದೆವ್ವ ಮೆಟ್ಟಿಕೊಂಡಿದೆಯಾ ? ದೆವ್ವ ಮೆಟ್ಕಂಡಂಗೆ ಆಡ್ತಾಳೆ. ಮೈಮೇಲೆ ದೆವ್ವ ಬಂದದೆ. ಊರಿಗೆ ದೆವ್ವದಂಗೆ ವಕ್ರಸಿದ್ದಾನೆ. ದೆವ್ವಕ್ಕೆ ರಕ್ತ ರುಚಿ. ದೆವ್ವಕ್ಕೆ ದಯೆಯಿಲ್ಲ.

ಪಿಶಾಚಿಗಳಿಗೂ ಒಂದು ಭಾಷೆಯಿದೆಯಂತೆ. ಅದನ್ನು ಪೈಶಾಚಿಕ ಭಾಷೆ ಎನ್ನುವರು. ಗುಣಾಢ್ಯನ ಬೃಹತ್ಕಥಾಕೋಶ ಪೈಶಾಚಿಕ ಭಾಷೆಯಲ್ಲಿದೆ ಎಂದು ಉದಾಹರಣೆ ಕೊಡುವುದುಂಟು. ಕನ್ನಡದಲ್ಲೂ ಸಾಕಷ್ಟು ದೆವ್ವದ ಸಾಹಿತ್ಯ ಪ್ರಕಟವಾಗಿದೆ. ಕೆಲವು ಜನಪದ ದೆವ್ವದ ಕಥೆಗಳು ಸಂಗ್ರವಾಗಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಪತ್ರಕರ್ತ ತಿ.ತಾ.ಶರ್ಮರು, 'ದೆವ್ವದ ಕಥೆಗಳು' ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಕೆ.ವಿ. ಅಯ್ಯರ್ 'ದೆವ್ವದ ಮನೆ' ಎಂಬ ಕಥೆ ಬರೆದಿದ್ದಾರೆ. ಭಾರತದ ಬೇತಾಳ ಪಂಚ ವಿಂಶತಿ ಕಥೆಗಳು

ಬತ್ತೀಸ ಪುತ್ಥಳಿ ಕಥೆಗಳು ಲೋಕ ಪ್ರಸಿದ್ಧವಾಗಿವೆ.

ನನ್ನ ಬಾಲ್ಯದಲ್ಲಿ ದೆವ್ವದ ಹೆಸರು ಭಯ ಹುಟ್ಟಿಸುತ್ತಿತ್ತು. ಆದರೆ ಯು.ಕೆ.ಜಿ.ಯ ನನ್ನ ಮೊಮ್ಮಗಳು ರಂಜಿತಾಳಿಗೆ ದೆವ್ವದ ಹೆಸರು ಭಯಹುಟ್ಟಿಸುವಂತೆ ಕಾಣುತ್ತಿಲ್ಲ. ಅವಳು ಶಾಲೆಯಲ್ಲಿ ಸ್ನೇಹಿತೆಯಿಂದ ಕಲಿತು ಬಂದ ಇಂಗ್ಲೀಷ್ ಕನ್ನಡ ಮಿಶ್ರದ ಹಾಡನ್ನು ನರ್ತಿಸುತ್ತಾ ಹೀಗೆ ಪಲುಕುತ್ತಾಳೆ :

ಐ ವೆಂಟ್ ಟು ಅಮೆರಿಕ
ಐ ಸಾ 'ಬಿಳಿಮುಖಿ'
ಐ ವೆಂಟ್ ಟು ಡೆಲ್ಲಿ
ಐ ಸಾ 'ಕುಳ್ಳಿ'
ಐ ವೆಂಟ್ ಟು ಗೋವ
ಐ ಸಾ 'ದೆವ್ವ'!

ಅಳುವ ಮಕ್ಕಳನ್ನು ಸುಧಾರಿಸುವಾಗ, ಮಕ್ಕಳನ್ನು ತೊಟ್ಟಿಲಲ್ಲಿ ಮಲಗಿಸಿ ಜೋಗುಳ ಹಾಡುವಾಗ, ಹಳ್ಳಿಯ ತಾಯಂದಿರು ದೆವ್ವವನ್ನು 'ಗುಮ್ಮನ ಕಲ್ಪನೆ ಮಾಡಿ' ಗುಣುಗಿಸಿಸುವರು.

ಅತ್ತಿಯ ಮರಕ್ಕೆ ಹತ್ತ್ಯತೆ ಗುಮ್ಮ
ಹತ್ತೇಳ ಹಣ್ಣ ಮೆದ್ದ್ಯತೆ ಗುಮ್ಮ
ಗುಮ್ಮ ಬಂದೀತು ಸುಮ್ಮನಿರೋ ಕಂದ.

ಹಿಂಸೆ ಕೊಡುವ ದೆವ್ವಗಳಿರುವಂತೆ ಸಹಾಯ ಮಾಡುವ ಕರುಣಾಳು ದೆವ್ವಗಳೂ ಉಂಟು. ಅಸಹಾಯಕ ಗರ್ಭಿಣಿಯರಿಗೆ, ಬಾಣಂತಿಯರಿಗೆ, ಮುದುಕಿಯ ವೇಷದಲ್ಲಿ ಬಂದು ಸಹಾಯ ಮಾಡುವ ದೆವ್ವದ ಕಥೆಗಳಿವೆ. ಹಿಂದೆ ಚಂದಮಾಮ ಪತ್ರಿಕೆಯಲ್ಲಿ ಇಂಥ ಕಥೆಗಳು ಸಚಿತ್ರವಾಗಿ ಪ್ರಕಟವಾಗುತ್ತಿದ್ದವು. ಅಲ್ಲಾವುದೀನನ ಅದ್ಭುತ ದೀಪದ ದೆವ್ವ ತನ್ನ ಅಸಾಧಾರಣ ಸಾಹಸಗಳಿಂದ ಜಗದ್ವಿಖ್ಯಾತವಾಗಿದೆ. ಜಾಗತಿಕ ಮಹಾನಾಟಕಕಾರ ಷೇಕ್ಸ್ಪಿಯರ್ ತನ್ನ ನಾಟಕಗಳಲ್ಲಿ ದೆವ್ವವನ್ನು ಪಾತ್ರವಾಗಿ ಬಳಸಿದ್ದಾನೆ ಎಂದ ಮೇಲೆ ದೆವ್ವಕ್ಕಿರುವ ಕಿಮ್ಮತ್ತು ಕಡಮೆಯಲ್ಲ ಎಂದು ಸಾಬೀತಾಗುತ್ತದೆ. ಇಂಗ್ಲೀಷ್ ಭಾಷೆಯಲ್ಲಿ ಪ್ರಸಿದ್ಧವಾಗಿರುವ ಡ್ರಾಕುಲಾ ಕಥೆಗಳು ದೆವ್ವದ ಕಥೆಗಳ ಇನ್ನೊಂದು ಮಾದರಿ. ಆದಿಮಾನವನ ಪಿಶಾಚಿ ಕಲ್ಪನೆಗೆ ದೆವ್ವದ ನಂಬಿಕೆಯೇ ಕಾರಣವಾಗಿರಬಹುದು. ಹಿಂದೂಗಳು ಆಚರಿಸುವ ಪಿತೃಪಕ್ಷದ ಪೂಜೆಯಲ್ಲಿ ದೆವ್ವದ ಪೂಜೆಯೂ ಅಡಗಿದೆ. ದೆವ್ವವೇ ದೈವವಾಯಿತೆಂಬ ಹೇಳಿಕೆಯೂ ಇದೆ. ಒಟ್ಟಿನಲ್ಲಿ ದೆವ್ವ ಬದುಕಿನ ಅವಿಭಾಜ್ಯ ಅಂಗವಾಗಿದೆ. ಏನೇ ಆಗಲಿ ದೆವ್ವದ ಬಗೆಗೆ ಎಚ್ಚರ ವಾಗಿರುವುದು ಒಳ್ಳೆಯದು.

ಜಗತ್ತಿನ ಎಲ್ಲಾ ಜನಾಂಗಗಳಲ್ಲೂ ದೆವ್ವದ ನಂಬಿಕೆ ಇದೆ. ದೆವ್ವದ ಕಥೆಯಿಲ್ಲದ ದೇಶವಿಲ್ಲ, ಜನಾಂಗವಿಲ್ಲ. ದೆವ್ವದ ಹೇಳಿಕೆಗಳು, ಐತಿಹ್ಯಗಳು ಎಲ್ಲಾ ಕಡೆ ದಂಡಿಯಾಗಿವೆ. ಆದರೆ ಕಥೆಗಳು ಕಡಮೆ. ಅವೆಲ್ಲವೂ ಸರಳ ಕಥೆಗಳಾಗಿರುತ್ತವೆ. ಒಂದೆರಡು ಆಶಯಗಳಲ್ಲಿ ಅವು ಮುಗಿಯುತ್ತವೆ. ದೆವ್ವದ ಕಥೆಗಳಲ್ಲಿ ಸಂಕೀರ್ಣ ಕಥೆಗಳಿಲ್ಲ.

ದೆವ್ವದ ಆಹ್ವಾಹನೆ ಒಂದು ಮಾನಸಿಕ ರೋಗ. ದುರ್ಬಲ ಮನಸ್ಥಿತಿಯವರಿಗೆ ಸಾಮಾನ್ಯವಾಗಿ ಬರಬಹುದಾದ ರೋಗ. ಹಲವು ಸಂದರ್ಭಗಳಲ್ಲಿ ಅದು ಸೌಮ್ಯ ರೋಗ, ಕೆಲವು ಸಂದರ್ಭಗಳಲ್ಲಿ ಅದು ಉಗ್ರ ರೋಗ. ಅಧಿಕ ಮಾನಸಿಕ ಒತ್ತಡವೂ ಇದಕ್ಕೆ ಕಾರಣವಾಗಬಹುದು. ಸಹಜವಾದ ದೈಹಿಕ ಚಟುವಟಿಕೆಗೆ ಮಾರಕವಾಗುವಂಥದ್ದು. ಅಸಹಜತೆಯೇ ಅದರ ಪ್ರಧಾನ ಲಕ್ಷಣ.

ತೀವ್ರವಾದ ಮಾನಸಿಕ ರೋಗಿಗಳು, ಅತಿಯಾದ ಮಾನಸಿಕ ಒತ್ತಡದಿಂದ ಹೃದಯಾ ಘಾತಕ್ಕೂ ತುತ್ತಾಗ ಬಹುದು. ಮಿತಿಮೀರಿದರೆ, ಹುಚ್ಚು ರೋಗಕ್ಕೂ ಒಳಗಾಗಬಹುದು. ಅವುಗಳಿಂದ ತಪ್ಪಿಸಿಕೊಳ್ಳಲು ಪ್ರಕೃತಿ ಸೃಷ್ಟಿಸಿರುವ ಪರ್ಯಾಯ ಉಪಾಯವೇ ದೆವ್ವದ ಆವಾಹನೆ ಎನ್ನಬಹುದು. ಇದರಿಂದ ಕೆಲವು ತೊಂದರೆಗಳು ಇರಬಹುದಾದರೂ ಸಾವಿನ ಭಯ ಇರುವುದಿಲ್ಲ.

ದೆವ್ವದ ಆವಾಹನೆಗೆ ಖಚಿತವಾದ ಮದ್ದಿಲ್ಲ. ಪರ್ಯಾಯವಾದ ಉಪಶಮನ ಚಿಕಿತ್ಸೆ ಉಂಟು. ಅದನ್ನು ಜನಪದರು ನಿವಾರಿಸಿಕೊಳ್ಳವುದು ಒಂದು ಬಗೆ; ಮನೋವಿಜ್ಞಾನಿಗಳು ನಿವಾರಿಸುವುದು ಇನ್ನೊಂದು ಬಗೆ. ಇಬ್ಬರ ಗುರಿ ಒಂದೇ ; ಅನುಸರಿಸುವ ಮಾರ್ಗ ಬೇರೆ. ವೈಜ್ಞಾನಿಕ ಪರಿಹಾರ ಸಿಗುವುದಕ್ಕೆ ಮೊದಲು ಜನಪದ ಪರಿಹಾರವೆ ಸಾರ್ವತ್ರಿಕ ವಾಗಿತ್ತು. ಈಗಲು ಜನಪದದೇ ಮೇಲುಗೈ.

ದೆವ್ವಕ್ಕೂ ಜಾನಪದಕ್ಕೂ ಪ್ರಾಚೀನ ಕಾಲದಿಂದ ನಂಟಿದೆ. ದೆವ್ವದ ಪರಿಕಲ್ಪನೆ ಬಂದಾಗಲೇ ತನಗೆ ತಿಳಿದಂತೆ ಜನಪದ ಮನಸ್ಸು ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದೆ. ಅದೂ ಕೂಡ ಒಂದು ರೀತಿಯ ಉಪಶಮನದ ಮಾರ್ಗವೇ. ಅಸಹಜ ರೋಗಕ್ಕೆ ಅಸಹಜ ಚಿಕಿತ್ಸೆ, ಅಷ್ಟೇ.

ಜಾನಪದದಿಂದ ದೆವ್ವದ ಆವಾಹನೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಸಂಸಾರ ವೆಂದ ಮೇಲೆ ಮಾನಸಿಕ ಒತ್ತಡಗಳನ್ನುಂಟು ಮಾಡುವ ಸಂದರ್ಭಗಳು ಇದ್ದೇ ಇರುತ್ತವೆ. ಅವು ಬಂದಾಗ ಧೈರ್ಯದಿಂದ ಎದುರಿಸಲು ಸಿದ್ಧ ವಾಗಿರಬೇಕು. ಕುಟುಂಬ ಸದಸ್ಯರ ನಡುವೆ ಪರಸ್ಪರ ಸಂವಾದಿಸುವ ಮೂಲಕ ಪರಿಹಾರ ಮಾರ್ಗ ಕಂಡುಕೊಳ್ಳಬೇಕು. ಒಬ್ಬರೇ ಮನಸ್ಸಿನಲ್ಲಿ ಟ್ಟುಕೊಂಡು ಕುದಿಯಬಾರದು. ನಮಗೆ ತೊಂದರೆ ಬಂದಾಗ ನಮಗಿಂತಲೂ ತೊಂದರೆಯಲ್ಲಿರುವವರನ್ನು ನೋಡಿ ಸಮಾಧಾನ ತಂದುಕೊಳ್ಳಬೇಕು. ಯಾವ

ಸಂದರ್ಭದಲ್ಲಿಯೂ ಮನ ಸ್ಥೈರ್ಯವನ್ನು ಕಳೆದುಕೊಳ್ಳಬಾರದು; ಮನೋ ದೌರ್ಬಲ್ಯಕ್ಕೆ ಅವಕಾಶ ಕೊಡಬಾರದು. ಕುಟುಂಬ ಸದಸ್ಯರನ್ನು ಪರಸ್ಪರ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಕೀಳರಿಮೆಗೆ ಪಕ್ಕಾಗಬಾರದು; ಹಾಗೆಯೇ ಸ್ವಪ್ರತಿಷ್ಠೆಯನ್ನೂ ಮೈಗೂಡಿಸಿಕೊಳ್ಳಬಾರದು.

ಜನಪದ ಮನೋರಂಜನೆಯ ಕಾರ್ಯಕ್ರಮಗಳಲ್ಲಿ, ಧಾರ್ಮಿಕ, ಸಾಂಪ್ರದಾಯಿಕ ಆಚರಣೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಬದುಕಿನ ಏಕತಾನತೆಗೆ ಹೊರತಾಗಿ ಸಾಮೂಹಿಕವಾಗಿ ಉಲ್ಲಾಸದಾಯಕವಾದ ಚಟುವಟಿಕೆಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು. ಸಾಮೂಹಿಕ ಬದುಕಿನಲ್ಲಿ ಏಕಾಂತತೆಯ ಭಯಂಕರತೆ ಇರುವುದಿಲ್ಲ. ಜನಪದ ಸಂಗೀತ, ಕಲೆಗಳಲ್ಲಿ ಆಸಕ್ತಿ ತಾಳಬೇಕು. ಸಾಧ್ಯವಾದರೆ ಸ್ವತಃ ತೊಡಗಿಸಿಕೊಳ್ಳಬೇಕು ಮನಸ್ಸು ಲಲಿತ ಕಲೆಗಳತ್ತ ಹರಿದರೆ, ಉದ್ವಿಗ್ನತೆ ಕಡಮೆಯಾಗುತ್ತದೆ. ಸಮಾಧಾನ ಚಿತ್ತ ರೂಢಿಯಾಗುತ್ತದೆ. ದೈಹಿಕವಾಗಿ ಮಾನಸಿಕವಾಗಿ ಜರ್ಝರಿತಗೊಳಿಸುವ ಕೆಟ್ಟಯೋಚನೆಗಳನ್ನು ಮಾಡಬಾರದು. ಅತಿಯಾದ ಆಸೆ ಆಕಾಂಕ್ಷೆಗಳನ್ನು ಕಲ್ಪಿಸಿಕೊಳ್ಳಬಾರದು. ಅಲ್ಪ ತೃಪ್ತಿಯಿಂದ ಸಂಸಾರ ಮಾಡುವುದನ್ನು ಕಲಿಯ ಬೇಕು.

ಆಹಾರ ವಿಹಾರ, ಬೇಕು ಬೇಡಗಳನ್ನು ಆರ್ಥಿಕ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳಬೇಕು. ದೆವ್ವಬಡಿದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ, ದೆವ್ವಮೆಟ್ಟದಂತೆ ಎಚ್ಚರವಹಿಸುವುದು ಕ್ಷೇಮ. ಮನಸ್ಸು ಸ್ಥಿರವಾಗಿದ್ದರೆ ಮಾನಸಿಕ ಅಸಹಜತೆ ಸುಳಿಯುವುದಿಲ್ಲ. ಮತ್ತೆ ಮತ್ತೆ ದೆವ್ವದ ಆವಾಹನೆಗೆ ಮರುಕಳಿಸುವ ಬಗೆಗೂ ಎಚ್ಚರ ವಹಿಸಬೇಕು.

ಅನ್ಯರ ದ್ವೇಷವನ್ನೂ ಸೇಡನ್ನೂ ಪ್ರೀತಿಸುವುದನ್ನು ಅಭ್ಯಾಸಮಾಡಿಕೊಳ್ಳಬೇಕು. ಮುಯ್ಯಿಗೆ ಮುಯ್ಯಿ ಮದ್ದಲ್ಲ. ವಿನಾಕಾರಣ ದ್ವೇಷಿಸುವವರನ್ನು ನಿರ್ಲಕ್ಷಿಸುವುದೇ ಸೂಕ್ತ. ತೀರಾ ಆಗದಿದ್ದರೆ ಏಕಾಂಗಿಯಾಗೋ ಸಮೂಹದ ಜೊತೆಯಲ್ಲೋ ಜನಪದ ಬೈಗುಳದಿಂದ ಪ್ರತೀಕಾರ ತೀರಿಸಿಕೊಳ್ಳಬಹುದು ! ಮನಸ್ಸು ಸ್ವಸ್ಥಗೊಳ್ಳುವುದು ಮುಖ್ಯ.

ದೆವ್ವಹಿಡಿದ ಮನಸ್ಸು ನಿಯಂತ್ರಣಕ್ಕೆ ಬರದಿದ್ದರೆ ಅಪಾಯ. ಅದರಿಂದ ಹುಚ್ಚು ಬರಬಹುದು ;ಆತ್ಮಹತ್ಯೆಗೆ ಪ್ರೇರಣೆಯಾಗಬಹುದು; ಊಹಿಸಲಿಕ್ಕಾಗದ ಚಟುವಟಿಕೆಗೆ ತೊಡಗಬಹುದು. ತಲೆಕೆಟ್ಟಂತಾಡುವುದು, ಕಣ್ಣುಮಳ್ಳಿಸುವುದು, ಫಿಟ್ಸ್‌ಳವು ಬರುವುದು ಕಾಣಿಸಿಕೊಳ್ಳಬಹುದು.

ದೆವ್ವ ಮೈದುಂಬುವುದು ಅಂಟುರೋಗವಲ್ಲ; ಅದು ಆನುವಂಶಿಕ ಕಾಯಿಲೆಯಲ್ಲ; ತಾಯಿ ತಂದೆಯರು ಮಾಡಿದ ಪಾಪದ ಫಲವೂ ಅಲ್ಲ. ದೆವ್ವಮೆಟ್ಟಿದವರು ಸಮಾನ್ಯರಂತೆ

ಸಂಸಾರ ನಡೆಸಲು ಅಡ್ಡಿಯಿಲ್ಲ. ಅವರನ್ನು ಅಸ್ಪೃಶ್ಯರಂತೆ ಕಾಣುವ ಅಗತ್ಯವಿಲ್ಲ. ಅದು ಕೇವಲ ತಾತ್ಕಾಲಿಕ ತೊಂದರೆ ಅಷ್ಟೆ. ಐಡ್ಲ್ ಬ್ರೈನ್ ಈಸ್ ಡೆವಿಲ್ಸ್ ವರ್ಕ್ ಶಾಪ್ ಎನ್ನುವುದುಂಟು. ಒಂಟಿಯಾಗಿದ್ದಾಗ ಚಿಂತೆ ದೆವ್ವವಾಗುತ್ತದೆ. ಆದ್ದರಿಂದ ಮಾನಸಿಕ ಒತ್ತಡವಿದ್ದಾಗ ಒಂಟಿತನದಿಂದ ಹೊರಗೆ ಬರಬೇಕು.

ಏನೇ ಆಗಲಿ, ಯಾವುದೇ ಕಾರಣವಿರಲಿ, ದೆವ್ವದ ಆವಾಹನೆಯಂತಹ ಮಾನಸಿಕ ಅಸ್ವಸ್ಥತೆ ಕಾಣಿಸಿಕೊಂಡರೆ ಮೊದಲು ಮನೋವೈದ್ಯರನ್ನು ಕಂಡು ಚಿಕಿತ್ಸೆ ಪಡೆಯುವುದು ಒಳ್ಳೆಯದು. ಬೇಕಾದರೆ ಅದರ ಜೊತೆಗೆ ಮನಸ್ಸಮಾಧಾನಕ್ಕೆ ಜನಪದ ಮಾರ್ಗವನ್ನೂ ಹಿಡಿಯಬಹುದು. ಭೂಮಿಯ ಮೇಲೆ ದೆವ್ವ ಇಲ್ಲ. ದೆವ್ವ ಉಂಟೆಂಬ ನಂಬಿಕೆ ಸಲ್ಲ. ದೆವ್ವ ಇಲ್ಲವೆಂಬ ಅರಿವು ಸ್ಥಿರವಾಗಿ ನಿಂತರೆ, ಯಾವ ದೆವ್ವವೂ ಹಿಡಿಯುವುದಿಲ್ಲ.

## ಲೇಖಕರ ವಿಳಾಸಗಳು


೧. **ಡಾ || ಸಿ.ಆರ್. ಚಂದ್ರಶೇಖರ್**
೩೮, ೨ನೇ ಕ್ರಾಸ್, ಸಿಂಡಿಕೇಟ್ ಬ್ಯಾಂಕ್ ಕಾಲನಿ, ಬನ್ನೇರುಘಟ್ಟರಸ್ತೆ
ಬೆಂಗಳೂರು - ೫೬೦ ೦೭೬.

೨. **ಡಾ || ಬಸವರಾಜ ಮಲಶೆಟ್ಟಿ**
ನಿನಾದ, ೨ನೇ ಮುಖ್ಯರಸ್ತೆ, ಬಸವೇಶ್ವರ ಬಡಾವಣೆ, ಹೊಸಪೇಟೆ, ೫೮೩೨೦೧,
ಬಳ್ಳಾರಿ ಜಿಲ್ಲೆ.

೩. **ಡಾ || ಸಿ.ಕೆ. ನಾವಲಗಿ**
ಚೆಂಬೆಳಕು, ವಿದ್ಯಾನಗರ, ಗೋಕಾಕ್ - ೫೯೧ ೩೦೭

೪. **ಡಾ || ವೀರಣ್ಣ ದಂಡೆ**
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿಶ್ವವಿದ್ಯಾಲಯ,
ಗುಲ್ಬರ್ಗ - ೫೮೬ ೬೦೪.

೫. **ಡಾ || ವೈ. ಸಿ. ಭಾನುಮತಿ**
೧೧೭೩, ಕೇಶವ ದೀಪ, ಲಲಿತಾದ್ರಿ, ೧ನೇ ಕ್ರಾಸ್, ಕುವೆಂಪು ನಗರ,
ಮೈಸೂರು - ೫೭೦ ೦೨೩.

೬. **ಡಾ || ಎಂ. ಭೈರೇಗೌಡ**

೧೧೨, ೩ನೇ ತಿರುವು, ೮ನೇ ಮುಖ್ಯರಸ್ತೆ, ಆರ್‌ಪಿಸಿ ಬಡಾವಣೆ,
ಬೆಂಗಳೂರು - ೫೬೦ ೦೪೦.

೭. ಡಾ ॥ ಚನ್ನಣ್ಣ ವಾಲೀಕಾರ
ಎಲ್.ಐ.ಜಿ. ೧೨೦, ಬಡೇಪೂರ ಕಾಲನಿ, ವಿಶ್ವವಿದ್ಯಾನಿಲಯ ಅಂಚೆ,
ಗುಲ್ಬರ್ಗ - ೫೮೫ ೧೦೫.

೮. ಪ್ರೊ. ಎಂ.ಎಲ್. ನರಸಿಂಹ ಮೂರ್ತಿ
ಕನ್ನಡ ವಿಭಾಗ, ಶ್ರೀ. ಟಿ.ವಿ.ವಿ. ಕಾಲೇಜು, ಮಧುಗಿರಿ - ೫೭೨ ೧೩೨.

೯. ಡಾ ॥ ಟಿ. ಗೋವಿಂದ ರಾಜು
ಎಂ.ಐಫ್. ೩೨/೮, ನಂದಿನ ಬಡಾವಣೆ, ಬೆಂಗಳೂರು - ೫೬೦ ೦೯೬.

೧೦. ಡಾ॥ ದಸ್ತಗೀರ ಅಲ್ಲೀಭಾಯಿ
ಮುಖ್ಯಸ್ಥರು, ಕನ್ನಡ ವಿಭಾಗ, ನೆಹರು ಮಹಾವಿದ್ಯಾಲಯ, ಹುಬ್ಬಳ್ಳಿ

೧೧. ಡಾ ॥ ಹಿ.ಶಿ. ರಾಮಚಂದ್ರೇ ಗೌಡ
೨೨೨, ಹೊಂಬಾಳೆ, ೧ನೇ ಮೇನ್, ಬಾಪೂಜಿ ಬಡಾವಣೆ, ಬೋಗಾದಿ,
ಮೈಸೂರು - ೫೭೦ ೦೦೬.

೧೨. ಪಾಲ್ತಾಡಿ ರಾಮಕೃಷ್ಣ ಆಚಾರ್
ಪ್ರಶಾಂತ ನಿವಾಸ, ಕೆಮ್ಮಿಂಜೆ ದೇವಾಲಯ ರಸ್ತೆ, ದರ್ಬೆ ಅಂಚೆ,
ಪುತ್ತೂರು - ೫೭೪ ೨೦೨.

೧೩. ಡಾ ॥ ರಾಜೇಗೌಡ ಹೊಸಹಳ್ಳಿ
೨೮೭, ಎರಡನೇ ಹಂತ, ಪಶ್ಚಿಮ ಕಾರ್ಡ್ ರಸ್ತೆ
ಬೆಂಗಳೂರು - ೫೬೦ ೦೮೬.

೧೪. ಪ್ರೊ. ಡಿ. ಲಿಂಗಯ್ಯ
೬೯೦, ೭ನೇ ಬ್ಲಾಕ್, ೨ನೇ ಫೇಸ್, ಬನಶಂಕರಿ ೩ನೇ ಹಂತ,
ಬೆಂಗಳೂರು - ೫೬೦ ೦೮೫.

೧೫. ಡಾ ॥ ಚಕ್ಕೆರೆ ಶಿವಶಂಕರ್
೨೧, ಕುಪ್ಲಿಯ ಕವಿ ಕೇಶಿರಾಜ ರಸ್ತೆ, ೧೦ನೇ ಎ ಕ್ರಾಸ್, ಶ್ರೀನಗರ,

ವಾಸ್ತವವೋ ಅವಾಸ್ತವವೋ ವಿಜ್ಞಾನವೋ ಅಜ್ಞಾನವೋ ಸತ್ಯವೋ ಮಿಥ್ಯೆಯೋ ನಂಬಿಕೆಯೋ ಅಪನಂಬಿಕೆಯೋ ಒಟ್ಟಿನಲ್ಲಿ ದೆವ್ವದ ಕಲ್ಪನೆ ಜಗತ್ತಿನ ಎಲ್ಲಾ ಭಾಗದ ಎಲ್ಲಾ ಜನಾಂಗದಲ್ಲೂ ದಟ್ಟವಾಗಿದೆ. ಇದಕ್ಕೆ ಜಾನಪದದ ಪರಿಹಾರ ಒಂದು ರೀತಿಯದಾದರೆ, ವಿಜ್ಞಾನದ ಪರಿಹಾರ ಮತ್ತೊಂದು ರೀತಿಯದಾಗಿದೆ. ದೆವ್ವದ ಆವಾಹನೆಗೆ ಸಂಬಂಧಿಸಿದಂತೆ ಮೌಖಿಕ ಸಾಹಿತ್ಯದ ಜೊತೆಗೆ, ಶಿಷ್ಟ ಸಾಹಿತ್ಯವೂ ಸಾಕಷ್ಟಿದೆ. ಜಾನಪದದಲ್ಲಿ ದೈವದ ಆರಾಧನೆ ಅಧ್ಯಯನದಂತೆ, ದೆವ್ವದ ಆರಾಧನೆ ಅಧ್ಯಯನವೂ ಸ್ಥಾನ ಪಡೆದಿದೆ. ದೆವ್ವದ ಗ್ರಹಣಕ್ಕೆ ಜಾನಪದದ ಮದ್ದೂ ಇದೆಯೆಂದರೆ ಆಶ್ಚರ್ಯವಾಗುತ್ತದೆ. ಅದರ ಸಾಧಕ ಬಾಧಕ, ಒಳಿತು ಕೆಡಕು, ಸರಿತಪ್ಪು ಚರ್ಚೆಯ ವಿಷಯ ವಾಗುತ್ತದೆ.

ಪ್ರಸ್ತುತ ಗ್ರಂಥದ ಲೇಖನಗಳಲ್ಲಿ ದೆವ್ವವನ್ನು ಕುರಿತಂತೆ ಮೌಖಿಕ ಪರಂಪರೆಯಲ್ಲಿ ಹರಡಿಕೊಂಡಿರುವ ಚಿತ್ರವಿಚಿತ್ರ ಅನುಭವಗಳ ವಿಹಂಗಮ ನೋಟವಿದೆ.

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು